₹6 @vishwavaninews epaper.vishwavani.news vishwavani.news ಬೆಂಗಳೂರು | ಹುಬ್ಬಳ್ಳಿ | ಮಂಗಳೂರು | ದಾವಣಗೆರೆ | ಕಲಬುರಗಿ | ಬೆಳಗಾವಿ ಶನಿವಾರ 04.07.2026 ಸಂಪುಟ: 68 ಸಂಚಿಕೆ: 351 ಪುಟಗಳು: 12 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ

ವಿಶ್ವಾಸವೇ ವಿಶ್ವ

ಅಮೆರಿಕ 250

ಸ್ವಾತಂತ್ರ್ಯ ಸಂಭ್ರಮಕ್ಕೆ ಎರಡೂವರೆ ಶತಮಾನ

ಶಕ್ತಿವಂತನ ಸ್ವಾತಂತ್ರ್ಯ ದಿನ

ಪ್ರತಿ ವರ್ಷ ಜುಲೈ 4ರಂದು ಅಮೆರಿಕಾದಾದ್ಯಂತ ಸಂಭ್ರಮದ ವಾತಾವರಣ ಮನೆ ಮಾಡುತ್ತದೆ. ಆಕಾಶವನ್ನು ಬಣ್ಣಬಣ್ಣದ ಪಟಾಕಿಗಳು ರಂಗೇರಿಸು ತ್ತವೆ. ಮೆರವಣಿಗೆಗಳು ನಡೆಯುತ್ತವೆ. ಕುಟುಂಬಸ್ಥರು ಮತ್ತು ಸ್ನೇಹಿತರು ಒಟ್ಟಾಗಿ ಬಾರ್ಬೆಕ್ಯೂ ಹಾಗೂ ಪಿಕ್ನಿಕ್‌ಗಳನ್ನು ಆಯೋಜಿಸುತ್ತಾರೆ. ಈ ದಿನವನ್ನು 'ಅಮೆರಿಕದ ಸ್ವಾತಂತ್ರ್ಯ ದಿನ' ಅಥವಾ 'ಫೋರ್ಥ್ ಆಫ್ ಜುಲೈ' ಎಂದು ಕರೆಯಲಾಗುತ್ತದೆ. ಇದು ಅಮೆರಿಕದ ಜನರಿಗೆ ದೇಶದ ಜನ್ಮದಿನ ದಂತೆಯೇ ಮಹತ್ವದ್ದು. ಬ್ರಿಟಿಷರ ಆಡಳಿತದಿಂದ ಸ್ವತಂತ್ರ ರಾಷ್ಟ್ರವಾಗಿ ಹೊರಹೊಮ್ಮಿದ ಐತಿಹಾಸಿಕ ಕ್ಷಣವಿದು.

ಸ್ವಾತಂತ್ರ್ಯ ದಿನದ ಹಿನ್ನೆಲೆ

18ನೇ ಶತಮಾನದಲ್ಲಿ ಉತ್ತರ ಅಮೆರಿಕದ 13 ಬ್ರಿಟಿಷ್ ವಸಾಹತುಗಳು ಬ್ರಿಟನ್‌ನ ಆಡಳಿತದಲ್ಲಿದ್ದವು. ಬ್ರಿಟಿಷ್ ಸರಕಾರ ವಿಧಿಸುತ್ತಿದ್ದ ಹೆಚ್ಚುವರಿ ತೆರಿಗೆಗಳು, ವ್ಯಾಪಾರದ ಮೇಲಿನ ಕಟ್ಟುನಿಟ್ಟಿನ ನಿಯಮಗಳು ಹಾಗೂ ಸ್ಥಳೀಯ ಜನರ ಅಭಿಪ್ರಾಯಕ್ಕೆ ಬೆಲೆ ಕೊಡದ ಆಡಳಿತದಿಂದ ಜನರಲ್ಲಿ ಅಸಮಾಧಾನ ಹೆಚ್ಚಾಗತೊಡ ಗಿತು. ಪ್ರತಿನಿಧಿತ್ವವಿಲ್ಲದೆ ತೆರಿಗೆ ಬೇಡ ಎಂಬ ಘೋಷಣೆ ಜನರಲ್ಲಿ ವ್ಯಾಪಕವಾಗಿ ಮೊಳಗಿತು. ಸ್ವಾತಂತ್ರ್ಯಕ್ಕಾಗಿ ನಡೆದ ಹೋರಾಟ ತೀವ್ರಗೊಂಡಂತೆ,

ವಸಾಹತುಗಳ ನಾಯಕರು ಬ್ರಿಟನ್‌ನಿಂದ ಸಂಪೂರ್ಣ ವಾಗಿ ಬೇರ್ಪಡುವ ನಿರ್ಧಾರಕ್ಕೆ ಬಂದರು. 1776ರ ಜುಲೈ 2ರಂದು 'ಸೆಕೆಂಡ್ ಕಾಂಟಿನೆಂಟಲ್ ಕಾಂಗ್ರೆಸ್' ಬ್ರಿಟನ್‌ನಿಂದ ಬೇರ್ಪಡುವ ನಿರ್ಣಯಕ್ಕೆ ಮತ ಚಲಾಯಿಸಿತು. ಎರಡು ದಿನಗಳ ನಂತರ, ಅಂದರೆ 1776ರ ಜುಲೈ 4ರಂದು ಅಮೆರಿಕದ ಸ್ವಾತಂತ್ರ್ಯ ಘೋಷಣಾಪತ್ರವನ್ನು ಅಧಿಕೃತವಾಗಿ ಅಂಗೀಕರಿಸ ಲಾಯಿತು. ಈ ಕಾರಣದಿಂದ ಜುಲೈ 4ನೇ ದಿನವೇ ಅಮೆರಿಕದ ಸ್ವಾತಂತ್ರ್ಯ ದಿನವಾಗಿ ಇತಿಹಾಸದಲ್ಲಿ ಸ್ಥಾನ ಪಡೆದಿದೆ.

ಥಾಮಸ್ ಜೆಫರ್ಸನ್‌ನ ದಾಖಲೆ

ಸ್ವಾತಂತ್ರ್ಯ ಘೋಷಣಾಪತ್ರದ ಮುಖ್ಯ ಕರಡು ರಚಿಸಿ ದವರು ಥಾಮಸ್ ಜೆಫರ್ಸನ್. ಈ ದಾಖಲೆ ಬ್ರಿಟನ್‌ನಿಂದ ಪ್ರತ್ಯೇಕ ವಾಗುವುದನ್ನು ಘೋಷಿಸಿತು. ಜತೆಗೆ ಪ್ರತಿಯೊಬ್ಬ ಮನುಷ್ಯ ನಿಗೂ ಸಮಾನ ಹಕ್ಕುಗಳಿವೆ, ಸ್ವಾತಂತ್ರ್ಯ ಮತ್ತು ಸಂತೋಷವನ್ನು ಹುಡುಕುವ ಹಕ್ಕು ಪ್ರತಿಯೊಬ್ಬರಿಗೂ ಇದೆ ಎಂಬ ಪ್ರಜಾಪ್ರಭುತ್ವದ ಮೂಲ ತತ್ವಗಳನ್ನೂ ಜಗತ್ತಿಗೆ ಪರಿಚಯಿಸಿತು. ಈ ಘೋಷಣೆ ಯೊಂದಿಗೆ ಅಮೆರಿಕ ಸ್ವತಂತ್ರ ಮತ್ತು ಸಾರ್ವಭೌಮ ರಾಷ್ಟ್ರವಾಗಿ ತನ್ನ ಹೊಸ ಪಯಣ ಆರಂಭಿಸಿತು. ಜುಲೈ 4 ಅಮೆರಿಕದ ಅತ್ಯಂತ ದೊಡ್ಡ ರಾಷ್ಟ್ರೀಯ ಹಬ್ಬಗಳಲ್ಲಿ ಒಂದು. ದೇಶದಾದ್ಯಂತ ಹಲವು ರೀತಿಯ ಕಾರ್ಯಕ್ರಮಗಳು ನಡೆಯುತ್ತವೆ. ರಾತ್ರಿ ವೇಳೆ ಅದ್ದೂರಿ ಪಟಾಕಿ ಪ್ರದರ್ಶನಗಳು, ನಗರಗಳಲ್ಲಿ ದೇಶಭಕ್ತಿ ಮೆರ ವಣಿಗೆಗಳು, ಕುಟುಂಬ ಸದಸ್ಯರು ಮತ್ತು ಸ್ನೇಹಿತರೊಂದಿಗೆ ಔತಣಕೂಟಗಳು, ಸಂಗೀತ ಕಾರ್ಯ ಕ್ರಮಗಳು ಮತ್ತು ಸಾಂಸ್ಕೃತಿಕ ಪ್ರದರ್ಶನಗಳು, ಅಮೆರಿಕ ಧ್ವಜದ ಕೆಂಪು, ಬಿಳಿ ಮತ್ತು ನೀಲಿ ಬಣ್ಣಗಳು ಎಲ್ಲೆಡೆ ಕಂಗೊಳಿ ಸುತ್ತವೆ. ವಿದೇಶ ಗಳಲ್ಲಿ ನೆಲೆಸಿರುವ ಅಮೆರಿಕನ್ನರೂ ಜುಲೈ 4ರಂದು ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಿ ತಮ್ಮ ದೇಶದ ಮೇಲಿನ ಅಭಿಮಾನ ವ್ಯಕ್ತಪಡಿಸುತ್ತಾರೆ. 1777ರ ಜುಲೈ 4ರಂದು ನಡೆದ ಮೊದಲ ಅಧಿಕೃತ ವಾರ್ಷಿಕೋತ್ಸವ ದಲ್ಲಿಯೇ ಪಟಾಕಿ ಪ್ರದರ್ಶನ ನಡೆಸಲಾಗಿತ್ತು. ಆ ಸಮಯ ದಿಂದಲೇ ಪಟಾಕಿಗಳು ಅಮೆರಿಕದ ಸ್ವಾತಂತ್ರ್ಯದ ಸಂಕೇತವಾಗಿ ಬೆಳೆದವು. ಆಕಾಶದಲ್ಲಿ ಅರಳುವ ವರ್ಣರಂಜಿತ ಪಟಾಕಿಗಳು ದೇಶಭಕ್ತಿ, ಸ್ವಾತಂತ್ರ್ಯ ಮತ್ತು ರಾಷ್ಟ್ರೀಯ ಹೆಮ್ಮೆಯ ಪ್ರತೀಕ ವೆಂದು ಪರಿಗಣಿಸಲಾಗುತ್ತದೆ. ಪ್ರಮುಖ ನಗರಗಳಲ್ಲಿ ಲಕ್ಷಾಂತರ ಜನರು ಈ ಪಟಾಕಿ ಪ್ರದರ್ಶನ ಕಣ್ತುಂಬಿಕೊಳ್ಳಲು ಸೇರುತ್ತಾರೆ.

ಪ್ರಜಾಪ್ರಭುತ್ವದ ಮೌಲ್ಯಗಳು

ಸ್ವಾತಂತ್ರ್ಯ ದಿನವು ಪ್ರಜಾಪ್ರಭುತ್ವ, ಸ್ವಯಂ ಆಡಳಿತ, ಸಮಾನತೆ ಮತ್ತು ವೈಯಕ್ತಿಕ ಸ್ವಾತಂತ್ರ್ಯದ ಮೌಲ್ಯ ಗಳನ್ನು ನೆನಪಿಸುವ ಸಂದರ್ಭ. 1776ರಲ್ಲಿ ಪ್ರಕಟ ವಾದ ಸ್ವಾತಂತ್ರ್ಯ ಘೋಷಣಾಪತ್ರ ಅಮೆರಿಕದ ಸಂವಿಧಾನ ಮತ್ತು ಆಡಳಿತ ವ್ಯವಸ್ಥೆಗೆ ಬಲವಾದ ಅಡಿಪಾಯ ಹಾಕಿತು. ಜಗತ್ತಿನ ಅನೇಕ ದೇಶಗಳ ಸ್ವಾತಂತ್ರ್ಯ ಚಳವಳಿ ಗಳ ಮೇಲೂ ಈ ದಾಖಲೆ ಪ್ರಭಾವ ಬೀರಿದೆ.



ಅಮೆರಿಕ ಸೂಪರ್ ಪವರ್ ಆಗಿದ್ದೇಗೆ?

250 ವರ್ಷಗಳ ಹಿಂದೆ ಬ್ರಿಟಿಷರ ಗುಲಾಮಗಿರಿಯಿಂದ ಮುಕ್ತಿ ಪಡೆದ ಅಮೆರಿಕ, ಇವತ್ತು ಜಗತ್ತಿನ ಸಾರ್ವಭೌಮ ಶಕ್ತಿಯಾಗಿ ಬೆಳೆದು ನಿಂತಿರುವುದು ಜಾಗತಿಕ ಇತಿಹಾಸದ ಒಂದು ವಿಸ್ಮಯ. ದೇಶದ ಆಂತರಿಕ ರಾಜಕೀಯ ಧ್ರುವೀಕರಣ, ಆರ್ಥಿಕ ಅಸಮಾನತೆ ಮತ್ತು ಚೀನಾದಂತಹ ಹೊಸ ಆರ್ಥಿಕ ಶಕ್ತಿಗಳ ಪೈಪೋಟಿ ಯಂತಹ ಹಲವು ಆಧುನಿಕ ಸವಾಲು ಗಳು ಅಮೆರಿಕದ ಮುಂದಿವೆ. ಆದರೆ ವೈಯಕ್ತಿಕ ಸ್ವಾತಂತ್ರ್ಯಕ್ಕೆ ಗೌರವ ನೀಡುವ ಅದರ ಪ್ರಜಾಪ್ರಭುತ್ವದ ಮೌಲ್ಯಗಳು, ಮುಕ್ತ ಆರ್ಥಿಕ ನೀತಿ, ಮತ್ತು ತಂತ್ರಜ್ಞಾನದ ಆವಿಷ್ಕಾರಗಳು ಅಮೆರಿಕವನ್ನು ಇಂದಿಗೂ ಜಗತ್ತಿನ **ಸೂಪರ್ ಪವರ್** ಆಗಿ ಉಳಿಸಿವೆ. ತನ್ನ 250ನೇ ವರ್ಷದ ಈ ಸಂಭ್ರಮದಲ್ಲಿ ಅಮೆರಿಕ ಜಾಗತಿಕ ರಂಗದ ನಾಯಕನಾಗಿ ಇಡೀ ಆಧುನಿಕ ವಿಶ್ವದ ಚರಿತ್ರೆಯನ್ನು ಬರೆಯುತ್ತಲೇ ಸಾಗಿದೆ.

ಲೋಕೇಶ್ ಕಾಯರ್ಗ

ಅಮೆರಿಕ ಸಂಯುಕ್ತ ಸಂಸ್ಥಾನ ಇಂದು (ಶನಿವಾರ) ತನ್ನ 250ನೇ ಸ್ವಾತಂತ್ರ್ಯೋತ್ಸವದ ಐತಿಹಾಸಿಕ ಸಂಭ್ರಮದಲ್ಲಿದೆ. ಎರಡೂವರೆ ಶತಮಾನಗಳ ಹಿಂದೆ ಕೇವಲ 13 ಬ್ರಿಟಿಷ್ ವಸಾಹತುಗಳಾಗಿದ್ದ ಒಂದು ಭೂಪ್ರದೇಶ, ಇಂದು ಜಗತ್ತಿನ ರಾಜಕೀಯ, ಆರ್ಥಿಕ, ಮಿಲಿಟರಿ, ತಂತ್ರಜ್ಞಾನ ಮತ್ತು ಸಾಂಸ್ಕೃತಿಕ ರಂಗವನ್ನು ಸಂಪೂರ್ಣವಾಗಿ ನಿಯಂತ್ರಿಸುವ ಏಕೈಕ ಜಾಗತಿಕ ಮಹಾಶಕ್ತಿಯಾಗಿ ಬೆಳೆದು ನಿಂತಿರುವುದು ಆಧುನಿಕ ವಿಶ್ವ ಚರಿತ್ರೆಯ ಅತ್ಯಂತ ರೋಮಾಂಚನಕಾರಿ ಅಧ್ಯಾಯ. ಸ್ಥಳೀಯ ಬುಡಕಟ್ಟು ಜನರಿದ್ದ (ರೆಡ್ ಇಂಡಿಯನ್ಸ್) ನೆಲಕ್ಕೆ ಐರೋಪ್ಯರು ಕಾಲಿಟ್ಟ ದಿನದಿಂದ ಹಿಡಿದು, ಇಂದು ಇಡೀ ಜಗತ್ತಿಗೆ 'ದೊಡ್ಡಣ್ಣ' ಎನಿಸಿಕೊಳ್ಳುವವರೆಗಿನ ಅಮೆರಿಕದ ಪಯಣ, ಅದರ ಚಾರಿತ್ರಿಕ ತಿರುವುಗಳು, ಧೀಮಂತ ನಾಯಕರ ದೂರದೃಷ್ಟಿ ಮತ್ತು ಮಹತ್ವಾಕಾಂಕ್ಷೆಯ ನಿರ್ಧಾರಗಳು, ಬಂಡವಾಳ ಶಾಹಿ ವ್ಯವಸ್ಥೆಯ ನಡುವೆಯೂ ವೈಯಕ್ತಿಕ ಸ್ವಾತಂತ್ರ್ಯಕ್ಕೆ ಮಹತ್ವ ನೀಡುವ ರಾಜಕೀಯ ವ್ಯವಸ್ಥೆ ಅಧ್ಯಯನ ಯೋಗ್ಯವಾದುದು.

ಸ್ವಾತಂತ್ರ್ಯ ಸಂಗ್ರಾಮ

ಅಮೆರಿಕದ ಒಟ್ಟಾರೆ ಇತಿಹಾಸವು ಸಾಹಸ, ಸಂಘರ್ಷ ಮತ್ತು ಅನ್ವೇಷಣೆಗಳಿಂದ ಕೂಡಿದೆ. 15ನೇ ಶತಮಾನದ ಕೊನೆಯಲ್ಲಿ ಕ್ರಿಸ್ಟೋಫರ್ ಕೊಲಂಬಸ್ ಅಮೆರಿಕ ಖಂಡವನ್ನು ತಲುಪಿದ ನಂತರ, ಯುರೋಪಿನ ಪ್ರಮುಖ ಶಕ್ತಿಗಳಾದ ಬ್ರಿಟನ್, ಫ್ರಾನ್ಸ್ ಮತ್ತು ಸ್ಪೇನ್ ದೇಶಗಳು ಇಲ್ಲಿ ತಮ್ಮ ವಸಾಹತುಗಳನ್ನು ಸ್ಥಾಪಿಸಲು ಪೈಪೋಟಿಗೆ ಬಿದ್ದವು. ಇಲ್ಲಿನ ಮೂಲ ನಿವಾಸಿಗಳಾದ ರೆಡ್ ಇಂಡಿಯನ್ನರನ್ನು ಬದಿಗೆ ಸರಿಸಿ, ಐರೋಪ್ಯ ವಲಸಿಗರು ಇಡೀ ಭೂಪ್ರದೇಶವನ್ನು ತಮ್ಮ ನಿಯಂತ್ರಣಕ್ಕೆ ತೆಗೆದುಕೊಂಡರು. ಅಂತಿವುವಾಗಿ ಬ್ರಿಟಿಷರು 1607 ರಲ್ಲಿ 'ಜೇಮ್ಸ್ ಟೌನ್' (ವರ್ಜೀನಿಯಾ) ಎಂಬ ಮೊದಲ ಶಾಶ್ವತ ಬ್ರಿಟಿಷ್ ವಸಾಹತನ್ನು ಸ್ಥಾಪಿಸಿದರು. ಮುಂದೆ ಇನ್ನೂ 13 ವಸಾಹತುಗಳು ಸೇರಿ ಬ್ರಿಟಿಷರ ತೆಕ್ಕೆಗೆ ಸೇರಿದವು. ಅಲ್ಲಿಂದ ಸರಿಸುಮಾರು 170 ವರ್ಷಗಳ ಕಾಲ ಬ್ರಿಟನ್, ಅಮೆರಿಕದಲ್ಲಿ ವಸಾಹತುಶಾಹಿ ಆಡಳಿತ ವನ್ನು ಹೊಂದಿತ್ತು. ಭಾರತದಲ್ಲಿ ದೌರ್ಜನ್ಯ ನಡೆಸಿ, ಇಲ್ಲಿನ ಸಂಪತನ್ನು ಲೂಟಿ ಹೊಡೆದಂತೆ ಅಲ್ಲೂ ಬ್ರಿಟಿಷರು ಇದೇ ಕಾಯಕ ನಡೆಸಿದ್ದರು. ಆದರೆ ಇಂಗ್ಲಿಷ್ ಭಾಷೆಯು ಇಂದು ಅಮೆರಿಕದ ಪ್ರಮುಖ ಭಾಷೆಯಾಗಲು ಅಂದಿನ ಬ್ರಿಟಿಷ್ ಆಡಳಿತವೇ ಕಾರಣ. ಅಮೆರಿಕದ ಪ್ರಜಾಪ್ರಭುತ್ವ ಮತ್ತು ಕಾನೂನು ವ್ಯವಸ್ಥೆ ಕೂಡ ಬ್ರಿಟನ್‌ನ 'ಕಾಮನ್ ಲಾ' ಮತ್ತು ಮ್ಯಾಗ್ನಾ ಕಾರ್ಟಾದಂತಹ ತತ್ವಗಳಿಂದ ಪ್ರೇರಿತವಾಗಿದೆ. ಅಮೆರಿಕದ ಇಂದಿನ ಪ್ರತಿಷ್ಠಿತ ಹಾರ್ವರ್ಡ್, ಯೇಲ್ ಮತ್ತು ವಿಲಿಯಂ ಮೇರಿ ಕಾಲೇಜುಗಳನ್ನು ಅಂದು ಬ್ರಿಟಿಷ್ ವಸಾಹತುಶಾಹಿ ಗಳೇ ಸ್ಥಾಪಿಸಿದ್ದರು.

17 ನೇ ಶತಮಾನದ ಕೊನೆಯಲ್ಲಿ ಬ್ರಿಟಿಷ್ ಸರಕಾರದ ಅತಿಯಾದ ತೆರಿಗೆ ಮತ್ತು ದಬ್ಬಾಳಿಕೆಯ ನೀತಿಗಳ ವಿರುದ್ಧ ಅಮೆರಿಕದ 13 ವಸಾಹತುಗಳು

ಒಟ್ಟಾಗಿ ಬಂಡೆದ್ದವು. 1776ರ ಜುಲೈ 4ರಂದು ಅಮೆರಿಕ ತನ್ನ ಸ್ವಾತಂತ್ರ್ಯವನ್ನು ಘೋಷಿಸಿತು. ವರ್ಜೀನಿಯಾ ಮೂಲದ ಜಾರ್ಜ್ ವಾಷಿಂಗ್ಟನ್ ಅವರ ಸಮರ್ಥ ಸೇನಾ ನಾಯಕತ್ವದಲ್ಲಿ ನಡೆದ ಸುದೀರ್ಘ ಹೋರಾಟದ ನಂತರ, ಬ್ರಿಟಿಷರನ್ನು ಸೋಲಿಸಿ ಅಮೆರಿಕ ಸಂಯುಕ್ತ ಸಂಸ್ಥಾನ ಎಂಬ ಹೊಸ ದೇಶ ಉದಯಿಸಿತು.

ಅಂದಿನ 13 ವಸಾಹತುಗಳ ಭೂಭಾಗ ಇಂದಿನ ಅಮೆರಿಕದ ಒಟ್ಟು ವಿಸ್ತೀರ್ಣದ ಕೇವಲ ಶೇ.10ರಿಂದ ಶೇ.11ರಷ್ಟು ಮಾತ್ರ ಇತ್ತು. ಆದರೆ, 1783ರಲ್ಲಿ ಅಮೆರಿಕದ ಕ್ರಾಂತಿಕಾರಿ ಯುದ್ಧ ಮುಗಿದು, 'ಪ್ಯಾರಿಸ್ ಒಪ್ಪಂದ'ದ ಮೂಲಕ ಬ್ರಿಟನ್ ಅಧಿಕೃತ ವಾಗಿ ಅಮೆರಿಕಕ್ಕೆ ಸ್ವಾತಂತ್ರ್ಯ ನೀಡಿದಾಗ, ಅಮೆರಿಕದ ಗಡಿಯನ್ನು ಪಶ್ಚಿಮದ ಮಿಸ್ಸಿಸ್ಸಿಪ್ಪಿ ನದಿಯವರೆಗೆ ವಿಸ್ತರಿಸಲಾಯಿತು. ಬಳಿಕ ಅಮೆರಿಕ ಆಡಳಿತಗಾರರ ಜಾಣ್ಮೆಯಿಂದ ಭೂಪ್ರದೇಶ ವಿಸ್ತರಿಸುತ್ತಲೇ ಸಾಗಿತು.

1803ರಲ್ಲಿ ಅಂದಿನ ಅಧ್ಯಕ್ಷ ಥಾಮಸ್ ಜೆಫರ್ಸನ್ ಅವರು ಫ್ರಾನ್ಸ್‌ನ ನೆಪೋಲಿಯನ್‌ನಿಂದ ಲೂಸಿಯಾ ನದ ಬೃಹತ್ ಭೂಪ್ರದೇಶವನ್ನು ಕೇವಲ 15 ಮಿಲಿಯನ್ ಡಾಲರ್‌ಗೆ ಖರೀದಿಸಿದರು. ಇದು ಅಮೆರಿಕದ ವಿಸ್ತೀರ್ಣವನ್ನು ರಾತ್ರೋರಾತ್ರಿ ದುಪ್ಪಟ್ಟುಗೊಳಿಸಿತು. ಬಳಿಕ ಸ್ಪೇನ್‌ನಿಂದ ಫ್ಲೋರಿಡಾವನ್ನು ಪಡೆದುಕೊಂಡರೆ, ಮೆಕ್ಸಿಕೋ ಜೊತೆಗಿನ ಯುದ್ಧದ ನಂತರ ಟೆಕ್ಸಾಸ್, ಕ್ಯಾಲಿಫೋರ್ನಿಯಾ ಸೇರಿದಂತೆ ಪಶ್ಚಿಮ ಕರಾವಳಿಯ ಪ್ರಮುಖ ಪ್ರಾಂತ್ಯಗಳು ಅಮೆರಿಕದ ಪಾಲಾದವು. ಅಟ್ಲಾಂಟಿಕ್ ಮಹಾಸಾಗರ ದಿಂದ ಪೆಸಿಫಿಕ್ ಮಹಾಸಾಗರದವರೆಗೆ ಅಮೆರಿಕದ ಸಾಮ್ರಾಜ್ಯ ವಿಸ್ತರಿಸಿತು.

ಮೂಲಕ ಅಮೆರಿಕ ದಲ್ಲಿ ಮಾನವ ಹಕ್ಕುಗಳ ಹೊಸ ಯುಗ ಆರಂಭ ವಾಯಿತು. ಈ ಯುದ್ಧದ ನಂತರ ಅಮೆರಿಕ ಶಕ್ತಿಯುತ ವಾದ ಏಕೀಕೃತ ರಾಷ್ಟ್ರವಾಗಿ ಹೊರಹೊಮ್ಮಿತು.

ಮೊದಲನೇ ಮತ್ತು 2ನೇ ಜಾಗತಿಕ ಮಹಾ ಯುದ್ಧ ಗಳು ಅಮೆರಿಕ ಸೂಪರ್ ಪವರ್ ಆಗಲು ಪ್ರಮುಖ ಕಾರಣವಾದವು. ಯುರೋಪಿನ ಬಲಿಷ್ಠ ದೇಶಗಳಾದ ಬ್ರಿಟನ್, ಫ್ರಾನ್ಸ್, ಜರ್ಮನಿಗಳು ಯುದ್ಧದಿಂದಾಗಿ ಸಂಪೂರ್ಣವಾಗಿ ಆರ್ಥಿಕವಾಗಿ ಹೈರಾಣಾದವು. ಆದರೆ, ಅಮೆರಿಕವು ಆರಂಭದಲ್ಲಿ ಯುದ್ಧದಿಂದ ದೂರವಿದ್ದು, ಮಿತ್ರಪಡೆಗಳಿಗೆ ಶಸ್ತ್ರಾಸ್ತ್ರ, ಆಹಾರ ಮತ್ತು ಹಣಕಾಸಿನ ನೆರವು ನೀಡುವ ಮೂಲಕ ಜಗತ್ತಿನ ಅತಿ ದೊಡ್ಡ ಸಾಲದಾತ ದೇಶವಾಗಿ ಮಾರ್ಪಟ್ಟಿತು.

3ನೇ ಅತಿ ದೊಡ್ಡ ದೇಶದಲ್ಲಿ 9 ಕಾಲಮಾನ!

ಬ್ರಿಟಿಷ್ ಆಡಳಿತಕ್ಕೊಳಪಟ್ಟ 13 ವಸಾಹತುಗಳನ್ನೊಳ ಗೊಂಡ ಅಮೆರಿ ಕದ ಒಟ್ಟು ವಿಸ್ತೀರ್ಣ ಸುಮಾರು 3.38ರಿಂದ 4.30 ಲಕ್ಷ ಚದರ ಮೈಲಿಗಳು. ಈ ವಸಾಹತುಗಳು ಅಮೆರಿಕದ ಪೂರ್ವ ಕರಾವಳಿಯುದ್ದಕ್ಕೂ (ಅಟ್ಲಾಂಟಿಕ್ ಸಾಗರದ ತೀರದಲ್ಲಿ) ಕಿರಿದಾದ ಪಟ್ಟಿಯಂತೆ ಹರಡಿಕೊಂಡಿ ದ್ದವು. ಆದರೆ, 1783ರಲ್ಲಿ ಅಮೆರಿಕದ ಕ್ರಾಂತಿಕಾರಿ ಯುದ್ಧ ಮುಗಿದು, 'ಪ್ಯಾರಿಸ್ ಒಪ್ಪಂದ'ದ ಮೂಲಕ ಬ್ರಿಟನ್ ಅಧಿಕೃತವಾಗಿ ಅಮೆರಿಕಕ್ಕೆ ಸ್ವಾತಂತ್ರ್ಯ ನೀಡಿದಾಗ, ಅಮೆರಿಕದ ಗಡಿಯನ್ನು ಪಶ್ಚಿಮದ ಮಿಸ್ಸಿಸ್ಸಿಪ್ಪಿ ನದಿಯವರೆಗೆ ವಿಸ್ತರಿಸಲಾಯಿತು. ಹೀಗೆ ಸ್ವಾತಂತ್ರ್ಯ ಪಡೆದ ಹೊಸದ ರಲ್ಲಿಯೇ ಅಮೆರಿಕದ ಒಟ್ಟು ವಿಸ್ತೀರ್ಣವು ದುಪ್ಪಟ್ಟಾಗಿ ಸುಮಾರು 8.64 ಲಕ್ಷ ಚದರ ಮೈಲಿ ಗಳಿಗೆ ತಲುಪಿತು. ಫ್ರಾನ್ಸ್, ಸ್ಪೇನ್, ಮೆಕ್ಸಿಕೊ ಮುಂತಾದ ದೇಶಗಳಿಂದ ಭೂಮಿಯನ್ನು ಖರೀದಿಸಿ ಹಾಗೂ ಯುದ್ಧಗಳ ಮೂಲಕ ವಶಪಡಿಸಿಕೊಂಡು ಬಳಿಕ ಇಂದಿನ ಅಮೆರಿಕದ ಭೌಗೋಳಿಕ ವಿಸ್ತೀರ್ಣ 9.8 ಲಕ್ಷ ಚದರ ಮೈಲಿಗಳನ್ನೂ ಮೀರಿದೆ. ಭೌಗೋಳಿಕ ವಿಸ್ತೀರ್ಣದ ದೃಷ್ಟಿಯಿಂದ ರಷ್ಯಾ ಮತ್ತು ಕೆನಡಾ ದೇಶಗಳ ನಂತರ ಅಮೆರಿಕ ಪ್ರಪಂಚದ ಮೂರನೇ ಅತಿದೊಡ್ಡ ದೇಶವಾಗಿದೆ. ಈ ವಿಸ್ತೀರ್ಣಕ್ಕನು ಗುಣವಾಗಿ ಅಮೆರಿಕ ಮತ್ತು ಅದರ ಅಧೀನದಲ್ಲಿರುವ ಪ್ರದೇಶಗಳಲ್ಲಿ ಒಟ್ಟು 9 ಅಧಿಕೃತ ಕಾಲಮಾನ ಗಳಿವೆ. ಅಮೆರಿಕದ 50 ರಾಜ್ಯಗಳನ್ನು ಗಣನೆಗೆ ತೆಗೆದುಕೊಂಡರೂ 6 ವಿಭಿನ್ನ ಕಾಲಮಾನಗಳಿವೆ. ಅಮೆರಿಕದ ಪಶ್ಚಿಮ ತುದಿ (ಕ್ಯಾಲಿಫೋರ್ನಿಯಾ) ಮತ್ತು ಪೂರ್ವ ತುದಿ (ನ್ಯೂಯಾರ್ಕ್) ನಡುವೆ ಒಟ್ಟು 3 ಗಂಟೆಗಳ ಸಮಯದ ವ್ಯತ್ಯಾಸವಿದೆ.

3 ಮಹಾ ತಿರುವುಗಳು

ಅಮೆರಿಕದ ಬೆಳವಣಿಗೆಯಲ್ಲಿ ಮೂರು ಪ್ರಮುಖ ಯುದ್ಧಗಳು ಜಾಗತಿಕ ನಾಯಕನ ಪಟ್ಟಕ್ಕೇರಲು ದಾರಿ ಮಾಡಿಕೊಟ್ಟವು. ಅದರಲ್ಲಿ ಪ್ರಮುಖವಾದುದು 1861 ರಿಂದ ಹಿಡಿದು 1865ರವರೆಗಿನ ಅಮೆರಿಕದ ಅಂತ ರ್ಯುದ್ಧ. ದೇಶವು ಆರ್ಥಿಕವಾಗಿ ಬೆಳೆಯುತ್ತಿದ್ದಾಗಲೇ ದಕ್ಷಿಣದ ಪ್ರಾಂತ್ಯಗಳು (ದಾಸ್ಯ ಪದ್ಧತಿ ಯನ್ನು ಬೆಂಬಲಿಸುವವರು) ಮತ್ತು ಉತ್ತರದ ಪ್ರಾಂತ್ಯಗಳ (ದಾಸ್ಯ ಪದ್ಧತಿಯನ್ನು ವಿರೋಧಿಸುವ ವರು) ನಡುವೆ ಭೀಕರ ಅಂತರ್ಯುದ್ಧ ಆರಂಭ ವಾಯಿತು. ದೇಶ ಒಡೆದು ಚೂರಾಗುವ ಪರಿಸ್ಥಿತಿ ಬಂದಾಗ, ಅಧ್ಯಕ್ಷ ಅಬ್ರಹಾಂಲಿಂಕನ್ ದೃಢವಾಗಿ ನಿಂತು ದೇಶದ ಒಗ್ಗಟ್ಟನ್ನು ಕಾಪಾಡಿದರು. ದಾಸ್ಯ ಪದ್ಧತಿಯನ್ನು ಸಂಪೂರ್ಣವಾಗಿ ರದ್ದುಗೊಳಿಸುವ

1941ರಲ್ಲಿ ಜಪಾನ್ ದೇಶವು ಅಮೆರಿಕದ 'ಪರ್ಲ್ ಹಾರ್ಬರ್' ನೌಕಾ ನೆಲೆಯ ಮೇಲೆ ದಾಳಿ ಮಾಡಿ ದಾಗ, ಅಮೆರಿಕ ಎರಡನೇ ಮಹಾಯುದ್ಧಕ್ಕೆ ನೇರ ವಾಗಿ ಪ್ರವೇಶಿಸಿತು. 1945ರಲ್ಲಿ ಹಿರೋಷಿಮಾ ಮತ್ತು ನಾಗಸಾಕಿ ಮೇಲೆ ಅಣುಬಾಂಬ್ ಹಾಕುವ ಮೂಲಕ ಯುದ್ಧವನ್ನು ಕೊನೆಗೊಳಿಸಿತು. ಯುದ್ಧ ಮುಗಿ ಯುವ ಹೊತ್ತಿಗೆ ಜಗತ್ತಿನ ಶೇ. 50ರಷ್ಟು ಕೈಗಾರಿಕಾ ಉತ್ಪಾದನೆ ಮತ್ತು ಜಗತ್ತಿನ ಬಹುಪಾಲು ಚಿನ್ನದ ದಾಸ್ತಾನು ಅಮೆರಿಕದ ಬಳಿಯಿತ್ತು. ಈ ಮೂಲಕ ಜಗತ್ತಿನ ಆರ್ಥಿಕ ಮತ್ತು ಮಿಲಿಟರಿ ನಾಯಕನಾಗಿ ಅಮೆರಿಕ ಎಂಬ ದೇಶದ ಪ್ರತಿಷ್ಠಾಪನೆಯಾಯಿತು. ಅಮೆರಿಕವನ್ನು ಆಳಿದ ಅಧ್ಯಕ್ಷರಲ್ಲಿ ಅನೇಕರು ಕಾಲ ಕಾಲಕ್ಕೆ ಬಂದ ಬಿಕ್ಕಟ್ಟುಗಳನ್ನು ನಿವಾರಿಸುತ್ತಲೇ ದೇಶಕ್ಕೆ ಭದ್ರ ಬುನಾದಿ ಹಾಕಿಕೊಟ್ಟರು.

ವ್ಯಕ್ತಿಗಳಿಗೆ ಮನ್ನಣೆ

ಅಮೆರಿಕವು ಇಂದಿಗೂ ಪ್ರಬಲ ಬಂಡವಾಳಶಾಹಿ ರಾಷ್ಟ್ರ. ಇಷ್ಟಾದರೂ ಪ್ರಜಾಪ್ರಭುತ್ವದ ಬೇರುಗಳು ಇಲ್ಲಿ ಅತ್ಯಂತ ಗಟ್ಟಿಯಾಗಿ ನೆಲೆಯೂರಿವೆ. ಸಾಮಾನ್ಯವಾಗಿ ಬಂಡವಾಳಶಾಹಿ ದೇಶಗಳಲ್ಲಿ ಶ್ರೀಮಂತರ ಕೈಯಲ್ಲಿ ಅಧಿಕಾರ ಕೇಂದ್ರೀಕೃತವಾಗಿ ಪ್ರಜಾಪ್ರಭುತ್ವ ದುರ್ಬಲಗೊಳ್ಳುವ ಅಪಾಯವಿರು ತ್ತದೆ. ಆದರೆ ಅಮೆರಿಕ ಇದನ್ನು ಅತ್ಯಂತ ಚಾಣಾ ಕ್ಷತನದಿಂದ ನಿಭಾಯಿಸುತ್ತಾ ಬಂದಿದೆ. ಇದಕ್ಕೆ ಮುಖ್ಯ ಕಾರಣ ಅಮೆರಿಕದ ಪ್ರಬಲ ಲಿಖಿತ ಸಂವಿಧಾನ.

ಅಮೆರಿಕದ ಸಂವಿಧಾನವು ವಿಶ್ವದ ಅತ್ಯಂತ ಹಳೆಯ ಲಿಖಿತ ಸಂವಿಧಾನಗಳಲ್ಲಿ ಒಂದಾಗಿದೆ. ಇದು ವೈಯಕ್ತಿಕ ಸ್ವಾತಂತ್ರ್ಯ, ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ಆಸ್ತಿಯ ಹಕ್ಕಿಗೆ ಅತ್ಯುನ್ನತ ರಕ್ಷಣೆ ನೀಡುತ್ತದೆ. ಸಂವಿಧಾನದಲ್ಲಿ ಈ ಸಮತೋಲನ ವ್ಯವಸ್ಥೆ ಇರುವ ಕಾರಣದಿಂದಲೇ ಅಧ್ಯಕ್ಷರಾಗಲಿ, ಸಂಸತ್ತಾಗಲಿ (ಕಾಂಗ್ರೆಸ್) ಅಥವಾ ನ್ಯಾಯಾಂಗ ವಾಗಲಿ ಯಾರೂ ಕೂಡ ಸರ್ವಾಧಿಕಾರಿ ಯಾಗಲು ಸಾಧ್ಯವಿಲ್ಲ. ಒಬ್ಬರ ಅಧಿಕಾರವನ್ನು ಇನ್ನೊಬ್ಬರು ನಿಯಂತ್ರಿಸುವ ವ್ಯವಸ್ಥೆ ಇಲ್ಲಿದೆ. ವೀಸಾ ನೀತಿ, ಸುಂಕ ಹೇರಿಕೆಯಂತಹ ಟ್ರಂಪ್ ಅವರ ಏಕಪಕ್ಷೀಯ ತೀರ್ಮಾನಗಳಿಗೂ ಇದೇ ಸಂವಿಧಾನ ಕಡಿವಾಣ ಹಾಕಿರುವುದು ಗಮನಾರ್ಹ.

ಅಮೆರಿಕನ್ ಕನಸು ಎಂಬ ಪರಿಕಲ್ಪನೆಯೇ ಇಲ್ಲಿನ ಶಕ್ತಿ. ಯಾರು ಬೇಕಾದರೂ ತಮ್ಮ ಕಠಿಣ ಪರಿಶ್ರಮ ಮತ್ತು ಬುದ್ಧಿವಂತಿಕೆಯಿಂದ ಶೂನ್ಯದಿಂದ ಕೋಟ್ಯಧಿಪತಿಯಾಗಬಹುದು ಎಂಬ ವಾತಾವರಣವನ್ನು ಇಲ್ಲಿನ ಮುಕ್ತ ಮಾರುಕಟ್ಟೆ ನಿರ್ಮಿಸಿದೆ. ಕಾನೂನಿನ ಆಡಳಿತ ಮತ್ತು ಮುಕ್ತ ಪತ್ರಿಕೋದ್ಯಮವು ಸರಕಾರದ ಭ್ರಷ್ಟಾಚಾರವನ್ನು ನಿಯಂತ್ರಣದಲ್ಲಿಟ್ಟಿದೆ. ಕಪ್ಪು ವರ್ಣೀಯರ ನಾಗರಿಕ ಹಕ್ಕುಗಳ ಹೋರಾಟ ಮತ್ತು ಮಾರ್ಟಿನ್ ಲೂಥರ್ ಕಿಂಗ್ ಅವರಂತಹ ನಾಯಕರ ಪ್ರಯತ್ನದಿಂದಾಗಿ, ಕಾಲಕಾಲಕ್ಕೆ ವ್ಯವಸ್ಥೆಯು ತನ್ನ ತಪ್ಪುಗಳನ್ನು ತಿದ್ದಿಕೊಳ್ಳುತ್ತಾ ಪ್ರಜಾಪ್ರಭುತ್ವವನ್ನು ಮತ್ತಷ್ಟು ಒಳಗೊಳ್ಳುವಂತೆ, ಸರ್ವರಿಗೂ ಸಮಬಾಳು ಸಿಗುವಂತೆ ನೋಡಿಕೊಂಡಿದೆ.

ಡಾಲರ್ ಸಾಮ್ರಾಜ್ಯ

ಅಮೆರಿಕ ಜಗತ್ತಿನ ಆರ್ಥಿಕ ರಾಜನಾಗಿದ್ದು ಹೇಗೆ ಎಂಬುದು ಒಂದು ಅದ್ಭುತ. ಇಂದು ಜಗತ್ತಿನ ಅತಿ ದೊಡ್ಡ ಆರ್ಥಿಕತೆ ಅಮೆರಿಕದ್ದಾಗಿದೆ. ಇದಕ್ಕೆ ಮುಖ್ಯ ಕಾರಣ 1944ರ ಬ್ರೆಟ್ಟನ್ ವುಡ್ಸ್ ಒಪ್ಪಂದ. ಎರಡನೇ ಮಹಾ ಯುದ್ಧ ಮುಗಿಯುವ ಮುನ್ನವೇ ಜಾಗತಿಕ ಆರ್ಥಿಕ ವ್ಯವಸ್ಥೆಯನ್ನು ಮರುರೂಪಿಸಲು ಅಮೆರಿಕದ ಬ್ರೆಟ್ಟನ್ ವುಡ್ಸ್‌ನಲ್ಲಿ ಜಾಗತಿಕ ಸಮ್ಮೇಳನ ನಡೆಯಿತು. ಅಲ್ಲಿ ಇಡೀ ವಿಶ್ವದ ವ್ಯಾಪಾರ ವ್ಯವಹಾರಗಳಿಗೆ ಅಮೆರಿಕನ್ ಡಾಲರ್ ಅನ್ನು ಅಧಿಕೃತ ಜಾಗತಿಕ ಕರೆನ್ಸಿಯಾಗಿ ಸ್ವೀಕರಿಸಲಾಯಿತು. ಇಂದು ಜಗತ್ತಿನ ಯಾವುದೇ ದೇಶವು ಕಚ್ಚಾ ತೈಲ ವಾಗಲಿ ಅಥವಾ ಯಾವುದೇ ಪ್ರಮುಖ ವಸ್ತು ವಾಗಲಿ ಖರೀದಿಸ ಬೇಕಾದರೆ ಡಾಲರ್ ಬಳಸಲೇ ಬೇಕು. ಇದು ಅಮೆರಿಕಕ್ಕೆ ಜಾಗತಿಕ ಹಣಕಾಸು ವ್ಯವಸ್ಥೆಯ ಮೇಲೆ ಸಂಪೂರ್ಣ ನಿಯಂತ್ರಣ ನೀಡಿತು. ವಿಶ್ವಬ್ಯಾಂಕ್ ಮತ್ತು ಅಂತರರಾಷ್ಟ್ರೀಯ ಹಣಕಾಸು ನಿಧಿ (ಐಎಂ ಎಫ್) ಪ್ರಧಾನ ಕಚೇರಿಗಳು ಅಮೆರಿಕ ದಲ್ಲೇ ಇವೆ. ಇಂಗ್ಲೆಂಡ್ ಕೈಗಾರಿಕಾ ಕ್ರಾಂತಿಗೆ ಮುನ್ನುಡಿ ಬರೆದರೂ 18 ಮತ್ತು 19ನೇ ಶತಮಾನದಲ್ಲಿ ಇದನ್ನು ಮುಂದುವರಿಸಿದ್ದು ಅಮೆರಿಕ. ಹೆನ್ರಿ ಫೋರ್ಡ್ ಅವರ ಅಸೆಂಬ್ಲಿ ಲೈನ್ ತಂತ್ರಜ್ಞಾನದ ಮೂಲಕ ಅಮೆರಿಕ ವಾಹನ ಉತ್ಪಾದನೆಯಲ್ಲಿ ಜಾಗತಿಕ ಕ್ರಾಂತಿ ಮಾಡಿತು. ದೇಶದಾದ್ಯಂತ ನೈಸರ್ಗಿಕ ಸಂಪನ್ಮೂಲ ಗಳಾದ ಕಲ್ಲಿದ್ದಲು, ಕಬ್ಬಿಣ ಮತ್ತು ತೈಲ ಯಥೇಚ್ಛವಾಗಿ ಸಿಕ್ಕಿದ್ದು ದೇಶದ ಕೈಗಾರಿಕಾ ಪ್ರಗತಿಗೆ ವೇಗ ನೀಡಿತು. ವಾಲ್ ಸ್ಟ್ರೀಟ್ ಮತ್ತು ನ್ಯೂಯಾರ್ಕ್ ಸ್ಟಾಕ್ ಎಕ್ಸ್‌ಚೇಂಜ್ ಜಗತ್ತಿನ ಇಡೀ ಬಂಡವಾಳವನ್ನು ನಿಯಂತ್ರಿಸುವ ಕೇಂದ್ರಗಳಾದವು.

ಜಗತ್ತಿನ ಜ್ಞಾನಕೇಂದ್ರ

ಜ್ಞಾನ ಮತ್ತು ನಾವೀನ್ಯತೆಯೇ ಅಮೆರಿಕದ ಶಕ್ತಿ. ಜಗತ್ತಿನ ಅತ್ಯಂತ ಬುದ್ಧಿವಂತ ಮೆದುಳುಗಳನ್ನು ತನ್ನ ದೇಶದತ್ತ ಸೆಳೆ ಯುವಲ್ಲಿ ಅಮೆರಿಕ ಯಶಸ್ವಿಯಾಗಿದೆ. ಅಮೆರಿಕವನ್ನು ಕಟ್ಟಿದ ವರು ಅಮೆರಿಕನ್ನರು ಮಾತ್ರವಲ್ಲ. ಭಾರತೀಯರೂ ಸೇರಿ ಇಲ್ಲಿಗೆ ವಲಸೆ ಬಂದ ನೂರಾರು ಅದ್ಭುತ ಪ್ರತಿಭೆಗಳು ಈ ದೇಶಕ್ಕೆ ತಮ್ಮ ಜ್ಞಾನಶಕ್ತಿ ಯನ್ನು ಧಾರೆ ಎರೆದಿದ್ದಾರೆ. ಜ್ಞಾನದ ಮುಕ್ತ ಹರಿವಿಗೆ ಅವಕಾಶ ಮಾಡಿಕೊಟ್ಟಿದ್ದು ಅಮೆರಿಕದ ಹೆಗ್ಗಳಿಕೆ. ಕ್ಯಾಲಿಫೋರ್ನಿಯಾದ ಸಿಲಿಕಾನ್ ವ್ಯಾಲಿ ಇಂದು ಜಾಗತಿಕ ತಂತ್ರಜ್ಞಾನದ ರಾಜಧಾನಿ. ಮೈಕ್ರೋಸಾಫ್ಟ್, ಆಪಲ್, ಗೂಗಲ್, ಫೇಸ್‌ಬುಕ್ (ಮೆಟಾ), ಅಮೆಜಾನ್ ಮತ್ತು ಇಂಟೆಲ್‌ನಂತಹ ದೈತ್ಯ ಸಂಸ್ಥೆ ಗಳು ಅಮೆರಿಕದಲ್ಲಿ ಹುಟ್ಟಿ, ಇಂದು ಇಡೀ ಜಗತ್ತಿನ ದೈನಂದಿನ ಜೀವನವನ್ನು ನಿಯಂತ್ರಿಸುತ್ತಿವೆ. → 4

ನಾರಾಯಣ ಯಾಜಿ

ಜಸ್ ಸೋಲಿ ಎಂಬ ಮಾನವೀಯತೆ

ಅಮೆರಿಕದಲ್ಲಿ ಹುಟ್ಟಿದವರೆಲ್ಲ ಅಮೆರಿಕನ್ನರೇ ಎಂದ ಕೋರ್ಟ್

ಜೂನ್ 30ರಂದು ಅಮೆರಿಕದ ಸುಪ್ರೀಂ ಕೋರ್ಟ್ ಮತ್ತೊಮ್ಮೆ ಅಮೆರಿಕದ ಸಂವಿಧಾನದ 14ನೆಯ ತಿದ್ದುಪಡಿಯನ್ನು ಎತ್ತಿ ಹಿಡಿಯುವ ಮೂಲಕ ಅಧ್ಯಕ್ಷ ಟ್ರಂಪ್ ಅಧಿಕಾರಕ್ಕೆ ಬಂದ ಮೊದಲ ದಿನವೇ ಹೊರಡಿಸಿದ, ಅಮೆರಿಕದಲ್ಲಿ ಜನಿಸಿದ ಮಾತ್ರಕ್ಕೆ ಪೌರತ್ವ ಸಿಗಲಾರದು ಎನ್ನುವ ಕಾರ್ಯನಿರ್ವಾಹಕ ಆದೇಶವನ್ನು 6–3 ಬಹುಮತದಿಂದ ರದ್ದುಗೊಳಿಸಿದೆ. ಈ ತೀರ್ಪು ಅನೇಕ ಅನಿವಾಸಿಗಳಿಗೆ ಸಮಾಧಾನದ ನಿಟ್ಟುಸಿರು ತಂದಿದೆ. ಅಮೆರಿಕದ ಸುಪ್ರೀಂ ಕೋರ್ಟ್‌ನಲ್ಲಿ ನಡೆದ ಈ ಐತಿಹಾಸಿಕ ವಿಚಾರಣೆಯಲ್ಲಿ 'ಜಸ್ ಸೋಲಿ' (Jus soli) ಎನ್ನುವ ಸಾಂವಿಧಾನಿಕ ಮತ್ತು ಕಾನೂನಾತ್ಮಕ ಪದವನ್ನು ಬಹುಮತದ ತೀರ್ಪು ಬರೆದ ಮುಖ್ಯ ನ್ಯಾಯಮೂರ್ತಿ ಜಾನ್ ರಾಬರ್ಟ್ಸ್, ಸೋನಿಯಾ ಸೊಟೊಮೇಯರ್, ಎಲೆನಾ ಕಗನ್ ಮತ್ತು ಕೆಟಾಂಜಿ ಬ್ರೌನ್ ಜಾಕ್ಸನ್ ಅವರು ವ್ಯಾಪಕವಾಗಿ ಉಲ್ಲೇಖಿಸಿದ್ದಾರೆ. ಅಧ್ಯಕ್ಷ ಟ್ರಂಪ್ ಅವರ ಆದೇಶವನ್ನು ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಿದಾಗ ಮೂಲಭೂತವಾಗಿ ಅಲ್ಲಿನ ಸಂವಿಧಾನದ 13 ಮತ್ತು 14ನೆಯ ತಿದ್ದುಪಡಿ ಬಹಳ ಮಹತ್ವದ್ದಾಗಿತ್ತು. ಜೊತೆಗೆ ಇದಕ್ಕೆ ಕಾರಣನಾದ ಅಬ್ರಹಾಂ ಲಿಂಕನ್ ಎನ್ನುವ ಮಹಾಪುರುಷ.

'ಜಸ್ ಸೋಲಿ' ನೆಲದ ಹಕ್ಕಿನ ಸಿದ್ಧಾಂತ: ಯಾವ ಮಗು ಯಾವ ದೇಶದ ಮಣ್ಣಿನಲ್ಲಿ, ಆ ದೇಶದ ಭೌಗೋಳಿಕ ವ್ಯಾಪ್ತಿಯೊಳಗೆ ಜನಿಸುತ್ತದೆಯೋ, ಆ ಮಗುವಿಗೆ ಆ ದೇಶದ ಪೌರತ್ವವು ಜನ್ಮಸಿದ್ಧವಾಗಿ, ಅತ್ಯಂತ ಸಹಜವಾಗಿ ಒಲಿದು ಬರುತ್ತದೆ. ಇಲ್ಲಿ ಪೋಷಕರ ಧರ್ಮ, ಜಾತಿ, ರಾಷ್ಟ್ರೀಯತೆ ಅಥವಾ ಅವರ ವಲಸೆಯ ಕಾನೂನು ಸ್ಥಿತಿಗತಿಗಳು ಮುಖ್ಯವಾಗುವುದಿಲ್ಲ. ಮಗು ಜನಿಸಿದ 'ಆ ನೆಲ'ವೇ ಇಲ್ಲಿ ಪರಮೋಚ್ಚ ಸಾಕ್ಷಿ. ಈ ಕಾಯ್ದೆಯನ್ನು ತರುವಲ್ಲಿ ಅಬ್ರಹಾಂ ಲಿಂಕನ್ ಮೊದಲು ಉಪಕ್ರಮಿಸಿದ್ದು. ಇದಕ್ಕೆ ಕಾರಣವಾಗಿದ್ದು 1857ರಲ್ಲಿ ಅಮೆರಿಕದ ಸರ್ವೋಚ್ಚ ನ್ಯಾಯಾಲಯವು 'ಡ್ರೆಡ್ ಸ್ಕಾಟ್' (Dred Scott)

ಎಂಬ ಅತ್ಯಂತ ವಿವಾದಾತ್ಮಕ ತೀರ್ಪನ್ನು ನೀಡಿತ್ತು. ಆ ತೀರ್ಪಿನ ಪ್ರಕಾರ, ಆಫ್ರಿಕನ್ ಮೂಲದ ಕಪ್ಪು ವರ್ಣೀಯರು ಅಮೆರಿಕದ ಮಣ್ಣಿನಲ್ಲಿಯೇ ಹುಟ್ಟಿದ್ದರೂ ಅವರು ಈ ದೇಶದ ಪ್ರಜೆಗಳಾಗಲು ಸಾಧ್ಯವೇ ಇಲ್ಲ ಎಂದು ಕಠೋರವಾಗಿ ಹೇಳಿತ್ತು. ನ್ಯಾಯಾಂಗವೇ ನೀಡಿದ ಈ ಜನಾಂಗೀಯ ತಾರತಮ್ಯದ ತೀರ್ಪಿನ ವಿರುದ್ಧ ಮಾನವ ಹಕ್ಕುಗಳ ಕಾರ್ಯಕರ್ತರು ತಿರುಗಿಬಿದ್ದರು. ಇದನ್ನು ತೊಡೆದುಹಾಕಲು ಕಟಿಬದ್ಧನಾದವನೇ ಅಧ್ಯಕ್ಷನಾಗಿ ಆಯ್ಕೆಯಾದ ಅಬ್ರಹಾಂ ಲಿಂಕನ್.

ಸಂವಿಧಾನದ 13ನೆ ತಿದ್ದುಪಡಿಯ ಮೂಲಕ ಗುಲಾಮಿ ಪದ್ಧತಿಯನ್ನು ಶಾಶ್ವತವಾಗಿ ಕೊನೆಗಾಣಿಸಲು ಆತ ಯತ್ನಿಸಿದ. ಇದೇ ಕಾರಣಕ್ಕಾಗಿ 1861–65ರವರೆಗಿನ ನಾಲ್ಕು ವರ್ಷ ಅಮೆರಿಕದಲ್ಲಿ ಅಂತರ್ಯುದ್ಧವೂ ಆಗಿ ಲಿಂಕನ್ ವಿಜಯಿಯಾದರೂ 13ನೆ ತಿದ್ದುಪಡಿ ಜಾರಿಗೊಳ್ಳುವ ಮೊದಲೇ ಆತನ ಹತ್ಯೆ ಮಾಡಲಾಯಿತು. ಇಷ್ಟಾದರೂ ಉಪಾಧ್ಯಕ್ಷನಾಗಿ ನಂತರ ಅಧ್ಯಕ್ಷನಾಗಿದ್ದ ಆಂಡ್ರ್ಯೂ ಜಾನ್ಸನ್, ಧೃತಿಗೆಡದೇ ಡಿಸೆಂಬರ್ ತಿಂಗಳ 6, 1865ರಂದು ಕಾಯಿದೆಯಾಗುವಂತೆ ನೋಡಿಕೊಂಡ. ಅಲ್ಲಿಂದ ಅಮೆರಿಕದಲ್ಲಿ ಗುಲಾಮಿ ಪದ್ಧತಿ ನಿಷೇಧ ಶಾಶ್ವತವಾಗಿ ಜಾರಿಗೆ ಬಂದಿತು. ಗುಲಾಮಿ ಪದ್ಧತಿ ಶಾಶ್ವತವಾಗಿ ನಿಷೇಧವಾದರೂ ಕಪ್ಪುವರ್ಣೀಯರಿಗೆ ಪೌರತ್ವವನ್ನು ಕೊಡುವ ವಿಷಯದಲ್ಲಿ ಗೊಂದಲ ಉಂಟಾದವು. ಅದನ್ನು ನಿವಾರಿಸಲು ಆಂಡ್ರ್ಯೂ ಜಾನ್ಸನ್ ಜೂನ್ 13, 1866ರಂದು ಅಮೆರಿಕದಲ್ಲಿ ಜನಿಸಿದ ಎಲ್ಲರಿಗೂ ಸಮಾನ ಪೌರತ್ವವನ್ನು ಕೊಡುವ ಉದ್ದೇಶದಿಂದ ಸಂವಿಧಾನಕ್ಕೆ 14ನೆಯ ತಿದ್ದುಪಡಿಯನ್ನು ತರಲು ಉಪಕ್ರಮಿಸುತ್ತಾನೆ. ಇದೂ ಸಹ ಚರ್ಚೆಗಳಾಗಿ ನಂತರದಲ್ಲಿ 1868ರ ಜುಲೈ ತಿಂಗಳ 9ರಂದು ಜಾರಿಗೆ ಬಂದಿತು. ಅದರ ಸೆಕ್ಷನ್ 1ರ ಪ್ರಕಾರ All persons born or naturalized in the United States, and subject to the jurisdiction thereof, are citizens of the United States and of the state wherein they reside ಎಂದಿದೆ. ಇದೊಂದು ನಿರ್ಣಾಯಕ ಕಾನೂನಿನ ಪ್ರತಿಕ್ರಿಯೆಯಾಗಿದ್ದು, ಬಳಸಿದ ಭಾಷೆಯು ನೇರವಾಗಿ ಅಮೆರಿಕದಲ್ಲಿ ಜನಿಸಿದ ಎಲ್ಲರಿಗೂ ಜನ್ಮಕಾರಣ ಪೌರತ್ವವನ್ನು ನೀಡಿದೆ. ಯಾರೆಲ್ಲಾ ಗುಲಾಮರಾಗಿ ಬದುಕನ್ನು ಸವೆಸಿದ್ದರೋ ಆ ಕ್ರೂರಪರಂಪರೆಯನ್ನು ಸ್ಪಷ್ಟವಾಗಿ ನಿಷೇಧಿಸಿ ಅವರ ನಾಗರಿಕ ಹಕ್ಕುಗಳನ್ನು ರಕ್ಷಿಸಿದೆ. ಈ ಕಾರಣದಿಂದ ಅಮೆರಿಕ ಸಂವಿಧಾನದಲ್ಲಿ 13 ಮತ್ತು 14ನೆಯ ತಿದ್ದುಪಡಿಯನ್ನು ವ್ಯಕ್ತಿ ಸ್ವಾತಂತ್ರ್ಯದ ದೃಷ್ಟಿಯಿಂದ ಮಹತ್ವದ ಮೈಲಿಗಲ್ಲಾಗಿ ಪರಿಗಣಿಸುತ್ತಾರೆ. ಅಮೆರಿಕದ ಗಡಿಯೊಳಗೆ ಜನಿಸುವ ಪ್ರತಿಯೊಬ್ಬ ವ್ಯಕ್ತಿಯೂ ಈ ದೇಶದ ಸಾರ್ವಭೌಮ ಪ್ರಜೆ ಎಂದು ಅಧಿಕೃತವಾಗಿ ಹೇಳಿರುವುದೇ 'ಜಸ್ ಸೋಲಿ' ಅಥವಾ ಮಣ್ಣಿನ ಹಕ್ಕು. ಈ ತತ್ವವನ್ನು ಸಂವಿಧಾನದ ನಿಯಮವನ್ನಾಗಿ ಅಧಿಕೃತವಾಗಿ ಘೋಷಿಸಲಾಯಿತು.

ವಾಂಗ್ ಕಿಮ್ ಆರ್ಕ್ ಎನ್ನುವ ಹುಡುಗನ ಪೌರತ್ವ: ಇನ್ನೊಂದು ಮಹತ್ವದ ಅಂಶವನ್ನು ನ್ಯಾಯಾಧೀಶರು ಉಲ್ಲೇಖಿಸಿದ್ದು ವಾಂಗ್ ಕಿಮ್ ಆರ್ಕ್ ಎನ್ನುವ ಚೀನಾ ಮೂಲದ ಹುಡುಗನ ಪೌರತ್ವದ ವಿಚಾರವಾಗಿ. ಜಸ್ ಸೋಲಿ ಎನ್ನುವ ನಿಯಮ ಇನ್ನಷ್ಟು ಬಿಗಿಯಾಗಲು ಕಾರಣವೇ ಚೈನಾಮೂಲದ ಈ ಹುಡುಗ. → 2

ಒಂದು ಕಾಲವಿತ್ತು, ಅಮೆರಿಕ ಅಧ್ಯಕ್ಷ ಸೀನಿದರೆ ವಿಶ್ವಕ್ಕೆ ಶೀತವಾಗುತ್ತಿತ್ತು!

ವಿಶ್ವೇಶ್ವರ ಭಟ್

ವರದಿಗಾರ: ಅಧ್ಯಕ್ಷರೇ, ನೀವು ಈ ಬೆಳಗ್ಗೆ ಎರಡು ಬಾರಿ ಸೀನಿದ್ದೀರಿ. ನಿಮ್ಮ ವಿದೇಶಾಂಗ ನೀತಿಯಲ್ಲಿ ಏನಾದರೂ ಬದಲಾವಣೆ ಆಗಿದೆಯೇ?

ಅಮೆರಿಕ ಅಧ್ಯಕ್ಷ: ಇಲ್ಲ, ನನಗೆ ಈ ಸುದೀರ್ಘ ಪತ್ರಿಕಾಗೋಷ್ಠಿಗೆ ಅಲರ್ಜಿ ಅಷ್ಟೇ!'

ಇದು ಅಮೆರಿಕದ ಅಧ್ಯಕ್ಷರ ಪ್ರಭಾವ ಮತ್ತು ಮಾಧ್ಯಮಗಳು ಅವರ ಪ್ರತಿಯೊಂದು ಸಣ್ಣ ನಡವಳಿಕೆಯನ್ನು ವಿಶ್ಲೇಷಿಸುವ ರೀತಿಯನ್ನು ಲೇವಡಿ ಮಾಡಲು ಸೃಷ್ಟಿಸಲಾದ ಒಂದು ಕಾಲ್ಪನಿಕ ರಾಜಕೀಯ ಸಂಭಾಷಣೆ.

ಅಮೆರಿಕ ಅಧ್ಯಕ್ಷರ ಒಂದು ಸಣ್ಣ ನಡೆಯನ್ನು ಸಹ ಜಗತ್ತು ಅತ್ಯಂತ ಗಂಭೀರವಾಗಿ ನೋಡುತ್ತದೆ. ಅವರ ಯಾವ ಹಾವಭಾವವನ್ನು ಸಹ ಯಾರೂ ಗಮನಿಸದೇ ಹೋಗುವುದಿಲ್ಲ. When American President sneezes, the rest of the world catches a cold (ಅಮೆರಿಕ ಅಧ್ಯಕ್ಷರು ಸೀನಿದರೆ, ಇಡೀ ಜಗತ್ತಿಗೆ ಶೀತ ಹಿಡಿಯುತ್ತದೆ) ಎಂಬ ಮಾತು ಜನಜನಿತ. ಅಮೆರಿಕದ ಅಧ್ಯಕ್ಷರು ಮಾತಾಡಿದರೆ ಅದನ್ನು ಅರ್ಥೈಸುವ ಮಾತು ದೂರದೇಶ ಉಳಿಯಿತು, ಅವರ ಒಂದು ಸಣ್ಣ ನಡೆ, ಸೀನು, ಕೆಮ್ಮು, ಗಂಟಲು ಕೆರೆತವನ್ನೂ ಜಗತ್ತು ತನ್ನದೇ ವಿಶಿಷ್ಟ ರೀತಿಯಲ್ಲಿ ವ್ಯಾಖ್ಯಾನಿಸುತ್ತದೆ ಎಂಬ ಮಾತು ರಾಜತಾಂತ್ರಿಕ ವಲಯಗಳಲ್ಲಿ ಇಂದಿಗೂ ನಂಬಲಾಗಿದೆ.

If a US President clears his throat, three countries call an emergency cabinet meeting and one dictator goes into hiding (ಅಮೆರಿಕ ಅಧ್ಯಕ್ಷರು ಗಂಟಲು ಸರಿಪಡಿಸಿಕೊಂಡರೆ, ಮೂರು ದೇಶಗಳು ತುರ್ತು ಸಂಪುಟ ಸಭೆ ಕರೆಯುತ್ತವೆ ಮತ್ತು ಒಬ್ಬ ಸರ್ವಾಧಿಕಾರಿ ಅಡಗಿಕೊಳ್ಳುತ್ತಾನೆ) ಎಂದು ಪತ್ರಿಕೆಯೊಂದು ವ್ಯಂಗ್ಯವಾಗಿ ಬರೆದಿತ್ತು. The President doesn't just cough; he issues a sonic warning to the global stock market (ಅಧ್ಯಕ್ಷರು ಕೇವಲ ಕೆಮ್ಮುವುದಿಲ್ಲ, ಅವರು ಜಾಗತಿಕ ಷೇರು ಮಾರುಕಟ್ಟೆಗೆ ಒಂದು ಧ್ವನಿ ತರಂಗದ ಎಚ್ಚರಿಕೆಯನ್ನು ನೀಡುತ್ತಾರೆ) ಎಂದು ಹೇಳುವುದನ್ನು ಕೇಳಿರಬಹುದು.

ಹಾಗೆಯೇ, ಪಾಶ್ಚಾತ್ಯ ರಾಜತಾಂತ್ರಿಕ ವರದಿಗಾರರ ವಲಯದಲ್ಲಿ ಒಂದು ಮಾತಿದೆ- The President's sneeze is more important than the price of oil (ತೈಲ ಬೆಲೆಗಿಂತಲೂ ಹೆಚ್ಚು ಮುಖ್ಯವಾದುದು ಅಮೆರಿಕ ಅಧ್ಯಕ್ಷರ ಸೀನು). ಶ್ವೇತ ಭವನದ ವರದಿಗಾರರು, Diplomacy is the art of wondering if the President's sneeze was a policy change or just dust in the Oval Office (ಅಧ್ಯಕ್ಷರ ಸೀನು ಒಂದು ಹೊಸ ನೀತಿಯೇ ಅಥವಾ ಓವಲ್ ಆಫೀಸ್‌ನಲ್ಲಿರುವ ಧೂಳಿನ ಪ್ರಭಾವವೇ ಎಂದು ಆಲೋಚಿಸುವುದೇ ಅಸಲಿ ರಾಜತಾಂತ್ರಿಕತೆ!) ತಮ್ಮ ತಮ್ಮಲ್ಲಿ ಹಾಸ್ಯಕ್ಕೆ ಹಾಸ್ಯವಾಗಿ, ನಿಜಕ್ಕೆ ನಿಜವಾಗಿ ಮಾತಾಡಿಕೊಳ್ಳುತ್ತಾರೆ.

ಅಮೆರಿಕ ಅಧ್ಯಕ್ಷರ ಸೀನು ಅಥವಾ ಕೆಮ್ಮಿನ ವ್ಯಾಖ್ಯಾನ ಪರಿಧಿ ಇಷ್ಟಕ್ಕೇ ಸೀಮಿತವಾಗಿಲ್ಲ. If the President coughs during a speech, Wall Street puts on a mask, and Tokyo starts looking for a ventilator (ಅಧ್ಯಕ್ಷರು ಭಾಷಣದ ಮಧ್ಯೆ ಕೆಮ್ಮಿದರೆ, ವಾಲ್ ಸ್ಟ್ರೀಟ್ ಮಾಸ್ಕ್ ಧರಿಸುತ್ತದೆ ಮತ್ತು ಟೋಕಿಯೋ ವೆಂಟಿಲೇಟರ್ ಹುಡುಕಲು ಶುರು ಮಾಡುತ್ತದೆ!) ಎಂದು ಹೇಳುವುದನ್ನು ಕೇಳಿರಬಹುದು. ಹಾಗೆಯೇ, The U.S. President is the only person whose sneeze is translated into 50 languages and analyzed for hidden military codes (ಅಮೆರಿಕ ಅಧ್ಯಕ್ಷರು ಸೀನಿದರೆ ಅದನ್ನು 50 ಭಾಷೆಗಳಿಗೆ ಅನುವಾದಿಸಿ, ಅದರಲ್ಲಿ ಯಾವುದಾದರೂ ಗುಪ್ತ ಮಿಲಿಟರಿ ಕೋಡ್ ಇದೆಯೇ ಎಂದು ಹುಡುಕುವ ಏಕೈಕ ವ್ಯಕ್ತಿ!) ಎಂದು ಹೇಳುವುದು ಅತಿಶಯೋಕ್ತಿಯಾಗಿ ಕಾಣಿಸಬಹುದು.

ಆದರೆ ಈ ರೀತಿಯ ಮಾತು ಪ್ರಚಲಿತದಲ್ಲಿರುವುದು ವಾಸ್ತವಿಕ. ಈಗ ಸಾಮಾಜಿಕ ಜಾಲತಾಣಗಳ ಜನಪ್ರಿಯತೆಯ ದಿನಗಳಲ್ಲಿ ಇನ್ನೊಂದು ಮಾತನ್ನು ತಮಾಷೆಯಾಗಿ ಹೇಳುವುದುಂಟು- ಹಿಂದೆಲ್ಲ ಕೆಮ್ಮು ಒಂದು ಕೋಣೆಗೆ ಸೀಮಿತವಾಗಿರುತ್ತಿತ್ತು, ಆದರೆ ಇಂದು ಅಧ್ಯಕ್ಷರು ಟಿಶ್ಯೂ ಪೇಪರ್ ಕೈಗೆತ್ತಿಕೊಳ್ಳುವ ಮೊದಲೇ ಅವರ ಸೀನು ಟ್ವಿಟ್ಟರ್‌ನಲ್ಲಿ ಟ್ರೆಂಡ್ ಆಗುತ್ತಿರುತ್ತದೆ.

ಅಮೆರಿಕ ಅಧ್ಯಕ್ಷರ ಪ್ರಾಮುಖ್ಯವನ್ನು ಇನ್ನಷ್ಟು ವೈಭವೀಕರಿಸಲು, ಶ್ವೇತಭವನದ ಅಧಿಕಾರಿಗಳಲ್ಲಿ ಒಂದು ತಮಾಷೆಯ ಮಾತಿದೆ- When the President has a headache, the Secretary of State takes an aspirin (ಅಧ್ಯಕ್ಷರಿಗೆ ತಲೆನೋವಾದರೆ, ವಿದೇಶಾಂಗ ಕಾರ್ಯದರ್ಶಿ ಆಸ್ಪಿರಿನ್ ಮಾತ್ರೆ ನುಂಗುತ್ತಾರೆ - ಅಂದರೆ ಅಷ್ಟು ಮುನ್ನೆಚ್ಚರಿಕೆ ವಹಿಸುತ್ತಾರೆ).

ಅಮೆರಿಕದ ಖ್ಯಾತ ರಾಜಕೀಯ ವಿಶ್ಲೇಷಕ ಕ್ರಿಸ್ಟೋಫರ್ ಬರ್ರೋನ್ ಒಮ್ಮೆ ಹೀಗೆ ಬರೆದಿದ್ದ - 'ಅಧ್ಯಕ್ಷರು ಭಾಷಣದ ಮಧ್ಯೆ ನೀರು ಕುಡಿದರೆ, ಮಾರನೇ ದಿನದ ಪತ್ರಿಕೆಗಳಲ್ಲಿ 'ಅಧ್ಯಕ್ಷರ ಗಂಟಲು ಒಣಗಲು ರಷ್ಯಾದ ಒತ್ತಡವೇ ಕಾರಣವೇ?' ಅಥವಾ 'ಅಧ್ಯಕ್ಷರು ಬಳಸಿದ ನೀರಿನ ಬಾಟಲಿ ಯಾವ ಕಂಪನಿಯದ್ದು? ಆ ಕಂಪನಿಯ ಷೇರು ಬೆಲೆ ಏರುತ್ತದೆಯೇ?' ಎಂಬ ಲೇಖನಗಳು ಬರುತ್ತವೆ! ಹಾಗೆ ಮುಂದುವರಿದು ಆತ, An American President doesn't catch a cold; he tests the world's immune system (ಅಮೆರಿಕದ ಅಧ್ಯಕ್ಷರಿಗೆ ಶೀತ ಹಿಡಿಯುವುದಿಲ್ಲ; ಅವರು ಜಗತ್ತಿನ ರೋಗ ನಿರೋಧಕ ಶಕ್ತಿಯನ್ನು ಪರೀಕ್ಷಿಸುತ್ತಾರೆ) ಎಂದು ತುಸು ಅತಿರಂಜಿತವಾಗಿ ಬರೆದಿದ್ದ.

ಶೀತಲ ಸಮರದ ಸಮಯದಲ್ಲಿ If the President sneezes in the Oval Office, someone in the Kremlin says 'Bless you' just to be safe (ಅಧ್ಯಕ್ಷರು ಓವಲ್ ಆಫೀಸ್‌ನಲ್ಲಿ ಸೀನಿದರೆ, ರಷ್ಯಾದ ಕ್ರೆಮ್ಲಿನ್‌ನಲ್ಲಿ ಯಾರೋ ಒಬ್ಬರು ಸುರಕ್ಷತೆಯ ದೃಷ್ಟಿಯಿಂದ 'ಬ್ಲೆಸ್ ಯೂ' ಅಂತಾರೆ) ಎಂಬ ಮಾತು ರಾಜತಾಂತ್ರಿಕ ಪಾರ್ಟಿಗಳಲ್ಲಿ ಕೇಳಿ ಬರುತ್ತಿತ್ತು.

ಅಂದರೆ ಅಮೆರಿಕದ ಅಧ್ಯಕ್ಷನ ಸೀನು, ಕೆಮ್ಮು ಮತ್ತು ಗಂಟಲು ಕೆರೆತವನ್ನೇ ಜಗತ್ತು ಕಣ್ಣಲ್ಲಿ ಕಣ್ಣಿಟ್ಟು ನೋಡಿ, ತನಗೆ ಬೇಕಾದಂತೆ ಅರ್ಥ ಮಾಡಿಕೊಂಡು ತಲೆ ಕೆಡಿಸಿಕೊಳ್ಳುತ್ತದೆ. ಇನ್ನು ಆತ ಮಾತಾಡಿದರೆ? ಇಡೀ ಜಗತ್ತು ಅದನ್ನು ಕೇಳಿಸಿಕೊಳ್ಳದೇ ಹೋಗುವುದಿಲ್ಲ. ಅಮೆರಿಕ ಅಧ್ಯಕ್ಷರ ಮಾತುಗಳನ್ನು ಉಪೇಕ್ಷಿಸುವ ಮಾತೇ ಇಲ್ಲ. ಆದರೆ ಆ ಸ್ಥಾನದಲ್ಲಿ ಕುಳಿತವರೆಲ್ಲ ತಮ್ಮ ಪದವಿಗೆ ತಕ್ಕುದಾದ ರೀತಿಯಲ್ಲಿ ಮಾತಾಡಿದ್ದಾರೆ ಅಥವಾ ಘನತೆಯಿಂದ ವರ್ತಿಸಿದ್ದಾರೆ ಎಂದೇನೂ ಇಲ್ಲ.

ಅಮೆರಿಕ ಅಧ್ಯಕ್ಷರ ತಿಕ್ಕಲು ನಡವಳಿಕೆಗೆ ದೊಡ್ಡ ಇತಿಹಾಸವೇ ಇದೆ. ಈ ಮಾತು ಹೇಳುವಾಗ ನನಗೆ ನೆನಪಾಗುವವನು ಅಮೆರಿಕದ ಏಳನೇ ಅಧ್ಯಕ್ಷ ಆಂಡ್ರ್ಯೂ ಜಾಕ್ಸನ್ (1829- 1837). ಆತ ಇತಿಹಾಸದಲ್ಲಿ ಅತ್ಯಂತ ವಿವಾದಾತ್ಮಕ ಮತ್ತು ಆಕ್ರಮಣಕಾರಿ ನಾಯಕ ಎಂದು ಹೆಸರಾದವನು. ಅವನ ವ್ಯಕ್ತಿತ್ವವು 'ಮೊದಲು ಆಕ್ರಮಣ, ನಂತರ ಉಪಶಮನ' ಎಂಬ ಮಾತಿಗೆ ಮಾದರಿಯಾಗಿತ್ತು. ಜಾಕ್ಸನ್ ಅಧಿಕಾರದಲ್ಲಿದ್ದ ಸಂದರ್ಭದಲ್ಲಿ ಹೆನ್ರಿ ಕ್ಲೇ ಮತ್ತು ಜಾನ್ ಸಿ.ಕ್ಯಾಲ್ಹೋನ್ ಎಂಬ ಇಬ್ಬರು ಪ್ರಭಾವಿ ನಾಯಕರಾಗಿದ್ದರು. ಜಾಕ್ಸನ್ ಆರ್ಥಿಕ ನೀತಿಗಳನ್ನು ಕ್ಲೇ ಕಟುವಾಗಿ ವಿರೋಧಿಸುತ್ತಿದ್ದ. ಇನ್ನು ಕ್ಯಾಲ್ಹೋನ್, ಜಾಕ್ಸನ್ ಅಧ್ಯಕ್ಷನಾಗಿದ್ದಾಗ ಉಪಾಧ್ಯಕ್ಷನಾಗಿದ್ದ. ಕೆಲವು ರಾಜ್ಯಗಳ ಹಕ್ಕುಗಳ ವಿಷಯದಲ್ಲಿ ಅಧ್ಯಕ್ಷರ ವಿರುದ್ಧವೇ ಆತ ತಿರುಗಿ ಬಿದ್ದಿದ್ದ.

ಅಧ್ಯಕ್ಷ ಮತ್ತು ಉಪಾಧ್ಯಕ್ಷರ ನಡುವೆ ಸದಾ ಜಟಾಪಟಿ. ಅಧಿಕಾರದಿಂದ ಕೆಳಗಿಳಿಯುವ ಮುನ್ನ ಜಾಕ್ಸನ್, 'ನನ್ನ ಜೀವನದಲ್ಲಿ ನನಗೆ ಎರಡು ವಿಷಾದಗಳಿವೆ. ಮೊದಲನೆಯದು, ನಾನು ಹೆನ್ರಿ ಕ್ಲೇನನ್ನು ಗುಂಡಿಕ್ಕಿ ಕೊಲ್ಲಲಾಗಲಿಲ್ಲ ಎಂಬುದು ಮತ್ತು ಎರಡನೆಯದು, ಕ್ಯಾಲ್ಹೋನ್‌ನನ್ನು ಗಲ್ಲಿಗೇರಿಸಲಿಲ್ಲವಲ್ಲ ಎಂಬುದು' ಎಂದು ಬಹಿರಂಗವಾಗಿ ಹೇಳಿದ್ದು ಆ ಕಾಲಕ್ಕೆ ದೊಡ್ಡ ವಿವಾದವನ್ನುಂಟು ಮಾಡಿತ್ತು. ಇದು ಕೇವಲ ಬಾಯ್ತಪ್ಪಿನ ಮಾತಾಗಿರಲಿಲ್ಲ. ಜಾಕ್ಸನ್ ತನ್ನ ಜೀವನದಲ್ಲಿ ನೂರಕ್ಕೂ ಹೆಚ್ಚು ಇಂಥ ಜಟಾಪಟಿಗಳಲ್ಲಿ ಭಾಗವಹಿಸಿದ್ದ. ತನಗೆ ಇಷ್ಟವಿಲ್ಲದವರನ್ನು ದೈಹಿಕವಾಗಿ ಎದುರಿಸಲು ಹಿಂಜರಿಯುತ್ತಿರಲಿಲ್ಲ. ಕೆಲವು ಘಟನೆಗಳಲ್ಲಿ ತಾನು ಅಮೆರಿಕ ಅಧ್ಯಕ್ಷ ಎಂಬುದನ್ನೂ ಮರೆತು ತೀರಾ ಕ್ಷುಲ್ಲಕವಾಗಿ ಮಾತಾಡುತ್ತಿದ್ದ ಮತ್ತು ವರ್ತಿಸುತ್ತಿದ್ದ.

ಅಮೆರಿಕದ ಮೂವತ್ತಾರನೇ ಅಧ್ಯಕ್ಷ ಲಿಂಡನ್ ಬಿ.ಜಾನ್ಸನ್ ಶ್ವೇತಭವನದ ಇತಿಹಾಸದಲ್ಲಿಯೇ ಅತ್ಯಂತ ವಿಚಿತ್ರ ಮತ್ತು ಒರಟು ವ್ಯಕ್ತಿತ್ವದ ನಾಯಕ. ರಾಜಕೀಯ ಚಾತುರ್ಯದಲ್ಲಿ ಎಷ್ಟು ನಿಸ್ಸೀಮನೋ, ತನ್ನ ನಡೆವಳಿಕೆಯಲ್ಲಿ ಅಷ್ಟೇ ಅಸಭ್ಯ ಮತ್ತು ಸ್ವೇಚ್ಛಾಚಾರಿಯಾಗಿದ್ದ. ಅವನ ವರ್ತನೆಗಳು ಹಲವು ಬಾರಿ ಅಧ್ಯಕ್ಷೀಯ ಪೀಠದ ಘನತೆಯನ್ನು ಬೀದಿಗೆ ತಂದಿದ್ದವು. ಜಾನ್ಸನ್ ಅಧಿಕಾರಿಗಳನ್ನು ಹತೋಟಿಯಲ್ಲಿಡಲು 'ಜಾನ್ಸನ್ ಟ್ರೀಟ್ಮೆಂಟ್' ಎಂಬ ತಂತ್ರ ಬಳಸುತ್ತಿದ್ದ. ಅಂದರೆ, ಎತ್ತರದ ವ್ಯಕ್ತಿಯಾಗಿದ್ದ ಆತ ಅಧಿಕಾರಿಗಳ ತೀರಾ ಹತ್ತಿರ ನಿಂತು, ಅವರ ಕಣ್ಣಲ್ಲಿ ಕಣ್ಣಿಟ್ಟು, ಅಸಭ್ಯ ಪದಗಳನ್ನು ಬಳಸುತ್ತಾ ಬೆದರಿಸುತ್ತಿದ್ದ. ಇನ್ನು ಪತ್ರಕರ್ತರ ಮುಂದೆ ಶರ್ಟ್ ಬಿಚ್ಚಿ ತನ್ನ ಶಸ್ತ್ರಚಿಕಿತ್ಸೆಯ ಗುರುತನ್ನು ತೋರಿಸುವುದು ಅಥವಾ ತನ್ನ ಸಾಕು ನಾಯಿಗಳ ಕಿವಿ ಹಿಡಿದು ಎತ್ತುವ ವಿಚಿತ್ರ ವರ್ತನೆಗಳನ್ನು ಮಾಡುತ್ತಿದ್ದ.

ಲಿಂಡನ್ ಜಾನ್ಸನ್‌ನ ಅತ್ಯಂತ ಕುಖ್ಯಾತ ಅಭ್ಯಾಸವೆಂದರೆ ಶೌಚಾಲಯದ ರಾಜಕೀಯ. ಜಾನ್ಸನ್ ಕೆಲಸದ ಒತ್ತಡದ ಸಂದರ್ಭದಲ್ಲಿ, ಶೌಚಾಲಯದಲ್ಲಿ ಕುಳಿತಿದ್ದಾಗಲೂ ಅಧಿಕಾರಿಗಳನ್ನು ಅಲ್ಲಿಗೇ ಕರೆಸಿಕೊಳ್ಳುತ್ತಿದ್ದ. ಶೌಚಾಲಯದ ಬಾಗಿಲು ತೆರೆದಿಟ್ಟುಕೊಂಡೇ ಪ್ರಮುಖ ರಾಷ್ಟ್ರೀಯ ವಿಷಯಗಳ ಬಗ್ಗೆ ಚರ್ಚಿಸುತ್ತಾ ಆದೇಶ ನೀಡುತ್ತಿದ್ದ. ಇದು ಅವನಿಗೆ ಕೆಲಸದ ಮೇಲಿದ್ದ ಅತಿಯಾದ ಆಸಕ್ತಿಯೋ ಅಥವಾ ಎದುರಿಗಿದ್ದ ಅಧಿಕಾರಿಯನ್ನು ಅವಮಾನಿಸುವ ತಂತ್ರವೋ ಎಂಬುದು ಇಂದಿಗೂ ಚರ್ಚೆಯ ವಿಷಯ. ಅವನ ಭಾಷೆಯಂತೂ ಅತ್ಯಂತ ಒರಟು, ಕೆಟ್ಟದ್ದಾಗಿತ್ತು. ಆತ ಬಳಸುವ ಪದಗಳನ್ನು ಸಭ್ಯರು ಬಳಸುವುದಿರಲಿ, ಕೇಳಲೂ ಮುಜುಗರ ಪಡುತ್ತಿದ್ದರು. ಸಾರ್ವಜನಿಕವಾಗಿ ಅತ್ಯಂತ ಸುಸಂಸ್ಕೃತವಾಗಿ ಕಾಣಿಸಿಕೊಳ್ಳಬೇಕಿದ್ದ ಅಮೆರಿಕ ಅಧ್ಯಕ್ಷ, ಖಾಸಗಿ ಸಭೆಗಳಲ್ಲಿ ಕೆಟ್ಟ ಪದಗಳನ್ನು ಬಳಸಿ ವಿರೋಧಿಗಳನ್ನು ನಿಂದಿಸುತ್ತಿದ್ದ.

ರಿಚರ್ಡ್ ನಿಕ್ಸನ್ ಅಮೆರಿಕದ ಇತಿಹಾಸದಲ್ಲಿ ಅತ್ಯಂತ ಬುದ್ಧಿವಂತ, ಆದರೆ ಅಷ್ಟೇ ಸಂಶಯಾಸ್ಪದ ವ್ಯಕ್ತಿತ್ವದ ಅಧ್ಯಕ್ಷನಾಗಿ ಗುರುತಿಸಿಕೊಂಡವ. ಸಾರ್ವಜನಿಕವಾಗಿ ಆತ ಅತ್ಯಂತ ಗಂಭೀರ, ಸುಸಂಸ್ಕೃತ ಮತ್ತು ಮುತ್ಸದ್ದಿ ನಾಯಕನಂತೆ ಕಾಣಿಸಿಕೊಳ್ಳುತ್ತಿದ್ದ. ಆದರೆ 'ವಾಟರ್ ಗೇಟ್' ಹಗರಣದ ತನಿಖೆಯ ಭಾಗವಾಗಿ ಹೊರ ಬಂದ ಅವನ ಶ್ವೇತಭವನದ ರಹಸ್ಯ ಧ್ವನಿಮುದ್ರಿಕೆಗಳು (Nixon Tapes), ಅವನ ವ್ಯಕ್ತಿತ್ವದ ಕರಾಳ ಮುಖವನ್ನು ಜಗತ್ತಿನ ಮುಂದೆ ತೆರೆದಿಟ್ಟವು.

ಈ ಟೇಪ್‌ಗಳಲ್ಲಿ ನಿಕ್ಸನ್ ಬಳಸಿದ ಭಾಷೆ ಸಭ್ಯತೆಯ ಎಲ್ಲ ಗೆರೆಗಳನ್ನು ದಾಟಿತ್ತು. ಯಹೂದಿಗಳು, ಕಪ್ಪು ವರ್ಣೀಯರು ಮತ್ತು ಐರಿಶ್ ಮೂಲದವರ ಬಗ್ಗೆ ಅತ್ಯಂತ ಹಗುರವಾಗಿ ಮತ್ತು ಜನಾಂಗೀಯ ನಿಂದನೆಯ ಪದಗಳನ್ನು (Racial Slurs) ಬಳಸಿ ಮಾತನಾಡುತ್ತಿದ್ದ. ವಿಶೇಷವಾಗಿ, ಭಾರತದ ಅಂದಿನ ಪ್ರಧಾನಿ ಇಂದಿರಾ ಗಾಂಧಿ ಬಗ್ಗೆ ನಿಕ್ಸನ್ ಬಳಸಿದ ಪದಗಳು ಅತ್ಯಂತ ಅಸಭ್ಯವಾಗಿದ್ದವು (ಅವರನ್ನು 'ಮುದಿ ಮಾಟಗಾತಿ' ಎಂಬರ್ಥದಲ್ಲಿ ನಿಂದಿಸಿದ್ದ). ಇದು ಕೇವಲ ಒಬ್ಬ ವ್ಯಕ್ತಿಯ ಮೇಲಿನ ದ್ವೇಷವಾಗಿರದೇ, ಅವನಲ್ಲಿದ್ದ ಜನಾಂಗೀಯ ಪೂರ್ವಗ್ರಹದ ಸಂಕೇತವಾಗಿತ್ತು.

ನಿಕ್ಸನ್ ಈ ದ್ವಿಮುಖ ವ್ಯಕ್ತಿತ್ವ ಜಗತ್ತನ್ನೇ ಬೆಚ್ಚಿಬೀಳಿಸಿತು. ಹೊರಗೆ ಶಾಂತಿ ಮತ್ತು ರಾಜತಾಂತ್ರಿಕತೆಯ ಬಗ್ಗೆ ಮಾತನಾಡುವ ಜಗತ್ತಿನ ಅತಿ ಪ್ರಬಲ ವ್ಯಕ್ತಿ, ಒಳಗಡೆ ಇಷ್ಟೊಂದು ಕೀಳು ಮಟ್ಟದ ಆಲೋಚನೆಗಳನ್ನು ಹೊಂದಿದ್ದಾನಲ್ಲ ಎಂದು ಇಡೀ ಜಗತ್ತು ಬೆಚ್ಚಿ ಬಿದ್ದಿತು. ಈ ಟೇಪ್‌ಗಳು ಕೇವಲ ರಾಜಕೀಯ ಭ್ರಷ್ಟಾಚಾರವನ್ನು ಮಾತ್ರವಲ್ಲದೇ, ಒಬ್ಬ ಅಧ್ಯಕ್ಷರ ನೈತಿಕ ಪತನವನ್ನೂ ಸಾಬೀತುಪಡಿಸಿದವು. ಅಂತಿಮವಾಗಿ, ಈ ಧ್ವನಿಮುದ್ರಿಕೆಗಳೇ ಅವರ ಪದಚ್ಯುತಿಗೆ ಪ್ರಮುಖ ಕಾರಣವಾದವು. ಅಮೆರಿಕದ ಇತಿಹಾಸದಲ್ಲಿ ರಾಜೀನಾಮೆ ನೀಡಿದ ಮೊದಲ ಅಧ್ಯಕ್ಷ ಎಂಬ ಕಪ್ಪುಚುಕ್ಕೆಯೊಂದಿಗೆ ನಿಕ್ಸನ್ ಅಧಿಕಾರದಿಂದ ನಿರ್ಗಮಿಸಿದ. ನಿಕ್ಸನ್ ಆ ಸ್ಥಾನಕ್ಕೆ ತಕ್ಕುದಾದ ವ್ಯಕ್ತಿಯಾಗಿರಲಿಲ್ಲ ಎಂದು ಒಂದು ಕಾಲದ ಅವನ ಆಪ್ತರೇ ಬಹಿರಂಗವಾಗಿ ಮಾತಾಡಲಾರಂಭಿಸಿದರು.

ಅಮೆರಿಕದ ಅಧ್ಯಕ್ಷರಲ್ಲಿ ಅತ್ಯಂತ ಚಾಣಾಕ್ಷ ಹಾಗೂ ಹಾಸ್ಯಪ್ರಜ್ಞೆ ಹೊಂದಿದ್ದ ರೋನಾಲ್ಡ್ ರೇಗನ್ ಮಾಡಿದ ಒಂದು ಸಣ್ಣ ತಮಾಷೆ, ಜಗತ್ತನ್ನು ಅಣುಯುದ್ಧದ ಅಂಚಿಗೆ ತಂದು ನಿಲ್ಲಿಸಿತ್ತು. ಅದು ಆಗಸ್ಟ್ 11, 1984ರ ಶನಿವಾರದ ದಿನ. ರೇಗನ್ ವಾರಾಂತ್ಯದ ರೇಡಿಯೋ ಭಾಷಣಕ್ಕೆ ಸಿದ್ಧನಾಗುತ್ತಿದ್ದ. ಭಾಷಣ ಆರಂಭವಾಗುವ ಮುನ್ನ ಮೈಕ್ ಪರೀಕ್ಷಿಸುವಾಗ, ಗಂಭೀರವಾಗಿ ಓದಬೇಕಿದ್ದ ಸಾಲುಗಳ ಬದಲಿಗೆ ತಮಾಷೆಯಾಗಿ ಹೀಗೆ ಹೇಳಿದ- 'ನನ್ನ ಪ್ರೀತಿಯ ಅಮೆರಿಕನ್ನರೇ, ರಷ್ಯಾವನ್ನು ಶಾಶ್ವತವಾಗಿ ಅಮಾನ್ಯಗೊಳಿಸುವ (Outlaw) ಶಾಸನಕ್ಕೆ ನಾನು ಇಂದು ಸಹಿ ಹಾಕಿದ್ದೇನೆ ಎಂದು ಹೇಳಲು ನನಗೆ ಸಂತೋಷವಾಗುತ್ತಿದೆ. ನಾವು ಮುಂದಿನ ಐದು ನಿಮಿಷಗಳಲ್ಲಿ ಬಾಂಬ್ ದಾಳಿ ಆರಂಭಿಸಲಿದ್ದೇವೆ.'

ರೇಗನ್ ಇದನ್ನು ಕೇವಲ ಅಲ್ಲಿದ್ದ ತಂತ್ರಜ್ಞರ ಮನರಂಜನೆಗಾಗಿ ಹೇಳಿದ್ದ. ಆದರೆ ಅವನಿಗೆ ಗೊತ್ತಿಲ್ಲದ ವಿಷಯವೆಂದರೆ ಆ ಸಮಯದಲ್ಲಿ ಮೈಕ್ 'ಲೈವ್' ಆಗಿತ್ತು ಮತ್ತು ಅವನ ಈ ಮಾತುಗಳು ಪ್ರಸಾರವಾಗಿದ್ದವು. ಶೀತಲ ಸಮರ ಉತ್ತುಂಗದಲ್ಲಿದ್ದ ಆ ಕಾಲದಲ್ಲಿ, ಅಮೆರಿಕದ ಅಧ್ಯಕ್ಷರಿಂದ ಬಂದ ಇಂಥ ಹೇಳಿಕೆ ಇಡೀ ಜಗತ್ತಿನಲ್ಲಿ ಸಂಚಲನ ಮೂಡಿಸಿತು. ಸೋವಿಯತ್ ಒಕ್ಕೂಟವು ತಕ್ಷಣವೇ ತನ್ನ ಸೇನೆಯನ್ನು ಹೈಅಲರ್ಟ್ ಸ್ಥಿತಿಯಲ್ಲಿ ಇರಿಸಿತು. ಅಮೆರಿಕ ನಿಜವಾಗಿಯೂ ಅಣುಬಾಂಬ್ ದಾಳಿ ಮಾಡಲಿದೆ ಎಂದು ಭಾವಿಸಿದ ರಷ್ಯಾದ ನಾಯಕರು ಪ್ರತಿದಾಳಿಗೆ ಸಿದ್ಧರಾದರು.

ಪರಿಸ್ಥಿತಿ ಎಷ್ಟು ಉದ್ವಿಗ್ನವಾಯಿತೆಂದರೆ, ಜಾಗತಿಕ ಮಾರುಕಟ್ಟೆಗಳು ಕುಸಿದವು ಮತ್ತು ಜನರು ಭಯಭೀತರಾದರು. ನಂತರ ಶ್ವೇತಭವನವು 'ಇದು ಕೇವಲ ಒಂದು ತಮಾಷೆಯ ಪ್ರಹಸನ' ಎಂದು ಸ್ಪಷ್ಟನೆ ನೀಡಬೇಕಾಯಿತು. ಈ ಘಟನೆಯು ಒಂದು ಪ್ರಮುಖ ಪಾಠವನ್ನು ಕಲಿಸಿತು. ಅಮೆರಿಕದ ಅಧ್ಯಕ್ಷರ ಪೀಠದಲ್ಲಿ ಕುಳಿತ ವ್ಯಕ್ತಿಯ ಪ್ರತಿ ಪದವೂ ಜಗತ್ತಿನ ಮೇಲೆ ಗಾಢವಾದ ಪರಿಣಾಮ ಬೀರುತ್ತದೆ. ರೇಗನ್‌ನ ಈ 'ಮಿಲಿಟರಿ ಜೋಕ್' ಅಧ್ಯಕ್ಷೀಯ ಘನತೆಗೆ ಮಸಿ ಬಳಿಯಿತಲ್ಲದೇ, ಅಣು ಬಾಂಬ್‌ನಂಥ ಗಂಭೀರ ವಿಷಯದ ಬಗ್ಗೆ ತಮಾಷೆ ಮಾಡುವುದು ಎಷ್ಟು ಅಪಾಯಕಾರಿ ಎಂಬುದನ್ನು ತಿಳಿಸಿತು.

ಅಮೆರಿಕದ ಅಧ್ಯಕ್ಷ ಸ್ಥಾನ ಎನ್ನುವುದು ಕೇವಲ ಅಧಿಕಾರವಲ್ಲ, ಅದು ಜಾಗತಿಕ ಪ್ರಜಾಪ್ರಭುತ್ವದ ಅತಿ ದೊಡ್ಡ ಸಂಕೇತ. ಅಬ್ರಹಾಂ ಲಿಂಕನ್, ಟ್ರೂಮನ್, ಎಫ್.ಡಿ. ರೂಸ್ವೆಲ್ಟ್, ಕೆನಡಿ ಅಥವಾ ಒಬಾಮಾ ಅವರಂಥ ನಾಯಕರು ತಮ್ಮ ಮಾತುಗಳ ಮೂಲಕ ಜಗತ್ತನ್ನು ಪ್ರಭಾವಿಸುತ್ತಿದ್ದರು. ಅವರ ಮಾತುಗಳಲ್ಲಿ ತೂಕವಿರುತ್ತಿತ್ತು, ಪ್ರತಿ ಪದವೂ ಅಳೆದು ತೂಗಿ ಬರುತ್ತಿತ್ತು. ಅನುಚಿತವಾದ ಮತ್ತು ಅನಗತ್ಯವಾದ ಯಾವ ಮಾತುಗಳೂ ಅವರ ಬಾಯಿಂದ ಬರುತ್ತಿರಲಿಲ್ಲ.

ಆದರೆ ಡೊನಾಲ್ಡ್ ಟ್ರಂಪ್ ಆಗಮನದೊಂದಿಗೆ ಅಮೆರಿಕ ಪ್ರಜಾಪ್ರಭುತ್ವ ಹಾಕಿ ಕೊಟ್ಟ ಎಲ್ಲ ಶ್ರೇಷ್ಠ ಮತ್ತು ಉದಾತ್ತ ಸಂಪ್ರದಾಯಗಳೆಲ್ಲ ಮಣ್ಣು ಪಾಲಾಗಿವೆ. ಟ್ರಂಪ್ ದೊಡ್ಡ ವೈರಿ ಅಂದರೆ ಅವನ ಮಾತು. ಅವನು ಮಾತಿಗೆ ನಿಂತರೆ ಅದು ಎಲ್ಲಿಗೆ ಹೋಗಿ ನಿಲ್ಲುತ್ತದೆ ಎಂದು ಹೇಳಲಾಗುವುದಿಲ್ಲ. ಆದರೆ ಟ್ರಂಪ್ ತನ್ನ ವಿರೋಧಿಗಳನ್ನು ಹೀಯಾಳಿಸುವುದು, ಮಾಧ್ಯಮಗಳನ್ನು 'ಜನರ ಶತ್ರು' ಎಂದು ಕರೆಯುವುದು ಮತ್ತು ಜಾಗತಿಕ ವೇದಿಕೆಗಳಲ್ಲಿ ಬೇಜವಾಬ್ದಾರಿಯುತ ಹೇಳಿಕೆಗಳನ್ನು ನೀಡುವುದು ಸಾಮಾನ್ಯವಾಗಿ ಹೋಗಿದೆ. ಅವನ ಟ್ವೀಟ್, ರಾಜಕೀಯ ಮತ್ತು ಸಾರ್ವಜನಿಕ ವೇದಿಕೆಗಳ ಮೇಲಿನ ಭಾಷಣಗಳು ಅಧ್ಯಕ್ಷ ಸ್ಥಾನಕ್ಕೆ ಇರಬೇಕಾದ ಘನತೆ ಮತ್ತು ಗಾಂಭೀರ್ಯವನ್ನು ಕುಂದಿಸಿಬಿಟ್ಟಿವೆ.

ಟ್ರಂಪ್‌ಗೆ ಯಾರ ಬಗ್ಗೆಯೂ ಒಳ್ಳೆಯ ಅಭಿಪ್ರಾಯ ಇಲ್ಲ. ಫ್ರೆಂಚ್ ಅಧ್ಯಕ್ಷ ಇಮಾನ್ಯುಯೆಲ್ ಮೆಕ್ರಾನ್ ಬಗ್ಗೆ ಮಾತಾಡುತ್ತಾ, 'ಆತ ಹೆಂಡತಿಗೆ ಹೆದರುತ್ತಾನೆ, ಆತನ ಹೆಂಡತಿ ಕೆನ್ನೆಗೆ ಹೊಡೆದ ಪರಿಣಾಮ ಆತನ ದವಡೆ ಊದಿಕೊಂಡಿತು' ಎಂದು ಹೇಳಿದ್ದು ಆತನ ಬಾಯಿ, ಬಚ್ಚಲ ಮನೆ ಎಂಬುದನ್ನು ಸಾಬೀತುಪಡಿಸಿತು.

ಇರಾನ್ ವಿರುದ್ಧದ ಯುದ್ಧದ ನಂತರ ಟ್ರಂಪ್ ಇಡೀ ಜಗತ್ತಿನಲ್ಲಿ ಅತ್ಯಂತ ವಿವಾದಾಸ್ಪದ, ಅಪಾಯಕಾರಿ ಮತ್ತು ತಿಕ್ಕಲು ಮನುಷ್ಯ ಎಂದು ಕರೆಯಿಸಿಕೊಂಡಿದ್ದಾನೆ. ಟ್ರಂಪ್ ಅಧಿಕಾರಕ್ಕೆ ಬಂದ ಮೇಲೆ ಅಮೆರಿಕದ ಮಿತ್ರ ರಾಷ್ಟ್ರಗಳಾದ ಜರ್ಮನಿ, ಫ್ರಾನ್ಸ್ ಮತ್ತು ಕೆನಡಾಗಳ ಜತೆಗಿನ ಸಂಬಂಧವೂ ಹದಗೆಟ್ಟಿತು. ಜಾಗತಿಕ ನಾಯಕರು ಟ್ರಂಪ್ ನಡವಳಿಕೆಯನ್ನು ಕಂಡು ಮುಸಿಮುಸಿ ನಗುವಂತಾಯಿತು. ಹವಾ ಮಾನ ಬದಲಾವಣೆಯ ಒಪ್ಪಂದದಿಂದ ಹೊರ ಬರುವುದು, ನ್ಯಾಟೊದಿಂದ ಹೊರ ಬರುವುದು ಅಥವಾ ವಿಶ್ವ ಆರೋಗ್ಯ ಸಂಸ್ಥೆಯಂಥ ಸಂಸ್ಥೆಗಳ ಬಗ್ಗೆ ಹಗುರವಾಗಿ ಮಾತನಾಡುವುದು ಅಮೆರಿಕದ ನೈತಿಕ ನಾಯಕತ್ವವನ್ನೇ ಪ್ರಶ್ನಿಸುವಂತೆ ಮಾಡಿತು.

ಅಧ್ಯಕ್ಷರ ಮಾತು ಎಂದರೆ ಅದು ಶಾಸನವೆಂಬ ನಂಬಿಕೆ ಇತ್ತು. ಆದರೆ ಟ್ರಂಪ್ ಅವಧಿಯಲ್ಲಿ 'ಪರ್ಯಾಯ ಸತ್ಯ' (Alternative Facts) ಎಂಬ ಹೊಸ ಪರಿಕಲ್ಪನೆ ಹುಟ್ಟಿಕೊಂಡಿತು. ಅವನು ಹೇಳುವ ಅಂಕಿ-ಅಂಶಗಳು, ಇತಿಹಾಸದ ವ್ಯಾಖ್ಯಾನಗಳು ಅಥವಾ ವೈಜ್ಞಾನಿಕ ಸಂಗತಿಗಳು ವಾಸ್ತವಕ್ಕೆ ದೂರವಾಗಿದ್ದವು. ಜಗತ್ತಿನ ಅತಿ ಪ್ರಬಲ ವ್ಯಕ್ತಿ ಸುಳ್ಳುಗಳನ್ನು ಸತ್ಯವೆಂದು ನಂಬಿಸಲು ಹೊರಟಾಗ, ಇಡೀ ಪ್ರಜಾಪ್ರಭುತ್ವ ವ್ಯವಸ್ಥೆಯೇ ನಗುವಂತಾಯಿತು. ಇದು ಅಧ್ಯಕ್ಷ ಸ್ಥಾನದ ವಿಶ್ವಾಸಾರ್ಹತೆಯನ್ನು ಹಾಳುಮಾಡಿತು.

ಟ್ರಂಪ್ ಅವರ ಇಂದಿನ ಅತಿರೇಕದ ಮಾತುಗಳನ್ನು ಗಮನಿಸಿದರೆ, ಅಮೆರಿಕದ ಇತಿಹಾಸದಲ್ಲಿಯೇ ಅಧ್ಯಕ್ಷ ಸ್ಥಾನದ ಘನತೆಯನ್ನು ಈ ರೀತಿ ಮೂರಾಬಟ್ಟೆ ಮಾಡಿದವರು ಯಾರೂ ಇರಲಿಕ್ಕಿಲ್ಲ. ಅಧಿಕಾರ ಮತ್ತು ಅಹಂಕಾರ ಸೇರಿದಾಗ ಒಬ್ಬ ನಾಯಕ ಹೇಗೆ ವರ್ತಿಸಬಹುದು ಎಂಬುದಕ್ಕೆ ಟ್ರಂಪ್ ನಡವಳಿಕೆಗಳೇ ಸಾಕ್ಷಿ.

ಅಧ್ಯಕ್ಷ ಸ್ಥಾನ ಎನ್ನುವುದು ಒಂದು ಗೌರವಾನ್ವಿತ ಪೀಠ. ಆದರೆ ಟ್ರಂಪ್ ಅದನ್ನು ಒಂದು 'ರಿಯಾಲಿಟಿ ಶೋ' ರೀತಿ ನಡೆಸಿಕೊಂಡಿದ್ದಾನೆ. ಅವನಿಗೆ ಮಾಧ್ಯಮಗಳ ಗಮನ ಸೆಳೆಯುವುದೇ ಮುಖ್ಯ ಗುರಿಯೇ ಹೊರತು, ಆ ಸ್ಥಾನದ ಗಾಂಭೀರ್ಯವನ್ನು ಕಾಪಾಡುವುದಲ್ಲ. ತನ್ನ ಕೆಳಗೆ ಕೆಲಸ ಮಾಡುವ ಅಧಿಕಾರಿಗಳನ್ನು ಬಹಿರಂಗವಾಗಿ ಅವಮಾನಿಸುವುದು, ಕಿತ್ತುಹಾಕುವುದು ಮತ್ತು ವೈಯಕ್ತಿಕ ದಾಳಿಗಳನ್ನು ಮಾಡುವುದು ಒಬ್ಬ ರಾಷ್ಟ್ರದ ನಾಯಕನಿಗೆ ಒಪ್ಪುವ ಗುಣವಲ್ಲ. ಇದರಿಂದಾಗಿ ಶ್ವೇತಭವನದ ಘನತೆ ಬೀದಿಪಾಲಾಗಿರುವುದು ಸುಳ್ಳಲ್ಲ.

ಯಾವಾಗ ಅಮೆರಿಕದ ಅಧ್ಯಕ್ಷನ ಮಾತು ಅರ್ಥ ಕಳೆದುಕೊಳ್ಳುತ್ತದೆಯೋ, ಆಗ ಜಾಗತಿಕವಾಗಿ ಅರಾಜಕತೆ ಸೃಷ್ಟಿಯಾಗುತ್ತದೆ. ಟ್ರಂಪ್ ಮಾತುಗಳನ್ನು ಚೀನಾ, ರಷ್ಯಾ ಅಥವಾ ಉತ್ತರ ಕೊರಿಯಾದಂಥ ದೇಶಗಳು ಗಂಭೀರವಾಗಿ ಪರಿಗಣಿಸುವುದನ್ನು ನಿಲ್ಲಿಸಿ ಬಿಟ್ಟಿವೆ. ಅಮೆರಿಕದ ಅಧ್ಯಕ್ಷರ ಮಾತಿಗೆ ಹಿಂದೆ ಇದ್ದ 'ಭಯಮಿಶ್ರಿತ ಭಕ್ತಿ' ಹೋಗಿ, ಈಗ 'ಏನೋ ಮಾತಾಡುತ್ತಾನೆ ಬಿಡಿ' ಎನ್ನುವ ಅಸಡ್ಡೆ ಮೂಡಿದೆ. ಇದು ಕೇವಲ ಅಮೆರಿಕಕ್ಕೆ ಅಲ್ಲ, ಇಡೀ ಜಗತ್ತಿನ ಸುರಕ್ಷತೆಗೆ ದೊಡ್ಡ ಹೊಡೆತ. ಇಂದು ಅಮೆರಿಕದ ಅಧ್ಯಕ್ಷರ ಸೀನು ಕೇಳಿಸಿಕೊಳ್ಳಲು ಜಗತ್ತು ಕಿವಿಗೊಡುತ್ತಿಲ್ಲ, ಬದಲಾಗಿ ಆ 'ಜೋಕರ್' ಮತ್ತೆ ಯಾವ ಜೋಕ್ ಹೇಳುತ್ತಾನೆ ಎಂದು ಕಾದು ಕುಳಿತು ಹಾಸ್ಯ ಮಾಡುತ್ತಿದೆ. ಇದು ಪ್ರಜಾಪ್ರಭುತ್ವದ ದುರಂತವೇ ಸರಿ.

ಮಿಸ್ಸಿಸ್ಸಿಪ್ಪಿ ಮಹಾನದಿಯ ಮನದ ಮಾತು

ಶ್ರೀವತ್ಸ ಜೋಶಿ

ಭಾರತ ದೇಶದ ಉತ್ತರದ ತುದಿಯಿಂದ ದಕ್ಷಿಣದ ತುದಿಯುವರೆಗಿನ ದೂರ, ಅಂದರೆ ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ, ಅಥವಾ ಆಸೇತುಹಿಮಾಚಲ ಅಂತೇವಲ್ಲ ಅದು, ಇರೋದು ಸುಮಾರು 1800 ಮೈಲು. ಮಿಸ್ಸಿಸ್ಸಿಪ್ಪಿನದಿಯ ಉದ್ದ ಅದಕ್ಕಿಂತಲೂ ಹೆಚ್ಚು!




ಅಮೆರಿಕ ಸಂಯುಕ್ತ ಸಂಸ್ಥಾನಗಳ ಜೀವನದಿ ಯಾವುದೆಂದು ಕೇಳಿದರೆ ಮಿಸ್ಸಿಸ್ಸಿಪ್ಪಿ ಎಂಬ ಹೆಸರಿನ ನಾನು, 'ಅದು ನಾನೇ!' ಎಂದು ಗರ್ವದಿಂದ ಉತ್ತರಿಸುತ್ತೇನೆ. ಕನ್ನಡ ಪದಗಳನ್ನು ಇಂಗ್ಲಿಷ್ ಆಕ್ಸೆಂಟಲ್ಲಿ ಸ್ಟೈಲಿನಿಂದ ಹೇಳುವಂತೆ 'ಜೀವ ನಾ ಡಿ' ಎನ್ನುತ್ತೀರಾದರೆ ಅದೂ ನಾನೇ! ಸ್ವಾರಸ್ಯವೆಂದರೆ ಅಮೆರಿಕದ ಅತ್ಯಂತ ಉದ್ದದ ನದಿ ನಾನಲ್ಲ, ಆ ಕೀರ್ತಿ ನನ್ನ ಸಹೋದರಿ ಮಿಸ್ಸೌರಿ ನದಿಗೆ ಸಲ್ಲುತ್ತದೆ. ಆಕೆಯ ಉದ್ದ ಸುಮಾರು 2500 ಮೈಲು. ನಾನು ಸೆಕೆಂಡ್ ಲಾಂಗೆಸ್ಟ್, 2320 ಮೈಲು. ಆದರೆ ಮಿಸ್ಸೌರಿಯನ್ನು ನನ್ನ ಉಪನದಿ ಎಂದು ಪರಿಗಣಿಸುವುದರಿಂದ ಜೀವನದಿ ಮತ್ತು ಜೀವನಾಡಿ ನಾನೇ. ಅಮೆರಿಕ ಹೇಳಿಕೇಳಿ ಬಲು ದೊಡ್ಡ ದೇಶ. ಇಲ್ಲಿ ಎಲ್ಲವೂ ದೊಡ್ಡ ಸೈಜು. ಹಾಗೆ ನಾವು ನದಿಗಳೂ ಸಾರಾರು ಮೈಲು ದೂರ ಹರಿಯುತ್ತೇವೆ. ನಿಮಗೆ ಒಂದು ಅಂದಾಜಿಗೆ ಅನುಕೂಲವಾಗುವಂತೆ ಹೇಳುವುದಾದರೆ, ನಿಮ್ಮ ಭಾರತ ದೇಶದ ಉತ್ತರದ ತುದಿಯಿಂದ ದಕ್ಷಿಣದ ತುದಿಯವರೆಗಿನ ದೂರ (ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ, ಅಥವಾ ಆಸೇತುಹಿಮಾಚಲ ಅಂತೀರಲ್ಲ ಅದು) ಇರೋದು ಸುಮಾರು 1800 ಮೈಲು. ಅದಕ್ಕಿಂತ ನನ್ನ ಉದ್ದ ಹೆಚ್ಚು!

ಋಷಿಮೂಲ ನದೀಮೂಲಗಳನ್ನೆಲ್ಲ ಹುಡುಕಬಾರದು ಎಂದು ನಿಮ್ಮ ದೇಶದಲ್ಲಿ ಹೇಳ್ತಾರಂತೆ ಅಲ್ವಾ? ಈ ದೇಶದಲ್ಲಿ ಹಾಗೇನಿಲ್ಲ ಬಿಡಿ. ನನ್ನ ಮೂಲ ಯಾವುದು ಎಂದು ಬೇಕಿದ್ದರೆ ನಾನೇ ಹೇಳುತ್ತೇನೆ. ಅಮೆರಿಕದಲ್ಲಿ ಉತ್ತರಭಾಗದಲ್ಲಿ, ಕೆನಡಾ ದೇಶಕ್ಕೆ ತಾಗಿಕೊಂಡು ಇರುವ, ಸಾವಿರ ಸರೋವರಗಳ ನಾಡು ಎಂದು ಖ್ಯಾತವಾದ ಮಿನ್ನೆಸೋಟ ರಾಜ್ಯದಲ್ಲಿ, ಇಟಾಸ್ಕಾ ಎಂಬ ಸರೋವರ ನನ್ನ ತವರುಮನೆ. ಅಲ್ಲಿಂದ ದಕ್ಷಿಣಾಭಿಮುಖವಾಗಿ ಹರಿದು ಹತ್ತು ರಾಜ್ಯಗಳ ಗುಂಟ ಸಾಗಿ (ರಾಜ್ಯಗಳ ಮೂಲಕ ಎನ್ನಬಹುದಾಗಿತ್ತು, ಆದರೆ ಬಹುತೇಕ ನನ್ನ ದಾರಿಯುದ್ದಕ್ಕೂ ರಾಜ್ಯಗಳಿಗೆ ನಾನೇ ಒಂದು ಗಡಿ) ಮೆಕ್ಸಿಕೊ ಕೊಲ್ಲಿಯನ್ನು ತಲುಪುತ್ತೇನೆ. ಅಷ್ಟುದ್ದದ ಪಯಣದಲ್ಲಿ ಹತ್ತಾರು ಉಪನದಿಗಳು ನನ್ನನ್ನು ಸೇರುತ್ತವೆನ್ನಿ. ಆದರೂ, ಇಟಾಸ್ಕಾ ಸರೋವರದಿಂದ ಹೊರಟ ಒಂದು ಜಲಬಿಂದು ಮೆಕ್ಸಿಕೊ ಕೊಲ್ಲಿಯನ್ನು ತಲುಪುವುದೇ ಮಿಸ್ಸಿಸ್ಸಿಪ್ಪಿ ನದಿಯ ವರ್ಜಿನಲ್ ರೂಪ ಅಂತೀರಾದ್ರೆ, ಆ ಜಲಬಿಂದುಗೆ ಸುಮಾರು 90 ದಿನ ಬೇಕು!

ಮಿಸ್ಸಿಸ್ಸಿಪ್ಪಿ ಎಂಬ ನನ್ನ ಹೆಸರಿನ ಬಗ್ಗೆಯೂ ನಿಮಗೆ ಕುತೂಹಲವಿರಬಹುದಲ್ಲ? ನಿಮ್ಮಲ್ಲಿ ಕೆಲವರಿಗೆ ಏಳನೇ ತರಗತಿಯ ಭೂಗೋಳಶಾಸ್ತ್ರ ಪಠ್ಯದಲ್ಲಿ ಅಮೆರಿಕದ ಜಿಯಾಗ್ರಫಿ ಬಗ್ಗೆಯೂ ಪಾಠ ಇತ್ತಂತೆ, ಅದರಲ್ಲಿ ನನ್ನ ಹೆಸರೂ ಬರ್ತಿತ್ತಂತೆ ಅಲ್ವಾ? ಪರೀಕ್ಷೆಯಲ್ಲಿ ಉತ್ತರಿಸಲಿಕ್ಕಾದರೂ ಉರು ಹೊಡೆದಿದ್ದಿರೋ ಏನೊ. ಅಥವಾ ಆಮೇಲೆ ಜನರಲ್ ಕ್ವಿಜ್‌ಗಳಲ್ಲಿ 'ವರ್ಡ್ ವಿದ್ ರಿಪೀಟೆಡ್ ಅಕ್ಕರೆನ್ಸಸ್ ಆಫ್ ಕಾನ್ಸೊನೆಂಟ್ಸ್' ಅಂತಲೋ, 'ವರ್ಡ್ ವಿದ್ ಓನ್ಲಿ ಒನ್ ವೋವೆಲ್ ದ್ಯಾಟ್ ಕಮ್ಸ್ ಫೋರ್ ಟೈಮ್ಸ್' ಅಂತಲೋ ಪ್ರಶ್ನೆ ಇದ್ದಾಗ ಮಿಸ್ಸಿಸ್ಸಿಪ್ಪಿ ಎಂದು ಉತ್ತರಿಸಿದ್ದಿರೋ ಏನೊ. 1991ರಲ್ಲಿ ಮೀರಾ ನಾಯರ್ ನಿರ್ಮಿಸಿದ್ದ 'ಮಿಸ್ಸಿಸ್ಸಿಪ್ಪಿ ಮಸಾಲಾ' ಇಂಗ್ಲಿಷ್ ಚಿತ್ರದಿಂದಾಗಿಯೂ ಕೆಲವರಿಗೆ ನನ್ನ ಹೆಸರಿನ ಪರಿಚಯವಿರಬಹುದು. ಮಿಸ್ಸಿಸ್ಸಿಪ್ಪಿ ಎಂಬ ಹೆಸರು ಬಂದದ್ದು ಅಮೆರಿಕದ ಮೂಲನಿವಾಸಿಗಳಾದ ರೆಡ್ ಇಂಡಿಯನ್ಸ್ ಮಾತಾಡುತ್ತಿದ್ದ ಆಲ್ಗೊನ್‌ಕ್ವಿನ್ ಭಾಷೆಯಿಂದ. 'ಮಿಸಿ ಜೀಬಿ' ಎಂದರೆ ಮಹಾ ನದಿ ಅಥವಾ ದೊಡ್ಡ ನದಿ ಎಂದು ಅರ್ಥ. ನನ್ನ ಹೆಸರಿನಲ್ಲೇ ನದಿ ಎಂಬ ಪದ ಇದೆಯಾದ್ದರಿಂದ ಮಿಸ್ಸಿಸ್ಸಿಪ್ಪಿ ನದಿ ಎನ್ನಬೇಕಾಗಿಲ್ಲ. ಮಿಸ್ಸಿಸ್ಸಿಪ್ಪಿ ಅಂತಷ್ಟೇ ಸಾಕು. ಆದರೆ ಈ ಹೆಸರಿನದೇ ಒಂದು ರಾಜ್ಯವೂ ಇಲ್ಲಿದೆ. ಹಾಗಾಗಿ ನಾನು ಮಿಸ್ಸಿಸ್ಸಿಪ್ಪಿ ರಿವರ್. ಆ ರಾಜ್ಯ ಮಿಸ್ಸಿಸ್ಸಿಪ್ಪಿ ಸ್ಟೇಟ್. ನನಗೆ ಕೆಲವು ನಿಕ್‌ನೇಮುಗಳೂ ಇವೆ: 'ಓಲ್ಡ್ ಮ್ಯಾನ್ ರಿವರ್', 'ಓಲ್ಡ್ ಮಡ್ಡೀ' (ನನ್ನ ನೀರು ಕೆಸರುಮಯ), 'ಓಲ್ಡ್ ಬ್ಲೂ', 'ಗ್ಯಾದರಿಂಗ್ ಆಫ್ ವಾಟರ್ಸ್' ಇತ್ಯಾದಿ. ಇಲ್ಲಿನ ಜನಪದ ಗೀತೆಗಳಲ್ಲಿ ನನ್ನ ಉಲ್ಲೇಖವಿದೆ. ಅಮೆರಿಕದ ಪ್ರಸಿದ್ಧ ಹಾಸ್ಯಬರಹಗಾರ ಮಾರ್ಕ್ ಟ್ವೈನ್‌ನ ಕೃತಿಗಳಲ್ಲಿ ನನ್ನ ಪ್ರಸ್ತಾವ ಇದ್ದೇ ಇರುತ್ತದೆ. 'ಎಡ್ವೆಂಚರ್ಸ್ ಆಫ್ ಹಕಲ್‌ಬೆರ್ರಿ ಫಿನ್ಸ್'ನಂಥ ಕಥೆಗಳು ನಡೆದಿದ್ದು ನನ್ನ ನದೀಪಾತ್ರದಲ್ಲೇ. ಮಾರ್ಕ್ ಟ್ವೈನ್ ತನ್ನ ಆತ್ಮಕಥನಕ್ಕೂ 'ಲೈಫ್ ಆನ್ ದ ಮಿಸ್ಸಿಸ್ಸಿಪ್ಪಿ' ಎಂದೇ ಹೆಸರಿಟ್ಟಿದ್ದಾನೆ. ಆತ ತಾರುಣ್ಯದಲ್ಲಿ ಸ್ಟೀಮ್ ಬೋಟ್ ಚಾಲಕನಾಗಿದ್ದ. ಅವನ ಸ್ಟೀಮ್ ಬೋಟ್ ನನ್ನ ಮೂಲಕವೇ ಹೋಗುತ್ತಿತ್ತು. ಮಾರ್ಕ್ ಟ್ವೈನ್ ಎಂಬ ಕಾವ್ಯನಾಮ (ಮೂಲ ಹೆಸರು: ಸ್ಯಾಮುವೆಲ್ ಲಾಂಗ್‌ಹೋಮ್ ಕ್ಲೆಮೆನ್ಸ್) ನನ್ನದೇ ಕಾರಣದಿಂದ ಬಂದದ್ದು. ಮಾರ್ಕ್ ಟ್ವೈನ್ ಅಂದರೆ ನದಿಯ ಆಳವನ್ನು ಅಳೆಯುವ ಅಳತೆಪಟ್ಟಿಯಲ್ಲಿ ಎರಡನೇ ಗುರುತು ಅಂತರ್ಥ. ಹನ್ನೆರಡು ಅಡಿಗಳಷ್ಟು ಆಳ; ಸ್ಟೀಮ್ ಬೋಟ್‌ಗೆ ಸುರಕ್ಷಿತ.

ಮಾರ್ಕ್ ಟ್ವೈನ್‌ಗಿಂತಲೂ ಸ್ವಲ್ಪ ಹಿಂದಿನ ಕಾಲದ ಚರಿತ್ರೆಯನ್ನು ನಾನಿಲ್ಲಿ ನಿಮಗೆ ಹೇಳಬೇಕು. 1803ರವರೆಗೂ ನಾನು (ಮತ್ತು ನನ್ನ ಪಶ್ಚಿಮಕ್ಕಿದ್ದ ಪ್ರದೇಶ) ಫ್ರೆಂಚರ ಸ್ವಾಧೀನದಲ್ಲಿದ್ದೆವು. ಅವರು ಅದನ್ನು 'ಲಾ ಲೂಸಿಯೇನ್' ಎನ್ನುತ್ತಿದ್ದರು. 1803ರಲ್ಲಿ, ಥಾಮಸ್ ಜೆಫರ್‌ಸನ್ ಅಮೆರಿಕಾಧ್ಯಕ್ಷನಾಗಿದ್ದಾಗ ಆ ಭಾಗವನ್ನು ಆಗಿನ ಫ್ರಾನ್ಸ್ ಚಕ್ರವರ್ತಿ ನೆಪೋಲಿಯನ್ ಬೋನಾಪಾರ್ಟೆ ಜೊತೆಗಿನ ವ್ಯಾಪಾರ ಒಪ್ಪಂದದಲ್ಲಿ ಖರೀದಿಸಿದನು. ಹಾಗಾಗಿ, ಅಮೆರಿಕ ದೇಶಕ್ಕೆ ಸ್ವಾತಂತ್ರ್ಯ 1776ರಲ್ಲಿ ಸಿಕ್ಕಿದ್ದಾದರೂ ಆಮೇಲೆ ಹಂತಹಂತವಾಗಿ ದೇಶ ವಿಸ್ತಾರವಾಗುತ್ತ ಹೋದದ್ದಾದ್ದರಿಂದ ನಾನು ಅಮೆರಿಕನ್ ಆದದ್ದು 1803ರಲ್ಲಿ. ಅದಾದ ಬಳಿಕ ಈ ದೇಶದ ಅಭ್ಯುದಯಕ್ಕೆ ನಾನು ಕೊಟ್ಟ ಕೊಡುಗೆ ಅಷ್ಟಿಷ್ಟಲ್ಲ. ಸ್ಟೀಮ್ ಬೋಟುಗಳು ಜನರನ್ನು ಮತ್ತು ಸಾಮಾನುಸರಂಜಾಮನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ಒಯ್ಯಲು ಪ್ರಮುಖ ಸಾಧನವಾಗಿದ್ದ ದಿನಗಳು ಅವು. ರಸ್ತೆಗಳು, ಮೋಟಾರು ವಾಹನಗಳು ಇನ್ನೂ ಶುರುವಾಗಿರಲಿಲ್ಲ. ರೈಲುಸಂಚಾರವೂ ಅಷ್ಟಕ್ಕಷ್ಟೇ. ಜಲಸಾರಿಗೆಯೇ ಜೀವನಾಡಿ. ಹಣ್ಣು-ತರಕಾರಿ, ಹೈನುಪದಾರ್ಥ, ಧಾನ್ಯ, ಹತ್ತಿ, ಮರಮಟ್ಟು ಮತ್ತು ಲೋಹದ ಸಾಮಗ್ರಿ ಎಲ್ಲವನ್ನೂ ದೊಡ್ಡ ದೋಣಿಗಳಲ್ಲಿ, ಹಡಗುಗಳಲ್ಲಿ ನನ್ನ ಮೂಲಕ ಸಾಗಿಸುತ್ತಿದ್ದರು. ಇಲ್ಲೊಂದು ಗಮನಾರ್ಹ ಅಂಶವಿದೆ. ನನ್ನ ಹರಿವಿನ ಬಹುಭಾಗವೆಲ್ಲ ಸಮತಟ್ಟಾದ ಪ್ರದೇಶದಲ್ಲೇ. ಕೆಲವೆಡೆ ನಾನು ನಾಲ್ಕಾರು ಮೈಲುಗಳಷ್ಟು ಅಗಲವಾಗಿ ಹರಿಯುತ್ತೇನೆ. ಒಂದು ಕಡೆಯಂತೂ ನನ್ನ ಅಗಲ 11 ಮೈಲುಗಳಷ್ಟಿದೆ! ಈ ರೀತಿಯ ಹರಿವಿನಿಂದಾಗಿ ದೋಣಿ-ಹಡಗು ಯಾನ ಸುಲಭ. ಧುಮ್ಮಿಕ್ಕಿ ಹರಿಯುವ ಜಲಧಾರೆಯಾಗುವುದು ಮಿನ್ನೆಸೋಟ ರಾಜ್ಯದ ಸೈಂಟ್ ಆಂಟೊನಿ ಎಂಬಲ್ಲಿ ಒಂದು ಕಡೆ ಮಾತ್ರ. ಉಳಿದ ಕಡೆಗಳಲ್ಲಿ ಅಲ್ಪಸ್ವಲ್ಪ ಏರುತಗ್ಗುಗಳಿದ್ದರೂ 'ಲಾಕ್'ಗಳ ಮೂಲಕ ನೀರಿನ ಮಟ್ಟವನ್ನು ಏರಿಸಿ ಅಥವಾ ತಗ್ಗಿಸಿ ದೋಣಿ ಸಂಚಾರಕ್ಕೆ ಅನುಕೂಲ ಮಾಡಿಕೊಳ್ಳುತ್ತಾರೆ.

ಅದು ಮನುಷ್ಯರ ವಿಚಾರವಾಯ್ತು; ಜಲಚರಗಳೂ ಪ್ರಾಣಿಪಕ್ಷಿಗಳೂ ನನ್ನನ್ನು ಬಹಳಷ್ಟು ಅವಲಂಬಿಸಿವೆ. ಸುಮಾರು 240 ಬಗೆಯ ಮೀನುಗಳಿಗೆ, ಅಂದರೆ ಅಮೆರಿಕದ ಒಟ್ಟು ಮೀನುಗಾರಿಕೆಯ ಕಾಲು ಭಾಗಕ್ಕೆ ನನ್ನದೇ ಆಶ್ರಯತಾಣ. ಸುಮಾರು 40 ಪ್ರತಿಶತದಷ್ಟು ಜಲಚರಗಳು ಚಳಿಗಾಲದಲ್ಲಿ ಮೆಕ್ಸಿಕೊಗೆ, ಬೇಸಗೆಯಲ್ಲಿ ಕೆನಡಾಕ್ಕೆ ವಲಸೆ ಹೋಗುವುದು ನನ್ನ ಮೂಲಕವೇ! ಆಕಾಶದಲ್ಲಿ ಹಾರುತ್ತ ಹಿಂಡುಹಿಂಡಾಗಿ ವಲಸೆ ಹೋಗುವ 300ಕ್ಕೂ ಅಧಿಕ ಪಕ್ಷಿಜಾತಿಗಳು, ಹಾಗೆಯೇ ಮೊನಾರ್ಕ್ ಚಿಟ್ಟೆಯಂಥವು ಸಹ ನನ್ನನ್ನು ಅವುಗಳ ವಲಸೆ ದಾರಿಯ ಗುರುತಾಗಿ ಇಟ್ಟುಕೊಳ್ಳುತ್ತವೆ. ಅಮೆರಿಕದ ರಾಷ್ಟ್ರಪಕ್ಷಿ ಬಾಲ್ಡ್ ಈಗಲ್ ಹೆಚ್ಚಾಗಿ ಗೂಡುಕಟ್ಟಿ ಸಂತಾನೋತ್ಪತ್ತಿ ಮಾಡುವುದು ನನ್ನ ತೀರಪ್ರದೇಶದಲ್ಲೇ. ಪೈನ್, ಮೇಪಲ್, ಓಕ್, ಕರಿ ಮುಂತಾದ ಮರಗಳು ಬೆಳೆಯುವ ದಟ್ಟ ಅರಣ್ಯಗಳಿರುವುದು ನನ್ನ ಬಳಿಯೇ. ಅಲ್ಲಿರುವ ಕರಡಿ, ಜಿಂಕೆ, ಮೂಸ್, ಬೀವರ್ ಮತ್ತಿತರ ಕಾಡುಪ್ರಾಣಿಗಳಿಗೆ ನೀರೊದಗಿಸುವುದು ನನ್ನದೇ ಹೊಣೆ. ಅಮೆರಿಕದ 40 ಪ್ರತಿಶತ ಕೃಷಿಭೂಮಿಗೆ ನೀರಾವರಿ ಪೂರೈಕೆ ನನ್ನದೇ. ಮತ್ತೆ 'ಜೀವನದಿ' ಎಂದು ಕರೆಯುವುದು ಸುಮ್ಮನೆ ಅಲ್ಲ.

ಅಮೆರಿಕ ಸಂಯುಕ್ತ ಸಂಸ್ಥಾನಗಳ ಭೂಪಟದಲ್ಲಿ ನೋಡಿದರೆ ಉತ್ತರದಿಂದ ದಕ್ಷಿಣಕ್ಕೆ ಹೆಚ್ಚೂಕಡಿಮೆ ಸರಳರೇಖೆಯಂತೆ ಇರುವ ನಾನು ದೇಶವನ್ನು ಪೂರ್ವಾರ್ಧ ಮತ್ತು ಪಶ್ಚಿಮಾರ್ಧ ಎಂದು ವಿಭಜಿಸುತ್ತೇನೆ. ಇದೆಷ್ಟು ಸಮಮಿತಿ ಇದೆಯೆಂದರೆ 50 ರಾಜ್ಯಗಳ ಪೈಕಿ ನನ್ನ ಎಡಭಾಗಕ್ಕೆ (ನೀವು ಭೂಪಟ ನೋಡುವಾಗ ಪೂರ್ವಕ್ಕೆ) 26 ರಾಜ್ಯಗಳು, ನನ್ನ ಬಲಭಾಗಕ್ಕೆ (ಭೂಪಟದಲ್ಲಿ ಪಶ್ಚಿಮಕ್ಕೆ) 24 ರಾಜ್ಯಗಳು. ಇನ್ನೊಂದು ಜನರಲ್ ನಾಲೆಡ್ಜ್ ಅಂಶವನ್ನೂ ಇಲ್ಲಿ ಹೇಳಬಯಸುತ್ತೇನೆ. ಅಮೆರಿಕದಲ್ಲಿ ಪ್ರತಿಯೊಂದು ರೇಡಿಯೊ ಸ್ಟೇಷನ್ ಮತ್ತು ಟಿವಿ ಸ್ಟೇಷನ್‌ಗೆ ನಾಲ್ಕಕ್ಷರಗಳ ಒಂದು ಐಡೆಂಟಿಫಿಕೇಶನ್ ಲೇಬಲ್ ಇರುತ್ತದೆ. ಅದನ್ನು 'ಕಾಲ್ ಲೆಟರ್ಸ್' ಎನ್ನುತ್ತಾರೆ. ಆಯಾಯ ಸ್ಟೇಷನ್‌ನವರು ಅದನ್ನು ಆಗಾಗ ಉದ್ಘೋಷಿಸಬೇಕು. ನಿಯಮ ಏನೆಂದರೆ, ನನ್ನ ಎಡಭಾಗದ ಎಲ್ಲ ಸ್ಟೇಷನ್‌ಗಳ ಮೊದಲ ಅಕ್ಷರ 'ಡಬ್ಲ್ಯು' ಆಗಿರಬೇಕು. ಬಲಭಾಗದ ಎಲ್ಲ ಸ್ಟೇಷನ್‌ಗಳ ಮೊದಲ ಅಕ್ಷರ 'ಕೆ' ಆಗಿರಬೇಕು. ಹಾಗಾಗಿಯೇ ನ್ಯೂಯಾರ್ಕ್, ವಾಷಿಂಗ್ಟನ್ ಡಿಸಿ, ಬಾಸ್ಟನ್ ಮುಂತಾದ ಪೂರ್ವಕರಾವಳಿಯ ಟಿವಿ/ರೇಡಿಯೊ ಸ್ಟೇಷನ್ ಹೆಸರುಗಳು ಡಬ್ಲ್ಯುದಿಂದ ಆರಂಭವಾಗಿರುತ್ತವೆ. ಲಾಸ್‌ಏಂಜಲೀಸ್, ಸಾನ್ ಫ್ರಾನ್ಸಿಸ್ಕೋ ಮುಂತಾದ ಪಶ್ಚಿಮ ಕರಾವಳಿಯ ಸ್ಟೇಷನ್ ಹೆಸರುಗಳು ಕೆ ಅಕ್ಷರದಿಂದ ಆರಂಭವಾಗಿರುತ್ತವೆ. ಜನಸಾಮಾನ್ಯರಿಗೆ ಈ ವ್ಯತ್ಯಾಸದಿಂದ ಏನೂ ಆಗಬೇಕಾದ್ದಿಲ್ಲ; ಆದರೆ ದೂರಸಂಪರ್ಕ ಇಲಾಖೆಗೆ, ಸ್ಟೇಷನ್‌ಗಳ ವಿಂಗಡಣೆಗೆ ಇದು ಮಹತ್ವದ್ದಾಗುತ್ತದೆ.

ಅಮೆರಿಕದ ಜನಸಂಖ್ಯೆಯಲ್ಲಿ ಸುಮಾರು 18 ಮಿಲಿಯನ್ ಜನರಿಗೆ ಕುಡಿಯುವ ನೀರು ಪೂರೈಕೆ ನನ್ನಿಂದಲೇ. 50 ಚಿಕ್ಕಪುಟ್ಟ ಪಟ್ಟಣಗಳು ನನ್ನ ತೀರದಲ್ಲಿವೆ. ಮಿನಿಯಾಪೊಲಿಸ್, ಸೈಂಟ್ ಪೌಲ್, ಸೈಂಟ್ ಲೂಯಿಸ್, ಮೆಂಫಿಸ್, ನ್ಯೂ ಆರ್ಲಿಯೆನ್ಸ್ ಮುಂತಾದ ದೊಡ್ಡ ನಗರಗಳೂ ಇವೆ. ಸೈಂಟ್ ಲೂಯಿಸ್ ನಗರ ಇರುವ ರಾಜ್ಯದ ಹೆಸರು ಮಿಸ್ಸೌರಿ. ಅಲ್ಲಿ ನನ್ನ ದಂಡೆಯಲ್ಲಿರುವ ಗೇಟ್‌ವೇ ಆರ್ಚ್ ಬಹಳ ಪ್ರಸಿದ್ಧ ಪ್ರವಾಸಿತಾಣ. ಅಮೆರಿಕದ ಅನೇಕ ರಾಜ್ಯಗಳಲ್ಲಿರುವಂತೆ ಮಿಸ್ಸೌರಿ ರಾಜ್ಯದಲ್ಲೂ ಕೆಸಿನೊ(ಜೂಜುಕಟ್ಟೆ)ಗಳಿಗೆ ನಿಷೇಧವಿದೆ. ಆದರೆ ಸೈಂಟ್ ಲೂಯಿಸ್ ನಗರದ ಬಳಿ ಏನು ಮಾಡಿದ್ದಾರೆ ಗೊತ್ತೇ? ನನ್ನ ಮಧ್ಯದಲ್ಲಿ ತೇಲುವ ಕೆಸಿನೊಗಳನ್ನು ನಿರ್ಮಿಸಿದ್ದಾರೆ! 'ನೊ ಗ್ಯಾಂಬ್ಲಿಂಗ್ ಶಲ್ ಬಿ ಡನ್ ಆನ್ ದಿಸ್ ಲ್ಯಾಂಡ್' ಎಂದು ಆ ರಾಜ್ಯದ ಕಾನೂನು ಪುಸ್ತಕ ಹೇಳುತ್ತದೆ. ಲ್ಯಾಂಡ್‌ನ ಮೇಲೆ ಮಾಡುವುದಿಲ್ಲ, ನೀರಿನ ಮೇಲೆ ಮಾಡುತ್ತೇವೆ ಎಂದು ಕಾನೂನಿನ ರಂಗೋಲಿಯಡಿ ನುಸುಳುವ ನರಸಿಂಹಾವತಾರಿ ಚಾಣಾಕ್ಷರು ಜನರನ್ನು ದೋಣಿಯಲ್ಲಿ ನದಿಯ ಮಧ್ಯಭಾಗಕ್ಕೆ ಒಯ್ಯುತ್ತಾರೆ. ಅಲ್ಲಿ ಕ್ರೂಸ್ ಹಡಗಿನಂಥದು ಇರುತ್ತದೆ, ಅದರೊಳಗೆ ಜೂಜಿನ ವ್ಯವಸ್ಥೆ. 'ಮಂದಿ ಬಿಟ್ಟಾರ ನಡುನೀರ ಮಲ್ಲಯ್ಯ... ತಂದಿ ನನ್ನ ಕೈಯ ಬಿಡಬ್ಯಾಡ...' ಎಂದುಕೊಂಡು ಲೋಭಿ ಬಕರಾಗಳು ಜೂಜಾಡುತ್ತಾರೆ. ಮೊದಲೆಲ್ಲ ಸಮಯದ ಮಿತಿ, ನಷ್ಟದ ಮಿತಿ ವಿಧಿಸುತ್ತಿದ್ದರಂತೆ. ಈಗೀಗಂತೂ ಅದೂ ಇಲ್ಲ. ಏನು ಮನುಷ್ಯರೋ ಅವರದು ಏನು ದುರಾಸೆಗಳೋ ನಾನರಿಯೆ.

ಅಪರೂಪಕ್ಕೊಮ್ಮೊಮ್ಮೆ ನಾನು ಮುನಿಸಿಕೊಳ್ಳುವುದಿದೆ. ಆಗ ನನ್ನ ಪ್ರವಾಹಕ್ಕೆ ಎದುರು ನಿಲ್ಲುವ ಶಕ್ತಿ ಯಾರಿಗೂ ಇರುವುದಿಲ್ಲ. 1927ರಲ್ಲಿ, 1933ರಲ್ಲಿ, ಇತ್ತೀಚೆಗೆ 2008ರಲ್ಲಿ ನನ್ನಲ್ಲಿ ನೆರೆಯುಕ್ಕಿ ಆದ ಅನಾಹುತಗಳು ಭೀಕರವಾಗಿದ್ದವು. ನೂರಾರು ಸಾವು, ಸಾವಿರಾರು ಜನ ಮನೆಮಠ ಆಸ್ತಿಪಾಸ್ತಿ ಕಳೆದುಕೊಂಡಿದ್ದರು. ಈಗ ಅಮೆರಿಕದ ನೇವಿ ಕೋರ್ ಎಂಜಿನಿಯರಿಂಗ್ ಭಾಗದ ನೇತೃತ್ವದಲ್ಲಿ ಪ್ರವಾಹ ತಡೆಯ ವಿವಿಧೋಪಾಯಗಳು, ಕರಾರುವಾಕ್ಕಾದ ಮುನ್ಸೂಚನೆ ಕ್ರಮಗಳು ಮತ್ತು ಕ್ಷಿಪ್ರ ಸಂಪರ್ಕದಿಂದಾಗಿ ನನ್ನ ಅಟ್ಟಹಾಸಕ್ಕೆ ಅವಕಾಶಗಳು ಕಮ್ಮಿ. ನಾನೂ ಅಂದುಕೊಳ್ಳುತ್ತೇನೆ, ಪ್ರಕೃತಿಗೆ ತಲೆಬಾಗಿ ಮನುಷ್ಯನಿದ್ದರೆ ನಮ್ಮಂಥವರ ಅಟ್ಟಹಾಸ ಬೇಕಾಗಿಲ್ಲ, ಮಂದಹಾಸ ಸಾಕು. ಆದರೆ ಇದು ಮನುಷ್ಯರಿಗೂ ಅರ್ಥವಾಗಬೇಕಲ್ಲ?

★ ★ ★

ಜಸ್ ಸೋಲಿ ಎಂಬ ಮಾನವೀಯತೆ

← ಮೊದಲ ಪುಟದಿಂದ

14ನೇ ತಿದ್ದುಪಡಿಯ ವ್ಯಾಪ್ತಿ ಸ್ಪಷ್ಟವಾದರೂ, ಇದರ ಅರ್ಥೈಸುವಿಕೆಯು ವಿವಾದದಿಂದ ಹೊರತಾಗಿರಲಿಲ್ಲ. ಕೆಲವೊಂದಿಷ್ಟು ಕಾನೂನು ತಜ್ಞರು 14ನೆಯ ತಿದ್ದುಪಡಿ ವಿದೇಶಿ ನಾಗರಿಕರಾಗಲಿ, ಅಕ್ರಮ ವಲಸೆ ಬಂದವರ ಮಕ್ಕಳಿಗೆ ಅನ್ವಯಿಸುವುದಿಲ್ಲ ಎಂದು ವಾದ ಮಾಡುತ್ತಲೇ ಬಂದಿದ್ದಾರೆ. ಈ ಕುರಿತು ಮೊದಲನೇ ಕಾನೂನು ಸವಾಲು ಎದುರಾದದ್ದು 1898ರಲ್ಲಿ. ಯುನೈಟೆಡ್ ಸ್ಟೇಟ್ಸ್ ವರ್ಸಸ್ ವಾಂಗ್ ಕಿಮ್ ಆರ್ಕ್ ಎಂದು ಪ್ರಸಿದ್ಧವಾಗಿದೆ. ವಾಂಗ್ ಕಿಮ್ ಆರ್ಕ್ ಎನ್ನುವಾತ ಚೀನಾದ ವಲಸೆಗಾರನೋರ್ವನ ಮಗ. 1873ರಲ್ಲಿ ಸಾನ್ ಫ್ರಾನ್ಸಿಸ್ಕೋದಲ್ಲಿ ಹುಟ್ಟಿದ್ದ. ಒಮ್ಮೆ ಚೀನಾಗೆ ತೆರಳಿ ಪುನಃ ಅಮೆರಿಕಕ್ಕೆ ವಾಪಾಸ್ ಬಂದಾಗ ಆತನಿಗೆ ಅಮೆರಿಕದ ಪ್ರಜೆ ಅಲ್ಲವೆನ್ನುವ ಕಾರಣ ನೀಡಿ ದೇಶದೊಳಗೆ ಪ್ರವೇಶ ನಿರಾಕರಿಸಲಾಯಿತು.

ಈ ವಿಷಯ ಸುಪ್ರೀಂ ಕೋರ್ಟಿನ ಮೆಟ್ಟಿಲನ್ನು ಹತ್ತಿತು. ಪರಿಣಾಮವಾಗಿ 1882ರಲ್ಲಿ The Chinese Exclusion Act 1882 ಮೂಲಕವಾಗಿ ಚೀನಾದ ನುರಿತ ಮತ್ತು ನುರಿತವರಲ್ಲದ ಉದ್ಯೋಗಿಗಳನ್ನೂ ಸೇರಿಸಿ ಅಮೆರಿಕದೊಳಗೆ ಪ್ರವೇಶವನ್ನು ಹತ್ತು ವರ್ಷಗಳಿಗೆ ಅನ್ವಯಿಸುವಂತೆ ನಿರ್ಬಂಧಿಸಲಾಗಿತ್ತು. (ಇದನ್ನು ವಿಸ್ತರಿಸುತ್ತಾ 1943ರಲ್ಲಿ ದ್ವಿತೀಯ ಮಹಾಯುದ್ಧದ ವೇಳೆ ಯಾವಾಗ ಚೀನಾ ಅಮೆರಿಕಕ್ಕೆ ಅನಿವಾರ್ಯವಾಯಿತೋ ಆಗ ರದ್ದುಗೊಳಿಸಲಾಗಿತ್ತು).

Chinese Exclusion Act 1882 ಜಾರಿಯಲ್ಲಿರುವಾಗಲೇ ಅದರ ಮತ್ತು ಇನ್ನಿತರ ಎಲ್ಲ ವಿಷಯವನ್ನು ವಿವೇಚಿಸಿಯೇ ಕಾನೂನು ಇತಿಹಾಸದಲ್ಲಿ ಮಹತ್ವದ ಮೈಲಿಗಲ್ಲು ಮತ್ತು ದೂರಗಾಮಿ ಪರಿಣಾಮವನ್ನು ಬೀರಬಲ್ಲ ತೀರ್ಪನ್ನು 1898ರಲ್ಲಿ ಅಮೆರಿಕದ ಸುಪ್ರೀಂ ಕೋರ್ಟಿನ ನ್ಯಾಯಾಧೀಶರಾದ ಹೋರಸ್ ಗ್ರೇ ಎನ್ನುವವರ ನೇತೃತ್ವದಲ್ಲಿ ವ್ಯಾಪಕವಾದ ಬಹುಮತದೊಂದಿಗೆ ವಾಂಗ್ ಕಿಮ್ ಆರ್ಕ್‌ನ ಪರವಾಗಿ ನೀಡಲಾಯಿತು. ಅಮೆರಿಕದಲ್ಲಿ ಜನಿಸಿದ ಯಾರಿಗಾದರೂ ಜನ್ಮಕಾರಣ ಪೌರತ್ವ, ಅಂಥವರ ಪಾಲಕರ ಪೌರತ್ವ ಯಾವುದೇ ಇರಲಿ, 14ನೆಯ ತಿದ್ದುಪಡಿಯ ಪ್ರಕಾರ ಅನ್ವಯವಾಗುತ್ತದೆ. ವಿದೇಶಿ ರಾಜತಾಂತ್ರಿಕರಿಗೆ ಅಥವಾ ಶತ್ರು ಸೈನಿಕರಿಗೆ ಜನಿಸಿದ ಮಕ್ಕಳನ್ನು ಹೊರತುಪಡಿಸಿ ಉಳಿದವರಿಗೆ ಅನ್ವಯಿಸುವ ವಿಶಾಲವಾದ ಅಂತರ್ಗತ ಆಶಯವನ್ನು 14ನೆಯ ತಿದ್ದುಪಡಿ ಹೊಂದಿದೆ ಹಾಗೂ ಯುನೈಟೆಡ್ ಸ್ಟೇಟ್ಸ್‌ನಲ್ಲಿ ಜನಿಸಿದ ಎಲ್ಲಾ ಮಕ್ಕಳಿಗೆ ಅವರ ಜನ್ಮಸಿದ್ಧ ಪೌರತ್ವವನ್ನು ರಕ್ಷಿಸಲಾಗಿದೆ ಎನ್ನುವುದನ್ನು ಆ ತಿದ್ದುಪಡಿ ಖಚಿತಗೊಳಿಸಿದೆ ಎಂದು ವಿವರಣೆಯನ್ನು ನೀಡಿದರು. ಮೇಲಿನ ಎರಡೂ ತೀರ್ಪನ್ನು ವಿವೇಚಿಸಿಯೇ ಸುಪ್ರೀಂ ಕೋರ್ಟ್ ಇದೀಗ ತೀರ್ಪು ನೀಡಿರುವುದು.

ಇದಕ್ಕೆಲ್ಲ ಕಾರಣ ಅಮೆರಿಕ ಇತಿಹಾಸದಲ್ಲಿ ಅತ್ಯುತ್ತಮ ಅಧ್ಯಕ್ಷನಾಗಿದ್ದ ಅಬ್ರಹಾಂ ಲಿಂಕನ್ ತಂದ ಜಸ್ ಸೋಲಿ ಎನ್ನುವ ಮಾನವೀಯತೆ.

ಭಾರತ–ಅಮೆರಿಕ ಬೆಸುಗೆಯ ಸಿಹಿ–ಕಹಿ

ನಿರೂಪ (ಕೆ. ಪೃಥ್ವಿಜಿತ್)

ಭಾರತಕ್ಕೆ 1947, ಆ.15ರಂದು ಸ್ವಾತಂತ್ರ್ಯ ಬಂದ ಮೇಲೆ ಎರಡೂ ದೇಶಗಳ ನಡುವೆ ಅಧಿಕೃತ ಬಾಂಧವ್ಯ ಆರಂಭವಾಯಿತು. ಅಲ್ಲಿಂದ ಇಲ್ಲಿಯವರೆಗೆ ಈ ಸಂಬಂಧ ಆಗಾಗ ಬಲಿಷ್ಠಗೊಳ್ಳುತ್ತ, ಆಗಾಗ ವಿಷಮಿಸುತ್ತ ಸಾಗಿದೆ. ಇತ್ತೀಚೆಗಿನ ಕೆಲವು ವರ್ಷಗಳಲ್ಲಿ ಕೆಲವು ಏರುಪೇರುಗಳಿದ್ದರೂ, ಒಟ್ಟಾರೆ ಬಲವಾದ ಆಂತರಿಕ ಸಂಬಂಧ ಹೊಂದಿವೆ. ಅಮೆರಿಕದ ಪ್ರಮುಖ ಸ್ಥಾನಗಳಲ್ಲಿ ಭಾರತೀಯರು ಇರುವುದು ಅದಕ್ಕೆ ಕಾರಣ. ಈ ಬಾಂಧವ್ಯದ ಏರಿಳಿತದ ನೋಟ ಇಲ್ಲಿದೆ...

1949–ಅಮೆರಿಕಕ್ಕೆ ನೆಹರೂ ಮೊದಲ ಭೇಟಿ

1947, ಆ.14ರ ತಡರಾತ್ರಿ (ದಿನಾಂಕದ ಪ್ರಕಾರ ಆ.15) ಭಾರತ ಸ್ವತಂತ್ರವಾಯಿತು. ಅದರೊಂದಿಗೆ ಪಾಕಿಸ್ತಾನವೆಂಬ ದೇಶ ಹುಟ್ಟಿಕೊಂಡಿತು. ಲಕ್ಷಾಂತರ ಮಂದಿಯ ಮಾರಣಹೋಮದ ನಡುವೆಯೇ ಭಾರತ ಸ್ವತಂತ್ರಗೊಂಡ ನಂತರ ವಿದೇಶಿ ಬಾಂಧವ್ಯ ವೃದ್ಧಿಗೆ ದೊಡ್ಡಮಟ್ಟದಲ್ಲಿ ಯತ್ನ ಆರಂಭವಾಯಿತು. 1949, ಅ.13ರಂದು ಭಾರತದ ಮೊದಲ ಪ್ರಧಾನಮಂತ್ರಿ ಜವಹರಲಾಲ್ ನೆಹರೂ ಮೊದಲ ಬಾರಿಗೆ ಅಮೆರಿಕಕ್ಕೆ ಭೇಟಿ ನೀಡಿದರು. ಹಲವು ವಾರಗಳ ಈ ಭೇಟಿಯಲ್ಲಿ ಅಮೆರಿಕದ ಅಧ್ಯಕ್ಷ ಹ್ಯಾರಿ ಎಸ್.ಟ್ರೂಮನ್ ಜೊತೆಗೆ ಹಲವು ಸುತ್ತಿನ ಮಾತುಕತೆಗಳು ನಡೆದವು. ಈ ವೇಳೆ ರಷ್ಯಾ

ಮತ್ತು ಅಮೆರಿಕ ನಡುವೆ ನಡೆಯುತ್ತಿದ್ದ ಶೀತಲ ಸಮರದಲ್ಲಿ ತಾನು ಯಾವ ಬಣಕ್ಕೂ ಸೇರುವುದಿಲ್ಲ ಎಂಬ ಅಲಿಪ್ತ ನೀತಿಯನ್ನು ಭಾರತ ದೃಢವಾಗಿ ಉಚ್ಚರಿಸಿತು. ಇದು ಎರಡೂ ದೇಶಗಳ ಬಾಂಧವ್ಯವೃದ್ಧಿಗೆ ಅಡ್ಡಿಯಾಯಿತು. ಇನ್ನೊಂದು ಕಡೆ ರಷ್ಯಾದೊಂದಿಗೆ ಭಾರತದ ಶಸ್ತ್ರಾಸ್ತ್ರ ಖರೀದಿಯೂ ಜೋರಾಯಿತು.

ಗಾಂಧಿ ತತ್ತ್ವಕ್ಕೆ ಶರಣಾದ ಜೂ.ಮಾರ್ಟಿನ್ ಲೂಥರ್ ಕಿಂಗ್

ಭಾರತದ ಸ್ವಾತಂತ್ರ್ಯ ಹೋರಾಟವನ್ನು ಮುನ್ನಡೆಸುವಾಗ ಮಹಾತ್ಮ ಗಾಂಧೀಜಿ ಅಹಿಂಸೆಯನ್ನೇ ಶಸ್ತ್ರವಾಗಿಸಿಕೊಂಡಿದ್ದರು. ಇದರಿಂದ ಪ್ರಭಾವಿತರಾದ ಅಮೆರಿಕದ ಜ್ಯೂ.ಮಾರ್ಟಿನ್ ಲೂಥರ್ ಕಿಂಗ್ 1949ರಲ್ಲಿ ಭಾರತಕ್ಕೆ ಆಗಮಿಸಿ ಅಹಿಂಸಾ ಸಿದ್ಧಾಂತವನ್ನು ಅಧ್ಯಯನ ಮಾಡಿದರು. ಅಮೆರಿಕದಲ್ಲಿರುವ ವರ್ಣಭೇದ ಸಮಸ್ಯೆಯ ವಿರುದ್ಧ ಅಹಿಂಸಾ ನೀತಿಯನ್ನೇ ಪ್ರಯೋಗಿಸುವುದಾಗಿ ಘೋಷಿಸಿದರು.

1959–ಭಾರತದಲ್ಲಿ ಐಐಟಿ ಸ್ಥಾಪನೆಗೆ ಅಮೆರಿಕ ನೆರವು

ಭಾರತಕ್ಕೆ ಸ್ವಾತಂತ್ರ್ಯ ಬಂದು 12 ವರ್ಷ ಕಳೆದಿದ್ದರೂ ಅಮೆರಿಕದ ಒಬ್ಬನೇ ಒಬ್ಬ ಅಧ್ಯಕ್ಷ ಭಾರತಕ್ಕೆ ಭೇಟಿ ನೀಡಿರಲಿಲ್ಲ. 1959, ಡಿ.9ರಂದು ಮೊದಲ ಬಾರಿಗೆ ಅಮೆರಿಕದ ಅಧ್ಯಕ್ಷ ಡ್ವೈಟ್ ಐಸೆನ್‌ಹೊವರ್ ಭಾರತಕ್ಕೆ ಭೇಟಿ ನೀಡಿ, ನೆಹರೂ ಜೊತೆಗೆ ಮಾತುಕತೆ ನಡೆಸಿದರು. ಜೊತೆಗೆ ಸಂಸತ್ತಿನಲ್ಲಿ ಭಾಷಣ ಮಾಡಿದರು. ಅಮೆರಿಕದ 9 ವಿಶ್ವವಿದ್ಯಾಲಯಗಳು ಮತ್ತು ಯುಎಸ್‌ಎಐಡಿ (ಅಂತಾರಾಷ್ಟ್ರೀಯ ಅಭಿವೃದ್ಧಿಗೆ ಅಮೆರಿಕದ ಸಂಸ್ಥೆ)ಗಳು ಭಾರತದ ಮೊದಲ ಐಐಟಿಯ ಸ್ಥಾಪನೆಗೆ ನೆರವು ನೀಡಿದವು. ಭಾರತದಲ್ಲಿ ತಾಂತ್ರಿಕ ಶಿಕ್ಷಣ ಬೆಳವಣಿಗೆಯಲ್ಲಿ ಇದು ಮಹತ್ವದ ಪಾತ್ರವಹಿಸಿತು.

1962–ಚೀನಾ ದಾಳಿ ವೇಳೆ ಭಾರತಕ್ಕೆ ಬೆಂಬಲ

1962, ಅ.20ರಂದು ಚೀನಾ ಗಡಿಖ್ಯಾತೆ ತೆಗೆದು ಹಠಾತ್ತನೆ ಭಾರತದ ಮೇಲೆ ದಾಳಿ ಮಾಡಿತು. ಆ ವೇಳೆ ಅಂದಿನ ಪ್ರಧಾನಿ ನೆಹರೂ ಅಮೆರಿಕ ಅಧ್ಯಕ್ಷ ಜಾನ್ ಎಫ್ ಕೆನಡಿಗೆ ಪತ್ರ ಬರೆದು ನೆರವಿಗೆ ಮನವಿ ಮಾಡಿದರು. ಆಗ ಅಮೆರಿಕ ಬ್ರಿಟಿಷರ ಕಾಲದ ಮೆಕ್‌ಮೋಹನ್ ರೇಖೆಯನ್ನೇ ಗಡಿಯೆಂದು ಒಪ್ಪಿತಲ್ಲದೇ, ಭಾರತಕ್ಕೆ ಶಸ್ತ್ರಾಸ್ತ್ರಗಳನ್ನೂ ಪೂರೈಸಿತು. 1965ರಲ್ಲಿ ಭಾರತ–ಪಾಕ್ ಯುದ್ಧ ಆಗುವವರೆಗೆ ಈ ಸ್ನೇಹ ಮುಂದುವರಿದಿತ್ತು.

1971: ಪಾಕಿಸ್ತಾನ ಪರ ವಕಾಲತ್ತು

1971ರಲ್ಲಿ ಭಾರತ–ಪಾಕ್ ನಡುವೆ ಯುದ್ಧ ನಡೆದು ಪಾಕಿಸ್ತಾನದ 99000 ಸೈನಿಕರು ಭಾರತದೆದುರು ಮಂಡಿಯೂರಿದ್ದು ಇಡೀ ವಿಶ್ವಕ್ಕೆ ಗೊತ್ತಿದೆ. ಬಾಂಗ್ಲಾದಲ್ಲಿ ನಿರಂತರವಾಗಿ ಹಿಂದೂಗಳ ವಿರುದ್ಧವಾಗಿ ದೌರ್ಜನ್ಯ ಎಸಗುತ್ತಿದ್ದ ಪಾಕಿಸ್ತಾನದ ವಿರುದ್ಧ ಸಿಡಿದೆದ್ದ ಇಂದಿರಾ ಗಾಂಧಿ ನೇತೃತ್ವದ ಅಂದಿನ ಸರಕಾರ, ಪಾಕ್ ಸೇನೆಯನ್ನು ಬಡಿದು ಬಾಂಗ್ಲಾದಿಂದ ಹೊರಹಾಕಿತು. ಅದರಿಂದ ಬಾಂಗ್ಲಾ ಎಂಬ ದೇಶವೇ ಸೃಷ್ಟಿಯಾಯಿತು. ಆಗ ಬಾಂಗ್ಲಾವನ್ನು ಪೂರ್ವ ಪಾಕಿಸ್ತಾನವೆಂದೇ ಕರೆಯಲಾಗುತ್ತಿತ್ತು. ತನ್ನದೇ ಜನರ ವಿರುದ್ಧ ಹಿಂಸೆ ಮಾಡುತ್ತಿದ್ದ ಪಾಕನ್ನು ಆಗಿನ ಅಮೆರಿಕ ಸರಕಾರ ಬೆಂಬಲಿಸಿತು. ಈ ವೇಳೆ ಭಾರತ ರಷ್ಯಾದೊಂದಿಗೆ 20 ವರ್ಷಗಳ ಸ್ನೇಹಸಂಬಂಧಕ್ಕೆ ಸಹಿ ಮಾಡಿತು. ಪರೋಕ್ಷವಾಗಿ ಅಲಿಪ್ತನೀತಿಯನ್ನು ಕೈಬಿಟ್ಟು ರಷ್ಯಾಕ್ಕೆ ಬೆಂಬಲ ಘೋಷಿಸಿತು.

1974–ಭಾರತ ಅಣು ಪರೀಕ್ಷೆ, ಕೆರಳಿದ ಅಮೆರಿಕ

1974ರಲ್ಲಿ ಭಾರತ ಮೊದಲ ಬಾರಿ ಪರಮಾಣು ಪರೀಕ್ಷೆ ನಡೆಸಿತು. ಅಮೆರಿಕ, ಚೀನಾ, ರಷ್ಯಾ, ಫ್ರಾನ್ಸ್, ಇಂಗ್ಲೆಂಡ್ ಹೊರತುಪಡಿಸಿ ಅಣ್ವಸ್ತ್ರ ಹೊಂದಿದ ಮೊದಲ ದೇಶವಾಗಿ ಭಾರತ ಹೊರಹೊಮ್ಮಿತು. ಇದು ಅಮೆರಿಕನ್ನು ಕೆರಳಿಸಿ ಎರಡೂ ದೇಶಗಳ ಸಂಬಂಧ ಬಿಗಡಾಯಿಸಿತು.

1978–ಅಮೆರಿಕದ 'ಅಣು' ಸಲಹೆಗೆ ಭಾರತ ತಿರಸ್ಕಾರ

ಅಣ್ವಸ್ತ್ರ ನಿಶ್ಯಸ್ತ್ರೀಕರಣ ಒಪ್ಪಂದಕ್ಕೆ ಸಹಿ ಹಾಕದ ಭಾರತದಂತಹ ದೇಶಗಳಿಗಾಗಿ ಅಣ್ವಸ್ತ್ರ ನಿಶ್ಯಸ್ತ್ರೀಕರಣ ಕಾಯ್ದೆಯನ್ನು ಅಮೆರಿಕ ಜಾರಿ ಮಾಡಿತು. ಭಾರತ ತನ್ನ ಅಣುಸ್ಥಾವರಗಳನ್ನು ಅಂತಾರಾಷ್ಟ್ರೀಯ ತಜ್ಞರ ಸಮಿತಿ

ಪರಿಶೀಲನೆ ಮಾಡಲು ಅವಕಾಶ ಕೊಡಬೇಕೆಂದು ತಿಳಿಸಿತು. ಅದನ್ನು ಭಾರತ ತಿರಸ್ಕರಿಸಿದಾಗ, ಭಾರತಕ್ಕೆ ಎಲ್ಲ ರೀತಿಯ ಅಣ್ವಸ್ತ್ರ ನೆರವನ್ನು ನಿಲ್ಲಿಸುವುದಾಗಿ ಅಮೆರಿಕ ಘೋಷಿಸಿತು.

1982–ಬಾಂಧವ್ಯವೃದ್ಧಿಗೆ ಇಂದಿರಾ ಯತ್ನ

1982ರಲ್ಲಿ ಅಂದಿನ ಪ್ರಧಾನಿ ಇಂದಿರಾ ಗಾಂಧಿ ಅಮೆರಿಕಕ್ಕೆ ಭೇಟಿ ನೀಡಿ, ಎರಡೂ ದೇಶಗಳ ಬಾಂಧವ್ಯವೃದ್ಧಿಗೆ ಬಲವಾದ ಯತ್ನ ನಡೆಸಿದ್ದರು. ಆಗ ರೊನಾಲ್ಡ್ ರೇಗನ್ ಅಮೆರಿಕದ ಅಧ್ಯಕ್ಷರಾಗಿದ್ದರು. 1984ರಲ್ಲಿ ಇಂದಿರಾ ಹತ್ಯೆಯಾದ ನಂತರ ಈ ಯತ್ನಕ್ಕೆ ಹಿನ್ನಡೆಯಾಯಿತು.

1984–ಭೋಪಾಲ್ ಅನಿಲ ದುರಂತದ ಆಕ್ರೋಶ

ಅಮೆರಿಕದ ಯೂನಿಯನ್ ಕಾರ್ಬೈಡ್ ಕೀಟನಾಶಕ ಕಂಪನಿಯ ಭೋಪಾಲ್ ಘಟಕದಲ್ಲಿ ಅನಿಲ ಮತ್ತು ರಾಸಾಯನಿಕ ಸೋರಿಕೆಯಾಯಿತು. ಇದರಿಂದ 10,000ಕ್ಕೂ ಅಧಿಕ ಮಂದಿ ಸಾವಿಗೀಡಾದರು. ಆ ಘಟನೆಯನ್ನು ಈಗಲೂ ಭಾರತೀಯರು ದುಃಖದಿಂದ ನೆನಪಿಸಿಕೊಳ್ಳುತ್ತಾರೆ. ಆ ಕಂಪನಿಯ ಸಿಇಒವನ್ನು ಭಾರತದ ವಶಕ್ಕೆ ಕೊಡಲು ಅಮೆರಿಕ ಒಪ್ಪಲಿಲ್ಲ. ಅದರಿಂದ ಭಾರತ ಸಿಟ್ಟಾಯಿತು.

1998–ಮತ್ತೆ ಅಣ್ವಸ್ತ್ರ ಪರೀಕ್ಷೆ, ಅಮೆರಿಕ ಮತ್ತೆ ಕೆಂಡ

ವಾಜಪೇಯಿ ಸರಕಾರದ ಅವಧಿಯಲ್ಲಿ 1998ರಲ್ಲಿ ಭಾರತ ಮತ್ತೆ ಪೋಖ್ರಾನ್‌ನಲ್ಲಿ ಅಣ್ವಸ್ತ್ರ ಪರೀಕ್ಷೆ ನಡೆಸಿತು. ಅಮೆರಿಕಕ್ಕೆ ಸುಳಿವೇ ಸಿಗದಂತೆ ಪರೀಕ್ಷೆ ನಡೆಸಿದ್ದರಿಂದ ಅಮೆರಿಕ ದಿಗಿಲಾಯಿತು. ಭಾರತದ ವಿರುದ್ಧ ಅಮೆರಿಕದ ಅಧ್ಯಕ್ಷ ಬಿಲ್ ಕ್ಲಿಂಟನ್ ದೊಡ್ಡ ಪ್ರಮಾಣದಲ್ಲಿ ಆರ್ಥಿಕ ನಿರ್ಬಂಧಗಳನ್ನು ಹೇರಿದರು.

2001–ಭಾರತದ ಮೇಲಿನ ಆರ್ಥಿಕ ನಿರ್ಬಂಧ ತೆರವು

2000ರಲ್ಲಿ ಅಮೆರಿಕ ಅಧ್ಯಕ್ಷರಾಗಿದ್ದ ಬಿಲ್ ಕ್ಲಿಂಟನ್ ಭಾರತಕ್ಕೆ ಭೇಟಿ ನೀಡಿದರು. 1978ರ ಮೊದಲ ಬಾರಿಗೆ ಅಮೆರಿಕ ಅಧ್ಯಕ್ಷರೊಬ್ಬರು ಭಾರತಕ್ಕೆ ಭೇಟಿ ನೀಡಿದ ಉದಾಹರಣೆಯಿದು. ಅದರಲ್ಲೂ ಭಾರತ ಅಣ್ವಸ್ತ್ರ ಪರೀಕ್ಷೆ ನಡೆಸಿದ ನಂತರ ತೀವ್ರ ನಿರ್ಬಂಧಗಳನ್ನು ಹೇರಿದ್ದ ಕ್ಲಿಂಟನ್ ಅವರೇ ಭಾರತಕ್ಕೆ ಭೇಟಿ ನೀಡಿ, ಪಾಕ್‌ನಿಂದ ತುಸು ದೂರ ಸರಿಯುವ ಸುಳಿವೊಂದನ್ನು ನೀಡಿದ್ದರು. ಅಮೆರಿಕ ನೂತನ ಅಧ್ಯಕ್ಷರಾಗಿ ಆಯ್ಕೆಯಾದ ಜಾರ್ಜ್ ಡಬ್ಲ್ಯೂ. ಬುಷ್ ಭಾರತದ ಮೇಲೆ ಹೇರಲಾಗಿದ್ದ ಎಲ್ಲ ಆರ್ಥಿಕ ನಿರ್ಬಂಧಗಳನ್ನೂ ತೆರವು ಮಾಡಿದರು.

2005–ಅಣು ಸಹಕಾರ ಒಪ್ಪಂದಕ್ಕೆ ಸಿಂಗ್–ಬುಷ್ ಸಹಿ

ಜಾರ್ಜ್ ಬುಷ್ ಮತ್ತು ಮನಮೋಹನ್ ಸಿಂಗ್ ಮಹತ್ವದ ನಾಗರಿಕ ಅಣು ಸಹಕಾರ ಒಪ್ಪಂದಕ್ಕೆ ಸಹಿ ಹಾಕಿದರು. ಈ ಪ್ರಕಾರ ಭಾರತ ತನ್ನ ನಾಗರಿಕ ಮತ್ತು ಸೇನಾ ಕಾರಣಗಳ ಅಣು ಸೌಲಭ್ಯಗಳನ್ನು ಪ್ರತ್ಯೇಕಗೊಳಿಸಲು ಒಪ್ಪಿತು. ನಾಗರಿಕ ಕೇಂದ್ರಗಳನ್ನು ಅಂತಾರಾಷ್ಟ್ರೀಯ ಅಣು ಶಕ್ತಿ ಸಂಸ್ಥೆ (ಐಎಇಎ)ಯ ಸುರಕ್ಷಾ ನಿಯಮಗಳಿಗೆ ಅನುಗುಣವಾಗಿ ನಡೆಸಲು ಸಮ್ಮತಿಸಿತು. ಇದಕ್ಕೆ ಬದಲಿಯಾಗಿ ಅಮೆರಿಕ ಭಾರತಕ್ಕೆ ಎಲ್ಲ ರೀತಿ ಅಣು ಸಹಕಾರ ನೀಡುವುದಾಗಿ ಹೇಳಿತು.

2008–ಚಂದ್ರನಲ್ಲಿಳಿದ ಭಾರತದ ಅಂತರಿಕ್ಷ ನೌಕೆ

2008, ನ.8ರಂದು ಇಸ್ರೋ ಚಂದ್ರಯಾನ–1 ಸಾಹಸ ಕೈಗೊಂಡಿತು. ಅಮೆರಿಕದ ನಾಸಾ ಸಿದ್ಧಪಡಿಸಿದ್ದ ಉಪಗ್ರಹಗಳು ಭಾರತೀಯ ಅಂತರಿಕ್ಷ ನೌಕೆಯ ಮೂಲಕ ಮೇಲಕ್ಕೆ ಹಾರಿ ಚಂದ್ರನ ಮೇಲಿಳಿಯಿತು. ಮೊದಲ ಬಾರಿಗೆ ಭಾರತದ ನೌಕೆಯೊಂದು ಚಂದ್ರನ ಮೇಲಿಳಿದ ಉದಾಹರಣೆಯಿದು. ಚಂದ್ರನ ಮೇಲ್ಮೈನಲ್ಲಿ ನೀರಿನ ಕಣಗಳಿರುವುದನ್ನು ಪತ್ತೆಹಚ್ಚಿದ್ದು ಇಲ್ಲಿನ ಮಹತ್ವದ ಸಾಧನೆ.

2010–ಮೊದಲ ವ್ಯೂಹಾತ್ಮಕ ಮಾತುಕತೆ

ಮನಮೋಹನ್ ಸಿಂಗ್ ಪ್ರಧಾನಿಯಾಗಿದ್ದಾಗ ಭಾರತದ ವಿದೇಶಾಂಗ ಸಚಿವರಾಗಿದ್ದ ಎಸ್.ಎಂ.ಕೃಷ್ಣ ನೇತೃತ್ವದ ಉನ್ನತ ನಿಯೋಗ ಅಮೆರಿಕಕ್ಕೆ ಪ್ರವಾಸ ಮಾಡಿತು. ಆಗ ಅಮೆರಿಕದ ವಿದೇಶಾಂಗ ಸಚಿವೆಯಾಗಿದ್ದ ಹಿಲರಿ ಕ್ಲಿಂಟನ್ ಜೊತೆಗೆ ವ್ಯೂಹಾತ್ಮಕ ಮಾತುಕತೆ ನಡೆಸಿದರು. ಇದು ಎರಡು ದೇಶಗಳ ನಡುವೆ ದೀರ್ಘಕಾಲೀನ ಲೆಕ್ಕಾಚಾರದಲ್ಲಿ ಯೋಜಿತವಾಗಿ ನಡೆದ ಮೊದಲ ವ್ಯೂಹಾತ್ಮಕ ಮಾತುಕತೆ. ಅಲ್ಲಿಂದ ನಿರಂತರವಾಗಿ ಈ ಮಾತುಕತೆಗಳು ನಡೆಯುತ್ತಲೇ ಇವೆ.

2010–ಭದ್ರತಾ ಸಮಿತಿ ಕಾಯಂ ಸ್ಥಾನಕ್ಕೆ ಅಮೆರಿಕ ಬೆಂಬಲ

2010, ನ.5ರಂದು ಭಾರತಕ್ಕೆ ಭೇಟಿ ನೀಡಿದ ಅಮೆರಿಕದ ಅಂದಿನ ಅಧ್ಯಕ್ಷ ಬರಾಕ್ ಒಬಾಮಾ, ವಿಶ್ವಸಂಸ್ಥೆಯ ಭದ್ರತಾ ಸಮಿತಿಯಲ್ಲಿ ಭಾರತಕ್ಕೆ ಕಾಯಂ

ಸ್ಥಾನ ನೀಡುವುದಕ್ಕೆ ತಮ್ಮ ಬೆಂಬಲ ಸೂಚಿಸಿದರು. ಇದು ಭಾರತದ ದೀರ್ಘಕಾಲೀನ ಬೇಡಿಕೆಗೆ ಸಿಕ್ಕ ದೊಡ್ಡ ಜಯ.

2014–ಅಮೆರಿಕದಲ್ಲಿ ಮೋದಿ ಹವಾ

2014ರಲ್ಲಿ ಮೊದಲ ಬಾರಿಗೆ ಭಾರತದ ಪ್ರಧಾನಿಯಾದ ನರೇಂದ್ರ ಮೋದಿ ಅಮೆರಿಕಕ್ಕೆ ಭೇಟಿ ನೀಡಿದ್ದು ಭಾರೀ ಸುದ್ದಿಯಾಯಿತು. ನ್ಯೂಯಾರ್ಕ್‌ನ ಮ್ಯಾಡಿಸನ್ ಚೌಕದಲ್ಲಿ ಅನಿವಾಸಿ ಭಾರತೀಯರು, ಉದ್ಯಮಿಗಳೊಂದಿಗೆ ಮೋದಿ ನಡೆಸಿದ ಸಾರ್ವಜನಿಕ ಸಭೆ ವಿಶ್ವಾದ್ಯಂತ ಸುದ್ದಿಯಾಯಿತು.



2017–ಭಾರತೀಯ ಎಂಜಿನಿಯರ್ ಹತ್ಯೆ

ಇತ್ತೀಚೆಗೆ ವಿದೇಶಗಳಲ್ಲಿ ಭಾರತೀಯರ ಮೇಲೆ ದ್ವೇಷಪೂರಿತ ದಾಳಿಯಾಗುವುದು ನಡೆಯುತ್ತಲೇ ಇದೆ. 2017ರಲ್ಲೇ ಅಮೆರಿಕದಲ್ಲಿ ಅದು ಆರಂಭವಾಗಿತ್ತು. ಕನ್ಸಾಸ್ ನಗರದ ರೆಸ್ಟೋರೆಂಟ್ ಒಂದರಲ್ಲಿ ಅಮೆರಿಕದ ವ್ಯಕ್ತಿಯೊಬ್ಬ ಇಬ್ಬರು ಭಾರತೀಯ ಎಂಜಿನಿಯರ್‌ಗಳ ಮೇಲೆ ಗುಂಡುಹಾರಿಸಿ ನನ್ನ ದೇಶದಿಂದ ತೊಲಗಿ ಎಂದು ಕಿರುಚಿದ. ಆಗ ಶ್ರೀನಿವಾಸ ಕುಚಿಭೊಟ್ಲ ಎಂಬ ವ್ಯಕ್ತಿ ಮೃತಪಟ್ಟರು. ಇನ್ನಿಬ್ಬರು ಗಾಯಗೊಂಡರು. ಅಮೆರಿಕದಲ್ಲಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳಲ್ಲಿ, ಎಚ್–1 ವೀಸಾದಾರರಲ್ಲೂ ಭಾರತೀಯರೇ ಗರಿಷ್ಠ ಎನ್ನುವುದನ್ನು ನಾವಿಲ್ಲಿ ಗಮನಿಸಬೇಕು.

2019–ಭಾರತದ ವಿಶೇಷ ಸ್ಥಾನ ಅಂತ್ಯಗೊಳಿಸಿದ ಟ್ರಂಪ್

ಡೊನಾಲ್ಡ್ ಟ್ರಂಪ್ ಆಡಳಿತದಲ್ಲಿ 2019, ಜೂ.5ರಂದು ಅಮೆರಿಕ ಭಾರತಕ್ಕೆ ನೀಡಿದ್ದ ವಿಶೇಷ ವ್ಯಾಪಾರ ಸ್ಥಾನವನ್ನು ಅಂತ್ಯಗೊಳಿಸಲಾಯಿತು. ಅಭಿವೃದ್ಧಿ ಹೊಂದುತ್ತಿರುವ ದೇಶವೆಂಬ ಕಾರಣಕ್ಕೆ 1970ರಿಂದಲೂ ಭಾರತದ ಉತ್ಪನ್ನಗಳು ಸುಂಕರಹಿತವಾಗಿ ಅಮೆರಿಕವನ್ನು ಪ್ರವೇಶಿಸುತ್ತಿದ್ದವು. ಅಮೆರಿಕದ ಉತ್ಪನ್ನಗಳಿಗೆ ಭಾರತ ಸೂಕ್ತ ವಿನಾಯಿತಿ ನೀಡುತ್ತಿಲ್ಲ ಎಂದು ಹೇಳಿ ಅಮೆರಿಕ ಈ ಘೋಷಣೆ ಮಾಡಿತು.

2021–ಭಾರತ, ಅಮೆರಿಕ ಒಗ್ಗೂಡಿ ಚೀನಾಕ್ಕೆ ಎಚ್ಚರಿಕೆ

ಭಾರತದ ಪ್ರಧಾನಿ ನರೇಂದ್ರ ಮೋದಿ, ಅಮೆರಿಕ ಅಧ್ಯಕ್ಷ ಜೋ ಬೈಡೆನ್, ಜಪಾನ್ ಹಾಗೂ ಆಸ್ಟ್ರೇಲಿಯಾದ ಪ್ರಧಾನಿಗಳು ಅಮೆರಿಕದ ಶ್ವೇತಭವನದಲ್ಲಿ ಕ್ವಾಡ್ ಶೃಂಗ ನಡೆಸಿ, ಭದ್ರತಾ ಮಾತುಕತೆ ನಡೆಸಿದವು. ಚೀನಾದೊಂದಿಗೆ ಭಾರತ ದ್ವೇಷಮಯ ವಾತಾವರಣ ಹೊಂದಿರುವ ಹೊತ್ತಿಗೇ ಈ ಬೆಳವಣಿಗೆ ನಡೆಯಿತು. ಚೀನಾದಿಂದ ಜಪಾನ್, ಆಸ್ಟ್ರೇಲಿಯಾ ಬೆದರಿಕೆ ಎದುರಿಸುತ್ತಿದ್ದ ನಡುವೆ, ಚೀನಾಕ್ಕೆ ನೇರವಾಗಿ ಎಚ್ಚರಿಕೆ ಸಂದೇಶ ರವಾನಿಸಲಾಯಿತು.

2023–ಭಾರತದಲ್ಲಿ ಯಶಸ್ವಿ ಜಿ20 ಶೃಂಗ

ಭಾರತದ ಆತಿಥೇಯತ್ವದಲ್ಲಿ ನಡೆದ ಪ್ರಬಲ ಜಿ20 ರಾಷ್ಟ್ರಗಳ ಶೃಂಗದಲ್ಲಿ ಪಾಲ್ಗೊಳ್ಳಲು ಅಮೆರಿಕದ ಅಧ್ಯಕ್ಷ ಜೋ ಬೈಡೆನ್ ಭಾರತಕ್ಕೆ ಆಗಮಿಸಿದ್ದರು. ಚೀನಾದ ಒನ್ ಬೆಲ್ಟ್–ಒನ್ ಕಾರಿಡಾರ್ ಯೋಜನೆಗೆ ಸವಾಲೆಸೆಯುವಂತೆ, ಭಾರತ–ಮಧ್ಯಪ್ರಾಚ್ಯ ದೇಶಗಳು–ಯೂರೋಪ್ ನಡುವೆ ಸಂಬಂಧ ಬೆಸೆಯುವ ರಸ್ತೆ–ಜಲ ಮಾರ್ಗದ ರಚನೆಯನ್ನು ಘೋಷಿಸಿತು. ಇದಕ್ಕೆ ಅಮೆರಿಕ ಬೆಂಬಲ ಸೂಚಿಸಿತು.

2025–ಟ್ರಂಪ್ ಸುಂಕಸಮರ, ಹದಗೆಟ್ಟ ಸಂಬಂಧ

ಡೊನಾಲ್ಡ್ ಟ್ರಂಪ್ 2ನೇ ಬಾರಿ ಅಮೆರಿಕದ ಅಧ್ಯಕ್ಷರಾದ ಮೇಲೆ ಭಾರತ–ಅಮೆರಿಕದ ಸಂಬಂಧ ಗರಿಷ್ಠ ಪ್ರಮಾಣದಲ್ಲಿ ಹಾಳಾಯಿತು. ಅದಕ್ಕೆ ಕಾರಣ ಭಾರತದ ಉತ್ಪನ್ನಗಳ ಮೇಲಿನ ಸುಂಕವನ್ನು ಶೇ.50ರಷ್ಟಕ್ಕೆ ಟ್ರಂಪ್ ಏರಿಸಿದ್ದು. ಏಪ್ರಿಲ್ 2, 2025, ಯುಎಸ್ ಲಿಬರೇಷನ್ ಡೇ ಘೋಷಣೆ ಮೂಲಕ ಜಾಗತಿಕ ಸುಂಕ ಸಮರ ಆರಂಭ ಮಾಡಿದ್ದ ಟ್ರಂಪ್, ಮೊದಲು ಭಾರತದ ಸರಕುಗಳ ಮೇಲಿನ ಸುಂಕವನ್ನು ಶೇ.25ಕ್ಕೆ ಏರಿಸಿದರು. ಅನಂತರ ಅದು ಶೇ.50ಕ್ಕೆ ಹೋಯಿತು. ಭಾರತ ಅಮೆರಿಕದ ಉತ್ಪನ್ನಗಳಿಗೆ ಯಾವುದೇ ರಿಯಾಯ್ತಿ ನೀಡುತ್ತಿಲ್ಲ, ಅಲ್ಲದೇ ರಷ್ಯಾದಿಂದ ಭಾರತ ತೈಲವನ್ನು ತರಿಸಿಕೊಳ್ಳುತ್ತಿದೆ ಎನ್ನುವುದು ಟ್ರಂಪ್ ತಕರಾರು. ಅಮೆರಿಕದ ಸರ್ವೋಚ್ಚ ನ್ಯಾಯಾಲಯದ ಆದೇಶ, ಜಾಗತಿಕ ಒತ್ತಡ ಎಲ್ಲವೂ ಸೇರಿ, ಅಂತೂ ಭಾರತದ ಮೇಲಿನ ಸುಂಕವನ್ನು ಶೇ.25ರಿಂದ ಶೇ.18ಕ್ಕೆ ಇಳಿಸಿದ್ದಾರೆ.

ಯುದ್ಧವನ್ನೇ ಗೆಲ್ಲದ ಯುದ್ಧೋತ್ಸಾಹಿ ರಾಷ್ಟ್ರ

ಡಾ. ಚಂದ್ರಶೇಖರ್ ಚೌಗಲಾ

ಯುನೈಟೆಡ್ ಸ್ಟೇಟ್ಸ್ ಆಫ್ ಅಮೆರಿಕ (ಯುಎಸ್‌ಎ)– ಈ ಹೆಸರನ್ನು ಕೇಳಿದ ತಕ್ಷಣ ಇಡೀ ಜಗತ್ತಿಗೆ ನೆನಪಾಗುವುದು ಅದರ ಆರ್ಥಿಕ ಬಲ, ಅತ್ಯಾಧುನಿಕ ತಂತ್ರಜ್ಞಾನ, ಹಾಲಿವುಡ್ ಸಿನಿಮಾಗಳು ಮತ್ತು ಎಲ್ಲಕ್ಕಿಂತ ಮಿಗಿಲಾಗಿ ಇಡೀ ವಿಶ್ವವನ್ನೇ ನಡುಗಿಸಬಲ್ಲ ಅದರ ಬೃಹತ್ ಮಿಲಿಟರಿ ಶಕ್ತಿ. ಜಾಗತಿಕ ರಾಜಕಾರಣದಲ್ಲಿ ಅಮೆರಿಕ ತನ್ನನ್ನು ತಾನು ಪ್ರಜಾಪ್ರಭುತ್ವದ ರಕ್ಷಕ, ಮಾನವ ಹಕ್ಕುಗಳ ಹರಿಕಾರ ಮತ್ತು ಜಗತ್ತಿನ ಏಕೈಕ ಮಹಾಶಕ್ತಿ ದೇಶ, ಜಗತ್ತಿನ ದೊಡ್ಡಣ್ಣ ಎಂದು ಬಿಂಬಿಸಿಕೊಳ್ಳುತ್ತಾ ಬಂದಿದೆ. ವಿಶ್ವದ ಒಟ್ಟು ಮಿಲಿಟರಿ ವೆಚ್ಚದ ಬಹುದೊಡ್ಡ ಪಾಲನ್ನು ಅಮೆರಿಕ ಒಂದೇ ಭರಿಸುತ್ತದೆ. ಜಗತ್ತಿನಾದ್ಯಂತ ನೂರಾರು ದೇಶಗಳಲ್ಲಿ ತನ್ನ ಮಿಲಿಟರಿ ನೆಲೆಗಳನ್ನು ಹೊಂದಿರುವ ಅಮೆರಿಕಕ್ಕೆ ಸದಾ ಯುದ್ಧದ ಉತ್ಸಾಹ. ಜಗತ್ತಿನ ಯಾವುದೇ ಮೂಲೆಯಲ್ಲಿ ಒಂದು ಸಣ್ಣ ಸಂಘರ್ಷ ನಡೆದರೂ ಅಲ್ಲಿ ಮೂಗು ತೂರಿಸುವುದು ಅಥವಾ ತಾನೇ ಸ್ವತಃ ಯುದ್ಧಕ್ಕೆ ನಾಂದಿ ಹಾಡುವುದು ಅಮೆರಿಕದ ಹಳೆಯ ಚಾಳಿ. ಆದರೆ, ಇತಿಹಾಸದ ಪುಟಗಳನ್ನು ಸೂಕ್ಷ್ಮವಾಗಿ ಗ್ರಹಿಸಿದರೆ, ದ್ವಿತೀಯ ಮಹಾಯುದ್ಧದ ನಂತರ ಅಮೆರಿಕ ತನ್ನದೇ ಆದ ಬಲದಿಂದ ಸಂಪೂರ್ಣವಾಗಿ ಮತ್ತು ನಿರ್ಣಾಯಕವಾಗಿ ಗೆದ್ದ ಪ್ರಮುಖ ಯುದ್ಧ ಒಂದೂ ಇಲ್ಲ.

ಹಾಗಾದರೆ, ಇಷ್ಟೊಂದು ಬೃಹತ್ ಸೈನ್ಯ, ಸೌರಶಕ್ತಿ, ಉಪಗ್ರಹ ತಂತ್ರಜ್ಞಾನ ಮತ್ತು ಅಣುಬಾಂಬುಗಳನ್ನು ಹೊಂದಿರುವ ದೇಶವೊಂದು ಸರಣಿ ಸೋಲುಗಳನ್ನು ಅನುಭವಿಸುತ್ತಿರುವುದರ ಹಿಂದಿನ ರಹಸ್ಯವೇನು? ಪ್ರಜಾಪ್ರಭುತ್ವದ ಹೆಸರಿನಲ್ಲಿ ನಡೆಯುವ ಈ ಯುದ್ಧೋನ್ಮಾದದ ಅಸಲಿ ಮುಖವೇನು? ಇವುಗಳನ್ನು ಅತ್ಯಂತ ಆಳವಾಗಿ ವಿಶ್ಲೇಷಿಸೋಣ.

ಯುದ್ಧಪ್ರಿಯತೆಯ ಮೂಲ:

ಅಮೆರಿಕದ ಇತಿಹಾಸವನ್ನು ಗಮನಿಸಿದರೆ, ಈ ದೇಶದ ಅಸ್ತಿತ್ವವೇ ರಕ್ತಪಾತ ಮತ್ತು ಯುದ್ಧಗಳ ಮೇಲೆ ನಿಂತಿದೆ ಎಂಬುದು ಸ್ಪಷ್ಟ. ಬ್ರಿಟಿಷರ ವಸಾಹತುಶಾಹಿಯಿಂದ ಮುಕ್ತಿ ಪಡೆಯಲು ನಡೆದ ಅಮೆರಿಕನ್ ಕ್ರಾಂತಿಯಿಂದ ಹಿಡಿದು, ದೇಶದ ಒಳಗೇ ನಡೆದ ಭೀಕರ ಅಂತರ್‌ಯುದ್ಧದವರೆಗೆ ಅಮೆರಿಕನ್ನರು ಸದಾ ಆಯುಧಗಳೊಂದಿಗೇ ಬದುಕಿದವರು. ತನ್ನ ದೇಶ ಸ್ಥಾಪನೆಯಾದ ದಿನದಿಂದ (1776) ಇಂದಿನವರೆಗೆ ಅಮೆರಿಕವು ತನ್ನ ಇತಿಹಾಸದ ಶೇ.90ಕ್ಕಿಂತ ಹೆಚ್ಚು ವರ್ಷಗಳನ್ನು ಯಾವುದಾದರೊಂದು ಯುದ್ಧ, ಮಿಲಿಟರಿ ಕಾರ್ಯಾಚರಣೆ ಅಥವಾ ರಹಸ್ಯ ಹಸ್ತಕ್ಷೇಪದಲ್ಲೇ ಕಳೆದಿದೆ. ದ್ವಿತೀಯ ಮಹಾಯುದ್ಧದಲ್ಲಿ ಜಪಾನ್ ಮೇಲೆ ಅಣುಬಾಂಬ್ ಹಾಕಿ ಜಗತ್ತಿನ ಅತಿ ದೊಡ್ಡ ಮಿಲಿಟರಿ ಶಕ್ತಿಯಾಗಿ ಹೊರಹೊಮ್ಮಿದ ನಂತರ, ಅಮೆರಿಕದ ಈ ಯುದ್ಧದ ಹಸಿವು ಮತ್ತಷ್ಟು ಹೆಚ್ಚಾಯಿತು. ಆದರೆ, ಈ ಯುದ್ಧಪ್ರಿಯತೆಯ ಹಿಂದೆ ಕೇವಲ ಸೈದ್ಧಾಂತಿಕ ಕಾರಣಗಳಿಲ್ಲ, ಬದಲಿಗೆ ಭೌಗೋಳಿಕ ರಾಜಕೀಯ ಮತ್ತು ಆರ್ಥಿಕ ಹಿತಾಸಕ್ತಿಗಳು ಅಡಗಿವೆ.

ಮಿಲಿಟರಿ–ಇಂಡಸ್ಟ್ರಿಯಲ್ ಕಾಂಪ್ಲೆಕ್ಸ್:

ಅಮೆರಿಕ ಏಕೆ ಸದಾ ಯುದ್ಧ ಮಾಡಲು ಉತ್ಸುಕವಾಗಿರುತ್ತದೆ ಎಂಬುದನ್ನು ಅರ್ಥಮಾಡಿಕೊಳ್ಳಬೇಕಾದರೆ, ನಾವು ಮಿಲಿಟರಿ–ಇಂಡಸ್ಟ್ರಿಯಲ್ ಕಾಂಪ್ಲೆಕ್ಸ್ (ಶಸ್ತ್ರಾಸ್ತ್ರ ಕಂಪನಿಗಳ ಲಾಭ) ಎಂಬ ಪರಿಕಲ್ಪನೆಯ ಬಗ್ಗೆ

ತಿಳಿಯಬೇಕು. ಅಮೆರಿಕದಲ್ಲಿ ಲಾಕ್‌ಹೀಡ್ ಮಾರ್ಟಿನ್, ಬೋಯಿಂಗ್, ರೇಥಿಯಾನ್‌ನಂತಹ ಬೃಹತ್ ಖಾಸಗಿ ಕಂಪನಿಗಳು ಶಸ್ತ್ರಾಸ್ತ್ರಗಳನ್ನು ತಯಾರಿಸುತ್ತವೆ. ಈ ಕಂಪನಿಗಳಿಗೆ ಲಾಭವಾಗಬೇಕಾದರೆ ಜಗತ್ತಿನಲ್ಲಿ ಎಲ್ಲಾದರೂ ಯುದ್ಧ ನಡೆಯುತ್ತಲೇ ಇರಬೇಕು. ಯುದ್ಧ ನಡೆದರೆ ಮಾತ್ರ ಇವರ ಬಾಂಬುಗಳು, ಕ್ಷಿಪಣಿಗಳು ಮತ್ತು ಯುದ್ಧ ವಿಮಾನಗಳು ಮಾರಾಟವಾಗುತ್ತವೆ. ಈ ಕಂಪನಿಗಳು ಅಮೆರಿಕದ ರಾಜಕಾರಣಿಗಳಿಗೆ (ಸಂಸದರು ಮತ್ತು ಅಧ್ಯಕ್ಷರ ಚುನಾವಣೆಗಳಿಗೆ) ಕೋಟ್ಯಂತರ ಡಾಲರ್ ಹಣವನ್ನು ದೇಣಿಗೆಯಾಗಿ ನೀಡುತ್ತವೆ. ಪ್ರತಿಯಾಗಿ, ರಾಜಕಾರಣಿಗಳು ರಕ್ಷಣಾ ಬಜೆಟ್ ಅನ್ನು ಹೆಚ್ಚಿಸುತ್ತಾರೆ ಮತ್ತು ಹೊಸ ಹೊಸ ಯುದ್ಧಗಳನ್ನು ಸೃಷ್ಟಿಸಲು ಪ್ರಚೋದನೆ ನೀಡುತ್ತಾರೆ. ಹೀಗಾಗಿ ಅಮೆರಿಕಕ್ಕೆ ಯುದ್ಧವನ್ನು ಗೆಲ್ಲುವುದು ಮುಖ್ಯವಲ್ಲ, ಯುದ್ಧವನ್ನು ದೀರ್ಘಕಾಲ ಮುಂದುವರಿಸುವುದು ಮುಖ್ಯ. ಏಕೆಂದರೆ ಯುದ್ಧ ಮುಂದುವರಿದಷ್ಟೂ ಶಸ್ತ್ರಾಸ್ತ್ರ ಉದ್ಯಮಕ್ಕೆ ಬಿಲಿಯನ್ ಡಾಲರ್‌ಗಟ್ಟಲೇ ಲಾಭ ಸಿಗುತ್ತದೆ. ಇದು ಅಮೆರಿಕದ ಯುದ್ಧೋತ್ಸಾಹದ ಅಸಲಿ ಆರ್ಥಿಕ ರಹಸ್ಯ.

ಮುಖಭಂಗದ ಪ್ರಮುಖ ಇತಿಹಾಸಗಳು:

ದ್ವಿತೀಯ ಮಹಾಯುದ್ಧದ ನಂತರ ಅಮೆರಿಕ ನೇರವಾಗಿ ಭಾಗವಹಿಸಿದ ಅಥವಾ ಮುನ್ನಡೆಸಿದ ಪ್ರಮುಖ ಯುದ್ಧಗಳ ಇತಿಹಾಸವನ್ನು ನೋಡಿದರೆ, ಅದು ಹೇಗೆ ವೈಫಲ್ಯದ ಇತಿಹಾಸವಾಗಿದೆ ಎಂಬುದು ಅರ್ಥವಾಗುತ್ತದೆ. ದ್ವಿತೀಯ ಮಹಾಯುದ್ಧ ಮುಗಿದ ಕೆಲವೇ ವರ್ಷಗಳಲ್ಲಿ ಅಮೆರಿಕ ಕಮ್ಯುನಿಸಂ ಸಿದ್ಧಾಂತವನ್ನು ತಡೆಯುವ ಹೆಸರಿನಲ್ಲಿ ಕೊರಿಯಾ ದ್ವೀಪಕಲ್ಪದ ಯುದ್ಧಕ್ಕೆ (ಕೊರಿಯಾ ಯುದ್ಧ 1950–1953) ಧುಮುಕಿತು. ಉತ್ತರ ಕೊರಿಯಾವನ್ನು ಬೆಂಬಲಿಸುತ್ತಿದ್ದ ಸೋವಿಯತ್ ಯೂನಿಯನ್ ಮತ್ತು ಚೀನಾ ವಿರುದ್ಧ ಅಮೆರಿಕ ನೇರ ಸಂಘರ್ಷಕ್ಕೆ ಇಳಿಯಿತು. ಮೂರು ವರ್ಷಗಳ ಕಾಲ ನಡೆದ ಈ ಭೀಕರ ಯುದ್ಧದಲ್ಲಿ ಲಕ್ಷಾಂತರ ಜನ ಸತ್ತರು. ಆದರೆ ಅಂತಿಮವಾಗಿ ಅಮೆರಿಕಕ್ಕೆ ಯಾವುದೇ ನಿರ್ಣಾಯಕ ಗೆಲುವು ಸಿಗಲಿಲ್ಲ. ಯುದ್ಧ ಆರಂಭವಾಗುವ ಮೊದಲು ಕೊರಿಯಾ ಹೇಗೆ ಇತ್ತೋ, ಯುದ್ಧ ಮುಗಿದ ಮೇಲೂ ಹಾಗೆಯೇ ಉಳಿಯಿತು. ಕೊನೆಗೆ ಯಾವುದೇ ಶಾಂತಿ ಒಪ್ಪಂದವಿಲ್ಲದೆ, ಕೇವಲ ಒಂದು ಕದನ ವಿರಾಮದೊಂದಿಗೆ ಯುದ್ಧ ಕೊನೆಗೊಂಡಿತು. ಕೊರಿಯಾ ದೇಶ ಇಬ್ಭಾಗವಾಗಿ (ಉತ್ತರ ಮತ್ತು ದಕ್ಷಿಣ ಕೊರಿಯಾ) ಉಳಿಯಿತು. ಇದು ಅಮೆರಿಕದ ಮೊದಲ ದೊಡ್ಡ ವೈಫಲ್ಯ.

ನಂತರ ಅಮೆರಿಕದ ಇತಿಹಾಸದಲ್ಲೇ ಅತ್ಯಂತ ಕಪ್ಪು ಚುಕ್ಕೆ ಮತ್ತು ಅತಿ ದೊಡ್ಡ ಅವಮಾನ ಎಂದರೆ ಅದು ವಿಯೆಟ್ನಾಂ ಯುದ್ಧ (1955–1975). ಕಮ್ಯುನಿಸ್ಟ್ ಶಕ್ತಿಗಳು ವಿಯೆಟ್ನಾಂ ಅನ್ನು ಆಕ್ರಮಿಸದಂತೆ ತಡೆಯಲು ಅಮೆರಿಕ ತನ್ನ ಇಡೀ ಸೈನ್ಯವನ್ನು ಅಲ್ಲಿಗೆ ರವಾನಿಸಿತು. ಬಿಲಿಯನ್‌ಗಟ್ಟಲೇ ಡಾಲರ್ ಹಣ, ಅತ್ಯಾಧುನಿಕ ರೇಡಾರ್‌ಗಳು, ಹೆಲಿಕಾಪ್ಟರ್‌ಗಳು ಮತ್ತು ಘೋರ ರಾಸಾಯನಿಕ ಅಸ್ತ್ರಗಳನ್ನು ಅಮೆರಿಕ ಬಳಸಿತು. ಆದರೆ, ವಿಯೆಟ್ನಾಂನ ಬಡ ಮತ್ತು ಪುಟ್ಟ ಸೈನಿಕರು (ವಿಯೆಟ್ ಕಾಂಗ್) ಅಮೆರಿಕದ ಬೃಹತ್ ಸೇನೆಯ ಮುಂದೆ ಮಂಡಿಯೂರಲಿಲ್ಲ. ಅವರು ದಟ್ಟವಾದ ಕಾಡುಗಳನ್ನು ಬಳಸಿ ಗೆರಿಲ್ಲಾ ಯುದ್ಧ ತಂತ್ರದ ಮೂಲಕ ಅಮೆರಿಕಕ್ಕೆ ಸಿಂಹಸ್ವಪ್ನವಾದರು. ಸುಮಾರು 20 ವರ್ಷಗಳ ಕಾಲ ನಡೆದ ಈ ಯುದ್ಧದಲ್ಲಿ 58,000ಕ್ಕೂ ಹೆಚ್ಚು ಅಮೆರಿಕನ್ ಸೈನಿಕರು ಪ್ರಾಣ ಕಳೆದುಕೊಂಡರು. ದೇಶದ ಒಳಗೇ ಅಮೆರಿಕನ್ ಸರಕಾರದ ವಿರುದ್ಧ ತೀವ್ರ ಪ್ರತಿಭಟನೆಗಳು ಆರಂಭವಾದವು. ಅಂತಿಮವಾಗಿ 1975ರಲ್ಲಿ ಅಮೆರಿಕನ್ ಪಡೆಗಳು ಸೈಗೊನ್ ನಗರದಿಂದ ಹೆಲಿಕಾಪ್ಟರ್ ಹತ್ತಿ ಪ್ರಾಣ ಉಳಿಸಿಕೊಳ್ಳಲು ಓಡಿಹೋಗಬೇಕಾಯಿತು. ಇಡೀ ವಿಯೆಟ್ನಾಂ ಕಮ್ಯುನಿಸ್ಟ್ ವಶವಾಯಿತು. ಇದು ಅಮೆರಿಕದ ಅಹಂಕಾರಕ್ಕೆ ಬಿದ್ದ ಅತಿ ದೊಡ್ಡ ಪೆಟ್ಟು.

ಬಳಿಕ, 2001ರ ಸೆಪ್ಟೆಂಬರ್ 11ರಂದು ಅಮೆರಿಕದ ಮೇಲೆ ನಡೆದ ಉಗ್ರರ ದಾಳಿಯ (9/11) ನಂತರ, ಅಂದಿನ ಅಧ್ಯಕ್ಷ ಜಾರ್ಜ್ ಬುಷ್ ಭಯೋತ್ಪಾದನೆ ವಿರುದ್ಧ ಜಾಗತಿಕ ಯುದ್ಧ ಘೋಷಿಸಿದರು. ಅಲ್–ಖೈದಾ ಮತ್ತು ಅದಕ್ಕೆ ಆಶ್ರಯ ನೀಡಿದ್ದ ತಾಲಿಬಾನ್ ಅನ್ನು ನಿರ್ಮೂಲನೆ ಮಾಡಲು ಅಮೆರಿಕ ಅಫ್ಘಾನಿಸ್ತಾನದ ಮೇಲೆ ಆಕ್ರಮಣ ಮಾಡಿತು. ಅಮೆರಿಕ ಅಫ್ಘಾನಿಸ್ತಾನದಲ್ಲಿ ಬರೋಬ್ಬರಿ 20 ವರ್ಷಗಳ ಕಾಲ ಬೀಡುಬಿಟ್ಟಿತ್ತು. ಅಲ್ಲಿ ಪ್ರಜಾಪ್ರಭುತ್ವ ಸರಕಾರವನ್ನು ಸ್ಥಾಪಿಸಿತು, ತನ್ನದೇ ಆದ ಸೈನ್ಯವನ್ನು ತರಬೇತಿಗೊಳಿಸಿತು. ಈ ಯುದ್ಧಕ್ಕಾಗಿ ಅಮೆರಿಕ ಸುರಿದ

ಹಣ ಎಷ್ಟು ಗೊತ್ತೇ? ಸುಮಾರು 2 ಟ್ರಿಲಿಯನ್ ಡಾಲರ್ (ಲಕ್ಷ ಕೋಟಿ ರೂಪಾಯಿಗಳು)! ಆದರೆ 2021ರಲ್ಲಿ ಅಮೆರಿಕನ್ ಪಡೆಗಳು ಅಫ್ಘಾನಿಸ್ತಾನದಿಂದ ಸಂಪೂರ್ಣವಾಗಿ ಕಾಲ್ಕಿತ್ತ ತಕ್ಷಣವೇ, ಅಮೆರಿಕ ಬೆಂಬಲಿತ ಸರಕಾರ ನೆಲಕಚ್ಚಿತು. ತಾವು ಯಾರನ್ನು ಸೋಲಿಸಲು ಬಂದಿದ್ದರೋ, ಅದೇ ತಾಲಿಬಾನ್ ಸಂಘಟನೆ ಮತ್ತೆ ಕಬೂಲ್‌ನಲ್ಲಿ ಅಧಿಕಾರ ಹಿಡಿಯಿತು. ಅಮೆರಿಕದ 20 ವರ್ಷಗಳ ಶ್ರಮ, ಹಣ ಮತ್ತು ಸೈನಿಕರ ಬಲಿ ಸಂಪೂರ್ಣ ವ್ಯರ್ಥವಾಯಿತು. ಇದನ್ನು ಅಮೆರಿಕದ ಆಧುನಿಕ ಇತಿಹಾಸದ ಅತ್ಯಂತ ದೊಡ್ಡ ಮಿಲಿಟರಿ ವೈಫಲ್ಯವೆಂದೇ ವಿಶ್ಲೇಷಿಸಲಾಗಿದೆ.

ಇನ್ನು, 2003ರಲ್ಲಿ ಅಮೆರಿಕ ಮತ್ತೊಂದು ದೊಡ್ಡ ಸುಳ್ಳನ್ನು ಜಗತ್ತಿಗೆ ಹೇಳಿತು. ಇರಾಕ್ ಅಧ್ಯಕ್ಷ ಸದ್ದಾಂ ಹುಸೇನ್ ಬಳಿ ಜಾಗತಿಕ ವಿನಾಶಕಾರಿ ಜೈವಿಕ ಮತ್ತು ರಾಸಾಯನಿಕ ಅಸ್ತ್ರಗಳಿವೆ ಎಂದು ಸುಳ್ಳು ನೆಪ ಒಡ್ಡಿ ಇರಾಕ್ ಮೇಲೆ ಆಕ್ರಮಣ ಮಾಡಿತು. ಸದ್ದಾಂ ಹುಸೇನ್ ಸರಕಾರವನ್ನು ಉರುಳಿಸಿ, ಅವರನ್ನು ಗಲ್ಲಿಗೇರಿಸಲಾಯಿತು. ಆದರೆ ಅಮೆರಿಕ ಹೇಳಿದ ಯಾವುದೇ ಜೈವಿಕ ಅಸ್ತ್ರಗಳು ಇರಾಕ್‌ನಲ್ಲಿ ಸಿಗಲೇ ಇಲ್ಲ. ಅಮೆರಿಕ ಇರಾಕ್ ಅನ್ನು ಆಕ್ರಮಿಸಿತೇ ವಿನಃ ಅಲ್ಲಿ ಶಾಂತಿ ಮತ್ತು ಸ್ಥಿರತೆಯನ್ನು ತರಲು ಅದರಿಂದ ಸಾಧ್ಯವಾಗಲಿಲ್ಲ. ಬದಲಿಗೆ ಇಡೀ ದೇಶವನ್ನು ಅರಾಜಕತೆಗೆ ತಳ್ಳಿತು. ಇರಾಕ್‌ನ ಸೈನ್ಯವನ್ನು ವಿಸರ್ಜಿಸಿದ್ದರಿಂದ, ಅಲ್ಲಿನ ಅತೃಪ್ತ ಸೈನಿಕರೇ ಸೇರಿಕೊಂಡು ಜಗತ್ತಿನ ಅತ್ಯಂತ ಕ್ರೂರ ಉಗ್ರಗಾಮಿ ಸಂಘಟನೆಯಾದ 'ಐಸಿಸ್' (ISIS) ಅನ್ನು ಸ್ಥಾಪಿಸಿದರು. ಅಮೆರಿಕದ ಒಂದು ತಪ್ಪು ನಿರ್ಧಾರ ಇಡೀ ಮಧ್ಯಪ್ರಾಚ್ಯವನ್ನು ರಕ್ತದ ಮಡುವಿಗೆ ತಳ್ಳಿತು. ಇರಾಕ್‌ನಲ್ಲಿ ಪ್ರಜಾಪ್ರಭುತ್ವವೂ ಬರಲಿಲ್ಲ, ಶಾಂತಿಯೂ ಸಿಗಲಿಲ್ಲ; ಬದಲಿಗೆ ಅಮೆರಿಕಕ್ಕೆ ಅಲ್ಲಿಂದಲೂ ಅಪಮಾನದೊಂದಿಗೆ ಹಿಂದೆ ಸರಿಯಬೇಕಾಯಿತು.

ಅಮೆರಿಕ ಆಡಳಿತದಲ್ಲಿ ಭಾರತೀಯರ ಛಾಪು

ಅಮೆರಿಕದ ರಾಜಕಾರಣದಲ್ಲಿ ಹಲವಾರು ಭಾರತೀಯರು ತಮ್ಮ ಪ್ರಭಾವ ಬೀರಿದ್ದಾರೆ. ವೈಟ್‌ಹೌಸ್‌ನ ಮೊಗಸಾಲೆಗಳಿಂದ ಹಿಡಿದು ಮಿಲಿಟರಿ, ನೀತಿನಿರೂಪಣೆ ಎಲ್ಲದರಲ್ಲೂ ಭಾರತೀಯರ ಛಾಪು ಹಬ್ಬಿದೆ.

ಉಷಾ ಬಾಲಾ ವ್ಯಾನ್ಸ್

ಅಮೆರಿಕದ ಉಪಾಧ್ಯಕ್ಷ ಜೆ.ಡಿ. ವ್ಯಾನ್ಸ್ ಅವರ ಪತ್ನಿ, 2025ರಿಂದ ಅಮೆರಿಕದ ಸೆಕೆಂಡ್ ಲೇಡಿ ಆಗಿರುವ ಉಷಾ ಬಾಲಾ ವ್ಯಾನ್ಸ್ ಭಾರತದ ಆಂಧ್ರ ಪ್ರದೇಶ ಮೂಲದವರು.

ಅವರು ಹುಟ್ಟಿದ್ದು ಅಮೆರಿಕದಲ್ಲೇ ಆದರೂ ಅವರ ತಂದೆ ಆಂಧ್ರದ ವೆಸ್ಟ್ ಗೋದಾವರಿಯ ತನುಕು ಎಂಬ ಪಟ್ಟಣದ ಸಮೀಪ ಇರುವ ವಡ್ಲೂರು ಗ್ರಾಮದವರು. ಅವರದ್ದು ಸುಶಿಕ್ಷಿತ ಕುಟುಂಬ. ಉಷಾ ಅವರ ಅಜ್ಜ ರಾಮಶಾಸ್ತ್ರಿ ಚಿಲುಕುರಿ ಅವರು ಐಐಟಿ ಚೆನ್ನೈನಲ್ಲಿ ಪಾಠ ಮಾಡಿದ್ದರು. ಉಷಾ ಅವರ ತಂದೆ ಮೆಕ್ಯಾನಿಕಲ್ ಎಂಜಿನಿಯರ್, ಅವರೂ ಕೂಡ ಐಐಟಿಯಲ್ಲಿ ಪಾಠ ಮಾಡಿದವರು. ಉಷಾ ತಾಯಿ ಮಾಲಿಕ್ಯುಲಾರ್ ಬಯೋಲಜಿಸ್ಟ್. ಎಪ್ಪತ್ತರ ದಶಕದ ಕೊನೆಯಲ್ಲಿ ಉಷಾ ಪೋಷಕರು ಅಮೆರಿಕಕ್ಕೆ ತೆರಳಿದವರು. ಕ್ಯಾಲಿಫೋರ್ನಿಯಾದ ಸ್ಯಾನ್ ಡಿಯೆಗೋದಲ್ಲಿ ಉಷಾ ಹುಟ್ಟುತ್ತಾರೆ. ಯಾಲೆ ಯೂನಿವರ್ಸಿಟಿ, ಕೇಂಬ್ರಿಡ್ಜ್ ಯೂನಿವರ್ಸಿಟಿಯಲ್ಲಿ ಉಷಾ ಓದುತ್ತಾರೆ. ಜೆಡಿ ವ್ಯಾನ್ಸ್ ಮತ್ತು ಉಷಾ ಮೊದಲು ಭೇಟಿಯಾಗಿದ್ದು ಯಾಲೆ ಲಾ ಸ್ಕೂಲ್‌ನಲ್ಲಿ. ಚರ್ಚಾ ಕೂಟದಲ್ಲಿ ಇಬ್ಬರೂ ಒಂದೇ ಗ್ರೂಪ್‌ನಲ್ಲಿದ್ದರು. 2014ರಲ್ಲಿ ಅವರಿಬ್ಬರ ವಿವಾಹ ನೆರವೇರಿತು. ಅಮೆರಿಕದ ಹಲವಾರು ಕಾನೂನು ಕಾಲೇಜುಗಳಲ್ಲಿ ಉಪನ್ಯಾಸಕರಾಗಿ ಸೇವೆ ಸಲ್ಲಿಸಿದ ಹಿರಿಮೆಗೆ ಪಾತ್ರರಾಗಿದ್ದಾರೆ. ಉಷಾ ವ್ಯಾನ್ಸ್ ಅವರು ಅಮೆರಿಕದಲ್ಲಿ ಜನಿಸಿ ಬೆಳೆದಿದ್ದರೂ, ಭಾರತೀಯ ಸಂಸ್ಕೃತಿ ಮತ್ತು ಮೌಲ್ಯಗಳೊಂದಿಗೆ ಆಳವಾದ ನಂಟನ್ನು ಹೊಂದಿದ್ದಾರೆ. ಹಲವಾರು ಮಾಧ್ಯಮ ಸಂದರ್ಶನಗಳಲ್ಲಿ ಭಾರತದ ಬಗ್ಗೆ ಅವರು ಹೆಮ್ಮೆಯಿಂದ ಮಾತನಾಡಿದ್ದಾರೆ

ಕಮಲ ಹ್ಯಾರಿಸ್

2021–25ರ ವರೆಗೂ ಅಮೆರಿಕದ 49ನೇ ಉಪಾಧ್ಯಕ್ಷೆ ಆಗಿದ್ದ ಕಮಲ ಹ್ಯಾರಿಸ್ ಈ ಹುದ್ದೆಯನ್ನು ನಿರ್ವಹಿಸಿದ ಮೊದಲ ಮಹಿಳೆ. ಡೆಮಾಕ್ರೆಟಿಕ್ ಪಕ್ಷದ ಸದಸ್ಯೆಯಾದ

ಅವರು 2011ರಿಂದ 2017ರ ವರೆಗೆ ಕ್ಯಾಲಿಫೋರ್ನಿಯಾದ ಅಟಾರ್ನಿ ಜನರಲ್ ಆಗಿ, 2017ರಿಂದ 2021ರ ವರೆಗೆ ಸೆನೆಟರ್ ಆಗಿಯೂ ಕಾರ್ಯ ನಿರ್ವಹಿಸಿದವರು. ಕಮಲಾ ಹ್ಯಾರಿಸ್ ಅವರ ಪೂರ್ವಜರು ಭಾರತದವರು. ಅವರ ತಾಯಿ ಶ್ಯಾಮಲಾ ಗೋಪಾಲನ್ ಚೆನ್ನೈ ಮೂಲದವರು, 1958ರಲ್ಲಿ ಅಮೆರಿಕಕ್ಕೆ ವಲಸೆ ಹೋದವರು. ಕಮಲಾ ಅವರು ಕ್ಯಾಲಿಫೋನಿಯಾದ ಹಾಕ್ಲೆಂಡ್‌ನಲ್ಲಿ ಜನಿಸಿ, ಹೊವರ್ಡ್ ವಿಶ್ವವಿದ್ಯಾನಿಲಯ ಮತ್ತು ಕ್ಯಾಲಿಫೋರ್ನಿಯ ವಿಶ್ವವಿದ್ಯಾನಿಲಯದ ಹ್ಯಾಸ್ಟಿಂಗ್ ಲಾ ಕಾಲೇಜಿನಲ್ಲಿ ಪದವಿಯನ್ನು ಪಡೆದವರು. ತಮ್ಮ ವೃತ್ತಿ ಜೀವನವನ್ನು ಅಲಮೆಡ ಕೌಂಟಿಯ ಜಿಲ್ಲಾ ಅಟಾರ್ನಿಯಾಗಿ ಆರಂಭಿಸಿದರು. ಸ್ಯಾನ್ ಫ್ರಾನ್ಸಿಸ್ಕೋದ ಸಿಟಿ ಅಟಾರ್ನಿಯಾಗಿ ಕಾರ್ಯನಿರ್ವಹಿಸಿದ್ದಾರೆ. ಸೆನೆಟರ್ ಆಗಿದ್ದ ವೇಳೆ ಆರೋಗ್ಯ ಸುಧಾರಣೆ, ದಾಖಲೆರಹಿತ ವಲಸಿಗರಿಗೆ ಪೌರತ್ವ ಪಡೆಯಲು ಸಹಾಯ, ಆಕ್ರಮಣಕಾರಿ ಶಸ್ತ್ರಾಸ್ತ್ರಗಳ ಮೇಲಿನ ನಿಷೇಧ ಮತ್ತು ಪ್ರಗತಿಪರ ತೆರಿಗೆ ಸುಧಾರಣೆಗಾಗಿ ಕೆಲಸ ಮಾಡಿದ್ದಾರೆ. ಕಮಲ ಹ್ಯಾರಿಸ್ ಡೆಮಾಕ್ರಟಿಕ್ ಅಧ್ಯಕ್ಷೀಯ ಚುನಾವಣೆಯಲ್ಲಿ ನಾಮನಿರ್ದೇಶನವನ್ನು ಬಯಸಿದರಾದರೂ ಪ್ರಾರಂಭಿಕ ಹಂತದಲ್ಲಿಯೇ ಸ್ಪರ್ಧೆಯಿಂದ ಹಿಂದೆ ಸರಿದು 2021ರಲ್ಲಿ ಅಮೆರಿಕ ಉಪಾಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ್ದರು.

ಕಾಶ್ ಪಟೇಲ್

ಕಶ್ಯಪ್ ಪ್ರಮೋದ್ ಕಾಶ್ ಪಟೇಲ್ ಅವರು 2025ರಿಂದ ಅಮೆರಿಕದ ಫೆಡರಲ್ ಬ್ಯೂರೋ ಆಫ್ ಇನ್ವೆಸ್ಟಿಗೇಷನ್‌ನ ನಿರ್ದೇಶಕರಾಗಿ ಸೇವೆ ಸಲ್ಲಿಸುತ್ತಿರುವ ಭಾರತೀಯ ಮೂಲದ ಅಮೆರಿಕದ ಖ್ಯಾತ ವಕೀಲರು. ಗುಜರಾತ್‌ನ ಆನಂದ್

ಜಿಲ್ಲೆಯ ಇವರ ಪೂರ್ವಜರ ತವರೂರು, ಅಲ್ಲಿನ ಭದ್ರನ್ ಜಿಲ್ಲೆಗೊಳಪಟ್ಟವರು. ಬಳಿಕ ಸುಮಾರು ಎಪ್ಪತ್ತು ವರ್ಷಗಳ ಹಿಂದೆ ಉಗಾಂಡಕ್ಕೆ ವಲಸೆ ಹೋದವರು, ನಂತರ ಅಮೆರಿಕಕ್ಕೆ ತೆರಳಿದವರು. ಕಾಶ್ ಪಟೇಲ್ ಅಮೆರಿಕದ ನ್ಯೂಯಾರ್ಕ್‌ನಲ್ಲಿ ಹುಟ್ಟಿದವರು. ಪಟೇಲ್ ರಿಚ್ಮಂಡ್ ವಿಶ್ವವಿದ್ಯಾಲಯದಲ್ಲಿ ಕ್ರಿಮಿನಲ್ ನ್ಯಾಯ ಮತ್ತು ಇತಿಹಾಸವನ್ನು ಅಧ್ಯಯನ ಮಾಡಿದವರು. ದಕ್ಷಿಣ ಫ್ಲೋರಿಡಾದ ಫೆಡರಲ್ ಸಾರ್ವಜನಿಕ ರಕ್ಷಕರಾಗಿ ಕೆಲಸ ಮಾಡಲು ಪ್ರಾರಂಭಿಸಿದರು. 2012ರಿಂದ 2017ರ ವರೆಗೆ ನ್ಯಾಯ ಇಲಾಖೆಯಲ್ಲಿ ಸಿಬ್ಬಂದಿ ಸದಸ್ಯರಾಗಿ ಕೆಲಸ ಮಾಡಿದರು. 2019 ಫೆಬ್ರವರಿಯಲ್ಲಿ ಪಟೇಲ್ ರಾಷ್ಟ್ರೀಯ ಭದ್ರತಾ ಮಂಡಳಿಯ ಅಂತಾರಾಷ್ಟ್ರೀಯ ಸಂಸ್ಥೆಗಳು ಮತ್ತು ಮೈತ್ರಿ ನಿರ್ದೇಶನಾಲಯಕ್ಕೆ ಸೇರಿದರು, ರಾಷ್ಟ್ರೀಯ ಗುಪ್ತಚರ ಪ್ರಧಾನ ಉಪ ನಿರ್ದೇಶಕರಾದರು, ನಂತರ ಅವರು ರಾಷ್ಟ್ರೀಯ ಭದ್ರತಾ ಮಂಡಳಿಗೆ ಮರಳಿದರು. 2021, ಜನವರಿಯಲ್ಲಿ ಟ್ರಂಪ್ ಅಧಿಕಾರ ತೊರೆದ ನಂತರ, ಪಟೇಲ್ ಅವರು ಟ್ರಂಪ್ ಅವರೊಂದಿಗಿನ ತಮ್ಮ ಸಂಬಂಧವನ್ನು ಬಳಸಿಕೊಂಡು ಹಲವಾರು ವ್ಯವಹಾರ ಉದ್ಯಮಗಳನ್ನು ಉತ್ತೇಜಿಸಿದರು

ವಿವೇಕ್ ರಾಮಸ್ವಾಮಿ

ವಿವೇಕ್ ರಾಮಸ್ವಾಮಿ ಅವರು ಟ್ರಂಪ್ ಹಾಗೂ ಉದ್ಯಮಿ ಎಲಾನ್ ಮಸ್ಕ್ ಅವರ ಅತ್ಯಾಪ್ತರಾಗಿದ್ದವರು. ಅಮೆರಿಕ ಸರಕಾರದ ಕಾರ್ಯದಕ್ಷತೆ ಇಲಾಖೆಯ ಮುಖ್ಯಸ್ಥರಾಗಿದ್ದವರು. ಭಾರತದ ತಮಿಳು ಪಾಲಕ್ಕಾಡ್ ಅಯ್ಯರ್ ಪೋಷಕರಿಗೆ ಜನಿಸಿದವರು. ಅವರ ತಂದೆ ಕೇರಳದ ಕೋಯಿಕ್ಕೋಡ್ ಐಐಟಿ ಪದವೀಧರರಾದ ಗಣಪತಿ

ರಾಮಸ್ವಾಮಿ ಅವರು ಎಂಜಿನಿಯರ್ ವೃತ್ತಿಯಲ್ಲಿದ್ದವರು, ಅವರ ತಾಯಿ ಗೀತಾ ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ಪದವೀಧರೆ. ಪೂರ್ವಜರು ಕೇರಳದ ಪಾಲಕ್ಕಾಡ್ ಜಿಲ್ಲೆಗೆ ಸೇರಿದವರು. ಒಬ್ಬ ಅಮೆರಿಕನ್ ಉದ್ಯಮಿ ಮತ್ತು ರಾಜಕಾರಣಿಯಾಗಿ ಅಮೆರಿಕದಲ್ಲಿ ಗುರುತಿಸಿಕೊಂಡ ವಿವೇಕ್ ಅವರು 2014ರಲ್ಲಿ ರೋಯಿವಂಟ್ ಸೈನ್ಸಸ್ ಎಂಬ ಜೈವಿಕ ತಂತ್ರಜ್ಞಾನ ಔಷಧ ಕಂಪನಿಯನ್ನು ಸ್ಥಾಪಿಸಿ, 2021ರ ವರೆಗೆ ಅದರ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿದ್ದರು. 2020ರ ಅಧ್ಯಕ್ಷೀಯ ಚುನಾವಣೆಯಲ್ಲಿ ಟ್ರಂಪ್ ಅವರನ್ನು ಬೆಂಬಲಿಸುವವರೆಗೂ ರಾಮಸ್ವಾಮಿ ರಾಜಕೀಯದಿಂದ ದೂರ ಉಳಿದಿದ್ದರು. ರಿಪಬ್ಲಿಕನ್ ಪಕ್ಷಕ್ಕೆ ಸಕ್ರಿಯ ಚುನಾವಣೆಗಳಲ್ಲಿ ಹಣಕಾಸಿನ ನೆರವನ್ನೂ ನೀಡಿದ ವಿವೇಕ್ ಗಣಪತಿ ಅಮೆರಿಕದಲ್ಲಿ ತಮ್ಮದೇ ಆದ ಛಾಪು ಮೂಡಿಸಿದವರು.

ಶ್ರೀರಾಮ್ ಕೃಷ್ಣನ್

ಭಾರತೀಯ ಮೂಲದ ಅಮೆರಿಕನ್ ಉದ್ಯಮಿ, ಹೂಡಿಕೆದಾರ ಮತ್ತು ಮಾಜಿ ಶ್ವೇತಭವನದ ಅಧಿಕಾರಿ ಎಂಬಿತ್ಯಾದಿ ಹೆಗ್ಗಳಿಕೆಯಿಂದ ಸುಪರಿಚಿತರಾದವರೇ ಶ್ರೀರಾಮ ಕೃಷ್ಣನ್. ತಮಿಳುನಾಡಿನ ಚೆನ್ನೈನಲ್ಲಿ ಜನಿಸಿದ ಅವರು ಅಲ್ಲಿನ ಎಸ್‌ಆರ್‌ಎಂ ವಿಶ್ವವಿದ್ಯಾಲಯದಿಂದ ಪದವಿ

ಪಡೆದವರು. ಮೈಕ್ರೋಸಾಫ್ಟ್, ಫೇಸ್‌ಬುಕ್ ಮತ್ತು ಟ್ವಿಟರ್‌ನಂತಹ (ಈಗಿನ ಎಕ್ಸ್) ಪ್ರಮುಖ ಟೆಕ್ ಕಂಪನಿಗಳಲ್ಲಿ ಕೆಲಸ ಮಾಡಿರುವ ಅನುಭವ ಅವರದ್ದಾಗಿದೆ. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಆಡಳಿತದಲ್ಲಿ ಕೃತಕ ಬುದ್ಧಿಮತ್ತೆಗೆ (ಎಐ) ಹಿರಿಯ ನೀತಿ ಸಲಹೆಗಾರರಾಗಿ ಸುಮಾರು 18 ತಿಂಗಳುಗಳ ಕಾಲ ಸೇವೆ ಸಲ್ಲಿಸಿದ್ದಾರೆ. ಟ್ರಂಪ್ ಆಡಳಿತದಲ್ಲಿ ಅಮೆರಿಕದ ರಾಷ್ಟ್ರೀಯ ಎಐ ನೀತಿಗಳನ್ನು ರೂಪಿಸಲು ಮತ್ತು ಎಐ ಕ್ಷೇತ್ರದಲ್ಲಿ ಅಮೆರಿಕದ ಮುಂಚೂಣಿಯ ಸ್ಥಾನವನ್ನು ಖಚಿತಪಡಿಸಿಕೊಳ್ಳುವಲ್ಲಿ ಶ್ರೀರಾಮ್ ಕೃಷ್ಣನ್ ಪ್ರಮುಖ ಪಾತ್ರ ವಹಿಸಿದ್ದಾರೆ. ಕಳೆದ ತಿಂಗಳು ಶ್ವೇತಭವನದ ಹಿರಿಯ ನೀತಿ ಸಲಹೆಗಾರ ಹುದ್ದೆಗೆ ರಾಜೀನಾಮೆ ನೀಡಿದ್ದಾರೆ.

ಅರ್ಮೀತ್ ಕೌರ್ ಧಿಲ್ಲೋನ್

ಅರ್ಮೀತ್ ಕೌರ್ ಧಿಲ್ಲೋನ್ ಭಾರತೀಯ ಮೂಲದ ಅಮೆರಿಕನ್ ವಕೀಲೆ ಮತ್ತು ರಿಪಬ್ಲಿಕನ್ ಪಕ್ಷದ ಪ್ರಮುಖ

ನಾಯಕಿ. ಅವರು ಅಮೆರಿಕದ ಜಸ್ಟೀಸ್ ಡಿಪಾರ್ಟ್‌ಮೆಂಟ್‌ನಲ್ಲಿ ನಾಗರಿಕ ಹಕ್ಕುಗಳ ವಿಭಾಗದ ಅಸಿಸ್ಟೆಂಟ್ ಅಟಾರ್ನಿ ಜನರಲ್ ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಮಲೇಷ್ಯಾದಲ್ಲಿ ಹುಟ್ಟಿದ ಪಂಜಾಬಿ ಮೂಲದ ನಟಿ ಆಗಿಯೂ ಈಕೆ ಖ್ಯಾತಿ ಪಡೆದವರು. ಧಿಲ್ಲೋನ್ ಅವರ ಕುಟುಂಬವು ನಂತರ ಅಮೆರಿಕಕ್ಕೆ ವಲಸೆ ಹೋಗಿ ಉತ್ತರ ಕೆರೋಲಿನಾದಲ್ಲಿ ನೆಲೆಸಿತು. ಡಾರ್ಟ್ಮೌತ್ ಕಾಲೇಜಿನಲ್ಲಿ ತಮ್ಮ ಪದವಿ ಪೂರೈಸಿದ ನಂತರ, ವರ್ಜಿನಿಯಾ ವಿಶ್ವವಿದ್ಯಾಲಯದ ಸ್ಕೂಲ್ ಆಫ್ ಲಾದಿಂದ ಕಾನೂನು ಪದವಿ ಪಡೆದರು. ಅವರು ತಮ್ಮದೇ ಆದ 'ಧಿಲ್ಲೋನ್ ಲಾ ಗ್ರೂಪ್' ಸಂಸ್ಥೆಯನ್ನು ಕೂಡಾ ಸ್ಥಾಪಿಸಿದ್ದರು. ಕ್ಯಾಲಿಫೋರ್ನಿಯಾದ ರಿಪಬ್ಲಿಕನ್ ಪಕ್ಷದ ಉಪಾಧ್ಯಕ್ಷೆಯಾಗಿ ಮತ್ತು ನ್ಯಾಷನಲ್ ಕಮಿಟಿ ವುಮೆನ್ ಆಗಿಯೂ ಕಾರ್ಯನಿರ್ವಹಿಸಿದ್ದಾರೆ. ಏಪ್ರಿಲ್ 2025ರಲ್ಲಿ ಅಧಿಕೃತವಾಗಿ ಈ ಜವಾಬ್ದಾರಿಯನ್ನು ಅವರು ವಹಿಸಿಕೊಂಡರು. ಆದರೆ ಇಲಾಖೆಯಲ್ಲಿ ಅವರ ನಿರ್ವಹಣಾ ಶೈಲಿಯು ಭಾರಿ ಚರ್ಚೆ ಮತ್ತು ವಿವಾದಗಳಿಗೆ ಕಾರಣವಾಗಿತ್ತು. ಧಿಲ್ಲೋನ್ ಅವರ ಆಡಳಿತದ ಅಡಿಯಲ್ಲಿ ಇಲಾಖೆಯ ಅನೇಕ ಸಿಬ್ಬಂದಿಗಳು ರಾಜೀನಾಮೆ ನೀಡಿದ್ದಾರೆ ಮತ್ತು ಅವರ ನೀತಿಗಳು ರಾಜಕೀಯ ಪ್ರೇರಿತವಾಗಿವೆ ಎಂದು ಟೀಕೆಗಳು ವ್ಯಕ್ತವಾಗುತ್ತಿವೆ.

ಡಾ. ಜಯ್ ಭಟ್ಟಾಚಾರ್ಯ

ಡಾ. ಜಯ್ ಭಟ್ಟಾಚಾರ್ಯ ಅವರು ಭಾರತೀಯ ಮೂಲದ ಅಮೆರಿಕದ ಪ್ರಖ್ಯಾತ ವೈದ್ಯರಾಗಿದ್ದಾರೆ.

ಕಳೆದ ವರ್ಷದಿಂದ ಅಮೆರಿಕ ಸರಕಾರದ ಅಲ್ಲಿನ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಹೆಲ್ತ್ (ಎನ್ಐಎಚ್) ಮುಖ್ಯಸ್ಥರಾಗಿದ್ದಾರೆ. 1968ರಲ್ಲಿ ಕೋಲ್ಕತಾದಲ್ಲಿ ಹುಟ್ಟಿದ ಅವರು ಅಮೆರಿಕದ ಸ್ಟಾನ್‌ಫೋರ್ಡ್ ವಿಶ್ವವಿದ್ಯಾಲಯದಿಂದ ವೈದ್ಯಕೀಯದಲ್ಲಿ ಪದವಿ ಮತ್ತು ಸ್ನಾತಕೋತ್ತರ ಪದವಿಗಳನ್ನು ಪಡೆದವರು. ಅದೇ ರೀತಿ ಉಪನ್ಯಾಸಕರಾಗಿ ಜನಮನ್ನಣೆ ಗಳಿಸಿದ ಹೆಗ್ಗಳಿಕೆಯೂ ಇವರದ್ದಾಗಿದೆ. ಕೋವಿಡ್–19ರ ವೇಳೆ ಅಮೆರಿಕದಲ್ಲಿ ಲಸಿಕೆಯನ್ನು ಸಂಶೋಧಿಸಿದ ತಂಡವನ್ನು ಮುನ್ನಡೆಸಿದ ಖ್ಯಾತಿಯನ್ನೂ ಪಡೆದುಕೊಂಡವರು.

ಸ್ವಾತಂತ್ರ್ಯ ಸಂಭ್ರಮಕ್ಕೆ ಎರಡೂವರೆ ಶತಮಾನ

ಅಮೆರಿಕ 250

ಸಶಕ್ತ ರಾಷ್ಟ್ರ ಏಕೆ ?

1231 ಚಿನ್ನದ ಪದಕ

ಅಮೆರಿಕವು ಬೇಸಿಗೆ ಮತ್ತು ಚಳಿಗಾಲದ ಒಲಿಂಪಿಕ್ಸ್ ಸೇರಿ ಈ ತನಕ ಒಟ್ಟು 1,231 ಚಿನ್ನದ ಪದಕಗಳನ್ನು ಮುಡಿಗೇರಿಸಿಕೊಂಡಿದ್ದು, ಇದುವರೆಗೆ ನಡೆದ 30 ಬೇಸಿಗೆ ಒಲಿಂಪಿಕ್ ಕ್ರೀಡಾಕೂಟಗಳಲ್ಲಿ 19 ಬಾರಿ ಪದಕ ಪಟ್ಟಿಯಲ್ಲಿ ಮೊದಲ ಸ್ಥಾನ ಪಡೆದು ಕ್ರೀಡಾ ರಾಷ್ಟ್ರಗಳ ಪೈಕಿ ಮೊದಲ ಸ್ಥಾನದಲ್ಲಿದೆ.

31.8 ಟ್ರಿಲಿಯನ್ ಆರ್ಥಿಕತೆ

2026ರ ಮೊದಲ ತ್ರೈಮಾಸಿಕದ ಅಂಕಿ-ಅಂಶಗಳ ಪ್ರಕಾರ, ಅಮೆರಿಕದ ಆರ್ಥಿಕತೆಯ ಪ್ರಮಾಣ ಸುಮಾರು 31.8 ಟ್ರಿಲಿಯನ್ ಡಾಲರ್‌ಗಳಷ್ಟಿದೆ.

8,133.5 ಮೆಟ್ರಿಕ್ ಟನ್ ಚಿನ್ನ

ವಿಶ್ವದ ಅತಿ ಹೆಚ್ಚು ಚಿನ್ನದ ಮೀಸಲು ಹೊಂದಿರುವ ದೇಶವೂ ಅಮೆರಿಕವೇ ಆಗಿದೆ. 2026 ರ ಅಂಕಿ-ಅಂಶಗಳಂತೆ, ಅಮೆರಿಕದ ಬಳಿ 8,133.5 ಮೆಟ್ರಿಕ್ ಟನ್‌ಗಳಷ್ಟು ಚಿನ್ನದ ದಾಸ್ತಾನು ಇದೆ.

1 ಟ್ರಿಲಿಯನ್ ಡಾಲರ್ ಮಿಲಿಟರಿ ವೆಚ್ಚ

ಅಮೆರಿಕ ತನ್ನ ರಕ್ಷಣಾ ಕ್ಷೇತ್ರಕ್ಕೆ ಜಗತ್ತಿನಲ್ಲೇ ಅತಿ ಹೆಚ್ಚು ಹಣವನ್ನು ವ್ಯಯಿಸುತ್ತದೆ. 2026ರ ಆರ್ಥಿಕ ವರ್ಷದಲ್ಲಿ ಅಮೆರಿಕದ ಮಿಲಿಟರಿ ಬಜೆಟ್ ಅನ್ನು 961.6 ಬಿಲಿಯನ್ ಡಾಲರ್‌ಗಳಿಗೆ ನಿಗದಿಪಡಿಸಲಾಗಿದೆ. ಅಣುಶಕ್ತಿ ಚಟುವಟಿಕೆ ಸೇರಿ ರಾಷ್ಟ್ರೀಯ ಭದ್ರತೆಗಾಗಿ ಮಾಡುವ ಒಟ್ಟು ಖರ್ಚು 1 ಟ್ರಿಲಿಯನ್ (1.05 ಟ್ರಿಲಿಯನ್) ಡಾಲರ್‌ಗಳನ್ನು ಮೀರಿದೆ.

ಶೇ.66ರಷ್ಟು ಉಪಗ್ರಹ

ಜಗತ್ತಿನ ಒಟ್ಟು ಸಕ್ರಿಯ ಉಪಗ್ರಹಗಳ ಪೈಕಿ ಶೇ. 66ರಷ್ಟು ಅಮೆರಿಕ ಇಲ್ಲವೇ ಅಮೆರಿಕನ್ ಕಂಪನಿ ಒಡೆತನದಲ್ಲಿದೆ. 2026ರ ಜನವರಿ ವೇಳೆಗೆ, ಭೂಮಿಯ ಕೆಳ ಕಕ್ಷೆಯಲ್ಲಿಯೇ ಅಮೆರಿಕದ 11,006 ಕ್ಕೂ ಹೆಚ್ಚು ಉಪಗ್ರಹಗಳಿದ್ದವು. ಎಲಾನ್ ಮಸ್ಕ್ ಒಡೆತನದ 'ಸ್ಪೇಸ್‌ಎಕ್ಸ್' ತನ್ನ 'ಸ್ಟಾರ್‌ಲಿಂಕ್' ಯೋಜನೆ ಅಡಿಯಲ್ಲಿ 10,365 ಕ್ಕೂ ಹೆಚ್ಚು ಸಕ್ರಿಯ ಉಪಗ್ರಹಗಳನ್ನು ಹಾರಿಬಿಟ್ಟಿದೆ.

8.87 ಬಿಲಿಯನ್ ಡಾಲರ್ ವಾರ್ಷಿಕ ಸಿನಿಮಾ ಗಳಿಕೆ

2025 ರ ಒಂದೇ ವರ್ಷದಲ್ಲಿ, ಡಿಸ್ನಿ ಸ್ಟುಡಿಯೋ ವಿಶ್ವದಾದ್ಯಂತ 6.58 ಬಿಲಿಯನ್ ಡಾಲರ್ ವಾರ್ನರ್ ಬ್ರದರ್ಸ್ 4.4 ಬಿಲಿಯನ್ ಡಾಲರ್, ಮತ್ತು ಯೂನಿವರ್ಸಲ್ 3.89 ಬಿಲಿಯನ್ ಡಾಲರ್ ಗಳಿಸುವ ಮೂಲಕ ಅತಿ ಹೆಚ್ಚು ಆದಾಯ ಗಳಿಸಿದ ಸ್ಟುಡಿಯೋಗಳಾಗಿ ಹೊರಹೊಮ್ಮಿವೆ. 2025 ರಲ್ಲಿ ಉತ್ತರ ಅಮೆರಿಕದ ಗಲ್ಲಾಪೆಟ್ಟಿಗೆಯ ಒಟ್ಟು ಆದಾಯವೇ 8.87 ಬಿಲಿಯನ್ ಡಾಲರ್ ದಾಟಿತ್ತು.

413 ನೊಬೆಲ್ ಪ್ರಶಸ್ತಿಗಳು

ಅಮೆರಿಕ ಇದುವರೆಗೆ ಪಡೆದಿರುವ ವಿವಿಧ ನೊಬೆಲ್ ಪ್ರಶಸ್ತಿಗಳ ಸಂಖ್ಯೆ 413. ಇದು ಯಾವುದೇ ರಾಷ್ಟ್ರಕ್ಕಿಂತ ಅಧಿಕ.

ಸೂಪರ್ ಪವರ್

← ಮೊದಲ ಪುಟದಿಂದ

ಇಂಟರ್ನೆಟ್ ಮತ್ತು ಜಿಪಿಎಸ್ ತಂತ್ರಜ್ಞಾನವನ್ನು ಕಂಡುಹಿಡಿದಿದ್ದು ಅಮೆರಿಕದ ರಕ್ಷಣಾ ಇಲಾಖೆ. ಶೀತಲ ಸಮರದ ಸಮಯದಲ್ಲಿ ರಷ್ಯಾಕ್ಕೆ ಸಡ್ಡು ಹೊಡೆದ ಅಮೆರಿಕ, ಬಾಹ್ಯಾಕಾಶ ರಂಗದಲ್ಲಿ ಪಾರಮ್ಯ ಸಾಧಿಸಿತು. 1969ರಲ್ಲಿ ನೀಲ್ ಆರ್ಮ್‌ಸ್ಟ್ರಾಂಗ್ ಅವರನ್ನು ಚಂದ್ರನ ಮೇಲೆ ಇಳಿಸುವ ಮೂಲಕ ಇತಿಹಾಸ ನಿರ್ಮಿಸಿತು. ಹಬಲ್ ಮತ್ತು ಜೇಮ್ಸ್ ವೆಬ್ ಬಾಹ್ಯಾಕಾಶ ದೂರದರ್ಶಕಗಳು, ಮಂಗಳ ಗ್ರಹಕ್ಕೆ ಕಳುಹಿಸಿದ ರೋವರ್‌ಗಳು, ಮತ್ತು ಇಂದು ಎಲಾನ್ ಮಸ್ಕ್ ಅವರ ಸ್ಪೇಸ್‌ಎಕ್ಸ್ ನಂತಹ ಖಾಸಗಿ ಬಾಹ್ಯಾಕಾಶ ಸಂಸ್ಥೆಗಳ ಮೂಲಕ ಅಮೆರಿಕ ಬಾಹ್ಯಾಕಾಶ ರಂಗದಲ್ಲಿ ಇಂದಿಗೂ ಮುಂಚೂಣಿ ಯಲ್ಲಿದೆ.

ವೈದ್ಯಕೀಯ ರಂಗದಲ್ಲೂ ಪೆನ್ಸಿಲಿನ್‌ನಿಂದ ಹಿಡಿದು ಆಧುನಿಕ ಕ್ಯಾನ್ಸರ್ ಚಿಕಿತ್ಸೆ ಮತ್ತು ಎಂಆರ್‌ಐ ಸ್ಕ್ಯಾನಿಂಗ್‌ವರೆಗೆ ಹೆಚ್ಚಿನ ಸಂಶೋಧನೆಗಳು ನಡೆದಿದ್ದು ಅಮೆರಿಕದ ಪ್ರಯೋಗಾಲಯ ಗಳಲ್ಲೇ. ಜಗತ್ತಿನ ಅತಿ ಹೆಚ್ಚು ನೊಬೆಲ್ ಪ್ರಶಸ್ತಿಗಳು (400ಕ್ಕೂ ಹೆಚ್ಚು) ಅಮೆರಿಕದ ಪಾಲಾಗಿರುವುದು ಇದಕ್ಕೆ ಸಾಕ್ಷಿ.

ಕ್ರೀಡಾ ಪಾರಮ್ಯ: ಒಲಿಂಪಿಕ್ಸ್ ಇತಿಹಾಸದಲ್ಲೇ ಅತಿ ಹೆಚ್ಚು ಚಿನ್ನದ ಪದಕಗಳನ್ನು ಗೆದ್ದ ದಾಖಲೆ ಅಮೆರಿಕದ ಹೆಸರಲ್ಲಿದೆ. ಅಮೆರಿಕದ 'ಹಾಲಿವುಡ್' ಚಿತ್ರರಂಗ ಇಡೀ ಜಗತ್ತಿನ ಮನರಂಜನಾ ಕ್ಷೇತ್ರವನ್ನು ಆಳುತ್ತಿದೆ. ಜಾಗತಿಕವಾಗಿ ಜನರು ಅಮೆರಿಕನ್ ಸಿನಿಮಾಗಳನ್ನು ನೋಡುತ್ತಾರೆ, ಅಮೆರಿಕನ್ ಪಾಪ್ ಸಂಗೀತವನ್ನು ಕೇಳುತ್ತಾರೆ. ಜೀನ್ಸ್ ಪ್ಯಾಂಟ್, ಕೋಕಾಕೋಲಾ, ಮೆಕ್‌ಡೊನಾಲ್ಡ್ಸ್ ಬರ್ಗರ್ ಮತ್ತು ಐಫೋನ್ ಬಳಸುವುದು ಇಂದು ಜಾಗತಿಕವಾಗಿ ಆಧುನಿಕತೆಯ ಸಂಕೇತವಾಗಿ ಮಾರ್ಪಟ್ಟಿದೆ.

ಇಷ್ಟೆಲ್ಲದರ ಹೊರತಾಗಿ ಅಮೆರಿಕ ಜಗತ್ತಿನ ದೊಡ್ಡಣ್ಣನಾಗಲು ಅದರ ಅಪ್ರತಿಮ ಮಿಲಿಟರಿ ಶಕ್ತಿಯೇ ಪ್ರಮುಖ ಕಾರಣ. ಜಗತ್ತಿನ ಮುಂದಿನ 10 ಬಲಿಷ್ಠ ದೇಶಗಳು ಒಟ್ಟಾಗಿ ಮಾಡುವ ಮಿಲಿಟರಿ ವೆಚ್ಚಕ್ಕಿಂತ ಹೆಚ್ಚು ಹಣವನ್ನು ಅಮೆರಿಕ ಒಂದೇ ದೇಶ ತನ್ನ ರಕ್ಷಣಾ ಬಜೆಟ್‌ಗಾಗಿ ಮೀಸಲಿಡುತ್ತದೆ. ಜಗತ್ತಿನಾದ್ಯಂತ 80ಕ್ಕೂ ಹೆಚ್ಚು ದೇಶಗಳಲ್ಲಿ ಅಮೆರಿಕದ ಮಿಲಿಟರಿ ನೆಲೆಗಳಿವೆ. ಜಗತ್ತಿನ ಯಾವುದೇ ಮೂಲೆಯಲ್ಲಿ ಯುದ್ಧ ನಡೆದರೂ ಕೆಲವೇ ಗಂಟೆಗಳಲ್ಲಿ ಅಲ್ಲಿಗೆ ತಲುಪಬಲ್ಲ ಹನ್ನೊಂದು ಬೃಹತ್ ಅಣುಶಕ್ತಿ ಚಾಲಿತ ಯುದ್ಧನೌಕೆ ಗಳು ಅಮೆರಿಕದ ಬಳಿ ಇವೆ. ಈ ಬಲದಿಂದಲೇ ಅದು ಜಾಗತಿಕ ರಾಜಕಾರಣದಲ್ಲಿ ತನಗೆ ಬೇಕಾದ ನಿರ್ಧಾರಗಳನ್ನು ತೆಗೆದುಕೊಳ್ಳುತ್ತದೆ ಮತ್ತು ಜಾಗತಿಕ ಶಾಂತಿಯನ್ನು ಕಾಪಾಡುವ ನೆಪದಲ್ಲಿ ವಿಶ್ವದ ಪೊಲೀಸ್‌ನಂತೆ ವರ್ತಿಸುತ್ತದೆ.

ಇಡೀ ಜಗತ್ತು ಅಮೆರಿಕದ ಮಾತು ಕೇಳುವುದು ಯಾಕೆ?

ಜಗತ್ತಿನ ದೊಡ್ಡಣ್ಣ ಎಂದೇ ಜನಜನಿತವಾಗಿರುವ ಅಮೆರಿಕ ಹಲವಾರು ಕ್ಷೇತ್ರಗಳಲ್ಲಿ ತನ್ನತನವನ್ನು ಮೆರೆಯುತ್ತಾ ಬಂದಿದೆ. ಆ ಕಾರಣಕ್ಕಾಗಿ ಬಹುತೇಕ ರಂಗಗಳಲ್ಲೂ ಪಾರುಪತ್ಯವನ್ನು ಸಾಧಿಸಲು ಅದಕ್ಕೆ ಸಾಧ್ಯವಾಗಿದೆ. ಅಮೆರಿಕದ ಪ್ರಮುಖ ವಲಯಗಳ ಕುರಿತಾದ ಪಕ್ಷಿನೋಟ ಇಲ್ಲಿದೆ.

ಅಮೆರಿಕ ಜಗತ್ತಿನ ಅತ್ಯಂತ ಬಲಾಢ್ಯ ದೇಶ, ಹಾಗಾಗಿ ಉಳಿದ ರಾಷ್ಟ್ರಗಳಿಗೆ ಹೋಲಿಸಿದರೆ ಹೆಚ್ಚಿನ ಕ್ಷೇತ್ರಗಳಲ್ಲಿ ಅದಕ್ಕೆ ಪಾರಮ್ಯ ಮೆರೆಯಲು ಸಾಧ್ಯವಾಗಿದೆ. ಜಗತ್ತಿನ ಹೆಚ್ಚಿನ ದೇಶದ ವಿವಿಧ ವಲಯಗಳು ಅಮೆರಿಕದ ಯಶಸ್ವಿ ಕಾರ್ಯನಿರ್ವಹಣೆಯತ್ತ ದೃಷ್ಟಿ ನೆಟ್ಟಿರುವುದಂತೂ ಸುಳ್ಳಲ್ಲ. ಹಾಗಾಗಿ ಅಲ್ಲಿನ ಹೆಜ್ಜೆ ಗುರುತಾಗಿರುವ ಆಯ್ದ ಕೆಲವು ಕ್ಷೇತ್ರಗಳ ಸಂಕ್ಷಿಪ್ತ ವಿವರಗಳು ಇಲ್ಲಿದೆ.

ಅಮೆರಿಕದ ಆರ್ಥಿಕತೆ:

ಅಮೆರಿಕದ ಆರ್ಥಿಕತೆಯು ವಿಶ್ವದಲ್ಲೇ ಅತೀ ದೊಡ್ಡದಾಗಿದ್ದು, ನಾಮಿನಲ್ ಜಿಡಿಪಿಯಲ್ಲೂ ಅದು ಅಗ್ರಸ್ಥಾನ ಪಡೆದಿದೆ. ತಾಂತ್ರಿಕ ಆವಿಷ್ಕಾರ, ಕೈಗಾರಿಕೆಗಳ ಜಾಲ, ಉನ್ನತ ಮಟ್ಟದ ಉತ್ಪಾದಕತೆ ಮತ್ತು ವಿಶ್ವದ ರಿಸರ್ವ್ ಕರೆನ್ಸಿ (ಅಮೆರಿಕನ್ ಡಾಲರ್) ಬಳಕೆಯು ಅಮೆರಿಕ ಆರ್ಥಿಕತೆಯ ಪ್ರಮುಖ ಶಕ್ತಿಯಾಗಿದೆ. ಜಾಗತಿಕ ವಾಣಿಜ್ಯ ಮತ್ತು ಹಣಕಾಸು ವ್ಯವಸ್ಥೆಯಲ್ಲಿ ಅಮೆರಿಕವು ಪ್ರಮುಖ ನಿಯಂತ್ರಕ ರಾಷ್ಟ್ರವಾಗಿದೆ. ಜಾಗತಿಕ ಜಿಡಿಪಿಯಲ್ಲಿ ಸುಮಾರು 25%ಕ್ಕಿಂತ ಹೆಚ್ಚಿನ ಪಾಲನ್ನು ಅಮೆರಿಕ ಹೊಂದಿದೆ. ಅಮೆರಿಕನ್ ಡಾಲರ್ ಜಾಗತಿಕ ರಿಸರ್ವ್ಡ್ ಕರೆನ್ಸಿ ಎನಿಸಿಕೊಂಡಿದ್ದು, ಅದು ಅಮೆರಿಕಕ್ಕೆ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಅಪಾರ ಅನುಕೂಲತೆಯನ್ನು ನೀಡುತ್ತದೆ.

ವಿಶ್ವದರ್ಜೆಯ ಸಂಸ್ಥೆಗಳಾದ ವಾಲ್‌ಸ್ಟ್ರೀಟ್‌ನಂತಹ ಹಣಕಾಸು ಮಾರುಕಟ್ಟೆಗಳು ಮತ್ತು ಡಾಲರ್‌ನ ಮೇಲಿನ ಹಿಡಿತದಿಂದಾಗಿ, ಜಾಗತಿಕ ಆರ್ಥಿಕತೆಯ ದಿಕ್ಕನ್ನು ನಿರ್ಧರಿಸುವ ಶಕ್ತಿಯನ್ನು ಅಮೆರಿಕ ಹೊಂದಿದೆ. ಹೀಗಿದ್ದರೂ ಅಮೆರಿಕದ ಆರ್ಥಿಕ ಸ್ಥಿರತೆ ಸಮತೋಲನದಲ್ಲಿದೆ ಎಂಬುವುದು ತಪ್ಪು ಕಲ್ಪನೆ. ಅದು ನಿಧಾನವಾಗಿ ಕುಸಿತದ ಕಡೆಯತ್ತ ಜಾರುತ್ತಿದೆ ಎನ್ನುವುದು ಕೂಡಾ ಬಹಿರಂಗವಾಗಿದೆ. ಈ ಒಂದು ಹಾದಿ ದೀರ್ಘಕಾಲದಲ್ಲಿ ಅಪಾಯಕಾರಿ ಹಂತವನ್ನು ತಲುಪುವ ಸಾಧ್ಯತೆಯನ್ನು ತಳ್ಳಿ ಹಾಕುವಂತಿಲ್ಲ, ಏಕೆಂದರೆ ಅದಕ್ಕೆ ನೇರ ಕಾರಣಗಳೂ ಹತ್ತಲವು, ಅವುಗಳ ಪೈಕಿ ಬಹುಮುಖ್ಯವಾದವುಗಳು ದೊಡ್ಡ ಮಟ್ಟದ ಸರಕಾರಿ ಸಾಲ, ಸಾಲಕ್ಕೆ ಕಾರಣವಾದ ಫಿಸ್ಕಲ್ ಡಿಫಿಸಿಟ್‌ಗಳು ಹಾಗೂ ಬ್ಯಾಂಕಿಂಗ್ ಮತ್ತು ರಿಯಲ್ ಎಸ್ಟೇಟ್ ಕ್ಷೇತ್ರಗಳಲ್ಲಿ ಕಾಣಿಸುತ್ತಿರುವ ಅಪಾರ ಒತ್ತಡಗಳಾಗಿವೆ.

ಅಮೆರಿಕದ ಸಶಸ್ತ್ರ ಪಡೆಗಳು: ವಿಶ್ವದ ಅತ್ಯಂತ ಶಕ್ತಿಶಾಲಿ ಮತ್ತು ಮುಂದುವರಿದ ಮಿಲಿಟರಿ ಬಲವನ್ನೊಳಗೊಂಡಿರುವ ದೇಶ ಎಂಬ ಹೆಗ್ಗಳಿಕೆ ಅಮೆರಿಕಕ್ಕಿದೆ. ಭೂಸೇನೆ, ನೌಕಾಪಡೆ, ವಾಯುಪಡೆ, ನೌಕಾಪಡೆ ಮೆರೈನ್ಸ್, ಕರಾವಳಿ ಕಾವಲು ಪಡೆ ಮತ್ತು ಇತ್ತೀಚೆಗೆ ಸ್ಥಾಪಿತವಾದ ಬಾಹ್ಯಾಕಾಶ ಪಡೆ ಎಂಬ 6 ಪ್ರಮುಖ ವಿಭಾಗಗಳನ್ನು ಅಮೆರಿಕ ಮಿಲಿಟರಿ ಪಡೆಯಲ್ಲಿದೆ.

ಅಮೆರಿಕದ ಸೇನಾ ಬಲದ ಪ್ರಮುಖಾಂಶ ಎಂದರೆ ಅದು ಸಿಬ್ಬಂದಿಯ ಸಂಖ್ಯಾಬಲ. ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿರುವ ಸುಮಾರು 1.3 ಮಿಲಿಯನ್ (13 ಲಕ್ಷ) ಸೈನಿಕರು ಮತ್ತು 7.5 ಲಕ್ಷಕ್ಕೂ ಹೆಚ್ಚು ಮೀಸಲು ಸಿಬ್ಬಂದಿ ಅಮೆರಿಕದ ರಕ್ಷಣಾ ಪಡೆಯಲ್ಲಿದ್ದಾರೆ. ಜಾಗತಿಕ ಭದ್ರತೆಯ ದೃಷ್ಟಿಯಿಂದ ಅಮೆರಿಕವು ವಿಶ್ವಾದ್ಯಂತ ಹಲವು ದೇಶಗಳಲ್ಲಿ ನೂರಾರು ಮಿಲಿಟರಿ ನೆಲೆಗಳನ್ನು ಹೊಂದಿದೆ. ಇತ್ತೀಚೆಗೆ ಮಧ್ಯಪ್ರಾಚ್ಯದಲ್ಲಿ ಹೆಚ್ಚುತ್ತಿರುವ ಉದ್ವಿಗ್ನತೆಗಳನ್ನು ನಿಯಂತ್ರಿಸಲು ತನ್ನ ಸಂಪನ್ಮೂಲಗಳನ್ನು ಇಂಡೋ-ಪೆಸಿಫಿಕ್ ಮತ್ತು ಮಧ್ಯಪ್ರಾಚ್ಯ ಪ್ರದೇಶಗಳಲ್ಲಿ ಅಮೆರಿಕ ಕೇಂದ್ರೀಕರಿಸಿತ್ತು. ವಿಶ್ವದಲ್ಲೇ ಅತೀ ಹೆಚ್ಚು ರಕ್ಷಣಾ ಬಜೆಟ್ ಹೊಂದಿರುವ ದೇಶ ಕೂಡಾ ಅಮೆರಿಕ ಆಗಿದ್ದು, ಅತ್ಯಾಧುನಿಕ ಯುದ್ಧ ವಿಮಾನಗಳು, ಕ್ಷಿಪಣಿಗಳು, ಯುದ್ಧನೌಕೆಗಳು ಮತ್ತು ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನವನ್ನು ತನ್ನ ಸೇನೆಯಲ್ಲಿ ಅದು ಬಳಸಿಕೊಳ್ಳುತ್ತಿದೆ. ಅಮೆರಿಕ ಸಂಯುಕ್ತ ಸಂಸ್ಥಾನದ ಅಧ್ಯಕ್ಷರು (ಕಮಾಂಡರ್ ಇನ್ ಚೀಫ್) ಇಡೀ ಅಮೆರಿಕ ಸೇನಾಪಡೆಯ ಸರ್ವೋಚ್ಚ ನಾಯಕರಾಗಿದ್ದಾರೆ.

20ನೇ ಶತಮಾನದಿಂದೀಚೆಗೆ ವಿಶ್ವದಾದ್ಯಂತ ಹಲವು ದೇಶಗಳ ಮೇಲೆ ಅಮೆರಿಕ ನೇರ ಮಿಲಿಟರಿ ದಾಳಿ, ಆಕ್ರಮಣಕಾರಿ ಬಾಂಬ್ ದಾಳಿಗಳನ್ನು ನಡೆಸಿದೆ. ಅದರಲ್ಲಿ ಪ್ರಮುಖವಾಗಿ ಇತ್ತೀಚೆಗಿನ ಇರಾಕ್ ಮೇಲಿನ ದಾಳಿ. ಹಾಗೆಯೇ ವಿಯೆಟ್ನಾಂ, ಅಫ್ಘಾನಿಸ್ತಾನ, ಲಿಬಿಯಾ, ಸಿರಿಯಾ, ಯುಗೊಸ್ಲೋವಿಯಾ, ಪನಾಮ, ಮತ್ತು ಗ್ರೆನಡಾ (ದ್ವೀಪ ರಾಷ್ಟ್ರ) ಮುಂತಾದ ದೇಶಗಳ ಮೇಲೆ ಸೇನಾ ಕಾರ್ಯಾಚರಣೆಯನ್ನೂ ಸಹ ಅಮೆರಿಕ ಇದುವರೆಗೆ ನಡೆಸಿದೆ.

ಕ್ರೀಡೆಯಲ್ಲಿ ಅಮೆರಿಕ ಸಾಧನೆ:

ಅಮೆರಿಕವು ಕ್ರೀಡಾ ಜಗತ್ತಿನಲ್ಲಿ ತನ್ನದೇ ಆದ ಅಪ್ರತಿಮ ಪಾರಮ್ಯವನ್ನು ಹೊಂದಿದೆ. ಒಲಿಂಪಿಕ್ಸ್‌ನಲ್ಲಿ ಸಾರ್ವಕಾಲಿಕ ಅಗ್ರಸ್ಥಾನಿಯಾಗಿರುವ ಈ ದೇಶವು, ಅತ್ಯಾಧುನಿಕ ತರಬೇತಿ ಸೌಲಭ್ಯಗಳು, ಬಲಿಷ್ಠ ಕಾಲೇಜು ಕ್ರೀಡಾ ಕಲಿಕಾ ವ್ಯವಸ್ಥೆ ಮತ್ತು ಬೃಹತ್ ವಾಣಿಜ್ಯ ಲೀಗ್‌ಗಳ ಮೂಲಕ ಜಾಗತಿಕ ಕ್ರೀಡಾ ರಂಗದಲ್ಲಿ ಮುಂಚೂಣಿಯಲ್ಲಿದೆ. ಅಮೆರಿಕದ ಕ್ರೀಡಾ ಪಾರಮ್ಯದ ಪ್ರಮುಖ ಸಾಧನೆಗಳೆಂದರೆ ಬೇಸಿಗೆ ಮತ್ತು ಚಳಿಗಾಲದ ಒಲಿಂಪಿಕ್ಸ್ ಎರಡರಲ್ಲೂ ಸಾರ್ವಕಾಲಿಕ ಪದಕ ಪಟ್ಟಿಯಲ್ಲಿ ನಂ.1 ಸ್ಥಾನದಲ್ಲಿ ಮೆರೆಯುತ್ತಿರುವುದಾಗಿದೆ. ಅಥ್ಲೆಟಿಕ್ಸ್, ಈಜು ಮತ್ತು ಜಿಮ್ನಾಸ್ಟಿಕ್ಸ್‌ನಲ್ಲೂ ಅಮೆರಿಕನ್ನರ ಪ್ರಾಬಲ್ಯವೇ ಹೆಚ್ಚು. ಹಾಗೆಯೇ ಅಲ್ಲಿರುವ ವೃತ್ತಿಪರ ಲೀಗ್‌ಗಳು ಜಗತ್ತಿನಲ್ಲೇ ಅತ್ಯಂತ ಶ್ರೀಮಂತ ಹಾಗೂ ಜನಪ್ರಿಯವಾಗಿವೆ. ಬ್ಯಾಸ್ಕೆಟ್‌ಬಾಲ್, ಅಮೆರಿಕನ್ ಫುಟ್‌ಬಾಲ್ ಕ್ರೀಡೆಗಳಲ್ಲದೆ, ಇಎಸ್‌ಪಿಎನ್‌ನಂತಹ ಮಾಧ್ಯಮಗಳು ಕ್ರೀಡಾ ಉದ್ಯಮವನ್ನೇ ಅಮೆರಿಕದಲ್ಲೇ ನಿಯಂತ್ರಿಸುತ್ತವೆ. ಸಾಂಪ್ರದಾಯಿಕ ಕ್ರೀಡೆಗಳ ಜತೆಗೆ, ಎಕ್ಸ್ ಗೇಮ್ಸ್, ಸ್ಕೇಟ್ ಬೋರ್ಡಿಂಗ್ ಮತ್ತು ಇ-ಸ್ಪೋರ್ಟ್ಸ್‌ನಲ್ಲೂ ಅಮೆರಿಕ ಮುಂಚೂಣಿಯಲ್ಲಿದೆ.

ನೊಬೆಲ್-ಪ್ರಶಸ್ತಿ ಪುರಸ್ಕಾರಗಳು: ಅಮೆರಿಕ ದೇಶವು ಇದುವರೆಗೆ ವಿಶ್ವದಲ್ಲೇ ಅತಿ ಹೆಚ್ಚು ಅಂದರೆ, 425ಕ್ಕೂ ಹೆಚ್ಚು ನೊಬೆಲ್ ಪ್ರಶಸ್ತಿ ವಿಜೇತರನ್ನು ಪಡೆದ ಗರಿಮೆಗೆ ಪಾತ್ರವಾಗಿದೆ. ಇವರಲ್ಲಿ ವಿಜ್ಞಾನ, ಸಾಹಿತ್ಯ, ಶಾಂತಿ ಮತ್ತು ಅರ್ಥಶಾಸ್ತ್ರ ಕ್ಷೇತ್ರಗಳಿಗೆ ಅಪಾರ ಕೊಡುಗೆ ನೀಡಿದ ಹಲವು ಮಹನೀಯರೂ ಇದ್ದಾರೆ. ಥಿಯೋಡರ್ ರೂಸ್ವೆಲ್ಟ್ ನೊಬೆಲ್ ಶಾಂತಿ ಪ್ರಶಸ್ತಿ ಪಡೆದ (1906) ಮೊದಲ ಅಮೆರಿಕನ್ ಅಧ್ಯಕ್ಷರು. ಬರಾಕ್ ಒಬಾಮಾ ಅವರು ಅಂತಾರಾಷ್ಟ್ರೀಯ ರಾಜತಾಂತ್ರಿಕತೆ ಯನ್ನು ಬಲಪಡಿಸಲು 2009ರಲ್ಲಿ ನೊಬೆಲ್ ಪ್ರಶಸ್ತಿ ಪಡೆದವರು. ಆಲ್ಬರ್ಟ್ ಮೈಕೆಲ್ಸನ್ ಭೌತಶಾಸ್ತ್ರ ಮತ್ತು ರಸಾಯನಶಾಸ್ತ್ರ ವಿಜ್ಞಾನದಲ್ಲಿ (1907) ನೊಬೆಲ್ ಪಡೆದ ಮೊದಲ ಅಮೆರಿಕನ್ ಆಗಿದ್ದಾರೆ.

ಭಾರತೀಯ ಮೂಲದ ಅಮೆರಿಕನ್ ಖಗೋಳಶಾಸ್ತ್ರಜ್ಞ ಸುಬ್ರಹ್ಮಣ್ಯಂ ಚಂದ್ರಶೇಖರ್ ಅವರು ಖಗೋಳ ಭೌತಶಾಸ್ತ್ರಕ್ಕೆ 1983ರಲ್ಲಿ ನೊಬೆಲ್ ಪ್ರಶಸ್ತಿ ಪಡೆದರು. ಲಿಥಿಯಂ-ಅಯಾನ್ ಬ್ಯಾಟರಿಗಳ ಅಭಿವೃದ್ಧಿಗೆ ರಸಾಯನಶಾಸ್ತ್ರದಲ್ಲಿ ನೊಬೆಲ್ ಪ್ರಶಸ್ತಿ ಪಡೆದ ಹೆಗ್ಗಳಿಕೆ ಅಮೆರಿಕದ ಜಾನ್ ಬಿ. ಗುಡಿನಫ್ ಅವರಿಗೆ ಸಲ್ಲುತ್ತದೆ. ವರ್ಣತಂತುಗಳು ಟೆಲೋಮಿಯರ್‌ಗಳಿಂದ ಹೇಗೆ ರಕ್ಷಿಸಲ್ಪಡುತ್ತವೆ ಎಂಬುದನ್ನು ಕಂಡುಹಿಡಿದಿದ್ದಕ್ಕಾಗಿ ಎಲಿಜಬೆತ್ ಬ್ಲ್ಯಾಕ್‌ಬರ್ನ್ ಅವರು ನೊಬೆಲ್ ಪ್ರಶಸ್ತಿಗೆ ಅರ್ಹರಾಗಿದ್ದಾರೆ.

ಪ್ರಸಿದ್ಧ ಕಾದಂಬರಿಕಾರರಾದ ಅರ್ನೆಸ್ಟ್ ಹೆಮಿಂಗ್‌ವೇ ಸಾಹಿತ್ಯಕ್ಕಾಗಿ 1954ರಲ್ಲಿ ನೊಬೆಲ್ ಪಡೆದರೆ ಟೋನಿ ಮಾರಿಸನ್ ಅವರು 1993ರಲ್ಲಿ ಸಾಹಿತ್ಯದಲ್ಲಿ ನೊಬೆಲ್ ಪಡೆದ ಪ್ರಥಮ ಆಫ್ರಿಕನ್-ಅಮೆರಿಕನ್ ಮಹಿಳೆ ಎಂಬ ಖ್ಯಾತಿಗೆ ಭಾಜನರಾದವರು. ಅರ್ಥಶಾಸ್ತ್ರ ಕ್ಷೇತ್ರದಲ್ಲಿ ಪಾಲ್ ಸ್ಯಾಮ್ಯುಯೆಲ್ಸನ್ ಅವರು 1970ರಲ್ಲಿ ನೊಬೆಲ್ ಪಡೆದರೆ, ಮಿಲ್ಟನ್ ಫ್ರೀಡ್ಮನ್ ಹಣಕಾಸು ಇತಿಹಾಸ ಮತ್ತು ಸಿದ್ಧಾಂತಕ್ಕಾಗಿ 1976ರಲ್ಲಿ ಅತ್ಯುನ್ನತ ಗೌರವಕ್ಕೆ ಪಾತ್ರರಾದವರು.

ಅಮೆರಿಕಾದ ಹೆಮ್ಮೆಯ ಸಂಶೋಧನಾ ಸಾಧನೆ

- 1903: ರೈಟ್ ಸಹೋದರರ ಮೋಟಾರು ಚಾಲಿತ ವಿಮಾನ ಹಾರಾಟ
- 1942: ಮೊದಲ ಕೃತಕ ಪರಮಾಣು ರಿಯಾಕ್ಟರ್ ನಿರ್ಮಾಣ
- 1947: ಸ್ಮಾರ್ಟ್‌ಫೋನ್ ಅಡಿಪಾಯವಾದ ಬೆಲ್ ಲ್ಯಾಬ್ಸ್ ಟ್ರಾನ್ಸಿಸ್ಟರ್ ಆವಿಷ್ಕಾರ
- 1955: ಅಮೆರಿಕದ ಜೊನಾಸ್ ಸಾಲ್ಕ್ ಅವರಿಂದ ಪೋಲಿಯೊ ಲಸಿಕೆ ಅಭಿವೃದ್ಧಿ
- 1969: ನಾಸಾದ ಮೂಲಕ ನೀಲ್ ಆರ್ಮ್‌ಸ್ಟ್ರಾಂಗ್ ಚಂದ್ರನ ಮೇಲೆ ಪದಾರ್ಪಣೆ
- 1969: ಇಂಟರ್ನೆಟ್‌ನ ಮೂಲ ರೂಪವಾದ ಅರ್ಪಾನೆಟ್ ಮೊದಲ ಬಾರಿ ಜಾರಿಗೆ
- 2020: ಕೋವಿಡ್-19 ಸಾಂಕ್ರಾಮಿಕ ರೋಗದ ವಿರುದ್ಧ ಎಂಆರ್‌ಎನ್‌ಎ ಲಸಿಕೆ ಅಭಿವೃದಿ

ಸತತ ಯುದ್ಧಗಳಿಂದ ಚರಿತ್ರೆ ಕಟ್ಟಿಕೊಂಡ ದೇಶ ಅಮೆರಿಕದ ಆಕ್ರಮಣಕಾರಿ ಇತಿಹಾಸ

ಸದ್ಯ 250 ವರ್ಷಗಳನ್ನು ಪೂರ್ಣಗೊಳಿಸಿರುವ ಅಮೆರಿಕ ಸದೇಶ ಜನ್ಮ ತಾಳಿದ್ದೇ ತನ್ನ ಆಕ್ರಮಣಕಾರಿ ಧೋರಣೆಯಿಂದ. ಅಮೆರಿಕ ಕಂಡವನ್ನು ಕೊಲಂಬಸ್ ಶೋಧಿಸಿದ ಮೊದಲಿಗೆ ಅಲ್ಲಿನ ಮೂಲ ನಿವಾಸಿಗಳಾದ ರೆಡ್ ಇಂಡಿಯನ್ನರ ಮೇಲೆ ವಸಾಹತುಶಾಹಿ ಬ್ರಿಟನ್ ಪ್ರಜೆಗಳು ಶುರು ಮಾಡಿದ ಆಕ್ರಮಣ, ನಂತರದಲ್ಲಿ ಬ್ರಿಟನ್ ಆಡಳಿತದ ವಿರುದ್ಧವೇ ತಿರುಗಿ ಬಿದ್ದಿದ್ದು ಯುನೈಟೆಡ್ ಸ್ಟೇಟ್ಸ್ ಆಫ್ ಅಮೆರಿಕದ ಹುಟ್ಟಿಗೆ ಕಾರಣವಾಯಿತು. ಆಗ ಶುರುವಾದ ಆಕ್ರಮಣಕಾರಿ ಗುಣ, ಈವರೆಗೂ ವಿವಿಧ ಹಂತಗಳಲ್ಲಿ, ಬಗೆ ಬಗೆ ಸ್ವರೂಪದಲ್ಲಿ ಎರಡೂವರೆ ಶತಮಾನಗಳಿಂದಲೂ ಮುಂದುವರಿದುಕೊಂಡು ಬಂದಿದೆ. ಅಮೆರಿಕ ಎಂದರೇ 'ಆಕ್ರಮಣ' ಎನ್ನುವಂತಾಗಿದೆ. ಅದರ ಆಕ್ರಮಣಕಾರಿ ಧೋರಣೆ-ಸತತ ಯುದ್ಧಗಳಲ್ಲಿ ತೊಡಗಿಸಿಕೊಳ್ಳುವ ಗುಣ ಎರಡೂವರೆ ಶತಮಾನಗ ಳಿಂದಲೂ ಒಂದಲ್ಲಾ ಒಂದು ದೇಶವನ್ನು ಕಾಡುತ್ತಲೇ ಬಂದಿದೆ. ವಿಯೆಟ್ನಾಮ್, ಕಾಂಬೋಡಿಯ, ಸಿರಿಯಾ, ಅಫ್ಘಾನಿಸ್ತಾನ, ಇರಾಕ್, ಇರಾನ್, ವೆನೆಜುವೆಲಾ, ಲಿಬಿಯಾ, ಸೊಮಾಲಿಯ... ಹೀಗೆ ಅಮೆರಿಕದ ದಾಳಿಗೆ ಒಳಗಾದ, ಅಮೆರಿಕದ ಅನಗತ್ಯ ಹಸ್ತಕ್ಷೇಪವನ್ನು ಕಂಡ ದೇಶಗಳ ಪಟ್ಟಿ ಬೆಳೆಯುತ್ತಲೇ ಇರುತ್ತದೆ.

ಕಾಂಬೋಡಿಯವನ್ನು ಅಸ್ಥಿರಗೊಳಿಸಿದ ಅಮೆರಿಕ ಯುದ್ಧ

- **2 ಯುದ್ಧಗಳು, ಲಕ್ಷ ಟನ್ ತೂಕದ ಬಾಂಬ್, ನರಮೇಧ**

ಕಾಂಬೋಡಿಯಾ ದೇಶದ ಆಡಳಿತದಲ್ಲಿ ಯುನೈಟೆಡ್ ಸ್ಟೇಟ್ಸ್ ಆಫ್ ಅಮೆರಿಕ ಎರಡು ಬಾರಿ ಹಸ್ತಕ್ಷೇಪ ಮಾಡಿದೆ. ಇದರಿಂದಾಗಿ ಮೊದಲಿಗೆ 1965ರಲ್ಲಿ ಮತ್ತು ಎರಡನೇ ಬಾರಿ 1973ರಲ್ಲಿ ಅಮೆರಿಕ ಮತ್ತು ಕಾಂಬೋಡಿಯ ಮಧ್ಯೆ ವಿಯೆಟ್ನಾಂ ಯುದ್ಧಕ್ಕೆ ಕಾರಣವಾಗಿದೆ.

20 ಲಕ್ಷ ಜನರ ಸಾವು

ಯುದ್ಧ ಕೊನೆಗೊಳಿಸಿದ ಅಮೆರಿಕದ ಸೇನೆ ವಾಪಸಾದ ನಂತರದ ಕಾಂಬೋಡಿಯದಲ್ಲಿದ್ದ ಸರಕಾರ ಪತನವಾಯಿತು. 1975 ರಲ್ಲಿ ಖಮೇರ್ ರೂಜ್ ಹೆಸರಲ್ಲಿ ಕಮ್ಯುನಿಸ್ಟ್ ಸರಕಾರದ ಅಧಿಕಾರ ಶುರುವಾಯಿತು. ಇದರಿಂದೇನೂ ಕಾಂಬೋಡಿಯದಲ್ಲಿನ ಜನರ ಬದುಕು ಹಸನಾಗಲಿಲ್ಲ. ಬದಲಾಗಿ ಸಾಮೂಹಿಕ ಮರಣದಂಡನೆಗೆ ನಾಂದಿಯಾಯಿತು. ಬಲ ಪ್ರಯೋಗದ ಕಾರ್ಮಿಕ ನೀತಿ, ಬರಗಾಲ ಎರಡೂ ಸೇರಿಕೊಂಡು 20 ಲಕ್ಷ ಕಾಂಬೋಡಿಯನ್ ಜನರ ಸಾವಿಗೆ ಕಾರಣವಾಯಿತು.

ಉತ್ತರ ವಿಯೆಟ್ನಾಂನ ರಸ್ತೆ ಸಂಪರ್ಕ ಮತ್ತು ಅಗತ್ಯ ವಸ್ತುಗಳ ಸರಬರಾಜು ಮಾರ್ಗಗಳನ್ನು ಹಾಗೂ ಕಮ್ಯುನಿಸ್ಟರ ಆಶ್ರಯ ತಾಣಗಳನ್ನು(ಹೋ ಚಿ ಮಿನ್ ಟ್ರಯಲ್) ನಾಶ ಮಾಡುವ ಗುರಿಯೊಂದಿಗೆ ಅಮೆರಿಕದ ಸೇನಾಪಡೆಗಳು ನಿಗೂಢ ಬಾಂಬ್ ದಾಳಿ ಮಾಡಿದವು. ಬಳಿಕ ಅಮೆರಿಕ ಸೇನೆಯೂ ವಿಯೆಟ್ನಾಂನ ನೆಲಕ್ಕಿಳಿದು ಆಕ್ರಮಣ ಮಾಡಿತು.

'ಆಪರೇಷನ್ ಮೆನು' ಹೆಸರಿನಲ್ಲಿ 1965 ಮತ್ತು 1973ರ ನಡುವಿನ ಅವಧಿಯಲ್ಲಿ ಅಮೆರಿಕ ಸೇನಾಪಡೆಗಳಿಂದ ವಿಯೆಟ್ನಾಂ ಮೇಲೆ ಸೀಕ್ರೆಟ್ ಬಾಂಬಿಂಗ್ ಕೂಡಾ ನಡೆಯಿತು. 1969ರಲ್ಲಿ ಇದು ತೀವ್ರಗೊಂಡಿತು. ಅಂದಿನ ಅಮೆರಿಕದ ಅಧ್ಯಕ್ಷ ರಿಚರ್ಡ್ ನಿಕ್ಸನ್ ಅವರ ಆದೇಶದ ಮೇರೆಗೆ ಅಮೆರಿಕ ಸೇನೆ ಮತ್ತು ವಾಯುಪಡೆಗಳು ಪೂರ್ವ ಕಾಂಬೋಡಿಯಾ ಭಾಗವನ್ನು ಗುರಿಯಾಗಿಸಿಕೊಂಡು ಭಾರೀ ಪ್ರಮಾಣದಲ್ಲಿ ರಹಸ್ಯವಾಗಿ ಕಾರ್ಪೆಟ್ ಬಾಂಬ್ ದಾಳಿ ಮಾಡಿದವು. ಈ ಬಗೆಯ ಬಾಂಬ್ ದಾಳಿ ನಡೆಯುವುದು ಅಮೆರಿಕದ ನಾಗರಿಕರಿಗೆ ತಿಳಿಯದಂತೆ ರಹಸ್ಯವಾಗಿಯೇ ಕಾರ್ಯಾಚರಣೆ ನಡೆಸಲಾಗಿತ್ತು.

ಈ ಅವಧಿಯಲ್ಲಿಯೇ ಅಮೆರಿಕದ ಸಶಸ್ತ್ರ ಪಡೆಗಳು ವಿಯೆಟ್ನಾ ದೇಶದ ಮೇಲೆ 1 ಲಕ್ಷ ಟನ್‌ಗಿಂತಲೂ ಹೆಚ್ಚಿನ ಪ್ರಮಾಣದ ಶಕ್ತಿಶಾಲಿ ಬಾಂಬ್‌ಗಳನ್ನು ಪ್ರಯೋಗಿಸಿತ್ತು. ಈ ಬಾಂಬ್ ದಾಳಿಯ ಪರಿಣಾಮವಾಗಿ ಕಾಂಬೋಡಿಯಾದ ಗ್ರಾಮಾಂತರ ಪ್ರದೇಶಗಳೆಲ್ಲವೂ ಧ್ವಂಸವಾದವು. ಲಕ್ಷಾಂತರ ನಾಗರಿಕರು ಸ್ಥಳಾಂತರಗೊಳ್ಳಬೇಕಾಯಿತು. ಪರಿಣಾಮವಾಗಿ ರಾಜಕುಮಾರ (ಪ್ರಿನ್ಸ್) ನೊರೊಡೋಮ್ ಸಿಹಾನೌಕ್ ಅವರ ಸರಕಾರ ಅಸ್ಥಿರಗೊಂಡಿತು.

1970ರ ಏ.28ರಂದು ಕಾಂಬೋಡಿಯ ನೆಲಕ್ಕಿಳಿದ ಅಮೆರಿಕ ಸೇನೆ, ದಕ್ಷಿಣ ವಿಯೆಟ್ನಾಮ್‌ನ ಕಾಂಬೋಡಿಯಾ ನೆಲದ ಮೇಲೆ ಆಕ್ರಮಣ ನಡೆಸಿ ಆ ಪ್ರದೇಶಗಳನ್ನು ತನ್ನ ಕೈವಶ ಮಾಡಿಕೊಂಡಿತು. ದಕ್ಷಿಣ ವಿಯೆಟ್ನಾಂನಲ್ಲಿರುವ ಕಮ್ಯುನಿಸ್ಟರ ಪ್ರಧಾನ ಕಚೇರಿಗಳನ್ನು ಧ್ವಂಸಗೊಳಿಸುವುದೇ ಅಮೆರಿಕ ಸೇನೆಯ ಈ ದಾಳಿಯ ಗುರಿಯಾಗಿತ್ತು.

ಈ ಯುದ್ಧಗಳ ಪರಿಣಾಮವಾಗಿ ವಿಯೆಟ್ನಾಮ್ ದೇಶದಲ್ಲಿಯೂ ಜನರು ದಂಗೆ ಎದ್ದರು. ಕಾಂಬೋಡಿಯದಲ್ಲಿ ಅಂತರ್ಯುದ್ಧ ಶುರುವಾಯಿತು. ಕಾಲೇಜು ಕ್ಯಾಂಪಸ್‌ಗಳಲ್ಲಿ ವಿದ್ಯಾರ್ಥಿಗಳು ಬೃಹತ್ ಪ್ರತಿಭಟನೆಗಳನ್ನು ಆರಂಭಿಸಿದರು.

ಅಮೆರಿಕದ ಯುದ್ಧ ಮತ್ತು ಸರಣಿ ಬಾಂಬ್ ದಾಳಿಗಳಿಂದ ವಿಯೆಟ್ನಾಮ್ ಆಡಳಿತದ ಅಸ್ಥಿರಗೊಂಡಿತು. ನಾಗರಿಕ ಸಮಾಜದಲ್ಲಿನ ಅಪಾರ ಸಾವು-ನೋವು ಗ್ರಾಮೀಣ ಪ್ರದೇಶಗಳಲ್ಲಿ ಮುಖ್ಯವಾಗಿ ರೈತರನ್ನು ಖಮೇರ್ ರೂಜ್ ಎಂಬ ಕಮ್ಯುನಿಸ್ಟ್ ದಂಗೆಕೋರ ಗುಂಪಿನತ್ತ ದೂಡಿದವು .

ಪರ್ವತಗಳ ನಾಡು ಅಫ್ಘನ್ ಮೇಲೆಯೂ ಅಮೆರಿಕ ಕಣ್ಣು

1978ರಲ್ಲಿ ಕಮ್ಯುನಿಸ್ಟ್ ಸಿದ್ಧಾಂತದ 'ಪೀಪಲ್ಸ್ ಡೆಮಾಕ್ರೆಟಿಕ್ ಪಾರ್ಟಿ ಆಫ್ ಅಫ್ಘಾನಿಸ್ತಾನ್'(ಪಿಡಿಪಿಎ) ಅಧಿಕಾರಕ್ಕೇರಿತು. ವರ್ಷದ ಆಡಳಿತ ಬಳಿಕ 'ಪಿಡಿಪಿಎ' ಸರಕಾರ ದುರ್ಬಲಗೊಂಡಿದೆ ಎಂದೆನಿಸಿದಾಗ 1979ರಲ್ಲಿ ರಷ್ಯಾ ಸರಕಾರ ಮಧ್ಯಪ್ರವೇಶಿಸಿತು. ಸರಕಾರಕ್ಕೆ ಬೆಂಬಲ ನೀಡಿತು. ಇದರಿಂದ ಕೆರಳಿದ ಅಮೆರಿಕ ಅಫ್ಘಾನಿಸ್ತಾನದಲ್ಲಿ 1980ರಲ್ಲಿ ಹಸ್ತಕ್ಷೇಪ ಮಾಡಿತು. ಸೋವಿಯತ್ ಒಕ್ಕೂಟದ ವಿರುದ್ಧ ಹೋರಾಟಕ್ಕಿಳಿದ ಮುಜಾಹಿದ್ದೀನ್‌ಗಳಿಗೆ ಅಮೆರಿಕ ಸರಕಾರ ಶಸ್ತ್ರಾಸ್ತ್ರಗಳನ್ನು ಒದಗಿಸಲಾರಂಭಿಸಿತು.

ಇದು ಕೊನೆಗೆ ಅಮೆರಿಕಕ್ಕೆ ತಿರುಗುಬಾಣವಾಯಿತು. ಜಾಗತಿಕ ಭಯೋತ್ಪಾದಕ ಒಸಾಮಾ ಬಿನ್ ಲಾಡೆನ್ ನೇತೃತ್ವದಲ್ಲಿ ಅಫ್ಘಾನಿಸ್ತಾನದ ಅಲ್-ಖೈದಾ ಉಗ್ರ ಸಂಘಟನೆಯು 2001ರ ಸೆಪ್ಟೆಂಬರ್ 11ರಂದು ನ್ಯೂಯಾರ್ಕ್ ನಗರದಲ್ಲಿನ ಅವಳಿ ಬಹುಮಹಡಿ ಕಟ್ಟಡಗಳ ಮೇಲೆ ಮತ್ತು ರಕ್ಷಣಾ ಇಲಾಖೆಯ ಪೆಂಟಗನ್ ಕಚೇರಿ ಮೇಲೆ (9/11) ತೀವ್ರ ಸ್ವರೂಪದ ಭಯೋತ್ಪಾದಕ ದಾಳಿ ಮಾಡುವುದಕ್ಕೆ ಪ್ರೇರಣೆಯಾಯಿತು.

ಆನಂತರದಲ್ಲಿ ಅಮೆರಿಕ ಪೂರ್ಣ ಪ್ರಮಾಣದ ಅಫ್ಘಾನಿಸ್ತಾನ ಮೇಲೆ ಆಕ್ರಮಣ ಮಾಡಿತು. ಅಲ್-ಖೈದಾ ಉಗ್ರ ಸಂಘಟನೆಯ ನಾಶ ಮತ್ತು ತಾಲಿಬಾನ್ ಸರಕಾರದ ಪತನವನ್ನು ಗುರಿಯಾಗಿಟ್ಟುಕೊಂಡು 20 ವರ್ಷಗಳ ಕಾಲ ಅಫ್ಘಾನಿಸ್ತಾನದ ಮೇಲೆ ಆಕ್ರಮಣ ನಡೆಸಿತು.

2021ರ ಆ.30ರಂದು ಅಫ್ಘಾನಿಸ್ತಾನದಿಂದ ಅಮೆರಿಕ ತನ್ನ ಸೇನೆಯನ್ನು ಹಿಂತೆಗೆದುಕೊಂಡಿತು. ಆದರೆ, ಈ 20 ವರ್ಷಗಳ ಅವಧಿಯಲ್ಲಿ ಅಫ್ಘನ್ ನೆಲದಲ್ಲಿ ಅಮೆರಿಕದ ಸೇನಾಪಡೆಗಳು ಇನ್ನಿಲ್ಲದ ಹಿಂಸೆ, ಹಿನ್ನಡೆ ಕಂಡಿವೆ. ಮತ್ತು ಅಮೆರಿಕದ ಸೈನಿಕರೂ ನರಕ ಅನುಭವಿಸಿದ್ದಾರೆ.

2001ರ ಸೆ.11ರ ಅಲ್ ಖೈದಾದ ಭಯೋತ್ಪಾದಕ ದಾಳಿಯ ನಂತರ, ಅಮೆರಿಕ ಮತ್ತು ನ್ಯಾಟೋ ಮಿತ್ರರಾಷ್ಟ್ರಗಳ ಜಂಟಿ ಸೇನಾಪಡೆಗಳು ಅಫ್ಘಾನಿಸ್ತಾನಕ್ಕೆ ಬಂದಿಳಿದವು. ಅಲ್-ಖೈದಾ ಉಗ್ರ ಸಂಘಟನೆಯ ನಾಶ ಮತ್ತು ಅಮೆರಿಕಕ್ಕೆ ಬೇಕಾಗಿದ್ದ ಭಯೋತ್ಪಾದಕ ಒಸಾಮಾ ಬಿನ್ ಲಾಡೆನ್‌ಗೆ ಆಶ್ರಯ ನೀಡಿದ್ದ ತಾಲಿಬಾನ್ ಸರಕಾರವನ್ನು ತೆಗೆದುಹಾಕಲು 'ಆಪರೇಷನ್ ಎಂಡ್ಯೂರಿಂಗ್ ಫ್ರೀಡಂ' ಹೆಸರಲ್ಲಿ ಬೃಹತ್ ಸೇನಾ ಕಾರ್ಯಾಚರಣೆಯನ್ನು ಪ್ರಾರಂಭಿಸಿದವು. ಒಸಾಮಾ ಬಿನ್ ಲಾಡೆನ್‌ನನ್ನು ಅಮೆರಿಕದ ನೌಕಾಪಡೆ ವಿಶೇಷ ಕಮಾಂಡೊ ಪಡೆಗಳ ಯೋಧರು ಯಶಸ್ವಿ ಕಾರ್ಯಾಚರಣೆ ನಡೆಸಿ ಸಾಯಿಸಿದರು. ತಾಲಿಬಾನ್ ಸರಕಾರವೂ ಪತನವಾಯಿತು.

ನಂತರದಲ್ಲಿ ಅಫ್ಘನ್ ಜನರ ಆಡಳಿತದಲ್ಲಿ ರಾಷ್ಟ್ರ ನಿರ್ಮಾಣಕ್ಕೆ ಅಮೆರಿಕ ನೆರವಾಯಿತು. ಆದರೆ, ತಾಲಿಬಾನ್ ಬಂಡುಕೋರರು ಪುನರುಜ್ಜೀವನಗೊಂಡು ದಂಗೆ ಆರಂಭಿಸಿದರು. ಅದರ ವಿರುದ್ಧ ಅಮೆರಿಕ ಸೇನಾಪಡೆ ದೀರ್ಘ ಕಾಲ ಸಂಘರ್ಷದಲ್ಲಿ ತೊಡಗಿತು. ಇಸ್ಲಾಮಿಕ್ ರಿಪಬ್ಲಿಕ್ ಆಫ್ ಅಫ್ಘಾನಿಸ್ತಾನ ಸ್ಥಾಪನೆಯನ್ನು ಅಮೆರಿಕ ಬೆಂಬಲಿಸಿತು.

ಭಯೋತ್ಪಾದನೆ ನಿಗ್ರಹಿಸುವುದಾಗಿ ತಾಲಿಬಾನ್ ಬದ್ಧತೆ ಪ್ರದರ್ಶಿಸಿದ್ದರಿಂದ, ಅದಕ್ಕೆ ಪ್ರತಿಯಾಗಿ ತನ್ನ ಎಲ್ಲಾ ಸೇನಾಪಡೆಗಳನ್ನು ಅಫ್ಘನ್ ನೆಲದಿಂದ ವಾಪಸ್ ತೆಗೆದುಕೊಳ್ಳುವುದಾಗಿ ದೋಹಾದಲ್ಲಿ 2020ರ ಫೆಬ್ರವರಿಯಲ್ಲಿ ಡೊನಾಲ್ಡ್ ಟ್ರಂಪ್ ಆಡಳಿತ ಮತ್ತು ತಾಲಿಬಾನ್ ಗುಂಪು ಒಪ್ಪಂದಕ್ಕೆ ಸಹಿ ಹಾಕಿದವು. ಅಮೆರಿಕದ ಸೈನ್ಯ ಹಿಂತೆಗೆದುಕೊಳ್ಳುವಿಕೆ 2021ರ ಆಗಸ್ಟ್‌ನಲ್ಲಿ ಶುರುವಾಯಿತು. ಆಗ ಅಮೆರಿಕದಲ್ಲಿ ಜೋ ಬೈಡನ್ ಆಡಳಿತವಿತ್ತು. ಅಮೆರಿಕದ ಎಲ್ಲಾ ಸೈನಿಕರ ಹಿಂತೆಗೆದುಕೊಳ್ಳುವಿಕೆ ಪೂರ್ಣಗೊಂಡಿತು.

ಆ ಬಳಿಕ ಅಫ್ಘನ್‌ನಲ್ಲಿ ಮತ್ತೆ ತಾಲಿಬಾನ್ ಸರಕಾರದ ಆಡಳಿತ ಶುರುವಾಯಿತು.

ಅಫ್ಘಾನಿಸ್ತಾನದಲ್ಲಿನ 20 ವರ್ಷಗಳ ಈ ಯುದ್ಧ ಅಮೆರಿಕದ ಇತಿಹಾಸದಲ್ಲೇ ಅತ್ಯಂತ ದೀರ್ಘವಾದುದು ಎನಿಸಿಕೊಂಡಿದೆ.

ಈ ಯುದ್ಧದ ಪರಿಣಾಮವಾಗಿ ಅಮೆರಿಕದ ಸಾವಿರಾರು ಯೋಧರು ಸಾವು-ನೋವು ಕಾಣುವಂತಾಯಿತು. ಸಾವಿರಾರು ಕೋಟಿ ಡಾಲರ್ ಅಮೆರಿಕ ಸರಕಾರಕ್ಕೆ ವೆಚ್ಚವಾಗಿದೆ.

ಅಫ್ಘನ್ ವಿಚಾರದಲ್ಲಿ ಹಸ್ತಕ್ಷೇಪ ಮಾಡಿದ್ದರಿಂದ ಅಮೆರಿಕಕ್ಕೆ ಯಾವುದೇ ಲಾಭವಾಗಿಲ್ಲ. ಅಮೆರಿಕ ಇಲ್ಲಿ 20 ವರ್ಷಗಳಲ್ಲಿ ಗಳಿಸಿದ್ದಕ್ಕಿಂತ ಕಳೆದುಕೊಂಡಿದ್ದೇ ಅಧಿಕ.

ವೆನೆಜುವೆಲಾ ಅಧ್ಯಕ್ಷ ದಂಪತಿಯನ್ನೇ ಬಂಧಿಸಿ ಹೊತ್ತೊಯ್ದ ಅಮೆರಿಕ ಸೇನೆ

ವೆನೆಜುವೆಲಾ ಕಚ್ಚಾತೈಲ-ನೈಸರ್ಗಿಕ ಅನಿಲ ನಿಕ್ಷೇಪಗಳ ಸಂಪದ್ಭರಿತ ದೇಶ. ಅದರ ಮೇಲೆ ಅಮೆರಿಕದ ಕಣ್ಣು ಬಿತ್ತು. 2025ರ ವರ್ಷಾಂತ್ಯದಲ್ಲಿಯೇ ವೆನೆಜುವೆಲಾ ಮೇಲೆ ವಿವಿಧ ಬಗೆಯಲ್ಲಿ ಟ್ರಂಪ್ ಸರಕಾರದ ಒತ್ತಡ ಪ್ರಾರಂಭವಾಯಿತು. ತಿಂಗಳ ಕಾಲದ ಒತ್ತಡ ಹೇರಿದ್ದಲ್ಲದೇ ಅಮೆರಿಕದ ನೌಕಾಪಡೆ ಮೂಲಕ ವೆನೆಜುವೆಲಾದ ಬಂದರುಗಳಿಗೆ ದಿಗ್ಬಂಧನ ವಿಧಿಸಲಾಯಿತು.
ವೆನೆಜುವೆಲಾದ ತೈಲ ಸಾಗಣೆ ನೌಕೆಗಳನ್ನು ವಶಪಡಿಸಿಕೊಳ್ಳಲಾಯಿತು.
ಎಷ್ಟೇ ತಡೆ ಒಡ್ಡಿದರೂ ಅಮೆರಿಕಕ್ಕೆ ವೆನೆಜುವೆಲಾ ಮಾದಕದ್ರವ್ಯ ಸರಬರಾಜು ಮಾಡುತ್ತಿದೆ. ಅಮೆರಿಕದ ಯುವಜನರ ಬದುಕನ್ನು ನರಕವಾಗಿಸುತ್ತಿದೆ ಎಂದು ಆರೋಪಿಸಿದ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, 2026ರ ಜನವರಿಯಲ್ಲಿ ವೆನೆಜುವೆಲಾ ಮೇಲೆ 'ಆಪರೇಷನ್ ಅಬ್ಸಲ್ಯೂಟ್ ರೆಸೊಲ್ವ್' ಹೆಸರಲ್ಲಿ ಸೇನಾ ಕಾರ್ಯಾಚರಣೆ ನಡೆಸಿದರು.
ವೆನೆಜುವೆಲಾ ರಾಜಧಾನಿ ನಗರ ಕ್ಯಾರಾಕಾಸ್ ಮೇಲೆ ಯುಎಸ್ ನೌಕಾಪಡೆಯ ನುರಿತ ಯೋಧರ ತಂಡ ದಾಳಿ ಮಾಡಿತು. ವಿಶೇಷ ಹೆಲಿಕಾಪ್ಟರ್‌ಗಳಲ್ಲಿ ತೆರಳಿದ ಅಮೆರಿಕದ ಕಮಾಂಡೊಗಳ ತಂಡ, ವೆನೆಜುವೆಲಾ ಅಧ್ಯಕ್ಷರ ಅಧಿಕೃತ ನಿವಾಸದ ತಾರಸಿಯಲ್ಲಿಯೇ ಇಳಿಯಿತು. ಆಗ ಅಧ್ಯಕ್ಷರಾಗಿದ್ದ ನಿಕೋಲಸ್ ಮಡುರೊ ಮತ್ತು ಪತ್ನಿ ಸಿಲಿಯಾ ಫ್ಲೋರ್ಸ್ ಅವರನ್ನು ನಿದ್ರಿಸುತ್ತಿರುವಾಗಲೇ ಸೆರೆಹಿಡಿದು, ಕೈಕೋಳ ತೊಡಿಸಿ ಅಮೆರಿಕಕ್ಕೆ ಹೊತ್ತೊಯ್ದಿತು. ಅಮೆರಿಕಕ್ಕೆ ಮಾದಕ ದ್ರವ್ಯ ಕಳ್ಳಸಾಗಣೆ ಮತ್ತು ಭಯೋತ್ಪಾದನೆ ಚಟುವಟಿಕೆ ಆರೋಪಗಳನ್ನು ಹೊರಿಸಿ ನ್ಯೂಯಾರ್ಕ್ ನ್ಯಾಯಾಲಯದಲ್ಲಿ ಹಾಜರುಪಡಿಸಿ ಬಳಿಕ ಜೈಲಿಗೆ ಅಟ್ಟಿದೆ.
ಮಡುರೊ ಸೆರೆಹಿಡಿದ ನಂತರ, ವೆನೆಜುವೆಲಾದ ಉಪಾಧ್ಯಕ್ಷ ಡೆಲ್ಸಿ ರೊಡ್ರಿಗಸ್ ಮಧ್ಯಂತರ ಅಧ್ಯಕ್ಷರಾಗಿ ಪ್ರಮಾಣವಚನ ಸ್ವೀಕರಿಸಿದರು. ಟ್ರಂಪ್ ಆಡಳಿತವು ವೆನೆಜುವೆಲಾದ ವಿಶಾಲ ತೈಲ ನಿಕ್ಷೇಪಗಳ ಮೇಲೆ ನಿಯಂತ್ರಣ ಸಾಧಿಸುವ ಉದ್ದೇಶದೊಂದಿಗೆ ಅಮೆರಿಕದ ದಿಗ್ಗಜ ತೈಲ ಸಂಸ್ಕರಣಾ ಕಂಪನಿಗಳನ್ನು ವೆನೆಜುವೆಲಾಗೆ ಕಳುಹಿಸಿಕೊಟ್ಟಿದೆ. ಇದು ಭೌಗೋಳಿಕವಾಗಿ ಮತ್ತು ರಾಜಕೀಯವಾಗಿ ಗಮನಾರ್ಹ ಉದ್ವಿಗ್ನತೆ ಉಂಟುಮಾಡಿದೆ. ಖಂಡನೆ: ವೆನೆಜುವೆಲಾದಲ್ಲಿ ಅಮೆರಿಕದ ಹಸ್ತಕ್ಷೇಪವನ್ನು ಚೀನಾ, ರಷ್ಯಾ ಮತ್ತು ಇರಾನ್ ಸೇರಿದಂತೆ ಹಲವಾರು ದೇಶಗಳು ಬಲವಾಗಿ ಖಂಡಿಸಿವೆ. ವೆನೆಜುವೆಲಾದ ಸಾರ್ವಭೌಮತ್ವಕ್ಕೆ ಧಕ್ಕೆಯಾಗಿದೆ, ಅಂತಾರಾಷ್ಟ್ರೀಯ ಕಾನೂನಿನ ಉಲ್ಲಂಘನೆಯಾಗಿದೆ ಎಂದು ದೂರಿವೆ.

ಟಾಪ್ 10 ಅಧ್ಯಕ್ಷರು

ಅಮೆರಿಕದ ಈ 10 ಮಂದಿ ಜನ ಅಧ್ಯಕ್ಷರು ಅಮೆರಿಕದ ಇತಿಹಾಸವನ್ನು ಮಾತ್ರವಲ್ಲದೆ, ಇಡೀ ವಿಶ್ವದ ರಾಜಕಾರಣ ಮತ್ತು ಚರಿತ್ರೆಯ ದಿಕ್ಕನ್ನೇ ಬದಲಿಸಿದ ನಾಯಕರಾಗಿದ್ದಾರೆ.

ಜಾರ್ಜ್ ವಾಷಿಂಗ್ಟನ್ (1789-1797)

ಅಮೆರಿಕದ ಮೊದಲ ಅಧ್ಯಕ್ಷ ಮತ್ತು ರಾಷ್ಟ್ರಪಿತ. ವನಿಜುವೆಲಾ ಮೂಲದ ವಾಷಿಂಗ್ಟನ್ ತಾತ ಬ್ರಿಟನ್‌ನಿಂದಲೇ ಅಮೆರಿಕಕ್ಕೆ ವಲಸೆ ಬಂದಿದ್ದರು. ಬ್ರಿಟಿಷರ ವಿರುದ್ಧದ ಸ್ವಾತಂತ್ರ್ಯ ಸಂಗ್ರಾಮ ದಲ್ಲಿ ಸೇನಾ ದಂಡನಾಯಕರಾಗಿ ಯಶಸ್ಸು ತಂದುಕೊ ಟ್ಟದ್ದಲ್ಲದೆ ಸಂವಿಧಾನ ಮತ್ತು ಅಧ್ಯಕ್ಷೀಯ ವ್ಯವಸ್ಥೆಗೆ ಬಲವಾದ ಅಡಿಪಾಯ ಹಾಕಿದ ಕೀರ್ತಿ ಇವರಿಗೆ ಸಲ್ಲುತ್ತದೆ.

ಥಾಮಸ್ ಜೆಫರ್ಸನ್ (1801-1809)



ಅಮೆರಿಕದ ಸ್ವಾತಂತ್ರ್ಯದ ಬೆನ್ನಿಗೇ 1803ರಲ್ಲಿ ಅಧ್ಯಕ್ಷ ಥಾಮಸ್ ಜೆಫರ್ಸನ್ ಫ್ರಾನ್ಸ್‌ನ ನೆಪೋಲಿಯನ್‌ನಿಂದ ಲೂಸಿಯಾನದ ಬೃಹತ್ ಭೂಪ್ರದೇಶವನ್ನು ಕೇವಲ 15 ಮಿಲಿಯ ಡಾಲರ್‌ಗೆ ಖರೀದಿಸಿದರು. ಈ ಒಪ್ಪಂದ ಅಮೆರಿಕದ ಭೂಪ್ರದೇಶವನ್ನು ರಾತ್ರೋರಾತ್ರಿ ದುಪ್ಪಟ್ಟುಗೊಳಿಸಿತು.

ಅಬ್ರಹಾಂ ಲಿಂಕನ್ (1861- 1865)



ಅಮೆರಿಕದ ಇತಿಹಾಸದಲ್ಲೇ ಅತ್ಯಂತ ಕಠಿಣವಾಗಿದ್ದ ಅಂತರ್ಯುದ್ಧದ ಸಮಯದಲ್ಲಿ ದೇಶ ಒಡೆಯದಂತೆ ರಕ್ಷಿಸಿದ ಲಿಂಕನ್, ಗುಲಾಮಗಿರಿ ಪದ್ಧತಿಯನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡಿ, ಮಾನವ ಹಕ್ಕುಗಳ ಇತಿಹಾಸದಲ್ಲಿ ಹೊಸ ಭಾಷ್ಯ ಬರೆದರು. ಇದೇ ಕಾರಣಕ್ಕೆ ಹುತಾತ್ಮರಾದರು.

ಥಿಯೋಡರ್ ರೂಸ್‌ವೆಲ್ಟ್ (1901-1909)

ಅಮೆರಿಕವನ್ನು ಆಧುನಿಕ ಕೈಗಾರಿಕಾ ಯುಗಕ್ಕೆ ದಾಟಿಸಿದ ನಾಯಕ. ಪ್ರಕೃತಿ ಮತ್ತು ವನ್ಯಜೀವಿ ಸಂರಕ್ಷಣೆಗಾಗಿ ರಾಷ್ಟ್ರೀಯ ಉದ್ಯಾನವನಗಳನ್ನು ನಿರ್ಮಿಸಿದ್ದಲ್ಲದೆ, ಜಾಗತಿಕ ವ್ಯಾಪಾರಕ್ಕೆ ದಾರಿಯಾದ ಪನಾಮ ಕಾಲುವೆ ನಿರ್ಮಾಣದಲ್ಲಿ ಪ್ರಮುಖ ಪಾತ್ರ ವಹಿಸಿದರು.

ವುಡ್ರೋ ವಿಲ್ಸನ್ (1913-1921)

ಮೊದಲ ಮಹಾಯುದ್ಧದ ಸಮಯದಲ್ಲಿ ಅಮೆರಿಕವನ್ನು ಯಶಸ್ವಿಯಾಗಿ ಮುನ್ನಡೆಸಿದ ವಿಲ್ಸನ್ ಜಾಗತಿಕ ಶಾಂತಿಗಾಗಿ 'ಲೀಗ್ ಆಫ್ ನೇಷನ್ಸ್' ಸ್ಥಾಪನೆಗೆ ಕಾರಣರಾದರು. ಇವರ ಆರ್ಥಿಕ ಸುಧಾರಣೆಗಳು ದೇಶದ ಬ್ಯಾಂಕಿಂಗ್ ವ್ಯವಸ್ಥೆಯನ್ನು ಬಲಪಡಿಸಿದವು.

ಫ್ರಾಂಕ್ಲಿನ್ ಡಿ. ರೂಸ್‌ವೆಲ್ಟ್ (1933-1945)

ಆರ್ಥಿಕ ಕುಸಿತದಿಂದ ತತ್ತರಿಸಿದ್ದ ಅವಧಿಯಲ್ಲಿ ದೇಶವನ್ನು ಮೇಲೆತ್ತಲು 'ನ್ಯೂ ಡೀಲ್' ಯೋಜನೆ ಜಾರಿಗೆ ತಂದರು. 2ನೇ ಮಹಾಯುದ್ಧದಲ್ಲಿ ಮಿತ್ರಪಡೆಗಳ ನೇತೃತ್ವ ವಹಿಸಿ ಜಯ ತಂದುಕೊಟ್ಟದ್ದಲ್ಲದೆ, ವಿಶ್ವಸಂಸ್ಥೆಯ ಸ್ಥಾಪನೆಗೆ ಬುನಾದಿ ಹಾಕಿದ್ದು ರೂಸ್‌ವೆಲ್ಟ್ ಸಾಧನೆ. ಸತತ ನಾಲ್ಕು ಬಾರಿ ಅಧ್ಯಕ್ಷರಾಗಿ ಆಯ್ಕೆಯಾದ ಏಕೈಕ ನಾಯಕ.

ಹ್ಯಾರಿ ಎಸ್.ಟ್ರೂಮನ್ (1945-1953)

2ನೇ ಮಹಾಯುದ್ಧ ಅಂತ್ಯಗೊಳಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ ಟ್ರೂಮನ್, ಯುದ್ಧದಿಂದ ಜರ್ಜರಿತವಾಗಿದ್ದ ಯುರೋಪ್ ಖಂಡವನ್ನು ಮರುನಿರ್ಮಾಣ ಮಾಡಲು 'ಮಾರ್ಷಲ್ ಪ್ಲಾನ್' ಜಾರಿಗೆ ತಂದರು. ಕಮ್ಯುನಿಸಂ ತಡೆಯಲು ಮತ್ತು ಶೀತಲ ಸಮರದ ಕಾಲದಲ್ಲಿ ಅಮೆರಿಕದ ಪ್ರಭಾವ ಕಾಯ್ದುಕೊಳ್ಳಲು ಶ್ರಮಿಸಿದವರು.

ಡ್ವೈಟ್ ಡಿ.ಐಸೆನ್ ಹೋವರ್ (1953-1961)

ಎರಡನೇ ಮಹಾಯುದ್ಧದ ಸೇನಾಪತಿಯಾಗಿದ್ದ ಐಸೆನ್‌ಹೋವರ್ ಅಧ್ಯಕ್ಷರಾದ ಮೇಲೆ 'ಇಂಟರ್‌ಸ್ಟೇಟ್ ಹೈವೇ ಸಿಸ್ಟಮ್' (ರಾಷ್ಟ್ರೀಯ ಹೆದ್ದಾರಿ ಜಾಲ) ನಿರ್ಮಿಸಿ ಸಾರಿಗೆ ಕ್ರಾಂತಿ ಮಾಡಿದರು. ಬಾಹ್ಯಾಕಾಶ ಸಂಶೋಧನಾ ಸಂಸ್ಥೆ ನಾಸಾ ಇವರ ಕಾಲದಲ್ಲೇ ಸ್ಥಾಪನೆಯಾಯಿತು.

ಜಾನ್ ಎಫ್. ಕೆನಡಿ (1961-1963)

ಕ್ಯೂಬಾ ಕ್ಷಿಪಣಿ ಬಿಕ್ಕಟ್ಟನ್ನು ಚಾಣಾಕ್ಷತನದಿಂದ ನಿಭಾಯಿಸಿ 3ನೇ ಮಹಾಯುದ್ಧ ತಪ್ಪಿಸಿದ ಕೆನಡಿ, ನಾಗರಿಕ ಹಕ್ಕುಗಳ ಹೋರಾಟಕ್ಕೆ ಸಾಥ್ ನೀಡಿದರು. ಮಾನವನನ್ನು ಚಂದ್ರನಲ್ಲಿಗೆ ಕಳುಹಿಸುವ 'ಅಪೊಲೊ ಮಿಷನ್'ಗೆ ಚಾಲನೆ ನೀಡಲಾಯಿತು.

ರೊನಾಲ್ಡ್ ರೇಗನ್ (1981- 1989)

ಸೋವಿಯತ್ ಒಕ್ಕೂಟದೊಂದಿಗಿನ ಶೀತಲ ಸಮರವನ್ನು ಮಾತುಕತೆಗಳ ಮೂಲಕ ಅಂತ್ಯಗೊಳಿ ಸುವಲ್ಲಿ ಮತ್ತು ಬರ್ಲಿನ್ ಗೋಡೆ ಉರುಳಿಸುವಲ್ಲಿ ರೇಗನ್ ಪಾತ್ರ ಹಿರಿದಾಗಿತ್ತು.

₹6 @vishwavaninews epaper.vishwavani.news vishwavani.news ಶನಿವಾರ 04.07.2026

ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ
ವಿಶ್ವಾಸವೇ ವಿಶ್ವ

ಅಂಜನಾದ್ರಿಯಲ್ಲಿ ದ್ರಾವಿಡ್ ದಂಪತಿ

ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನ ಹನುಮಂತನ ಜನ್ಮಸ್ಥಳ ಅಂಜನಾದ್ರಿ ಬೆಟ್ಟಕ್ಕೆ ಭಾರತ ಕ್ರಿಕೆಟ್ ದಿಗ್ಗಜ ರಾಹುಲ್ ದ್ರಾವಿಡ್, ಪತ್ನಿ ಡಾ.ವಿಜೇತಾ ಜೊತೆಗೆ ಶುಕ್ರವಾರ ಭೇಟಿ ನೀಡಿದರು. ವಿಶ್ವವಿಖ್ಯಾತ ಹಂಪಿ ಪ್ರವಾಸದಲ್ಲಿರುವ ದ್ರಾವಿಡ್, ಬೆಟ್ಟದ 575 ಮೆಟ್ಟಿಲುಗಳನ್ನು ಏರಿ ಹನುಮಂತನ ದರ್ಶನ ಪಡೆದರು. ಈ ವೇಳೆ ಅರ್ಚಕರು ಶಾಲು ಹೊದಿಸಿ ದ್ರಾವಿಡ್ ದಂಪತಿಯನ್ನು ಸನ್ಮಾನಿಸಿದರು.

ಸೊಂಪಾದ ಪುಟಗಳು

ದಶಕದಲ್ಲಿ ಬದಲಾದ ಭಾರತೀಯ ರೈಲ್ವೆ
ವೀಕೆಂಡ್ ವಿತ್ ಮೋಹನ್ – ಮೋಹನ್ ವಿಶ್ವ 6

ದೇಶದ ಮಾನ ಉಳಿಸಲು ಚಿನ್ನ ಅಡವಿಟ್ಟ ರಾತ್ರಿ
ಅಮೃತಕಾಲ – ಲೀನಾ ಜೋಶಿ 7

ದಾರಿದೀಪೋಕ್ತಿ

ಅಧಿಕಾರ, ಹುದ್ದೆ ಮತ್ತು ಪ್ರಶಸ್ತಿಗಳು ಕೇವಲ ತಾತ್ಕಾಲಿಕವಾಗಿದ್ದು, ಕಾಲಾನಂತರದಲ್ಲಿ ಮಸುಕಾಗುತ್ತವೆ. ಆದರೆ, ನಾವು ಇತರರನ್ನು ಗೌರವದಿಂದ ನಡೆಸಿಕೊಳ್ಳುವ ರೀತಿ ಮತ್ತು ನಮ್ಮ ಒಳ್ಳೆಯ ನಡೆವಳಿಕೆ ಮಾತ್ರ ಜನರ ಮನಸ್ಸಿನಲ್ಲಿ ಎಂದೆಂದಿಗೂ ಶಾಶ್ವತವಾಗಿ ಅಚ್ಚಳಿಯದೇ ಉಳಿಯುತ್ತದೆ

ವಕ್ರತುಂಡೋಕ್ತಿ

ಬೇರೆಯವರ ತಪ್ಪು ಹುಡುಕಲು ಜನ ಸಿಗುವಷ್ಟು ಸ್ಪೀಡ್ ಆಗಿ, ಗೂಗಲ್‌ನಲ್ಲೂ ರಿಸಲ್ಟ್ ಸಿಗಲ್ಲ.

ಗೃಹಜ್ಯೋತಿಗೆ ಜಾತಿ ಪ್ರಮಾಣ ಪತ್ರ ಕಡ್ಡಾಯವಲ್ಲ

ಬೆಂಗಳೂರು: ರಾಜ್ಯಾದ್ಯಂತ ಜುಲೈ 1ರಿಂದ ಆರಂಭಗೊಂಡಿರುವ ಗೃಹ ಜ್ಯೋತಿ ಯೋಜನೆಯ ಮಾಹಿತಿ ಸಂಗ್ರಹಕ್ಕೆ ಸಂಬಂಧಿಸಿದಂತೆ ಫಲಾನುಭವಿಯ ಪ್ರವರ್ಗ ಕುರಿತು ಕೇಳಿರುವ ಮಾಹಿತಿ ಕಡ್ಡಾಯವಲ್ಲ ಎಂದು ಬೆಸ್ಕಾಂ ಸ್ಪಷ್ಟಪಡಿಸಿದೆ. ಬೆಸ್ಕಾಂನ ಸಿಬ್ಬಂದಿ ಹಾಗೂ ಮೀಟರ್ ರೀಡರ್‌ಗಳು ಸೇವಾ ಸಿಂಧು ಮೊಬೈಲ್ ಅಪ್ಲಿಕೇಷನ್ ಹಾಗೂ ಮುದ್ರಿತ ಘೋಷಣಾ ಪತ್ರದ ಮೂಲಕ ಮಾಹಿತಿಯನ್ನು ಗೃಹ ಫಲಾನುಭವಿಗಳ ಮನೆಗೆ ತೆರಳಿ ಕಲೆ ಹಾಕುತ್ತಿದ್ದಾರೆ. ಫಲಾನುಭವಿಯ ಜಾತಿ ಪ್ರಮಾಣಪತ್ರ ಸಂಬಂಧಿಸಿದ ಮಾಹಿತಿ ನೀಡುವುದು ಐಚ್ಛಿಕ ಎಂದು ಬೆಸ್ಕಾಂ ತಿಳಿಸಿದೆ. ಫಲಾನುಭವಿಗಳ ಜಾತಿ ಪ್ರಮಾಣಪತ್ರಕ್ಕೆ ಸಂಬಂಧಿಸಿದಂತೆ ಬಂದಿರುವ ಪ್ರಶ್ನೆಗೆ ಸಂಬಂಧಿಸಿದಂತೆ ಬೆಸ್ಕಾಂ ಈ ಸ್ಪಷ್ಟನೆ ನೀಡಿದೆ. ಮಾಹಿತಿ ನೀಡಲು ಇಷ್ಟವಿಲ್ಲದಿದ್ದರೆ ಆ್ಯಪ್‌ನಲ್ಲಿರುವ 'ಮಾಹಿತಿ ನೀಡಲು ನಿರಾಕರಣೆ' ಎಂಬ ಆಯ್ಕೆ ಬಳಸಬಹುದು.

ಏರ್ ಇಂಡಿಯಾ ಸೆಸ್ ಕಡಿತ

ದೆಹಲಿ: ಪಶ್ಚಿಮ ಏಷ್ಯಾ ಬಿಕ್ಕಟ್ಟು ಭುಗಿಲೆದ್ದ ನಂತರ ವಿಮಾನ ಇಂಧನ ದರ ಹೆಚ್ಚಿದ್ದರಿಂದ, ಪ್ರಯಾಣ ದರವೂ ದುಬಾರಿಯಾಗಿತ್ತು. ಇದರಿಂದ ಪ್ರಯಾಣಿಕರಿಗೆ ಮುಕ್ತಿ ಸಿಗುವ ಸಾಧ್ಯತೆಯಿದೆ. ವಿಮಾನ ದರದ ನಿರ್ಣಾಯಕ ಅಂಶವಾದ ಇಂಧನ ಸರ್ಚಾರ್ಜ್ ಸೆಸ್ ಅನ್ನು ಜುಲೈ 1ರಿಂದ ಏರ್ ಇಂಡಿಯಾ ಕಡಿಮೆ ಮಾಡಿದೆ. ಇತರೆ ವಿಮಾನ ಯಾನ ಸಂಸ್ಥೆಗಳೂ ಈ ದಾರಿಯನ್ನು ಅನುಸರಿಸಬಹುದು. ಜೂನ್ 30ರಂದು ಕಚ್ಚಾ ತೈಲ ಬೆಲೆಗಳು ಪ್ರತಿ ಬ್ಯಾರೆಲ್‌ಗೆ 6,666 ರು.ಗಿಂತ ಕಡಿಮೆ ಆಗಿದೆ. ಆದ್ದರಿಂದ ಕೆಲವು ಮಾರ್ಗಗಳಿಗೆ ಸರ್ಚಾರ್ಜ್ ಕಡಿಮೆ ಮಾಡಿದ್ದರಿಂದ ಕನಿಷ್ಠ ಪಕ್ಷ 10,000 ರು. ಆದರೂ ಗ್ರಾಹಕರಿಗೆ ಉಳಿಯುವ ನಿರೀಕ್ಷೆಯಿದೆ.

ಫನ್‌ತರಂಗ
- ರಘುಪತಿ ಶೃಂಗೇರಿ -

ರಾಮಮಂದಿರದ ಹುಂಡಿಯ ಮೇಲೆ ಕ್ಯೂ ಆರ್ ಕೋಡ್ ಬಳಸಿ ಅಕ್ರಮ ಎಸಗಿದ ಖದೀಮರು.



ಮತಪಟ್ಟಿ ಪರಿಷ್ಕರಣೆಯಲ್ಲಿ ಕಾಂಗ್ರೆಸ್‌ನಿಂದ ಅಕ್ರಮ: ಬಿಜೆಪಿ, ಜೆಡಿಎಸ್ ಕಿಡಿ
ಮಸೀದಿ, ಸಮುದಾಯ ಭವನಗಳಲ್ಲೂ ಮತದಾರರ ನಮೂನೆ ಭರ್ತಿ: ಆರೋಪ

ಎಸ್‌ಐಆರ್ ದಂಗಲ್

ಮನೆಮನೆ ಭೇಟಿ ಕಡ್ಡಾಯ: ಬಿಎಲ್‌ಒಗಳಿಗೆ ಆಯೋಗ ಕಟ್ಟುನಿಟ್ಟಿನ ಸೂಚನೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯಾದ್ಯಂತ ನಡೆಯುತ್ತಿರುವ ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆ (ಎಸ್‌ಐಆರ್) ಆಕ್ರೋಶಕ್ಕೆ ಕಾರಣವಾಗಿದ್ದು, ಅಕ್ರಮಪಟ್ಟಿ ತಯಾರು ಮಾಡಲು ರಾಜ್ಯ ಸರಕಾರ ಮುಂದಾಗಿದೆ ಎಂದು ಪ್ರತಿಪಕ್ಷಗಳು ಆರೋಪಿಸಿ ಕೆಲವು ದಾಖಲೆಗಳನ್ನು ಬಿಡುಗಡೆ ಮಾಡಿವೆ. ಈ ನಡುವೆ ಮನೆ ಮನೆಗೆ ತೆರಳಿಯೇ ಎಸ್‌ಐಆರ್ ಅರ್ಜಿ ವಿತರಿಸುವಂತೆ ಬಿಎಲ್‌ಒಗಳಿಗೆ ರಾಜ್ಯ ಚುನಾವಣಾ ಆಯೋಗ ಕಟ್ಟುನಿಟ್ಟಿನ ಸೂಚನೆ ನೀಡಿದರೂ, ಅಲ್ಲಲ್ಲಿ ಅಕ್ರಮ ನಡೆಯುತ್ತಿರುವುದು ಕಂಡು ಬಂದಿದ್ದು, ಆರೋಪ-ಪ್ರತ್ಯಾರೋಪಕ್ಕೆ ಕಾರಣ ವಾಗಿದೆ.

ಪ್ರಕ್ರಿಯೆಯ ಆರಂಭಿಕ ಹಂತದಲ್ಲೇ ಗೊಂದಲ ಹಾಗೂ ಅವ್ಯವಸ್ಥೆ ಕಂಡು ಬರುತ್ತಿದೆ. ಅಕ್ರಮ ಪಟ್ಟಿ ತಯಾರಿಸಲು ಕಾಂಗ್ರೆಸ್, ಬಾಂಗ್ಲಾದೇಶದ ಅಲ್ಪಸಂಖ್ಯಾತರನ್ನು ಬಳಸಿಕೊಳ್ಳುತ್ತಿದೆ ಎಂದು ಬಿಜೆಪಿ ಆರೋಪಿಸಿದ್ದು, ಆಡಳಿತ ಯಂತ್ರವನ್ನು ಸಂಪೂರ್ಣವಾಗಿ ದುರುಪಯೋಗ ಮಾಡಿಕೊಳ್ಳುತ್ತಿದೆ ಎಂದು ಜೆಡಿಎಸ್ ಟೀಕಿಸಿದೆ. ಅಲ್ಲದೆ, ಕೆಲ ಜಿಲ್ಲಾಧಿಕಾರಿಗಳು ರಾಜ್ಯ ಸರಕಾರದ ತಾಳಕ್ಕೆ ತಕ್ಕಂತೆ ಕುಣಿಯುತ್ತಿದ್ದಾರೆ ಎಂದು ಅಕ್ರಮವಾಗಿ ನಡೆಯುತ್ತಿರುವ ಪ್ರಕ್ರಿಯೆಯ ವಿಡಿಯೋವನ್ನು ಬಿಡುಗಡೆ ಮಾಡಿದೆ. ಆದರೆ ಎಸ್‌ಐಆರ್ ನಡೆಸುವುದು ಆಯೋಗದ ಜವಾಬ್ದಾರಿ. ಮತದಾನದ ಹಕ್ಕನ್ನು ಕಸಿದುಕೊಂಡಿರುವುದೇ ಬಿಜೆಪಿ ಎಂದು ರಾಜ್ಯ ಕಾಂಗ್ರೆಸ್ ಹೇಳಿದೆ. ಈ ನಡುವೆ ಕಳೆದ ಬಾರಿ ಮತ ಚಲಾಯಿಸಿದ್ದರೂ ಕೆಲವರ ಹೆಸರುಗಳು ಈ ಬಾರಿಯ ಪಟ್ಟಿಯಲ್ಲಿ ಕಾಣದಿರುವುದರಿಂದ ಸಾರ್ವಜನಿಕರಿಂದ ಆಕ್ರೋಶವೂ ವ್ಯಕ್ತವಾಗಿದೆ. ರಾಜ್ಯದ ವಿವಿಧ ಕಡೆಗಳಲ್ಲಿ ಬಿಎಲ್‌ಒಗಳು ನಿಗದಿತ ಸರಕಾರಿ ಕಚೇರಿಗಳಲ್ಲಿ ಕೆಲಸ ಮಾಡುವ ಬದಲು, ಖಾಸಗಿ ಸ್ಥಳಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವುದು ಕಂಡು ಬಂದಿದೆ. ವಿಶೇಷವಾಗಿ ಮಸೀದಿಗಳು ಮತ್ತು ಖಾಸಗಿ ಕಲ್ಯಾಣ ಮಂಟಪಗಳನ್ನು ಬಿಎಲ್‌ಒಗಳು ತಮ್ಮ ಕಚೇರಿಯನ್ನಾಗಿ ಬಳಸಿಕೊಳ್ಳುತ್ತಿರುವುದು ಗಂಭೀರ ಆಕ್ಷೇಪಕ್ಕೆ ಕಾರಣವಾಗಿದೆ. ಮತದಾರರ ಪಟ್ಟಿಯಂತಹ ಸೂಕ್ಷ್ಮ ದಾಖಲೆಗಳನ್ನು ಸರಕಾರಿ ಕಚೇರಿಯ ಹೊರಗೆ ಕೊಂಡೊಯ್ದು, ಖಾಸಗಿ ವ್ಯಕ್ತಿಗಳ ಸಹಭಾಗಿತ್ವದಲ್ಲಿ ಪರಿಷ್ಕರಣೆ ಮಾಡುತ್ತಿರುವುದು ಅನುಮಾನಗಳಿಗೆ ದಾರಿ ಮಾಡಿಕೊಟ್ಟಿದೆ.

→ 8

> ಎಸ್‌ಐಆರ್ ಪ್ರಕ್ರಿಯೆಯಲ್ಲಿ ರಾಜ್ಯ ಸರಕಾರದ ನೇರ ಹಸ್ತಕ್ಷೇಪ ಮತ್ತು ರಾಜಕೀಯ ಪ್ರಭಾವ ಎದ್ದು ಕಾಣುತ್ತಿದೆ. ಇದು ಪ್ರಜಾಪ್ರಭುತ್ವದ ಆಶಯಕ್ಕೆ ದ್ರೋಹ ಬಗೆದಂತೆ. ಈ ಬೃಹತ್ ಹಗರಣದ ಹಿಂದೆ ಯಾರ ಹಿತಾಸಕ್ತಿ ಅಡಗಿದೆ? ಎಂಬುದನ್ನು ಪತ್ತೆ ಹಚ್ಚಬೇಕು. ಜನಸಾಮಾನ್ಯರ ಧ್ವನಿ ಹತ್ತಿಕ್ಕಲು ನಡೆಸುತ್ತಿರುವ ಈ ವ್ಯವಸ್ಥಿತ ಪಿತೂರಿಯ ವಿರುದ್ಧ ತಕ್ಷಣವೇ ತನಿಖೆಯಾಗಬೇಕು.
> -**ಪ್ರಲ್ಹಾದ ಜೋಶಿ**, ಕೇಂದ್ರ ಸಚಿವ

> ವಿರೋಧ ಪಕ್ಷದವರ ಹೇಳಿಕೆಯಲ್ಲಿ ಯಾವುದೇ ಹುರುಳಿಲ್ಲ. ಎಸ್‌ಐಆರ್ ಬಂದು ಲಕ್ಷಾಂತರ ಜನರ ಮತದಾನದ ಹಕ್ಕನ್ನು ಕಸಿದುಕೊಂಡಿದೆ. ಮತದಾನದ ಹಕ್ಕನ್ನು ಕಳೆಯುವ ಕೆಲಸ ಬಿಜೆಪಿ ಮಾಡಿದೆ. ಯಾರು ಕೂಡ ಮತದಾನದ ಹಕ್ಕನ್ನು ಕಳೆದುಕೊಳ್ಳದಂತೆ ಚುನಾವಣಾ ಆಯೋಗ ನಿಗಾ ವಹಿಸಬೇಕಿತ್ತು.
> -**ಯತೀಂದ್ರ ಸಿದ್ದರಾಮಯ್ಯ**, ಸಚಿವ

ಬಾಂಗ್ಲನ್ನರನ್ನು ಸೇರಿಸಲು ಯತ್ನ

ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಕೇಂದ್ರ ಚುನಾವಣಾ ಆಯೋಗಕ್ಕೆ ಎರಡು ಪತ್ರ ಬರೆದಿದ್ದು, ಜಿಬಿಎನ 27 ವಾರ್ಡ್‌ಗಳಲ್ಲಿ ಎರಡೆರಡು ಎಸ್‌ಐಆರ್ ನಡೆಯುತ್ತಿದೆ. ರಾಹುಲ್ ಗಾಂಧಿ ಅವರನ್ನು ತೃಪ್ತಿಪಡಿಸಲು ಕಾಂಗ್ರೆಸ್ ಈ ಕೆಲಸ ಮಾಡುತ್ತಿದೆ. ರಾಜ್ಯ ಚುನಾವಣಾ ಆಯೋಗ ಇನ್ನೊಂದು ಎಸ್‌ಐಆರ್ ಮಾಡುತ್ತಿದೆ ಎಂದಿದ್ದಾರೆ. ಅಲ್ಲದೆ, 8 ವರ್ಷಗಳ ಹಿಂದೆ ರೈಲಿನಲ್ಲಿ ಯುವಕರನ್ನು ವೋಟ್ ಹಾಕಿಸಲು ಕರೆತಂದಿದ್ದರು. ಆ ಅಕ್ರಮ ಬಾಂಗ್ಲಾದೇಶಿ ಮತದಾರರನ್ನು ಸಕ್ರಮ ಮಾಡಲು ಕಾಂಗ್ರೆಸ್ ಮುಂದಾಗಿದೆ ಎಂದು ಆರೋಪಿಸಿದ್ದಾರೆ.

ಜೆಡಿಎಸ್ ವಿಡಿಯೋ ಬಿಡುಗಡೆ

ಬೆಂಗಳೂರು ನಗರದ ಯಶವಂತಪುರ ವಿಧಾನಸಭೆ ಕ್ಷೇತ್ರದಲ್ಲಿ ನಡೆಯುತ್ತಿರುವ ಎಸ್‌ಐಆರ್ ಪ್ರಕ್ರಿಯೆಯ ಅಕ್ರಮವನ್ನು ವಿಡಿಯೋ ದಾಖಲೆಗಳನ್ನು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಬಿಡುಗಡೆ ಮಾಡಿದ್ದಾರೆ. ಈ ಸರಕಾರವು ಅಧಿಕಾರಿಗಳನ್ನು ಗುಲಾಮರಂತೆ ನಡೆಸಿಕೊಳ್ಳುತ್ತದೆ. ಅವರನ್ನು ಹೆದರಿಸಿ ಬೆದರಿಸಿ ತನಗೆ ಬೇಕಾದ ಹಾಗೆ ಎಸ್‌ಐಆರ್ ಮಾಡಿಸಿಕೊಳ್ಳುತ್ತಿದೆ ಎಂದು ಆರೋಪಿಸಿದ್ದಾರೆ.

ಇರಾನ್ ನಿಯೋಗದ ಹತ್ಯೆಗೆ ಸಂಚು
ಅಮೆರಿಕದಿಂದಲೇ ಗುಪ್ತಚರ ಮಾಹಿತಿ

ಶಾಂತಿ ಒಪ್ಪಂದಕ್ಕೆ ಚೂರಿ ಹಾಕಲು ಇಸ್ರೇಲ್ ಯತ್ನ

ವಾಷಿಂಗ್ಟನ್: ಅಮೆರಿಕ-ಇರಾನ್ ಶಾಂತಿ ಮಾತುಕತೆಗೆ ಬಲವಾದ ಹೆಜ್ಜೆ ಇಟ್ಟಿರುವ ಬೆನ್ನಲ್ಲೇ, ಅಮೆರಿಕ ಪ್ರಮುಖ ಮಿತ್ರ ದೇಶ ಇಸ್ರೇಲ್ ಅದಕ್ಕೆ ಬಲವಾದ ಅಡ್ಡಿ ಮಾಡುತ್ತಿದೆ ಎನ್ನಲಾಗಿದೆ. ಇರಾನ್‌ನ ಪ್ರಮುಖ ಸಂಧಾನಕಾರರನ್ನೇ ಹತ್ಯೆಗೈಯಲು ಇಸ್ರೇಲ್ ಸಂಚು ರೂಪಿಸಿದೆ ಎಂದು ಅಮೆರಿಕದ ಗುಪ್ತಚರ ಇಲಾಖೆಯೇ ಮಾಹಿತಿ ನೀಡಿದೆ ಎಂದು ಮೂಲಗಳು ಹೇಳಿವೆ.

ಈ ಹಿನ್ನೆಲೆಯಲ್ಲಿ ಮಧ್ಯಪ್ರಾಚ್ಯದ ಹಲವು ರಾಷ್ಟ್ರಗಳ ಮೂಲಕ ಇರಾನ್‌ಗೆ ಎಚ್ಚರಿಕೆ ರವಾನಿಸಿರುವ ಅಮೆರಿಕ, ಸಾಧ್ಯವಿರುವ ದಾಳಿಯನ್ನು ತಡೆಯಲು ತೀವ್ರ ರಾಜತಾಂತ್ರಿಕ ಹಾಗೂ ಭದ್ರತಾ ಕಸರತ್ತು ನಡೆಸುತ್ತಿದೆ ಎಂದು ವರದಿಯಾಗಿದೆ. ಈ ಬೆಳವಣಿಗೆಗಳು ಈಗಾಗಲೇ ಬಹಳ ಸೂಕ್ಷ್ಮವಾಗಿ ಸಾಗುತ್ತಿರುವ ಶಾಂತಿ ಮಾತುಕತೆ ಪ್ರಕ್ರಿಯೆಯನ್ನು ಮತ್ತಷ್ಟು ಸಂಕೀರ್ಣಗೊಳಿಸುವ ಸಾಧ್ಯತೆ ಇದೆ ಎಂದು ಹೇಳಲಾಗುತ್ತಿದೆ.

ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ ಮತ್ತು ಸಂಸತ್ ಸ್ಪೀಕರ್ ಮೊಹಮ್ಮದ್ ಬಘೇರ್ ಘಲಿಬಾಫ್ ಅವರನ್ನು ಗುರಿಯಾಗಿಸಿಕೊಂಡು ಇಸ್ರೇಲ್ ದಾಳಿ ನಡೆಸುವ ಸಾಧ್ಯತೆಯಿದೆ. ಈ ಮಾಹಿತಿಯನ್ನು ಮಧ್ಯಪ್ರಾಚ್ಯದ ಹಲವು ರಾಷ್ಟ್ರಗಳ ಮೂಲಕ ಇರಾನ್‌ಗೆ ಅಮೆರಿಕ ರವಾನಿಸಿ, ಉನ್ನತ ನಾಯಕರ ಭದ್ರತೆಯನ್ನು ಹೆಚ್ಚಿಸುವಂತೆ ಮನವಿ ಮಾಡಿದೆ ಎಂದು ನ್ಯೂಯಾರ್ಕ್ ಟೈಮ್ಸ್ ವರದಿ ಮಾಡಿದೆ.

ಈ ಇಬ್ಬರೂ ಇರಾನ್ ಪರವಾಗಿ ಅಮೆರಿಕದೊಂದಿಗೆ ನಡೆಯುತ್ತಿರುವ ಶಾಂತಿ ಮಾತುಕತೆಯ ಪ್ರಮುಖ ಮುಖಂಡರಾಗಿದ್ದಾರೆ. ಇಸ್ರೇಲ್ ಇವರನ್ನು ಹತ್ಯೆ ಮಾಡಲು ಮುಂದಾದರೆ, ಶಾಂತಿ ಮಾತುಕತೆ ಸಂಪೂರ್ಣವಾಗಿ ವಿಫಲಗೊಂಡು ಮತ್ತೆ ಪರ್ಷಿಯನ್ ಕೊಲ್ಲಿ ಪ್ರದೇಶದಲ್ಲಿ ಯುದ್ಧ ಭುಗಿಲೇಳುವ ಆತಂಕವನ್ನು ಅಮೆರಿಕ ಅಧಿಕಾರಿಗಳು ವ್ಯಕ್ತಪಡಿಸಿದ್ದಾಗಿ ವರದಿಯಲ್ಲಿ ತಿಳಿದುಬಂದಿದೆ.

ಫೆಬ್ರವರಿ 28ರಂದು ಇಸ್ರೇಲ್ ನಡೆಸಿದ ದಾಳಿಯಲ್ಲಿ ಇರಾನ್‌ನ ಪರಮೋಚ್ಚ ನಾಯಕ ಆಯತೊಲ್ಲಾ ಅಲಿ ಖಮೇನಿ ಸೇರಿದಂತೆ ಹಲವು ಉನ್ನತ ನಾಯಕರು ಮೃತಪಟ್ಟಿದ್ದಾರೆ.

→ 8

ಅಮೆರಿಕ-ಇಸ್ರೇಲ್ ನಡುವೆಯೇ ವೈಮನಸ್ಸು?

ಇರಾನ್ ಸಂಧಾನಕಾರರ ಹತ್ಯೆಯಂತಹ ಯಾವುದೇ ಪ್ರಯತ್ನ ನಡೆದರೆ, ಅದು ಶಾಂತಿ ಮಾತುಕತೆಗಳನ್ನು ಸಂಪೂರ್ಣವಾಗಿ ನಾಶಮಾಡಬಹುದು ಎಂಬುದು ಅಮೆರಿಕದ ಲೆಕ್ಕಾಚಾರವಾಗಿದೆ. ಇದರೊಂದಿಗ ಅಮೆರಿಕ ಮತ್ತು ಇಸ್ರೇಲ್ ನಡುವೆ ವೈಮನಸ್ಸು ಏರ್ಪಟ್ಟಿರುವುದು ಬಹಿರಂಗಗೊಂಡಿದೆ. ಅಮೆರಿಕ ಶಾಂತಿ ಒಪ್ಪಂದದತ್ತ ಒಲವು ತೋರಿಸುತ್ತಿದ್ದರೆ, ಇಸ್ರೇಲ್ ಇರಾನ್‌ನ ಸೇನಾ ಸಾಮರ್ಥ್ಯ, ಕ್ಷಿಪಣಿ ವ್ಯವಸ್ಥೆ ಹಾಗೂ ಪ್ರಾದೇಶಿಕ ಪ್ರಭಾವವನ್ನು ಕುಗ್ಗಿಸುವುದನ್ನೇ ಮುಖ್ಯ ಗುರಿಯನ್ನಾಗಿ ಮಾಡಿಕೊಂಡಿದೆ ಎನ್ನಲಾಗುತ್ತಿದೆ.

1 ವರ್ಷ ಜಾಮೀನಿಲ್ಲ: ಆದೇಶ ಮಾರ್ಪಾಡಿಗೆ ನಕಾರ
ಜಾಮೀನು ಅರ್ಜಿಯನ್ನು ವಿಚಾರಣೆಗೇ ಪರಿಗಣಿಸಿಲ್ಲ

ದರ್ಶನ್‌ಗೆ ಮತ್ತೆ ಸುಪ್ರೀಂ ಆಘಾತ

ಬೆಂಗಳೂರು: ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಪ್ರಕರಣದ ಪ್ರಮುಖ ಆರೋಪಿ ನಟ ದರ್ಶನ್‌ಗೆ ಮತ್ತೊಂದು ಆಘಾತ ಎದುರಾಗಿದೆ. ಇನ್ನೂ ಒಂದು ವರ್ಷ ಜಾಮೀನಿಗೆ ಅರ್ಜಿ ಸಲ್ಲಿಸುವಂತಿಲ್ಲ ಎಂಬ ಆದೇಶವನ್ನು ಮರುಪರಿಶೀಲನೆ ಮಾಡಬೇಕೆಂದು ದರ್ಶನ್ ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ವಜಾಗೊಳಿಸಿದೆ. ಜಾಮೀನು ಮತ್ತು ತನಿಖಾ ಪ್ರಕ್ರಿಯೆಗಳಿಗೆ ಸಂಬಂಧಿಸಿದಂತೆ ಈ ಹಿಂದೆ ನೀಡಲಾಗಿದ್ದ ಆದೇಶವನ್ನು ಮಾರ್ಪಾಡು ಮಾಡುವಂತೆ ಕೋರಿ ದರ್ಶನ್ ಸಲ್ಲಿಸಿದ್ದ ಮರು ಪರಿಶೀಲನಾ ಅರ್ಜಿಯನ್ನು ನೋಂದಣಾಧಿಕಾರಿಯೇ ವಜಾ ಮಾಡಿದ್ದಾರೆ. ನ್ಯಾಯಮೂರ್ತಿಗಳ ಪೀಠಕ್ಕೆ ಹೋಗುವ ಮುನ್ನವೇ ಅರ್ಜಿ ವಜಾ ಆಗಿದೆ.

ಒಂದು ವರ್ಷದ ಬಳಿಕ ಜಾಮೀನಿಗೆ ಅರ್ಜಿ ಸಲ್ಲಿಸಲು ಸುಪ್ರೀಂ ಕೋರ್ಟ್ ಆದೇಶಿಸಿತ್ತು. ಆದರೆ ಮರು ಪರಿಶೀಲನೆ ಮಾಡುವಂತೆ ದರ್ಶನ್ ಪರ ವಕೀಲರು ಮತ್ತೆ ಅರ್ಜಿ ಸಲ್ಲಿಸಿದ್ದರು. ನ್ಯಾಯಾಲಯದ ಈ ನಿರ್ಧಾರದಿಂದಾಗಿ ಕಾನೂನು ಹೋರಾಟದಲ್ಲಿ ನಟ ದರ್ಶನ್‌ಗೆ ಮತ್ತೆ ತೀವ್ರ ಹಿನ್ನಡೆಯಾಗಿದೆ.

ಸಾಕ್ಷ್ಯನಾಶಕ್ಕೆ ಯತ್ನಿಸಿದವರ ಮೊಬೈಲ್ ಎಫ್‌ಎಸ್‌ಎಲ್‌ಗೆ

ದರ್ಶನ್ ಅಭಿಮಾನಿಗಳೆನ್ನಲಾದ ಮೂವರು ಸಾಕ್ಷಿದಾರ ಸಂದೀಪ್ ಎಂಬುವವರಿಗೆ ಬೆದರಿಕೆ ಹಾಕಿದ ಆರೋಪದ ಮೇಲೆ ಬಂಧನಕ್ಕೊಳಗಾಗಿದ್ದಾರೆ. ಬಂಧಿತರ ಪೈಕಿ ಒಬ್ಬಾತ ಸಾಕ್ಷಿ ಸಂದೀಪ್‌ಗೆ ವಾಟ್ಸಾಪ್ ಕರೆ ಮಾಡಿ ಬೆದರಿಕೆ ಹಾಕಿದ್ದಾರೆ. ಸುಳ್ಳು ಸಾಕ್ಷಿ ಹೇಳಲು ಒತ್ತಾಯಿಸಿದ್ದಾರೆ. ಒಂದು ವೇಳೆ ಸುಳ್ಳು ಸಾಕ್ಷಿ ಹೇಳಿದರೆ ಎಲ್ಲ ರೀತಿಯ ನೆರವು ನೀಡುವುದಾಗಿ ಆಮಿಷವೊಡ್ಡಿದ್ದಾರೆ ಎನ್ನಲಾಗಿದೆ. ಈ ಹಿನ್ನೆಲೆಯಲ್ಲಿ ಬಂಧಿತರಿಂದ ಮೊಬೈಲ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ. ಅವನ್ನು ಎಫ್‌ಎಸ್‌ಎಲ್ ಪರೀಕ್ಷೆಗೆ ಒಯ್ಯಲಾಗಿದೆ.

ಖಾತೆ ಹಂಚಿಕೆ ಬಗ್ಗೆ ಗೊಂದಲ, ಜುಲೈ 3ನೇ ವಾರದಲ್ಲಿ ಸ್ಪಷ್ಟನೆ ನಿರೀಕ್ಷೆ
ಅಧಿವೇಶನವನ್ನು ಆಗಸ್ಟ್‌ಗೆ ಮುಂದೂಡಿ ಸುರಕ್ಷಿತ ಹೆಜ್ಜೆಯಿಟ್ಟ ಡಿಕೆಶಿ

ರಾಜ್ಯ ಸಂಪುಟ ವಿಸ್ತರಣೆಗೆ ಸಿಕ್ಕಿಲ್ಲ ಕೈ ವರಿಷ್ಠರ ಸಮ್ಮತಿ?

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಡಿ.ಕೆ.ಶಿವಕುಮಾರ್ ಆಡಳಿತ ಶುರುವಾಗಿ ತಿಂಗಳು ಕಳೆದರೂ, ಸಂಪುಟ ವಿಸ್ತರಣೆಗೆ ಕಾಂಗ್ರೆಸ್ ವರಿಷ್ಠರು ಇನ್ನೂ 'ಗ್ರೀನ್ ಸಿಗ್ನಲ್' ನೀಡಿಲ್ಲ ಎಂದು ಮೂಲಗಳು ಹೇಳಿವೆ. ಇದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್‌ರನ್ನು ಇಕ್ಕಟ್ಟಿಗೆ ಸಿಲುಕಿಸಿದೆ. ಆದ್ದರಿಂದ ಎಸ್‌ಐಆರ್ ನೆಪದಲ್ಲಿ ಚಳಿಗಾಲದ ಅಧಿವೇಶನವನ್ನೇ ಒಂದೆರೆಡು ವಾರದ ಮಟ್ಟಿಗೆ ಸರಕಾರ ಮುಂದೂಡಿದೆ. ಸಾಮಾನ್ಯವಾಗಿ ಜುಲೈ ಎರಡನೇ ವಾರದಲ್ಲಿ ಚಳಿಗಾಲದ ಅಧಿವೇಶನ ಆರಂಭವಾಗಬೇಕು. ಅಧಿವೇಶನಕ್ಕೂ ಮೊದಲು ಪೂರ್ಣಪ್ರಮಾಣದ ಸಂಪುಟ ಅಗತ್ಯ. ವಿಸ್ತರಣೆಯ ವಿಷಯದಲ್ಲಿ ಹೈಕಮಾಂಡ್‌ನಿಂದ ಸ್ಪಷ್ಟನೆ ಬಾರದಿರುವುದರಿಂದ ಇದೀಗ ಅಧಿವೇಶನವನ್ನೇ ಮುಂದೂಡಲಾಗಿದೆ ಎನ್ನುವ ಮಾತುಗಳು ಕೇಳಿಬರುತ್ತಿವೆ. ಸದ್ಯ ಡಿಕೆ ಸಂಪುಟದಲ್ಲಿ 14 ಮಂದಿ ಮಾತ್ರ ಸಚಿವರಾಗಿದ್ದಾರೆ.

ಜುಲೈ ಮೂರನೇ ವಾರದ ಹೊತ್ತಿಗೆ ಸಂಪುಟ ವಿಸ್ತರಣೆ ಬಗ್ಗೆ ಸ್ಪಷ್ಟನೆ ಸಿಗಲಿದೆ. ಬಳಿಕ ಪ್ರಮಾಣವಚನ ಸ್ವೀಕಾರ ಕಾರ್ಯಕ್ರಮ, ಖಾತೆ ಹಂಚಿಕೆ ಸೇರಿದಂತೆ ಎಲ್ಲ ಗೊಂದಲಗಳನ್ನು ಇತ್ಯರ್ಥಪಡಿಸಿಕೊಂಡೇ ಚಳಿಗಾಲದ ಅಧಿವೇಶನ ನಡೆಸುವುದು ಸೂಕ್ತ ಎನ್ನುವ ತೀರ್ಮಾನಕ್ಕೆ ಡಿಕೆಶಿ ಬಂದಿರುವುದರಿಂದ, ಗುರುವಾರ ಸಚಿವ ಸಂಪುಟ ಸಭೆಯಲ್ಲಿ ಆಗಸ್ಟ್ 5ರ ನಂತರ ಚಳಿಗಾಲದ ಅಧಿವೇಶನ ನಡೆಸುವುದಾಗಿ ಘೋಷಿಸಿದರು. ಈ ಮೂಲಕ ಚಳಿಗಾಲದ ಅಧಿವೇಶನಕ್ಕೂ ಮೊದಲೇ ಸಂಪುಟ ವಿಸ್ತರಣೆ ಮಾಡಬೇಕು ಎನ್ನುವ ಒತ್ತಡದಿಂದ ತಪ್ಪಿಸಿಕೊಳ್ಳಲು, ಚಳಿಗಾಲದ ಅಧಿವೇಶನವನ್ನೇ ಮುಂದೂಡುವ ತಂತ್ರವನ್ನು ಡಿಕೆಶಿ ಮಾಡಿದ್ದಾರೆ.

ಚಳಿಗಾಲದ ಅಧಿವೇಶನವನ್ನು ಮುಂದೂಡಿಕೆ ಮಾಡಲು, ರಾಜ್ಯದಲ್ಲಿ ಆರಂಭಗೊಂಡಿರುವ ಎಸ್‌ಐಆರ್ ಅನ್ನು ನೆಪವಾಗಿಸಿಕೊಂಡಿದ್ದಾರೆ. ಶಾಸಕರು, ಅಧಿಕಾರಿಗಳು ಎಸ್‌ಐಆರ್‌ನಲ್ಲಿ ತಲ್ಲೀನವಾಗಿರುವುದರಿಂದ, ಕರಡು ಪಟ್ಟಿ ಪ್ರಕಟಗೊಂಡ ಬಳಿಕವೇ ಅಧಿವೇಶನ ನಡೆಸಲು ತೀರ್ಮಾನಿಸಲಾಗಿದೆ ಎಂದು ಗುರುವಾರ ಶಿವಕುಮಾರ್ ಹೇಳಿದ್ದರು. ಈಗಿರುವ ಮಾಹಿತಿ ಪ್ರಕಾರ ಆ.10ರ ಬಳಿಕವೇ ಅಧಿವೇಶನಕ್ಕೆ ಮುಹೂರ್ತ ನಿಗದಿಯಾಗಲಿದೆ.

ಜು.5ಕ್ಕೆ ದಿಲ್ಲಿಗೆ ಸಿಎಂ, ಮಾಜಿ ಸಿಎಂ

ಈ ನಡುವೆ ಜುಲೈ 5ರಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ದೆಹಲಿಗೆ ತೆರಳುವ ಸಾಧ್ಯತೆಯಿದೆ ಎನ್ನಲಾಗಿದೆ. ಸಂಪುಟ ವಿಸ್ತರಣೆಗೆ ಸಂಬಂಧಿಸಿದಂತೆ ಪಕ್ಷದ ಹೈಕಮಾಂಡ್ ಜತೆ ಪ್ರಾಥಮಿಕ ಹಂತದಲ್ಲಿ ಚರ್ಚಿಸಿ, ಸಂಪುಟ ಪುನಾರಚನೆಗೆ ದಿನಾಂಕ ನಿಗದಿ ಮಾಡಿಕೊಂಡು ಬರುವ ಸಾಧ್ಯತೆಯಿದೆ. ಆದರೆ ಪಕ್ಷದ ಹೈಕಮಾಂಡ್ ನಾಯಕರ ಲಭ್ಯತೆ ಬಗ್ಗೆ ಸ್ಪಷ್ಟನೆ ಸಿಗದಿರುವುದರಿಂದ ದೆಹಲಿ ಪ್ರಯಾಣ ಡಿಕೆ ಆಪ್ತರು ಖಚಿತಪಡಿಸಿಲ್ಲ. ಆಗಸ್ಟ್‌ನಲ್ಲಿ ಅಧಿವೇಶನ ನಡೆಯುವುದರಿಂದ ಜುಲೈ ಎರಡು ಅಥವಾ ಮೂರನೇ ವಾರದಲ್ಲಾದರೂ ಸಂಪುಟ ವಿಸ್ತರಣೆಯಾಗಬೇಕು ಎನ್ನುವ ಬೇಡಿಕೆ ಮಂಡಿಸುವ ಸಾಧ್ಯತೆಯಿದೆ.

ಮಂದಿರ ಹಣ ಲೂಟಿ ಪ್ರಕರಣದಿಂದ ಘಾಸಿ

ದೆಹಲಿ: ಅಯೋಧ್ಯೆಯ ರಾಮಮಂದಿರದ ದೇಣಿಗೆಯಿಂದ ಕೋಟ್ಯಂತರ ರುಪಾಯಿ ಲೂಟಿ ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಇದೇ ಮೊದಲ ಬಾರಿಗೆ ಆರ್‌ಎಸ್‌ಎಸ್ ಮೌನ ಮುರಿದಿದೆ.

ಈ ದುರದೃಷ್ಟಕರ ಘಟನೆಯ ಸುತ್ತ ಸೃಷ್ಟಿಯಾಗಿರುವ ಗೊಂದಲ ಮತ್ತು ಅನಿಶ್ಚಿತತೆಗಳು ತಕ್ಷಣವೇ ಕೊನೆಗೊಳ್ಳಬೇಕು ಎಂದು ಸಂಘದ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಒತ್ತಾಯಿಸಿದ್ದಾರೆ. ದೇಣಿಗೆಗಳಿಂದ ಹಣ ಕಳುವಾಗಿರುವ ಘಟನೆಯಿಂದ ಕೋಟ್ಯಂತರ ರಾಮಭಕ್ತರ ಶ್ರದ್ಧೆಗೆ ಘಾಸಿಯಾಗಿದೆ. ಇದನ್ನು ದುರುಪಯೋಗ ಮಾಡಿಕೊಳ್ಳಲು ಹಿಂದೂ ವಿರೋಧಿಗಳು ಕಾದಿದ್ದಾರೆ. ಮಂದಿರದ ಆಡಳಿತ ಮಂಡಳಿ ಹಾಗೂ ಎಸ್‌ಐಟಿ ತನಿಖಾ ತಂಡವು ಈ ಪ್ರಕರಣವನ್ನು ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯಲು ಅಗತ್ಯವಿರುವ ಎಲ್ಲಾ ಕಠಿಣ ಕ್ರಮಗಳನ್ನು ತಕ್ಷಣವೇ ಕೈಗೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ.

ಪಾಕಲ್ಲಿ ಬಸ್ ಕಮರಿಗೆ: 40 ಮಂದಿ ನಿಧನ

ಇಸ್ಲಾಮಾಬಾದ್: ಪಾಕಿಸ್ತಾನದ ಬಲೂಚಿಸ್ತಾನ್ ರಾಜ್ಯದಲ್ಲಿ ಭೀಕರ ರಸ್ತೆ ಅಪಘಾತ ಸಂಭವಿಸಿದ್ದು, ಆಳವಾದ ಕಂದಕಕ್ಕೆ ಬಸ್ ಉರುಳಿದ ಪರಿಣಾಮ 40 ಮಂದಿ ಸಾವನ್ನಪ್ಪಿದ್ದು, 8 ಮಂದಿ ಗಂಭೀರವಾಗಿ ಗಾಯಗೊಂಡಿದ್ದಾರೆ. ಕ್ವೆಟ್ಟಾದಿಂದ ಇಸ್ಲಾಮಾಬಾದ್‌ಗೆ ತೆರಳುತ್ತಿದ್ದ ಪ್ರಯಾಣಿಕರ ಬಸ್, ಶೆರಾನಿ- ಝೋಬ್ ಹೆದ್ದಾರಿಯ ದನಾಸರ್ ಪ್ರದೇಶದಲ್ಲಿ ಚಾಲಕನ ನಿಯಂತ್ರಣ ತಪ್ಪಿ ಆಳವಾದ ಕಂದಕಕ್ಕೆ ಉರುಳಿದೆ.

30 ದಿನ, ಮಹತ್ವದ ಘೋಷಣೆ | ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್, ಯುವಕರ ಸಂಘಕ್ಕೆ 10 ಲಕ್ಷ ರು.

ಡಿಕೆ ಸರಕಾರಕ್ಕೆ ತಿಂಗಳು ಭರ್ತಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ತೀವ್ರ ಹಗ್ಗಜಗ್ಗಾಟದ ಬಳಿಕ ಮುಖ್ಯಮಂತ್ರಿ ಸ್ಥಾನಕ್ಕೇರಿದ ಡಿ.ಕೆ.ಶಿವಕುಮಾರ್ ಅಧಿಕಾರದ ಗದ್ದುಗೆ ಏರಿ ಒಂದು ತಿಂಗಳು ಪೂರ್ಣಗೊಳಿಸಿದ್ದಾರೆ. ಅಧಿಕಾರಕ್ಕೆ ಬರುವ ಮೊದಲೇ ಹತ್ತು ಹಲವು ಆಲೋಚನೆಗಳೊಂದಿಗೆ ಅಧಿಕಾರದ ಗದ್ದುಗೆ ಏರಿದ ಡಿಕೆಶಿ ಮೊದಲ ತಿಂಗಳಲ್ಲೇ ಹಲವು ಮಹತ್ವದ ತೀರ್ಮಾನಗಳನ್ನು ಕೈಗೊಂಡಿದ್ದಾರೆ.

ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಮೊದಲ ದಿನವೇ ರಾಜ್ಯದ ಎಲ್ಲಾ ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್, ರಾಜ್ಯದ ಎಲ್ಲಾ ಪಂಚಾಯಿತಿ, ವಾರ್ಡ್‌ಗಳಲ್ಲಿ ಭಾರತ ಜೋಡೋ ಯುವಕರ ಸಂಘ ಸ್ಥಾಪನೆಗೆ ತಲಾ 10 ಲಕ್ಷ ರು. ನೀಡುವ ಮಹತ್ವದ ತೀರ್ಮಾನ ಕೈಗೊಂಡರು. ಇದರೊಂದಿಗೆ ಸಾರ್ವಜನಿಕರ ಕುಂದುಕೊರತೆ, ಅಹವಾಲು ಆಲಿಸಲು 'ಪ್ರಜಾಸೇವೆ' ಎಂಬ ಪ್ರತ್ಯೇಕ ಸಚಿವಾಲಯ, ಗ್ಯಾರಂಟಿ ಯೋಜನೆಗಳು ಕರ್ನಾಟಕದವರಿಗೆ ಮಾತ್ರ ಸಿಗಬೇಕು ಹಾಗೂ ಈ ಹಣ ಸೋರಿಕೆ ತಪ್ಪಿಸಲು ಕ್ರಮ ಕೈಗೊಂಡಿದ್ದಾರೆ. ರೌಡಿಗಳ ನಿಗ್ರಹಕ್ಕೆ ಜಿಲ್ಲೆಗೊಂದು ಪಡೆ ರಚನೆಗೆ ಕ್ರಮವಹಿಸಿದ್ದಾರೆ.

ಇನ್ನು ರಾಜಕೀಯವಾಗಿ ತೀವ್ರ ಮಹತ್ವವಾಗಿದ್ದ ವಿಧಾನಪರಿಷತ್ ಚುನಾವಣೆಯಲ್ಲಿ ಐದನೇ ಅಭ್ಯರ್ಥಿಯನ್ನು ನಿಲ್ಲಿಸುವ 'ಲೆಕ್ಕಾಚಾರಬದ್ಧ ಸವಾಲು' ತೆಗೆದುಕೊಂಡ ಡಿಕೆ ಪ್ರತಿಪಕ್ಷಗಳ ಕೆಲ ಶಾಸಕರನ್ನು ಸೆಳೆಯುವ ಮೂಲಕ, ಐದನೇ ಅಭ್ಯರ್ಥಿ ವಿನಯ್ ಕಾರ್ತಿಕ್ ಗೆಲುವಿನ ನಗೆ ಬೀರುವಂತೆ ನೋಡಿ ಕೊಂಡರು. ಈ ಮೂಲಕ ಮುಖ್ಯಮಂತ್ರಿ ಯಾಗಿ ಅಧಿಕಾರ ಸ್ವೀಕರಿಸಿದ ಬಳಿಕ ಮೊದಲ ಟಾಸ್ಕ್ ಅನ್ನು ಯಶಸ್ವಿಯಾಗಿ ಪೂರೈಸಿದರು.

ಇನ್ನು ರಾಜ್ಯ-ಕೇಂದ್ರ ಸರಕಾರದ ನಡುವೆ ಸಮನ್ವಯತೆ ಸಾಧಿಸುವ ಉದ್ದೇಶದಿಂದ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ನೀತಿ ಆಯೋಗದ ಸಭೆಯಲ್ಲಿ ಭಾಗವಹಿಸಿದ್ದ ಡಿಕೆಶಿ, ಕರ್ನಾಟಕದ ಬೇಡಿಕೆಗಳನ್ನು ಪ್ರಸ್ತಾಪಿಸಿದರು. ಬಳಿಕ ಪ್ರಧಾನಮಂತ್ರಿ ನರೇಂದ್ರ ಮೋದಿ, ಕೇಂದ್ರ ಸಚಿವರಾದ ಅಮಿತ್ ಶಾ, ಜಲಶಕ್ತಿ ಸಚಿವ ಸಿ.ಆರ್. ಪಾಟೀಲ್, ನಿರ್ಮಲಾ ಸೀತಾರಾಮನ್, ಮನೋಹರ್ ಲಾಲ್ ಖಟ್ಟರ್ ಅವರನ್ನು ಭೇಟಿ ಮಾಡಿ ರಾಜ್ಯದ ನೀರಾವರಿ ಯೋಜನೆಗಳು, ಬೆಂಗಳೂರಿನ ಮೆಟ್ರೋ, ಪೊಲೀಸ್ ಇಲಾಖೆಗಳ ಯೋಜನೆಗಳು ಹಾಗೂ ವಿಶೇಷ ಅನುದಾನಗಳ ಬಗ್ಗೆ ಚರ್ಚಿಸಿದರು. ದೆಹಲಿಯಲ್ಲಿರುವ ರಾಜ್ಯದ ಐಎಎಸ್, ಐಪಿಎಸ್, ಐಎಫ್‌ಎಸ್ ಅಧಿಕಾರಿಗಳ ಸಭೆ ಮಾಡಿ ಅಭಿವೃದ್ಧಿಗೆ ಕೈಜೋಡಿಸಲು ಮನವಿ ಮಾಡಿದ್ದಾರೆ.

ಸಿದ್ದು ಆಶೀರ್ವಾದ ಪಡೆದ ಡಿಕೆಶಿ

ಅಧಿಕಾರಕ್ಕೆ ಬಂದು ಒಂದು ತಿಂಗಳು ಪೂರೈಸಿದ ಹಿನ್ನೆಲೆಯಲ್ಲಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನಿವಾಸ ಕಾವೇರಿಗೆ ಡಿ.ಕೆ.ಶಿವಕುಮಾರ್ ಶುಕ್ರವಾರ ಕುಟುಂಬ ಸಮೇತ ಭೇಟಿ ನೀಡಿ ಔಪಚಾರಿಕ ಚರ್ಚೆ ನಡೆಸಿದರು. ಶುಕ್ರವಾರ ಬೆಳಗ್ಗೆ ಕಾವೇರಿ ನಿವಾಸಕ್ಕೆ ತೆರಳಿದ ಡಿಕೆಶಿ ಅವರೊಂದಿಗೆ ಪತ್ನಿ ಉಷಾ, ಸಹೋದರ ಡಿ.ಕೆ.ಸುರೇಶ್ ಅವರಿದ್ದರು. ಇದೊಂದು ಸೌಜನ್ಯದ ಭೇಟಿ ಎಂದು ಹೇಳಲಾಗುತ್ತಿದೆಯಾದರೂ, ಸಚಿವ ಸಂಪುಟ ವಿಸ್ತರಣೆ, ಪಕ್ಷದ ಸಂಘಟನೆಗೆ ಸಂಬಂಧಿಸಿದಂತೆ ಚರ್ಚಿಸಿದ್ದಾರೆ ಎನ್ನಲಾಗಿದೆ. ಇದರೊಂದಿಗೆ, ಸಿದ್ದರಾಮಯ್ಯರನ್ನು ಕಡೆಗಣಿಸಿಲ್ಲ, ವಿಶ್ವಾಸಕ್ಕೆ ಪಡೆಯಲಾಗುವುದು ಎನ್ನುವ ಸಂದೇಶ ರವಾನಿಸುವುದು ಭೇಟಿಯ ಮತ್ತೊಂದು ಉದ್ದೇಶವೆನ್ನಲಾಗಿದೆ.

ಪ್ರಮುಖ ತೀರ್ಮಾನಗಳು

- ಹಳೆಯ ವಸತಿ ಕಟ್ಟಡಗಳ ಶಾಶ್ವತ ವಿದ್ಯುತ್ ಸಂಪರ್ಕಕ್ಕೆ ಒಸಿ ವಿನಾಯಿತಿ
- ಬೆಂಗಳೂರಿನ ರಸ್ತೆಗಳನ್ನು ಗುಂಡಿಮುಕ್ತಗೊಳಿಸಲು 2 ಸಾವಿರ ಕೋಟಿ ರು.
- ಖಾಸಗಿ ವಲಯದ ಉದ್ಯೋಗ ವಿನಿಮಯ ಕೇಂದ್ರ ಸ್ಥಾಪಿಸಲು ತೀರ್ಮಾನ
- ಮುಂದಿನ 6 ತಿಂಗಳಿನಲ್ಲಿ 72 ಸಾವಿರ ಸರಕಾರಿ ಹುದ್ದೆಗಳ ತುಂಬಲು ಗಡುವು
- ಕಾಲೇಜು ಚುನಾವಣೆಗಳನ್ನು ಪ್ರಸಕ್ತ ವರ್ಷದಿಂದಲೇ ಪ್ರಾರಂಭಿಸಲು ಚಿಂತನೆ
- ಸರಕಾರಿ ಭ್ರಷ್ಟಾಚಾರದ ವಿರುದ್ಧ ದೂರು ಸಲ್ಲಿಕೆಗೆ ದೂರವಾಣಿ
- ಎಲ್ಲಾ ಸರಕಾರಿ ಸಿಬ್ಬಂದಿ ಬೆಳಗ್ಗೆ 10ಕ್ಕೆ ಕಚೇರಿಯಲ್ಲಿರಲು ಕರ್ತವ್ಯ ಆ್ಯಪ್
- ಮೀಟರ್ ಬಡ್ಡಿ ದಂಧೆಗೆ ಕಡಿವಾಣ ಹಾಕಲು ನಿರ್ದೇಶನ
- ತುಂಗಭದ್ರಾ ಅಣೆಕಟ್ಟಿಗೆ ಹಾಕಲಾಗಿರುವ ಸ್ಟಿಲ್ ಗೇಟ್ ಉದ್ಘಾಟನೆ

ವಿಶ್ವವಾಣಿ

ಸಂಪಾದಕೀಯ

ಹೊಸ ವಿಧೇಯಕದ ವಿವಾದ

ಸಂಸತ್ತಿನ ಮುಂದಿನ ಮುಗಾರು ಅಧಿವೇಶನದಲ್ಲಿ ವಿವಾದಾತ್ಮಕವಾದ ಒಂದು ವಿಧೇಯಕವನ್ನು ಮಂಡಿಸಲು ಬಿಜೆಪಿ ಸರಕಾರ ಸಿದ್ಧತೆ ನಡೆಸಿದೆ ಎಂದು ಮೂಲಗಳು ಹೇಳಿವೆ. ಇದು ಸಂವಿಧಾನ ತಿದ್ದುಪಡಿ ವಿಧೇಯಕವಾಗಿದೆ. ಗಂಭೀರ ಪ್ರಕರಣಗಳಲ್ಲಿ ಪ್ರಧಾನಿ, ಮುಖ್ಯಮಂತ್ರಿ, ಸಚಿವರು 5 ವರ್ಷ ಜೈಲುಶಿಕ್ಷೆ ಒಳಗಾದರೆ, 30 ದಿನಗಳ ಕಾಲ ಬಂಧನ ಅನುಭವಿಸಿದರೆ ಈ ಕಾಯಿದೆ ಮೂಲಕ ಅವರು ತನ್ನಿಂತಾನೇ ಹುದ್ದೆ ಕಳೆದುಕೊಳ್ಳುತ್ತಾರೆ. ಅಧಿಕಾರ ಸ್ಥಾನದಲ್ಲಿ ಇರುವವರು ಹೊಣೆಗಾರಿಕೆಯಿಂದ ವರ್ತಿಸುವಂತೆ ಮಾಡಲು ಈ ವಿಧೇಯಕ ಉದ್ದೇಶಿಸಿದೆ. ವಿವಾದಾತ್ಮಕ 130ನೇ ಸಂವಿಧಾನ ತಿದ್ದುಪಡಿ ವಿಧೇಯಕವನ್ನು ಪರಿಶೀಲಿಸುತ್ತಿರುವ ಜಂಟಿ ಸಂಸದೀಯ ಸಮಿತಿ ಜುಲೈ 17ರಂದು ತನ್ನ ವರದಿ ಅಂಗೀಕರಿಸುವ ನಿರೀಕ್ಷೆ ಇದೆ. ಇದರಡಿಯಲ್ಲಿ ಬೇಕಾಬಿಟ್ಟಿ ಬಂಧನ ಸಾಧ್ಯವಿಲ್ಲ. ಗಭೀರ ಪ್ರಕರಣಗಳಿಗೆ ಮಾತ್ರ ಆದ್ಯತೆ. ಕಾಯಿದೆ ದುರುಪಯೋಗಕ್ಕೆ ಆಸ್ಪದವಿಲ್ಲ. ಜಾಮೀನು ಪಡೆಯಲು ಹಾಗೂ ರಾಷ್ಟ್ರಪತಿ, ರಾಜ್ಯಪಾಲರಿಗೆ ಈ ನಿಟ್ಟಿನಲ್ಲಿ ಕ್ರಮ ಕೈಗೊಳ್ಳುವ ಅವಕಾಶ ಇದೆ ಎನ್ನಲಾಗಿದೆ. ಆದರೆ ಪ್ರತಿಪಕ್ಷಗಳು ಈ ಕಾಯಿದೆ ದುರುಪಯೋಗ ಆಗುವ ಸಾಧ್ಯತೆಯ ಬಗ್ಗೆ ಗಮನ ಸೆಳೆದಿವೆ. ನ್ಯಾಯಾಲಯದಲ್ಲಿ ವಿಚಾರಣೆ ಪೂರ್ಣಗೊಳ್ಳುವ ಮುನ್ನವೇ ವ್ಯಕ್ತಿಯನ್ನು ಅನರ್ಹಗೊಳಿಸುವುದು ತಪ್ಪು. ಅಪರಾಧ ಸಾಬೀತಾಗುವವರೆಗೆ ವ್ಯಕ್ತಿ ನಿರಪರಾಧಿ ಎಂಬ ಸಂವಿಧಾನಾತ್ಮಕ ಮೂಲ ತತ್ವಕ್ಕೆ ಇದು ವಿರುದ್ಧವಾಗಿದೆ ಎಂದು ಪ್ರತಿಪಕ್ಷಗಳು ಟೀಕಿಸಿವೆ. ಆದರೆ ಭಾರತದಲ್ಲಿ ರಾಜಕೀಯವು ಅಪರಾಧೀಕರಣಗೊಂಡಿರುವ ಪ್ರಮಾಣವನ್ನು ಗಮನಿಸಿದರೆ, ಇಂಥದೊಂದು ಕಾಯಿದೆ ನಮಗೆ ಅಗತ್ಯವಿದೆ. ನಮ್ಮಲ್ಲಿ ಗಂಭೀರ ಅಪರಾಧಗಳಲ್ಲಿ ಜೈಲಿಗೆ ಹೋದವರು ಸಹ ಅಲ್ಲಿಂದಲೇ ಅಧಿಕಾರ ಚಲಾಯಿಸಿದ ನಿದರ್ಶನಗಳು ಇವೆ. ಇನ್ನು ಹಲವರು ಜೈಲಿಗೆ ಹೋದಾಗ ಡಮ್ಮಿ ವ್ಯಕ್ತಿಗಳನ್ನು ಅಲ್ಲಿ ಕೂರಿಸಿ ತಮ್ಮ ಅಧಿಕಾರ ಚಲಾಯಿಸುತ್ತಾರೆ. ಬಿಹಾರ, ಉತ್ತರಪ್ರದೇಶಗಳ ಶಾಸಕರಲ್ಲಿ ಗಂಭೀರ ಕ್ರಿಮಿನಲ್ ಪ್ರಕರಣಗಳಲ್ಲಿ ವಿಚಾರಣೆ ಎದುರಿಸುತ್ತಿರುವ ಮಂದಿ ಸಾಕಷ್ಟು ಇದ್ದಾರೆ. ಸುಮಾರು ಶೇ. 46ರಷ್ಟು ಲೋಕಸಭಾ ಸದಸ್ಯರು ಮತ್ತು ಶೇ. 32ರಷ್ಟು ರಾಜ್ಯಸಭಾ ಸದಸ್ಯರು ತಮ್ಮ ವಿರುದ್ಧ ಕ್ರಿಮಿನಲ್ ಪ್ರಕರಣಗಳಿರುವುದನ್ನು ಘೋಷಿಸಿಕೊಂಡಿದ್ದಾರೆ. ಇವರಲ್ಲಿ ಸುಮಾರು ಶೇ. 31ರಷ್ಟು ಲೋಕಸಭಾ ಸದಸ್ಯರು ಮತ್ತು ಶೇ. 16ರಷ್ಟು ರಾಜ್ಯಸಭಾ ಸದಸ್ಯರು ಕೊಲೆ, ಕೊಲೆ ಯತ್ನ, ಅಪಹರಣ ಮತ್ತು ಮಹಿಳೆಯರ ವಿರುದ್ಧದ ಅಪರಾಧಗಳಿಗೆ ಸಂಬಂಧಿಸಿದ ಪ್ರಕರಣಗಳಂತಹ ಗಂಭೀರ ಆರೋಪಗಳನ್ನು ಎದುರಿಸುತ್ತಿದ್ದಾರೆ. ನಮ್ಮ ರಾಜಕೀಯ ಕಳಂಕಮುಕ್ತವಾಗಲು, ಜನತೆ ನಿರ್ಭೀತರಾಗಲು ಇಂಥ ಕಾಯಿದೆ ಬೇಕು. ಆದರೆ ಅದರ ದುರುಪಯೋಗ ಆಗದಂತೆಯೂ ಕಣ್ಣಿಡಬೇಕಿದೆ.

ಸೊಂಪಾದಕೀಯ

ಪತಿ ಪತ್ನಿ ಔರ್ ವೋ

ಪುಣೆಯ ಕೇತನ್ ಅಗರ್ವಾಲ್ ಹತ್ಯೆಯ ನಂತರ 'ಪತಿ, ಪತ್ನಿ ಔರ್ ವೋ' ಕ್ರೈಂ ಕತೆಗಳ ಬಗ್ಗೆ ದೇಶದ ಜನರ ಗಮನ ಹೆಚ್ಚು ಹರಿದಿದೆ. ಪತಿಗೆ ಮತ್ತೊಬ್ಬಳೊಡನೆ ಸಂಬಂಧ, ಪತ್ನಿ ಬೇರೊಬ್ಬನೊಡನೆ ಕುಚ್‌ಕುಚ್- ಇದೆಲ್ಲ ಇಂದು ಸಾಮಾನ್ಯವಾಗಿವೆ ಎಂದು ಹೇಳಲು ತಕ್ಕಷ್ಟು ಆಧಾರಗಳು ಸಿಗುತ್ತವೆ. ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೋದ (ಎನ್‌ಸಿಬಿ) ಅಂಕಿಅಂಶಗಳ ಪ್ರಕಾರ, ಭಾರತದಾದ್ಯಂತ ನೂರಾರು ಕೊಲೆಗಳಿಗೆ ಅನೈತಿಕ ಸಂಬಂಧಗಳು ಪ್ರಮುಖ ಕಾರಣವಾಗಿವೆ. ಯಾವ ರಾಜ್ಯದಲ್ಲಿ ಈ ಘಟನೆಗಳು ಹೆಚ್ಚು ಎಂಬ ರಾಜ್ಯವಾರು ಪಟ್ಟಿಯನ್ನೂ ಅದು ಕೊಟ್ಟಿದೆ. ಮೊದಲ ಸ್ಥಾನದಲ್ಲಿ ಬಿಹಾರ ಇದೆ. ನಂತರದ ಸ್ಥಾನಗಳಲ್ಲಿ ಕ್ರಮವಾಗಿ ಉತ್ತರ ಪ್ರದೇಶ, ಮಹಾರಾಷ್ಟ್ರ, ಮಧ್ಯಪ್ರದೇಶ, ತಮಿಳುನಾಡು, ಆಂಧ್ರಪ್ರದೇಶ, ಗುಜರಾತ್ ಇವೆ. ನಂತರ ಅಂದರೆ 8ನೇ ಸ್ಥಾನದಲ್ಲಿ ಕರ್ನಾಟಕ ಇದೆ. ಇದೊಂಥರಾ ಅವಮಾನ ಅನ್ನಬೇಕು. ಸೈಬರ್ ಕ್ರೈಮ್‌ಗಳಲ್ಲಿ ಅಗ್ರಸ್ಥಾನದಲ್ಲಿರುವ ಕರ್ನಾಟಕ ಈ ವಿಷಯದಲ್ಲಿ ಯಾಕೆ ಮುಂಚೂಣಿಯಲ್ಲಿ ಇಲ್ಲವೋ ಗೊತ್ತಿಲ್ಲ. ಪುರುಷರು ಪತ್ನಿ ಹಾಕಿದ ಗೆರೆ ದಾಟಲು ಹೆದರುತ್ತಾರೋ ಅಥವಾ ಪತ್ನಿಯರನ್ನು ಗಂಡಂದಿರು ಹದ್ದುಬಸ್ತಿನಲ್ಲಿ ಇಟ್ಟುಕೊಂಡಿದ್ದಾರೋ ಎಂಬ ಪರಿಶೀಲನೆ ಆಗಬೇಕು. ಈ ಬಗ್ಗೆ ಸ್ಪರ್ಧೆ ಏರ್ಪಡಿಸಿದರೆ ನಾವೇನೂ ಕಡಿಮೆ ಇಲ್ಲ ಎಂದು ಸಾಬೀತುಪಡಿಸಲು ನಮ್ಮ ವಿಫಲ ದಾಂಪತ್ಯ ಶೂರರು ಮುನ್ನುಗ್ಗಬಹುದು. ಮನೆಯಾಚೆ ಕುಚ್‌ಕುಚ್ ಇಟ್ಟುಕೊಳ್ಳುವುದೇನೋ ಸರಿ, ಆದರೆ ಅದಕ್ಕಾಗಿ ಕೊಲೆ ಮಾಡಬೇಕಿಲ್ಲ. ಕರ್ನಾಟಕಕ್ಕಿಂತಲೂ ಕೆಳಗಿನ ಸ್ಥಾನಗಳಲ್ಲಿ ಇರುವ ರಾಜ್ಯಗಳ ದಂಪತಿಗಳ ಸಂಯಮದ ಕಾರಣ ಏನು ಎಂಬುದೂ ತನಿಖೆ ಆಗಬೇಕು. ಉತ್ತಮ ಅಂಶಗಳಿದ್ದರೆ ನಮ್ಮ ಗಂಡು- ಹೆಣ್ಣುಗಳೂ ಅಳವಡಿಸಿಕೊಳ್ಳಬಹುದು.

ಸಂಪಾದಕರ ಸದ್ಯಶೋಧನೆ

ಅನುವಾದವೇ ಆಧಾರ

ಕೆಲ ವರ್ಷಗಳ ಹಿಂದೆ, ನಾನು ಬೆಲ್ಜಿಯಂ ರಾಜಧಾನಿ ಬ್ರುಸೆಲ್ಸ್‌ಗೆ ಹೋದಾಗ, ಅಲ್ಲಿರುವ ಯುರೋಪಿಯನ್ ಯೂನಿಯನ್ ಪಾರ್ಲಿಮೆಂಟ್‌ಗೆ ಹೋಗಿದ್ದೆ. ಕ್ರೊಯೇಷಿಯಾ ಸೇರಿದಂತೆ ಯುರೋಪಿಯನ್ ಯೂನಿಯನ್‌ನಲ್ಲಿ 28 ದೇಶಗಳಿವೆ. ಇವು ಕಾಲಕಾಲಕ್ಕೆ ಬ್ರುಸೆಲ್ಸ್‌ನಲ್ಲಿರುವ ಪಾರ್ಲಿಮೆಂಟ್‌ನಲ್ಲಿ ಸಭೆ ಸೇರಿ, ಇಡೀ ಯುರೋಪಿಗೆ ಸಂಬಂಧಿಸಿದ, 448 ದಶಲಕ್ಷ ಜನರಿಗೆ ಅನ್ವಯಿಸುವ ನೂರಾರು ವಿಷಯಗಳ ಬಗ್ಗೆ ಚರ್ಚಿಸುತ್ತವೆ. ಜಗತ್ತಿನ ಜನಸಂಖ್ಯೆಯ ಶೇ.5.8ರಷ್ಟನ್ನು ಒಳಗೊಂಡಿರುವ ಈ ದೇಶಗಳು ಸೇರಿ ರಚಿಸಿಕೊಂಡಿರುವ ಈ ಪಾರ್ಲಿಮೆಂಟ್ ತೆಗೆದುಕೊಳ್ಳುವ ನಿರ್ಣಯಗಳು ಜಾಗತಿಕವಾಗಿ ಅತಿ ಮಹತ್ವವೆನಿಸಿಕೊಳ್ಳುತ್ತವೆ. ಈ 28 ದೇಶಗಳು ತಮ್ಮದೇ ಭಾಷೆಗಳನ್ನು ಹೊಂದಿವೆ. ಇವು ತಮ್ಮದಲ್ಲದ ಬೇರೆ ಭಾಷೆಗಳಲ್ಲಿ ವ್ಯವಹರಿಸಲು ಇಷ್ಟಪಡುವುದಿಲ್ಲ. ಈ 28 ದೇಶಗಳಲ್ಲಿ ಅಲ್ಲಿನ ಜನ 25 ಭಾಷೆಗಳನ್ನು ಆಡುತ್ತಾರೆ. ಹೀಗಾಗಿ ಇಡೀ ಯುರೋಪಿಯನ್ ಯೂನಿಯನ್ ಅನುವಾದ ಅಥವಾ ಭಾಷಾಂತರದ ತಳಹದಿಯಲ್ಲಿ ಕಾರ್ಯನಿರ್ವಹಿಸುತ್ತದೆ. ಅಧಿವೇಶನ ನಡೆಯುವಾಗ ಅನುವಾದ ವಿಭಾಗದ ಸಿಬ್ಬಂದಿಯೇನಾದರೂ ಮುಷ್ಕರ ನಡೆಸಿದರೆ, ಇಡೀ ಸಂಸತ್ತಿನ ಕಾರ್ಯಕಲಾಪಗಳು ಸ್ಥಗಿತ! ಅನುವಾದದ ಹರಿವು ಯುರೋಪಿಯನ್ ಯೂನಿಯನ್‌ಗೆ ಅಗಾಧವಾದ ಸವಾಲಾಗಿದೆ. ಒಂದು ಪುಟದ ಕರಡು ಕೂಡ 25 ಭಾಷೆಗಳಿಗೆ ಅನುವಾದವಾಗಬೇಕು. ಕೆಲವೊಮ್ಮೆ ಕಡತಗಳು ಒಂದು ಸಾವಿರ ಪುಟಗಳನ್ನೂ ಮೀರುತ್ತವೆ. ಆಗ ಅವೆಲ್ಲವನ್ನೂ 25 ಭಾಷೆಗಳಿಗೆ ಅನುವಾದಿಸಲೇಬೇಕು. ಹೀಗಾಗಿ ಯುರೋಪಿಯನ್ ಯೂನಿಯನ್ ನಲ್ಲಿ ಕೆಲಸ ಮಾಡುವವರು ಇಬ್ಬರೇ- ಜೆರಾಕ್ಸ್ ಮಷೀನು ಮತ್ತು ಅನುವಾದಕರು ಮಾತ್ರ ಎಂಬ ತಮಾಷೆ ಚಾಲ್ತಿಯಲ್ಲಿದೆ. ಮೂಲ ಭಾಷೆಯಲ್ಲಿ ಸಣ್ಣ ಲೋಪವಾದರೆ ಅದು ಎಲ್ಲ 25 ಭಾಷೆಗಳಲ್ಲೂ ಕಾಣಿಸಿಕೊಂಡು ರಾದ್ಧಾಂತವಾಗುತ್ತದೆ. ಆಗ ಎಲ್ಲ ಭಾಷೆಗಳ ಅನುವಾದವನ್ನು ತಡೆ ಹಿಡಿದು ಹೊಸ ಕಡತವನ್ನು ಮಂಡಿಸಬೇಕಾಗುತ್ತದೆ. ಯುರೋಪಿಯನ್ ಯೂನಿಯನ್‌ನಲ್ಲಿ ಒಂದು ಸಾಮಾನ್ಯ ಭಾಷಾ ಬಳಕೆಗೆ ಸಹಮತ ಇಲ್ಲಿ ತನಕ ಮೂಡಿ ಬಂದಿಲ್ಲ. ಅದು ಸಾಧ್ಯವೂ ಇಲ್ಲ. ಯಾವ ದೇಶವೂ ತಮ್ಮ ತಮ್ಮ ಭಾಷೆಯನ್ನು ಬಿಟ್ಟುಕೊಡಲು ಸಿದ್ಧರಿಲ್ಲ. ಹೀಗಾಗಿ ಅನುವಾದವೇ ಕೊಂಡಿ. ಅನುವಾದಕರಿಲ್ಲದೇ ಸಂಸತ್ತು ಕಾರ್ಯ ನಿರ್ವಹಿಸಲು ಸಾಧ್ಯವಾಗದಂಥ ಪರಿಸ್ಥಿತಿ ನಿರ್ಮಾಣವಾಗಿದೆ. ತಪ್ಪು ಅಥವಾ ದೋಷಪೂರಿತ ಅನುವಾದ ಅನೇಕ ಸಲ ಸಂಸತ್ತಿನಲ್ಲಿ ಗೊಂದಲ, ಗದ್ದಲಗಳಿಗೆ ಕಾರಣವಾಗಿದ್ದುಂಟು. 2012ರ ಜೂನ್‌ನಲ್ಲಿ ಜರ್ಮನ್ ಬುಂಡೆಸ್ಟಾಗ್ (ಸಂಸತ್ತು) ನೂರಕ್ಕೂ ಹೆಚ್ಚು ಯುರೋಪಿಯನ್ ಯೂನಿಯನ್ ಕಡತಗಳನ್ನು ತಪ್ಪು ಅನುವಾದದ ಕಾರಣದಿಂದ ವಾಪಸ್ ಕಳುಹಿಸಿತ್ತು. ಏಕೆಂದರೆ ಅನುವಾದ ಸಂಪೂರ್ಣ ದೋಷಪೂರಿತವಾಗಿತ್ತು. ಮತ್ತೊಂದು ಸಮಸ್ಯೆ ಎಂದರೆ ಅನುವಾದದಲ್ಲಿ ವಿಳಂಬ. ಉದಾಹರಣೆಗೆ, 2004ರಲ್ಲಿ ಬ್ರಿಟಿಷ್ ಸರಕಾರವು ಹೊಸ ಯುರೋಪಿಯನ್ ಯೂನಿಯನ್ ಪೇಟೆಂಟ್ ಕಾನೂನನ್ನು ಆಗಿನ 20 ಸದಸ್ಯ ದೇಶಗಳ ಭಾಷೆಗಳಿಗೆ ಸಮಯಕ್ಕೆ ಸರಿಯಾಗಿ ಭಾಷಾಂತರಿಸಲು ಕಷ್ಟವಾಗಿದ್ದರಿಂದ, ಬ್ಯಾಕ್‌ಲಾಗ್‌ಗಳು ಬಡ ದೇಶಗಳ ರೋಗಿಗಳ ಜೀವ ಉಳಿಸುವ ಔಷಧಿಗಳಿಂದ ವಂಚಿತರಾಗಲು ಕಾರಣವಾಗಿತ್ತೆಂದು 'ದಿ ಗಾರ್ಡಿಯನ್' ವರದಿ ಮಾಡಿತ್ತು. ಅನುವಾದದ ವೆಚ್ಚವನ್ನು ಕಡಿತಗೊಳಿಸಲು ಸಾಕಷ್ಟು ಕ್ರಮಗಳನ್ನು ಕೈಗೊಳ್ಳಲಾಗಿದ್ದರೂ, ಆ ಕ್ರಮ ಕಾಲಕಾಲಕ್ಕೆ ಹೊಸ ಹೊಸ ಸಮಸ್ಯೆಗಳ ಹುಟ್ಟಿಗೆ ಕಾರಣವಾಗುತ್ತಿರುವುದು ತಲೆನೋವಾಗಿ ಪರಿಣಮಿಸಿದೆ. ಪ್ರಸ್ತುತ ಯುರೋಪಿಯನ್ ಯೂನಿಯನ್ ಪಾರ್ಲಿಮೆಂಟಿನಲ್ಲಿ 4300 ಮಂದಿ ಅನುವಾದಕರಿದ್ದಾರೆ. 800 ಮಂದಿ (interpreters) ವ್ಯಾಖ್ಯಾನಕಾರರಿದ್ದಾರೆ. ಇವರೆಲ್ಲ ಖಾಯಂ ಸಿಬ್ಬಂದಿ. ಇದರ ಹೊರತಾಗಿ ಐನೂರಕ್ಕೂ ಹೆಚ್ಚು ಹವ್ಯಾಸಿ ಅನುವಾದಕರಿದ್ದಾರೆ. ಜಗತ್ತಿನಲ್ಲಿಯೇ ಅತಿ ಹೆಚ್ಚು ಅನುವಾದಕರನ್ನು ತೊಡಗಿಸಿಕೊಂಡ ಸಂಸ್ಥೆಯಿದ್ದರೆ ಅದು ಯುರೋಪಿಯನ್ ಯೂನಿಯನ್ ಪಾರ್ಲಿಮೆಂಟ್. ಹೊಸ ದೇಶ ಈ ಒಕ್ಕೂಟಕ್ಕೆ ಸೇರಿದಾಗ ಅನುವಾದದ ವೆಚ್ಚವೂ ಜಾಸ್ತಿಯಾಗುತ್ತದೆ.

ದಶಕದಲ್ಲಿ ಬದಲಾದ ಭಾರತೀಯ ರೈಲ್ವೆ

ರೈಲ್ವೆಯಲ್ಲಿ ಹೂಡಿಕೆ ಮಾಡುವುದು ಎಂದರೆ ಕೇವಲ ಹಳಿಗಳನ್ನು ನಿರ್ಮಿಸುವುದಲ್ಲ; ಅದು ದೇಶದ ಆರ್ಥಿಕ ಬೆಳವಣಿಗೆ, ರಾಷ್ಟ್ರೀಯ ಭದ್ರತೆ, ಉದ್ಯೋಗ ಸೃಷ್ಟಿ ಹಾಗೂ ಪ್ರಾದೇಶಿಕ ಸಮತೋಲನದ ಅಭಿವೃದ್ಧಿಗೆ ಹೂಡಿಕೆ ಮಾಡಿದಂತಾಗಿದೆ.

ವೀಕೆಂಡ್ ವಿತ್ ಮೋಹನ್
ಮೋಹನ್ ವಿಶ್ವ
vveditoped@gmail.com

ಭಾರತೀಯ ರೈಲ್ವೆಯಲ್ಲಿ 2014ಕ್ಕೂ ಮುನ್ನ ಬಂಡವಾಳ ಹೂಡಿಕೆ ತೀರಾ ಕಡಿಮೆ ಇತ್ತು. ಹೊಸ ಮಾರ್ಗಗಳ ನಿರ್ಮಾಣ, ಡಬ್ಲಿಂಗ್, ಗೇಜ್ ಪರಿವರ್ತನೆ ಹಾಗೂ ವಿದ್ಯುದೀಕರಣದ ಕೆಲಸಗಳು ನಿಧಾನಗತಿಯಲ್ಲಿ ಸಾಗುತ್ತಿದ್ದವು, ಅನೇಕ ಯೋಜನೆಗಳು ವರ್ಷಗಳ ಕಾಲ ಅಪೂರ್ಣವಾಗಿ ಉಳಿದಿದ್ದವು. 2012ರಲ್ಲಿ ಪ್ರಕಟವಾದ ಅನಿಲ್ ಕಾಕೋಡ್ಕರ್ ಸಮಿತಿ ವರದಿಯು ರೈಲ್ವೆ ಸುರಕ್ಷತೆಯ ಕುರಿತು ತೀವ್ರ ಕಳವಳ ವ್ಯಕ್ತಪಡಿಸಿತ್ತು. ಮುಂದಿನ ಐದು ವರ್ಷಗಳಲ್ಲಿ ಸುರಕ್ಷತೆಗಾಗಿ ಸುಮಾರು ₹1 ಲಕ್ಷ ಕೋಟಿ ವಿಶೇಷ ಹೂಡಿಕೆ ಅಗತ್ಯವಿದೆ ಎಂದು ವರದಿ ಶಿಫಾರಸು ಮಾಡಿತ್ತು. ಇದೇ ಅವಧಿಯಲ್ಲಿ ಹಲವು ಅಪಘಾತಗಳು ಸಂಭವಿಸಿದ್ದರಿಂದ ರೈಲ್ವೆಯ ಸುರಕ್ಷತೆ ಕುರಿತು ದೇಶವ್ಯಾಪಿ ಚರ್ಚೆ ನಡೆಯಿತು. 2014ರ ನಂತರ ಭಾರತೀಯ ರೈಲ್ವೆಯನ್ನು ಕೇವಲ ಸಾರಿಗೆ ಇಲಾಖೆಯಾಗಿ ನೋಡದೇ, ದೇಶದ ಆರ್ಥಿಕ ಅಭಿವೃದ್ಧಿಯ ಎಂಜಿನ್ ಎಂಬ ದೃಷ್ಟಿಯಿಂದ ಪರಿಗಣಿಸಲಾಯಿತು. ರೈಲ್ವೆ ಸಚಿವಾಲಯವು ವೇಗ, ಸುರಕ್ಷತೆ, ಆಧುನೀಕರಣ, ವಿದ್ಯುದೀಕರಣ, ಸರಕು ಸಾಗಣೆ, ಪ್ರಯಾಣಿಕರ ಅನುಕೂಲತೆ ಹಾಗೂ ಡಿಜಿಟಲ್ ವ್ಯವಸ್ಥೆಗಳ ಮೇಲೆ ವಿಶೇಷ ಗಮನಹರಿಸಿತು.

ಈ ಬದಲಾವಣೆಯ ಮೊದಲ ಸೂಚನೆ ಬಜೆಟ್‌ನಲ್ಲಿಯೇ ಕಂಡು ಬಂತು. 2013-14ರಲ್ಲಿ ಭಾರತೀಯ ರೈಲ್ವೆಗೆ ವಾರ್ಷಿಕ ಬಂಡವಾಳ ವೆಚ್ಚ ಸುಮಾರು ₹28,000 ಕೋಟಿ ಮಟ್ಟದಲ್ಲಿದ್ದರೆ, 2025-26ರ ವೇಳೆಗೆ ಅದು ₹2.5 ಲಕ್ಷ ಕೋಟಿಗೆ ತಲುಪಿದೆ. ಒಂದು ದಶಕದಲ್ಲಿ ಸುಮಾರು ಒಂಬತ್ತು ಪಟ್ಟು ಹೆಚ್ಚಳವಾಗಿದೆ. ಇದು ಭಾರತೀಯ ರೈಲ್ವೆಯ ಇತಿಹಾಸದಲ್ಲೇ ಅತಿ ದೊಡ್ಡ ಬಂಡವಾಳ ಹೂಡಿಕೆಯಾಗಿದೆ. ಹೆಚ್ಚಿದ ಬಂಡವಾಳ ಹೂಡಿಕೆಯಿಂದ ವರ್ಷಗಳ ಕಾಲ ನನೆಗುದಿಗೆ ಬಿದ್ದಿದ್ದ ಅನೇಕ ಯೋಜನೆಗಳಿಗೆ ವೇಗ ಸಿಕ್ಕಿತು. ಹೊಸ ರೈಲು ಮಾರ್ಗಗಳು, ಡಬ್ಲಿಂಗ್, ಸೇತುವೆಗಳು, ಸುರಂಗಗಳು, ವಿದ್ಯುದೀಕರಣ ಹಾಗೂ ನಿಲ್ದಾಣಗಳ ಅಭಿವೃದ್ಧಿ ಅಭೂತಪೂರ್ವ ವೇಗದಲ್ಲಿ ಆರಂಭವಾಯಿತು.

2014ಕ್ಕೂ ಮೊದಲು ವರ್ಷಕ್ಕೆ ಸರಾಸರಿ ಸುಮಾರು 1,500 ಕಿ.ಮೀ. ಹೊಸ ಹಳಿ, ಡಬ್ಲಿಂಗ್ ಮತ್ತು ಗೇಜ್ ಪರಿವರ್ತನೆ ಕಾಮಗಾರಿ ಪೂರ್ಣಗೊಳ್ಳುತ್ತಿತ್ತು. 2014ರ ನಂತರ ಈ ಪ್ರಮಾಣವು ಸರಾಸರಿ 2,900ರಿಂದ 3,000 ಕಿ.ಮೀ.ಗೆ ಏರಿತು. ಇದು ಹಿಂದಿನ ದಶಕಕ್ಕೆ ಹೋಲಿಸಿದರೆ ಸುಮಾರು ಎರಡು ಪಟ್ಟು ಹೆಚ್ಚಳ. ಇದರ ಪರಿಣಾಮವಾಗಿ ದೆಹಲಿ-ಮುಂಬೈ, ದೆಹಲಿ-ಹೌರಾ, ಚೆನ್ನೈ-ಬೆಂಗಳೂರು, ಮುಂಬೈ-ಅಹಮದಾಬಾದ್, ಹೌರಾ-ಚೆನ್ನೈ ಸೇರಿದಂತೆ ದೇಶದ ಪ್ರಮುಖ ರೈಲು ಮಾರ್ಗಗಳಲ್ಲಿ ಸಂಚಾರ ಸಾಮರ್ಥ್ಯ ಹೆಚ್ಚಾಯಿತು. ಇಂದಿನ ಭಾರತದಲ್ಲಿ ರೈಲ್ವೆ ಕೇವಲ ಪ್ರಯಾಣಿಕರನ್ನು ಸಾಗಿಸುವ ವ್ಯವಸ್ಥೆಯಲ್ಲ. ಇದು ಕೈಗಾರಿಕೆಗಳಿಗೆ ಕಚ್ಚಾವಸ್ತು ತಲುಪಿಸುತ್ತದೆ, ರೈತರ ಉತ್ಪನ್ನಗಳನ್ನು ಮಾರುಕಟ್ಟೆಗೆ ಸಾಗಿಸುತ್ತದೆ, ಸೇನಾ ಪಡೆಗಳಿಗೆ ಗಡಿ ಪ್ರದೇಶಗಳಲ್ಲಿ ವೇಗವಾಗಿ ತಲುಪಲು ನೆರವಾಗುತ್ತದೆ ಮತ್ತು ದೇಶದ ಏಕೀಕರಣವನ್ನು ಬಲಪಡಿಸುತ್ತದೆ. 2014ರ ನಂತರ ಭಾರತೀಯ ರೈಲ್ವೆಯಲ್ಲಿ ಸಂಭವಿಸಿದ ಅತಿದೊಡ್ಡ ಬದಲಾವಣೆ ಎಂದರೆ ಸುರಕ್ಷತಾ ವ್ಯವಸ್ಥೆಯ ಆಧುನೀಕರಣ ಮತ್ತು ಸಂಪೂರ್ಣ ವಿದ್ಯುದೀಕರಣದತ್ತ ನಡೆದ ವೇಗದ ಪಯಣ. ಭಾರತೀಯ ರೈಲ್ವೆ ಪ್ರತಿದಿನ ಸುಮಾರು 2.3 ಕೋಟಿ ಪ್ರಯಾಣಿಕರನ್ನು ಹಾಗೂ ಲಕ್ಷಾಂತರ ಟನ್ ಸರಕುಗಳನ್ನು ಸಾಗಿಸುತ್ತದೆ. ಇಷ್ಟು ದೊಡ್ಡ ವ್ಯವಸ್ಥೆಯಲ್ಲಿ ಅಪಘಾತಗಳನ್ನು ಸಂಪೂರ್ಣವಾಗಿ ತಡೆಯುವುದು ಸವಾಲಿನ ಕೆಲಸ, ಆದರೂ ಕಳೆದ ಒಂದು ದಶಕದಲ್ಲಿ ಅಪಘಾತಗಳ ಸಂಖ್ಯೆಯಲ್ಲಿ ಗಮನಾರ್ಹ ಇಳಿಕೆ ಕಂಡುಬಂದಿದೆ.

2004ರಿಂದ 2014ರ ವರೆಗೆ ಸರಾಸರಿ ವರ್ಷಕ್ಕೆ ಸುಮಾರು 170 ರೈಲು ಅಪಘಾತಗಳು ಸಂಭವಿಸುತ್ತಿದ್ದವು. ಆದರೆ 2014ರ ನಂತರ ಸುರಕ್ಷತಾ ಕ್ರಮಗಳನ್ನು ಬಲಪಡಿಸಿದ ಪರಿಣಾಮ, ಈ ಸಂಖ್ಯೆ ಕ್ರಮೇಣ ಇಳಿಯಿತು. ಇತ್ತೀಚಿನ ವರ್ಷಗಳಲ್ಲಿ ರೈಲು ಅಪಘಾತಗಳ ಸಂಖ್ಯೆ ವರ್ಷಕ್ಕೆ ಸುಮಾರು 10- 20ರ ನಡುವೆ ದಾಖಲಾಗಿದ್ದು, ಈ ಸಾಧನೆಯ ಹಿಂದೆ ಹಳೆಯ ಹಳಿಗಳ ನವೀಕರಣ, ಟ್ರ್ಯಾಕ್ ಪರಿಶೀಲನೆಗೆ ಯಂತ್ರಗಳ ಬಳಕೆ, ಆಧುನಿಕ ಸಿಗ್ನಲಿಂಗ್, ಸೇತುವೆಗಳ ವೈಜ್ಞಾನಿಕ ಪರಿಶೀಲನೆ ಹಾಗೂ ಸುರಕ್ಷತಾ ಹೂಡಿಕೆ ಪ್ರಮುಖ ಕಾರಣಗಳಾಗಿವೆ. ಒಂದು ಕಾಲದಲ್ಲಿ ರೈಲು ಅಪಘಾತಗಳಿಗೆ ಪ್ರಮುಖ ಕಾರಣಗಳಲ್ಲಿ ಒಂದಾಗಿದ್ದದ್ದು, ಮಾನವರಹಿತ ಲೆವೆಲ್ ಕ್ರಾಸಿಂಗ್‌ಗಳು. ವಾಹನ ಚಾಲಕರ ನಿರ್ಲಕ್ಷ್ಯ, ಎಚ್ಚರಿಕೆ ವ್ಯವಸ್ಥೆಯ ಕೊರತೆ ಮತ್ತು ದೃಶ್ಯಮಾನದ ಸಮಸ್ಯೆಗಳಿಂದ ಅನೇಕ ದುರಂತಗಳು ಸಂಭವಿಸುತ್ತಿದ್ದವು. 2014ರ ನಂತರ ಈ ಸಮಸ್ಯೆಯ ಪರಿಹಾರವನ್ನು ಯುದ್ಧೋಪಾದಿಯಲ್ಲಿ ಕೈಗೆತ್ತಿಕೊಳ್ಳಲಾಯಿತು. ಸಾವಿರಾರು ಮಾನವರಹಿತ ಲೆವೆಲ್ ಕ್ರಾಸಿಂಗ್‌ಗಳನ್ನು ಮುಚ್ಚುವುದು, ಮೇಲ್ಸೇತುವೆ ಹಾಗೂ ಕೆಳಸೇತುವೆ ನಿರ್ಮಿಸುವುದು ಅಥವಾ ಮಾನವಸಹಿತ ವ್ಯವಸ್ಥೆಯಾಗಿ ಪರಿವರ್ತಿಸುವ ಕೆಲಸ ನಡೆಯಿತು.

ಹಿಂದಿನ ದಶಕಗಳಲ್ಲಿ ಭಾರತೀಯ ರೈಲುಗಳಲ್ಲಿ ಹೆಚ್ಚಾಗಿ ಬಳಸಲಾಗುತ್ತಿದ್ದ ICF ಕೋಚ್‌ಗಳು ಅಪಘಾತ ಸಂಭವಿಸಿದಾಗ ಒಂದರ ಮೇಲೆ ಒಂದು ಹತ್ತುವ ಸಾಧ್ಯತೆ ಹೆಚ್ಚಾಗಿತ್ತು. ಇದರಿಂದ ಪ್ರಾಣಹಾನಿ ಪ್ರಮಾಣವೂ ಹೆಚ್ಚಾಗುತ್ತಿತ್ತು. ಈ ಸಮಸ್ಯೆಗೆ ಪರಿಹಾರವಾಗಿ ಜರ್ಮನಿಯ ತಂತ್ರಜ್ಞಾನ ಆಧಾರಿತ LHB ಕೋಚ್‌ಗಳನ್ನು ವೇಗವಾಗಿ ಅಳವಡಿಸಲಾಯಿತು. ಇದು ಪ್ರಯಾಣಿಕರ ಸುರಕ್ಷತೆಯಲ್ಲಿ ಕ್ರಾಂತಿಕಾರಿ ಬದಲಾವಣೆಯಾಗಿದೆ. ಭಾರತೀಯ ರೈಲ್ವೆಯ ಅತ್ಯಂತ ಮಹತ್ವಾಕಾಂಕ್ಷೆಯ ಸುರಕ್ಷತಾ ಯೋಜನೆಗಳಲ್ಲಿ ಒಂದಾಗಿದೆ ಕವಚ್. ಇದು ಭಾರತದಲ್ಲೇ ಅಭಿವೃದ್ಧಿಪಡಿಸಲಾದ "Automatic Train Protection' ವ್ಯವಸ್ಥೆಯಾಗಿದ್ದು, ಮಾನವ ತಪ್ಪಿನಿಂದ ಸಂಭವಿಸಬಹುದಾದ ಅಪಘಾತಗಳನ್ನು ತಡೆಯಲು ವಿನ್ಯಾಸಗೊಳಿಸಲಾಗಿದೆ.

2014ರಲ್ಲಿ ಭಾರತೀಯ ರೈಲ್ವೆಯ ಬ್ರಾಡ್‌ಗೇಜ್ ಜಾಲದ ಸುಮಾರು 21,000 ಕಿ.ಮೀ. ಮಾತ್ರ ವಿದ್ಯುದೀಕೃತವಾಗಿತ್ತು. ಉಳಿದ ಮಾರ್ಗಗಳಲ್ಲಿ ಡೀಸೆಲ್ ಎಂಜಿನ್‌ಗಳೇ ಪ್ರಮುಖವಾಗಿದ್ದವು. ಆದರೆ ಕಳೆದ ಒಂದು ದಶಕದಲ್ಲಿ ವಿದ್ಯುದೀಕರಣದಲ್ಲಿ ದಾಖಲೆ ಮಟ್ಟದ ಸಾಧನೆ ಕಂಡುಬಂದಿದೆ. 2025ರ ವೇಳೆಗೆ ಭಾರತೀಯ ರೈಲ್ವೆಯ 99%ಕ್ಕೂ ಹೆಚ್ಚು ಬ್ರಾಡ್ ಗೇಜ್ ಜಾಲ ವಿದ್ಯುದೀಕೃತವಾಗಿದೆ. ವಿಶ್ವದ ಅತಿದೊಡ್ಡ ವಿದ್ಯುದೀಕೃತ ರೈಲು ಜಾಲಗಳಲ್ಲಿ ಭಾರತವೂ ಒಂದು ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಇಂದಿನ ಭಾರತೀಯ ರೈಲ್ವೆ ಕೇವಲ ಹಳಿಗಳ ಮೇಲಿನ ವ್ಯವಸ್ಥೆಯಲ್ಲ; ಅದು ಡಿಜಿಟಲ್ ಮೂಲಸೌಕರ್ಯವನ್ನೂ ಅಳವಡಿಸಿಕೊಂಡಿದೆ. ಆನ್‌ಲೈನ್ ಟಿಕೆಟ್ ವ್ಯವಸ್ಥೆಯ ಸಾಮರ್ಥ್ಯದಲ್ಲಿ ಭಾರೀ ಹೆಚ್ಚಳ, ರೈಲುಗಳ ನೈಜ ಸಮಯದ ಸ್ಥಳ ಮಾಹಿತಿ, GPS ಆಧಾರಿತ ಟ್ರ್ಯಾಕಿಂಗ್, ಡ್ರೋನ್ ಮೂಲಕ ಸೇತುವೆ ಹಾಗೂ ಹಳಿಗಳ ಪರಿಶೀಲನೆ, ಕೃತಕ ಬುದ್ಧಿಮತ್ತೆ ಬಳಸಿ ನಿರ್ವಹಣಾ ವ್ಯವಸ್ಥೆ, ರೈಲು ನಿಲ್ದಾಣಗಳಲ್ಲಿ ಉಚಿತ ವೈ-ಫೈ ಸೇವೆ. ಈ ಬದಲಾವಣೆಗಳು ಭಾರತೀಯ ರೈಲ್ವೆಯನ್ನು ವಿಶ್ವದ ಅತ್ಯಾಧುನಿಕ ರೈಲು ವ್ಯವಸ್ಥೆಗಳ ಸಾಲಿನಲ್ಲಿ ನಿಲ್ಲಿಸಿವೆ.

ಒಂದು ಕಾಲದಲ್ಲಿ ಭಾರತದ ಈಶಾನ್ಯ ರಾಜ್ಯಗಳು ರೈಲ್ವೆ ಅಭಿವೃದ್ಧಿಯಿಂದ ಸಾಕಷ್ಟು ಹಿಂದೆ ಉಳಿದಿದ್ದವು. ಅನೇಕ ರಾಜ್ಯ ರಾಜಧಾನಿಗಳಿಗೆ ರೈಲು ಸಂಪರ್ಕವೇ ಇರಲಿಲ್ಲ. 2014ರ ನಂತರ ಈ ಪ್ರದೇಶಕ್ಕೆ ವಿಶೇಷ ಆದ್ಯತೆ ನೀಡಲಾಯಿತು. ಅರುಣಾಚಲ ಪ್ರದೇಶ ಮೊದಲ ಬಾರಿಗೆ ಬ್ರಾಡ್‌ಗೇಜ್ ರೈಲು ಸಂಪರ್ಕ ಪಡೆಯಿತು, ಮೇಘಾಲಯ ಮೊದಲ ಬಾರಿಗೆ ರೈಲು ನಕ್ಷೆಯಲ್ಲಿ ಸ್ಥಾನ ಪಡೆಯಿತು. ತ್ರಿಪುರಾದ ರಾಜಧಾನಿ ಅಗರ್ತಲಾ ಬ್ರಾಡ್ ಗೇಜ್ ಜಾಲಕ್ಕೆ ಸಂಪರ್ಕಿಸಲ್ಪಟ್ಟಿತು. ಮಣಿಪುರ, ಮಿಜೋರಾಂ, ನಾಗಾಲ್ಯಾಂಡ್ ಮತ್ತು ಸಿಕ್ಕಿಂ ಕಡೆಗೆ ಹೊಸ ರೈಲು ಮಾರ್ಗಗಳ ನಿರ್ಮಾಣಕ್ಕೆ ವೇಗ ದೊರೆಯಿತು. ಅಸ್ಸಾಂನಲ್ಲಿ ಬ್ರಹ್ಮಪುತ್ರ ನದಿಗೆ ಅಡ್ಡಲಾಗಿ ನಿರ್ಮಿಸಲಾದ ಬೋಗಿಬೀಲ್ ಸೇತುವೆ ಭಾರತದ ಅತಿ ಉದ್ದದ ಸೇತುವೆಗಳಲ್ಲಿ ಒಂದಾಗಿದೆ. ಈ ಸೇತುವೆಯಿಂದ ಅಸ್ಸಾಂ ಮತ್ತು ಅರುಣಾಚಲ ಪ್ರದೇಶಗಳ ನಡುವಿನ ಸಂಪರ್ಕ ಸುಧಾರಿಸಿದ್ದು, ಸೇನೆಯ ತ್ವರಿತ ಸಂಚಾರಕ್ಕೂ ಇದು ಮಹತ್ವದ ನೆರವಾಗಿದೆ.

ಭಾರತೀಯ ರೈಲ್ವೆಯ ದೊಡ್ಡ ಸಮಸ್ಯೆಗಳಲ್ಲಿ ಒಂದಾಗಿದ್ದದ್ದು ಪ್ರಯಾಣಿಕ ಮತ್ತು ಸರಕು ರೈಲುಗಳು ಒಂದೇ ಹಳಿಯಲ್ಲಿ ಸಂಚರಿಸುತ್ತಿದ್ದದ್ದು. ಇದರಿಂದ ಎರಡೂ ಸೇವೆಗಳ ವೇಗ ಮತ್ತು ಕಾರ್ಯಕ್ಷಮತೆ ಮೇಲೆ ಪರಿಣಾಮ ಬೀಳುತ್ತಿತ್ತು. ಈ ಸಮಸ್ಯೆಗೆ ಪರಿಹಾರವಾಗಿ Dedicated Freight Corridor ಯೋಜನೆಗೆ ವೇಗ ನೀಡಲಾಯಿತು. ದಾದ್ರಿ (ಉತ್ತರ ಪ್ರದೇಶ)ದಿಂದ ಜವಾಹರಲಾಲ್ ನೆಹರು ಬಂದರು (ಮಹಾರಾಷ್ಟ್ರ)ವರೆಗೆ, ಲೂಧಿಯಾನಾದಿಂದ ಸೋನನಗರವರೆಗೆ ಸುಮಾರು 2,800 ಕಿ.ಮೀ.ಗಿಂತ ಹೆಚ್ಚಿನ ಉದ್ದದ ಈ ಕಾರಿಡಾರ್‌ಗಳಿಂದ ಸರಕು ರೈಲುಗಳು ವೇಗವಾಗಿ ಸಂಚರಿಸಲು ಅವಕಾಶ ದೊರೆತಿದೆ. ಕಳೆದ ಒಂದು ದಶಕದಲ್ಲಿ ಭಾರತೀಯ ರೈಲ್ವೆ ಸರಕು ಸಾಗಣೆಯಲ್ಲೂ ಹೊಸ ದಾಖಲೆಗಳನ್ನು ನಿರ್ಮಿಸಿದೆ. ಕಲ್ಲಿದ್ದಲು, ಉಕ್ಕು, ಸಿಮೆಂಟ್, ಧಾನ್ಯ, ರಾಸಾಯನಿಕಗಳು ಮತ್ತು ಕಂಟೇನರ್ ಸಾಗಣೆಯಲ್ಲಿ ವರ್ಷದಿಂದ ವರ್ಷಕ್ಕೆ ಏರಿಕೆ ಕಂಡುಬಂದಿದೆ. ಇದರ ಪರಿಣಾಮವಾಗಿ ರೈಲ್ವೆಯ ಆದಾಯ ಹೆಚ್ಚುವುದರ ಜೊತೆಗೆ, ದೇಶದ ಲಾಜಿಸ್ಟಿಕ್ಸ್ ವೆಚ್ಚ ಕಡಿಮೆಯಾಗಲು ಸಹ ನೆರವಾಗಿದೆ. ಕೈಗಾರಿಕೆಗಳ ಸ್ಪರ್ಧಾತ್ಮಕ ಸಾಮರ್ಥ್ಯವನ್ನು ಹೆಚ್ಚಿಸುವಲ್ಲಿ ಇದಕ್ಕೆ ಮಹತ್ವದ ಪಾತ್ರವಿದೆ.

ರೈಲ್ವೆಯಲ್ಲಿ ಹೂಡಿಕೆ ಮಾಡುವುದು ಎಂದರೆ ಕೇವಲ ಹಳಿಗಳನ್ನು ನಿರ್ಮಿಸುವುದಲ್ಲ; ಅದು ದೇಶದ ಆರ್ಥಿಕ ಬೆಳವಣಿಗೆ, ರಾಷ್ಟ್ರೀಯ ಭದ್ರತೆ, ಉದ್ಯೋಗ ಸೃಷ್ಟಿ ಹಾಗೂ ಪ್ರಾದೇಶಿಕ ಸಮತೋಲನದ ಅಭಿವೃದ್ಧಿಗೆ ಹೂಡಿಕೆ ಮಾಡಿದಂತಾಗಿದೆ. 2014ರ ನಂತರದ ಭಾರತೀಯ ರೈಲ್ವೆಯ ಪರಿವರ್ತನೆಯನ್ನು ಅರ್ಥಮಾಡಿಕೊಳ್ಳಬೇಕಾದರೆ ಕೇವಲ ಹೊಸ ರೈಲುಗಳ ಸಂಖ್ಯೆಯನ್ನು ನೋಡುವುದಷ್ಟೇ ಸಾಲದು. ವಿದ್ಯುದೀಕರಣ, ಸುರಕ್ಷತೆ, ಆಧುನಿಕ ತಂತ್ರಜ್ಞಾನ, ಸೇತುವೆಗಳು, ಸುರಂಗಗಳು, ಈಶಾನ್ಯ ಭಾರತದ ಸಂಪರ್ಕ, ಸರಕು ಸಾಗಣೆಯ ಕ್ರಾಂತಿ ಹಾಗೂ ವಿಶ್ವಮಟ್ಟದ ಮೂಲಸೌಕರ್ಯ ನಿರ್ಮಾಣದ ಸಂಪೂರ್ಣ ಚಿತ್ರಣವನ್ನು ನೋಡಬೇಕಾಗುತ್ತದೆ, ಇವೆಲ್ಲವೂ ಭಾರತೀಯ ರೈಲ್ವೆಯ ಹೊಸ ಅಧ್ಯಾಯವಾಗಿದೆ.

ಓದುಗರ ಓಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ತಲೆಹರಟೆಯಲ್ಲ ತಿಳಿವು

ಶ್ರೀ ಶಿರ ಹೆಗಡೆ ಅವರ 'ತಲೆ ಹರಟೆ' ಬರಹ 'ಧ್ಯಾನವೆಂದರೆ ರುಚಿಗೆ ತಕ್ಕಷ್ಟು ಉಪ್ಪು' ತಲೆ ಹರಟೆಯಂತೆ ಕಾಣದೇ ತಲೆಗೊಂದು ಕೆಲಸ ಕೊಟ್ಟಿತು. ಧ್ಯಾನ ಧರ್ಮವೋ, ಔಷಧಿಯೋ ಎಂಬುದು ತಲೆ ತಿನ್ನುವಂತೆ ಮಾಡಿದೆ. ಸಾಮಾನ್ಯವಾಗಿ 'ಧ್ಯಾನಾಸಕ್ತ' ಅಂದರೆ ಧರ್ಮದ ಪೋಷಕ, ರಕ್ಷಕ ಎಂದೇ ತಿಳಿದಂತಹುದು. ಕಾರಣ, ಈ ಧ್ಯಾನಕ್ಕೆ ಆಸಕ್ತಿ ತೋರುವವರೆಲ್ಲ ಹೆಚ್ಚಾಗಿ, ಪರಮಾತ್ಮನ ಸನ್ನಿಧಿ ತಲುಪಿ, ಬದುಕಿನ ಉದ್ದೇಶ ಸಫಲಗೊಳಿಸಿಕೊಂಡು, ಮೋಕ್ಷದ ದಾರಿ ಹುಡುಕುವವರು. ಇದರರ್ಥ, ಧ್ಯಾನ ಅಂದರೆ ಏಕಾಂತ, ಸನ್ಯಾಸಿ ಪ್ರವೃತ್ತಿ, ಈ ಲೋಕದ ಜಂಜಾಟದಿಂದ ಮುಕ್ತಿ ಪಡೆಯಲು ಹವಣಿಸುವ ಸಮಯ! ಆದರೆ ಈಗಿತ್ತಲಾಗಿ, ಕ್ರೀಡಾಪಟುಗಳಾದಿಯಾಗಿ, ಎಲ್ಲರೂ ಧ್ಯಾನಕ್ಕೆ ಮುಂದಾಗುತ್ತಿರುವುದು ಆರೋಗ್ಯ ರಕ್ಷಣೆಗೆ ಎಂಬ ಹೊಸ ವ್ಯಾಖ್ಯಾನವೂ ಬರುತ್ತಿದೆ. ಧರ್ಮದ ಹೆಸರಲ್ಲೋ ಅಥವಾ ಆರೋಗ್ಯದ ಹೆಸರಲ್ಲೋ, ಒಂದು ಹದ ಅಥವಾ ಮಿತಿ ಎಂಬುದಿರಲೇ ಬೇಕು. ಅತಿ ಧ್ಯಾನ, ಜೀವನವನ್ನೇ ಕಳೆದುಕೊಳ್ಳುವಂತಾದರೂ ಆದೀತು.

- ಶಂಕರನಾರಾಯಣ ಭಟ್, ಮಾಡಗೇರಿ, ಹೊನ್ನಾವರ

ಅಪರಾಧಿಗಳ ಹಾವಳಿ

ರಾಜ್ಯದಲ್ಲಿ ಮತ್ತು ದೇಶದಲ್ಲಿ ಕ್ರಿಮಿನಲ್‌ಗಳ ಹಾವಳಿ ಮಿತಿಮೀರಿದ ಸ್ಥಿತಿ ತಲುಪಿದೆ. ಪದೇಪದೆ ದೇಶದಾದ್ಯಂತ ಹುಸಿ ಬಾಂಬ್ ಬೆದರಿಕೆ ಇಮೇಲ್ ಕಳಿಸುವ, ಸೈಬರ್ ವಂಚನೆ ಮೂಲಕ ಹಣ ದೋಚುವ ಖದೀಮರನ್ನು ಆಧುನಿಕ ತಂತ್ರಜ್ಞಾನದ ನೆರವಿನಿಂದ ಪತ್ತೆ ಹಚ್ಚುವ ಮತ್ತು ಶಿಕ್ಷಿಸುವ ಕ್ರಮವಾಗಬೇಕಾಗಿದೆ. ಇದು ಕ್ರಿಮಿನಲ್‌ಗಳು ಎಲ್ಲೋ ಅಡಗಿ ಕುಳಿತು, ಅಲ್ಲಿಂದಲೇ ಸೈಬರ್ ವಂಚನೆ ಮಾಡುತ್ತಾ ನಮ್ಮ ಪೊಲೀಸರಿಗೆ ಸವಾಲು ಹಾಕುತ್ತಿರುವಂತಿದೆ. ಗೃಹ ಇಲಾಖೆ ಇನ್ನೂ ಹೆಚ್ಚಿನ ಆಧುನಿಕ ತಂತ್ರಜ್ಞಾನದ ನೆರವಿನಿಂದ ಈ ಸೈಬರ್ ವಂಚಕ ಕ್ರಿಮಿನಲ್‌ಗಳ ಹೆಡೆಮುರಿಕಟ್ಟಿ ಜೈಲಿಗಟ್ಟಬೇಕು.

- ಎಸ್.ಎನ್ ರಮೇಶ್, ಸಾತನೂರು

ಪ್ರಕರಣಗಳ ವಾಪಸ್ ಬೇಡ

ಸಮಾಜದ ಶಾಂತಿಗೆ ಭಂಗ ತರುವ, ಕೆಲವೊಮ್ಮೆ ಅಮಾಯಕರ ಜನರ ಜೀವಕ್ಕೆ ಕುತ್ತು ತರುವ ಕೋಮುಗಲಭೆಗಳಂತಹ ಪ್ರಕರಣಗಳಲ್ಲಿ ಭಾಗವಹಿಸಿದ ಸಮಾಜಘಾತುಕ ಶಕ್ತಿಗಳ ಮೇಲಿನ ಕ್ರಿಮಿನಲ್ ಪ್ರಕರಣಗಳನ್ನು ಕೈಬಿಟ್ಟರೆ ಸಮಾಜದ ಅಶಾಂತಿಗೆ ಪ್ರಚೋದನೆ ಕೊಟ್ಟಂತಾಗುವುದಿಲ್ಲವೇ? ಈ ಪ್ರಕರಣಗಳ ಗಂಭೀರತೆ ಅರಿತು ಹೈಕೋರ್ಟ್, ಸರಕಾರದ ನಿರ್ಣಯದ ವಿರುದ್ಧ ತಡೆಯಾಜ್ಞೆ ನೀಡಿದ್ದು ಸ್ವಾಗತಾರ್ಹ. ಯಾವುದೇ ಪಕ್ಷದ ಸರಕಾರ ಅಧಿಕಾರದಲ್ಲಿರಲಿ, ವೋಟ್ ಬ್ಯಾಂಕ್ ರಾಜಕಾರಣಕ್ಕಾಗಿ ಸರಕಾರಗಳು ಇಂಥ ಕೆಟ್ಟ ಸಂಪ್ರದಾಯಕ್ಕೆ ಮಣೆ ಹಾಕಬಾರದು.

- ವಿ.ಜಿ ಇನಾಮದಾರ, ಸಾರವಾಡ

ತೆರವು ಶ್ಲಾಘನೀಯ

ಬೆಂಗಳೂರಿನಲ್ಲಿ ಪಾದಚಾರಿ ಮಾರ್ಗಗಳ ಒತ್ತುವರಿ ತೆರವು ಮಾಡಿಸುತ್ತಿರುವುದು ಶ್ಲಾಘನೀಯ. ಕಂದಾಯ ಸಚಿವರಾಗಿದ್ದಾಗ ಇಲಾಖೆಯನ್ನು ಒಂದು ತಹಬಂದಿಗೆ ತಂದು ಜನಮನ್ನಣೆ ಪಡೆದ ಕೃಷ್ಣಬೈರೇಗೌಡರು ಈಗ ಜಿಬಿಎ ಸಚಿವರಾಗಿ ಪಾದಚಾರಿ ಮಾರ್ಗ ಒತ್ತುವರಿ ತೆರವಿಗೆ ಕಂಕಣ ತೊಟ್ಟಿರುವುದು ಸ್ವಾಗತಾರ್ಹ. ರಾಜ್ಯದ ಎಲ್ಲಾ ನಗರಗಳಲ್ಲೂ ಪಾದಚಾರಿ ಮಾರ್ಗ ಒತ್ತುವರಿ ತೆರವು ಮಾಡುವುದು ಸೂಕ್ತ. ಅಲ್ಲಿ ಜನರು ತಮ್ಮ ವಾಹನಗಳ ಪಾರ್ಕಿಂಗ್ ಮಾಡದಂತೆ ನೋಡಿಕೊಳ್ಳುವುದೂ ಅಗತ್ಯವಾಗಿದೆ.

- ಬೆಸಗರಹಳ್ಳಿ ರವಿ ಪ್ರಸಾದ್, ಮೈಸೂರು

ಓದುಗರ ಒಣಿಗೆ ಭೇಟಿ ಕೊಡಿ
ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ದೇಶದ ಮಾನ ಉಳಿಸಲು ಚಿನ್ನ ಅಡವಿಟ್ಟ ರಾತ್ರಿ

ಅಮೃತಕಾಲ
ಲೀನಾ ಜೋಶಿ
vveditoped@gmail.com

ಇತಿಹಾಸದಲ್ಲಿ ಕೆಲವು ಕ್ಷಣಗಳಿರುತ್ತವೆ. ಆ ಕ್ಷಣಗಳಲ್ಲಿ ತೆಗೆದುಕೊಳ್ಳುವ ಒಂದು ನಿರ್ಧಾರ ಇಡೀ ರಾಷ್ಟ್ರದ ಭವಿಷ್ಯವನ್ನು ಬದಲಾಯಿಸುತ್ತದೆ. ಮೇ 1991, ದೆಹಲಿಯಲ್ಲಿ ಬಿರು ಬಿಸಿಲು. ಚುನಾವಣೆಯ ರಣರಂಗ. ಹಣಕಾಸು ಮಂತ್ರಿ ಯಶ್ವಂತ್ ಸಿನ್ಹಾ ತಮ್ಮ ಎದುರಿಗಿದ್ದ ಫೈಲ್ ನೋಡುತ್ತಾ ನೂರಾರು ಯೋಚನೆಗಳಲ್ಲಿ ಮುಳುಗಿ ಹೋಗಿದ್ದರು. ಮತ್ತೊಮ್ಮೆ ಆರ್‌ಬಿಐ ಡೆಪ್ಯುಟಿ ಗವರ್ನರ್ ರಂಗರಾಜನ್‌ಗೆ ಫೋನ್ ಹಾಯಿಸಿದರು. 'ಬೇರೆ ಏನೂ ಆಪ್ಷನ್ ಇಲ್ಲವಾ, ಮತ್ತೊಮ್ಮೆ ನೋಡಿ' ಎಂದರು. ರಂಗರಾಜನ್, 'ಸರ್, ನಾನು ಹೇಳಿದ್ದು ಎರಡೇ ಆಪ್ಷನ್. ಸಾಲ ತೀರಿಸಲಿಕ್ಕೆ ಆಗಲ್ಲ ಎಂದು ಕೈ ಎತ್ತಿ ಬಿಡೋಣ. ಲ್ಯಾಟಿನ್ ಅಮೆರಿಕಾ ದೇಶಗಳು ಹಾಗೇ ಮಾಡುತ್ತಿದ್ದಾವೆ.' ಆಗ ಯಶ್ವಂತ್, 'ಇಲ್ಲ, ಇಲ್ಲ, ಕೊಟ್ಟ ಸಾಲ ತೀರಿಸದೇ ಇದ್ದರೆ ಮಾನ ಉಳಿಯುವುದಿಲ್ಲ. ಇರಲಿ ಬಿಡಿ' ಎಂದು ರಿಸೀವರ್ ಇಟ್ಟು ಸೀದಾ ಪ್ರಧಾನಿ ಚಂದ್ರಶೇಖರ್ ನಿವಾಸಕ್ಕೆ ತೆರಳಿದರು. ಪ್ರಧಾನಿ ಚಂದ್ರಶೇಖರ್ ಕ್ಯಾಬಿನೆಟ್ ಸೆಕ್ರೆಟರಿ ನರೇಶ್ ಚಂದ್ರ ಬಳಿ 'ಈ ದೇಶ ನನ್ನನ್ನು ಯಾವ ರೀತಿ ನೆನಪಿಸಿಕೊಳ್ಳಬಹುದು, ನರೇಶ್?' ಎಂದು ಕೇಳಿದರು. 'ದೇಶವನ್ನು ದಿವಾಳಿ ಎಂದು ಘೋಷಿಸುವುದಕ್ಕಿಂತ, ದೇಶದ ಮಾನ ಕಾಪಾಡಿದ ಪ್ರಧಾನಿ ಎಂದು ಇತಿಹಾಸ ನಿಮ್ಮನ್ನು ನೆನಪಿಸಿಕೊಳ್ಳುತ್ತದೆ', ಎಂದರು. ಒಮ್ಮೆ ವಿಚಲಿತರಾದಂತೆ ಕಂಡ ಚಂದ್ರಶೇಖರ್, ಫೈಲ್‌ಗೆ ಸಹಿ ಹಾಕಿದರು.

ಇಂದು ಭಾರತ ವಿಶ್ವದ ಅಗ್ರ ಆರ್ಥಿಕ ಶಕ್ತಿಗಳಲ್ಲಿ ಒಂದಾಗಿದೆ. ನೂರಾರು ಬಿಲಿಯ ಡಾಲರ್‌ಗಳ ವಿದೇಶಿ ವಿನಿಮಯ ರಿಜರ್ವ್ ಹೊಂದಿದೆ. ಭಾರತೀಯ ರಿಸರ್ವ್ ಬ್ಯಾಂಕ್ ವಿಶ್ವದಲ್ಲೇ ಅತಿ ಹೆಚ್ಚು ಚಿನ್ನ ಸಂಗ್ರಹ ಹೊಂದಿರುವ ಕೇಂದ್ರ ಬ್ಯಾಂಕ್‌ಗಳಲ್ಲಿ ಒಂದಾಗಿದೆ. ಇಂದು ಭಾರತ ವಿಶ್ವಕ್ಕೆ ಸಾಲ ನೀಡುವ ಸಾಮರ್ಥ್ಯವನ್ನೂ ಹೊಂದಿದೆ. ಆದರೆ, ಇದೇ ಭಾರತ ಕೇವಲ ಮೂರು ದಶಕಗಳ ಹಿಂದೆ ವಿಶ್ವದ ಮುಂದೆ ಕೈಚಾಚುವ ಪರಿಸ್ಥಿತಿಗೆ ಬಂದಿತ್ತು ಎಂಬುದು ಇಂದಿನ ಯುವ ಪೀಳಿಗೆಗೆ ಆಶ್ಚರ್ಯವಾಗಬಹುದು. 1991ರಲ್ಲಿ ಭಾರತದ ಬಳಿ ಕೇವಲ ಎರಡು ವಾರಗಳ ಆಮದು ಮಾಡಲು ಸಾಕಾಗುವಷ್ಟು ಮಾತ್ರ ವಿದೇಶಿ ವಿನಿಮಯ ಉಳಿದಿತ್ತು. ಪೆಟ್ರೋಲ್ ಖರೀದಿಸಲು ಡಾಲರ್ ಇರಲಿಲ್ಲ. ಔಷಧಿ ಆಮದು ಮಾಡಿಕೊಳ್ಳಲು ಹಣ ಇರಲಿಲ್ಲ, ವಿದೇಶಿ ಸಾಲದ ಬಡ್ಡಿ ಪಾವತಿಸಲು ಸಾಧ್ಯವಾಗದ ಪರಿಸ್ಥಿತಿ ನಿರ್ಮಾಣವಾಗಿತ್ತು. ಜಗತ್ತಿನ ಹಣಕಾಸು ಸಂಸ್ಥೆಗಳು ಭಾರತವನ್ನು ಅನುಮಾನದಿಂದ ನೋಡುತ್ತಿದ್ದವು. ಒಂದೇ ಒಂದು ತಪ್ಪು ನಿರ್ಧಾರ ಭಾರತವನ್ನು ಸಾರ್ವಭೌಮ ದಿವಾಳಿ ರಾಷ್ಟ್ರ (Sovereign Default) ಎಂದು ಘೋಷಿಸುವ ಸ್ಥಿತಿಗೆ ತಳ್ಳಬಹುದಿತ್ತು.

ಭಾರತ ಆ ಸ್ಥಿತಿಗೆ ಒಂದೇ ದಿನದಲ್ಲಿ ತಲುಪಿರಲಿಲ್ಲ. ಅದರ ಹಿಂದೆ ಸುಮಾರು 10 ವರ್ಷಗಳ ಆರ್ಥಿಕ ಮತ್ತು ರಾಜಕೀಯ ಘಟನೆಗಳ ಸರಪಳಿಯಿತ್ತು. 1980ರ ಆರಂಭದಲ್ಲಿ ಭಾರತದ ಆರ್ಥಿಕತೆ ನಿಧಾನವಾಗಿ ಬೆಳೆಯುತ್ತಿತ್ತು. ದೇಶದ ಮೂಲಸೌಕರ್ಯ ಅಭಿವೃದ್ಧಿಪಡಿಸಲು ದೊಡ್ಡ ಪ್ರಮಾಣದ ಹೂಡಿಕೆಯ ಅಗತ್ಯವಿತ್ತು. ರಸ್ತೆಗಳು, ವಿದ್ಯುತ್, ದೂರಸಂಪರ್ಕ, ಸಾರ್ವಜನಿಕ ವಲಯದ ಕೈಗಾರಿಕೆಗಳು, ರಸಗೊಬ್ಬರ ಕಾರ್ಖಾನೆಗಳು, ನೀರಾವರಿ ಯೋಜನೆಗಳು- ಇವೆಲ್ಲಕ್ಕೂ ಅಪಾರ ಹಣ ಬೇಕಾಗಿತ್ತು. ಸರಕಾರದ ಆದಾಯದ ಪ್ರಮಾಣ ಅಷ್ಟಿರಲಿಲ್ಲ, ಹೀಗಾಗಿ ಸರಕಾರ ವಿಶ್ವಬ್ಯಾಂಕ್, ಅಂತಾರಾಷ್ಟ್ರೀಯ ಹಣಕಾಸು ಸಂಸ್ಥೆಗಳು ಮತ್ತು ವಿದೇಶಿ ವಾಣಿಜ್ಯ ಬ್ಯಾಂಕ್‌ಗಳಿಂದ ನಿರಂತರವಾಗಿ ಸಾಲ ಪಡೆಯುತ್ತಿತ್ತು. ಆರಂಭದಲ್ಲಿ ಇದರಿಂದ ದೊಡ್ಡ ಸಮಸ್ಯೆ ಕಾಣಿಸಲಿಲ್ಲ. ಯಾಕೆಂದರೆ ಆರ್ಥಿಕ ಬೆಳವಣಿಗೆಯ ವೇಗವೂ ಉತ್ತಮವಾಗಿತ್ತು. ಯಾರೂ ಗಮನಿಸದ ಒಂದು ವಿಷಯ ನಿಧಾನವಾಗಿ ದೊಡ್ಡ ಸಮಸ್ಯೆಯಾಗಿ ಬೆಳೆಯುತ್ತಿತ್ತು.

ಸಾಲದ ಜೊತೆಗೆ ಹೆಚ್ಚಾಗುತ್ತಿದ್ದಿದ್ದು ಸಾಲಕ್ಕಿಂತ ವೇಗವಾಗಿ ವೃದ್ಧಿಯಾಗುತಿದ್ದ ಸಾಲದ ಮೇಲಿನ ಬಡ್ಡಿ. 1980ರ ಆರಂಭದಲ್ಲಿ ಭಾರತದ ಒಟ್ಟು ವಿದೇಶಿ ಸಾಲ ಸುಮಾರು 20 ಬಿಲಿಯ ಅಮೆರಿಕನ್ ಡಾಲರ್ (ಆಗಿನ ಲೆಕ್ಕದಲ್ಲಿ ಸುಮಾರು 16,000 ಕೋಟಿ). 1991ರ ವೇಳೆಗೆ ಅದು ಸುಮಾರು 70 ಬಿಲಿಯ ಡಾಲರ್ ತಲುಪಿತ್ತು.

ಭಾಗ-1

ರಾಜೀವ್ ಗಾಂಧಿಯ ಕನಸು

1984ರಲ್ಲಿ ಪ್ರಧಾನಿ ಇಂದಿರಾ ಗಾಂಧಿ ಹತ್ಯೆಯಾದ ನಂತರ ಪ್ರಧಾನ ಮಂತ್ರಿಯಾಗಿದ್ದ ರಾಜೀವ್ ಗಾಂಧಿ, ಭಾರತದ ಆರ್ಥಿಕತೆಯನ್ನು ಆಧುನೀಕರಿಸಲು ಬಯಸಿ ಕಂಪ್ಯೂಟರ್, ದೂರಸಂಪರ್ಕ, ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ಹೆಚ್ಚಿನ ಆದ್ಯತೆ ನೀಡಿದರು. ಕೆಲವು ಕೈಗಾರಿಕೆಗಳ ಮೇಲಿನ ನಿಯಂತ್ರಣ ಸಡಿಲಗೊಳಿಸಿದರು. ಅಭಿವೃದ್ಧಿಗೆ ಸರಕಾರದ ವೆಚ್ಚವೂ ಭಾರಿ ಪ್ರಮಾಣದಲ್ಲಿ ಹೆಚ್ಚಾಯಿತು.

ಪರಿಣಾಮವಾಗಿ ಹಣಕಾಸು ಕೊರತೆ ನಿರಂತರವಾಗಿ ಏರತೊಡಗಿತು. 1990-91ರ ವೇಳೆಗೆ ಅದು ಭಾರತದ ಜಿಡಿಪಿಯ ಸುಮಾರು 8.4% ತಲುಪಿತ್ತು. ಇದು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಕ್ಕೆ ಅಪಾಯದ ಮಟ್ಟವೆಂದು ಅರ್ಥಶಾಸ್ತ್ರಜ್ಞರು ಎಚ್ಚರಿಸಿದ್ದರು. ಸರಕಾರ ತನ್ನ ಆದಾಯಕ್ಕಿಂತ ಹೆಚ್ಚು ಖರ್ಚು ಮಾಡುತ್ತಿತ್ತು. ಆ ಕೊರತೆಯನ್ನು ಮತ್ತೆ ಸಾಲ ಪಡೆದು ತುಂಬಲಾಗುತ್ತಿತ್ತು.

ವಿದೇಶಿ ವಿನಿಮಯ ಯಾಕೆ ಮುಖ್ಯ? ನಮ್ಮ ದೇಶದ ಬಳಿ ಎಷ್ಟು ರೂಪಾಯಿ ಇದ್ದರೂ ಸಾಕಾಗುವುದಿಲ್ಲ, ವಿದೇಶದಿಂದ ತೈಲ, ಯಂತ್ರೋಪಕರಣ, ರಸಗೊಬ್ಬರ, ಔಷಧಿ ಮತ್ತು ತಂತ್ರಜ್ಞಾನ ಖರೀದಿಸಲು ಡಾಲರ್ ಬೇಕು. ಡಾಲರ್ ಸಂಗ್ರಹವನ್ನೇ ವಿದೇಶಿ ವಿನಿಮಯ ಮೀಸಲು ಎಂದು ಕರೆಯುತ್ತಾರೆ. ಮನೆಯಲ್ಲಿರುವ ಹಣ ಮುಗಿದರೆ ಕುಟುಂಬ ಸಂಕಷ್ಟಕ್ಕೆ ಸಿಲುಕುವಂತೆ, ವಿದೇಶಿ ವಿನಿಮಯ ಮುಗಿದರೆ ದೇಶವೇ ಸಂಕಷ್ಟಕ್ಕೆ ಸಿಲುಕುತ್ತದೆ. 1980ರ ಕೊನೆಯ ವೇಳೆಗೆ ಭಾರತದ ಡಾಲರ್ ಸಂಗ್ರಹ ವೇಗವಾಗಿ ಕರಗತೊಡಗಿತ್ತು.

ಸಂಕಷ್ಟದ ಮೇಲೆ ಬರೆ

ಆಗಸ್ಟ್ 1990, ಇರಾಕ್ ಅಧ್ಯಕ್ಷ ಸದ್ದಾಂ ಹುಸೇನ್ ಕುವೈತ್ ಮೇಲೆ ದಾಳಿ ನಡೆಸಿದರು. ಗಲ್ಫ್ ಯುದ್ಧ ಆರಂಭವಾಯಿತು. ಯುದ್ಧ ಆರಂಭವಾದ ಕೆಲವೇ ದಿನಗಳಲ್ಲಿ ಕಚ್ಚಾತೈಲದ ಬೆಲೆಗಳು ಭಾರಿ ಪ್ರಮಾಣದಲ್ಲಿ ಏರಿದವು. ಭಾರತ ತನ್ನ ಅಗತ್ಯದ ಬಹುಪಾಲು ಕಚ್ಚಾತೈಲವನ್ನು ಗಲ್ಫ್ ರಾಷ್ಟ್ರಗಳಿಂದ ಆಮದು ಮಾಡಿಕೊಳ್ಳುತ್ತಿತ್ತು. ಬೆಲೆ ದುಪ್ಪಟ್ಟಾಯಿತು, ಪ್ರತಿದಿನವೂ ಹೆಚ್ಚು ಡಾಲರ್ ಖರ್ಚಾಗತೊಡಗಿತು. ಗಲ್ಫ್ ರಾಷ್ಟ್ರಗಳಲ್ಲಿ ಕೆಲಸ ಮಾಡುತ್ತಿದ್ದ ಸಾವಿರಾರು ಭಾರತೀಯರು ಭಾರತಕ್ಕೆ ಓಡಿ ಬಂದರು. ಸರಕಾರ ಲಕ್ಷಾಂತರ ಭಾರತೀಯರನ್ನು ಕುವೈತ್ ಮತ್ತು ಇರಾಕ್‌ನಿಂದ ವಿಮಾನದ ಮೂಲಕ ಸ್ವದೇಶಕ್ಕೆ ಕರೆತಂದಿತು. ಇದರಿಂದ ವಿದೇಶದಿಂದ ಬರುತ್ತಿದ್ದ ಹಣದ ಹರಿವೂ ಕಡಿಮೆಯಾಯಿತು.

ಮತ್ತೊಂದು ಆಘಾತ- ಸೋವಿಯತ್ ಒಕ್ಕೂಟದ ಪತನ. ಭಾರತದ ವಿಶ್ವಸನೀಯ ಪಾಲುದಾರ ಸೋವಿಯತ್ ಒಕ್ಕೂಟ 1991ರಲ್ಲಿ ವಿಭಜನೆಯ ಹಂತಕ್ಕೆ ತಲುಪಿತು. ಭಾರತ ಮತ್ತು ಸೋವಿಯತ್ ಒಕ್ಕೂಟದ ನಡುವೆ ರೂಬಲ್ ಆಧಾರಿತ ವ್ಯಾಪಾರ ನಡೆಯುತ್ತಿತ್ತು. ಆ ವ್ಯವಸ್ಥೆಯೇ ಕುಸಿಯಿತು. ಭಾರತದ ರಫ್ತು ನೆಲ ಕಚ್ಚಿತು. ಆರ್ಥಿಕ ಸಮಸ್ಯೆಗಳ ಜೊತೆಗೆ ರಾಜಕೀಯ ಸ್ಥಿರತೆಯೂ ಇರಲಿಲ್ಲ. 1989ರಲ್ಲಿ ಕಾಂಗ್ರೆಸ್ ಸರಕಾರ ಅಧಿಕಾರ ಕಳೆದುಕೊಂಡಿತು. ವಿ.ಪಿ. ಸಿಂಗ್ ಪ್ರಧಾನಿಯಾದರು. ಮಂಡಲ್ ಆಯೋಗದ ಶಿಫಾರಸು ಜಾರಿಗೆ ಬಂದ ನಂತರ ದೇಶದಾದ್ಯಂತ ಪ್ರತಿಭಟನೆಗಳು ಭುಗಿಲೆದ್ದವು. ಸರಕಾರ ಪತನವಾಯಿತು. ನಂತರ ಚಂದ್ರಶೇಖರ್ ಕಾಂಗ್ರೆಸ್ ಬೆಂಬಲದೊಂದಿಗೆ ಪ್ರಧಾನಿಯಾದರು. ಆದರೆ ಅದು ಅಲ್ಪಮತ ಸರಕಾರ. ದೇಶ ಚುನಾವಣೆ ಎದುರಿಸುತ್ತಿತ್ತು. ಅಂತಹ ಸಮಯದಲ್ಲೇ ಭಾರತದ ಆರ್ಥಿಕತೆ ಕುಸಿಯುತ್ತಿತ್ತು.

1991ರ ಆರಂಭಕ್ಕೆ ವಿದೇಶಿ ಬ್ಯಾಂಕುಗಳು ಭಾರತಕ್ಕೆ ಹೊಸ ಸಾಲ ನೀಡಲು ಹಿಂದೇಟು ಹಾಕಿದವು. ಕೆಲವು ಬ್ಯಾಂಕುಗಳು ಭಾರತದ ಅಲ್ಪಾವಧಿ ಸಾಲಗಳನ್ನು ನವೀಕರಿಸಲು ನಿರಾಕರಿಸಿದವು. ವಿದೇಶಿ ಹೂಡಿಕೆದಾರರು ಹಣ ಹಿಂತೆಗೆದುಕೊಳ್ಳಲು ಆರಂಭಿಸಿದರು. ಭಾರತದ ಕ್ರೆಡಿಟ್ ರೇಟಿಂಗ್ ಕುಸಿಯುತ್ತಿತ್ತು. ವಿದೇಶಿ ಮಾಧ್ಯಮಗಳಲ್ಲಿ ಒಂದೇ ಪ್ರಶ್ನೆ ಕೇಳಲಾಗುತ್ತಿತ್ತು- ಭಾರತ ತನ್ನ ಸಾಲವನ್ನು ಮರುಪಾವತಿಸಬಹುದೇ? ಮೇ 1991ರ ವೇಳೆಗೆ ಭಾರತದ ವಿದೇಶಿ ವಿನಿಮಯ ಮೀಸಲು ಸುಮಾರು 1.2 ಬಿಲಿಯ ಡಾಲರ್ ಮಾತ್ರ ಉಳಿದಿತ್ತು. ಅದು ದೇಶದ ಎರಡು ವಾರಗಳ ಆಮದಿಗೆ ಸಾಕು. ದೇಶದ ಮುಂದೆ ಈಗ ಒಂದೇ ಪ್ರಶ್ನೆ. ಭಾರತ ಡೀಫಾಲ್ಟ್ ಆಗಬೇಕೇ ಅಥವಾ ರಾಷ್ಟ್ರದ ಗೌರವದ ಸಂಕೇತವಾದ ಚಿನ್ನವನ್ನು ಅಡವಿಡಬೇಕೇ? ಈ ಪ್ರಶ್ನೆಗೆ ಉತ್ತರ ಹುಡುಕಲು ದೆಹಲಿಯಲ್ಲಿ

ಸರಣಿ ರಹಸ್ಯ ಸಭೆಗಳು ಆರಂಭವಾದವು.

ಹಣಕಾಸು ಸಚಿವಾಲಯ, ಭಾರತೀಯ ರಿಸರ್ವ್ ಬ್ಯಾಂಕ್, ಕ್ಯಾಬಿನೆಟ್ ಕಾರ್ಯದರ್ಶಿ, ಆರ್ಥಿಕ ಸಲಹೆಗಾರರು- ಎಲ್ಲರೂ ನಿರಂತರ ಸಭೆಗಳನ್ನು ನಡೆಸುತ್ತಿದ್ದರು. ಅಲ್ಲಿಂದ ಆರಂಭವಾಗುತ್ತದೆ ಭಾರತದ ಇತಿಹಾಸದ ಅತ್ಯಂತ ನಾಟಕೀಯ ಅಧ್ಯಾಯ.

1991ರ ಆರಂಭ. ಪ್ರಧಾನಮಂತ್ರಿ, ಚಂದ್ರಶೇಖರ್ ಅವರ ಮುಂದೆ ಪ್ರತಿದಿನ ಒಂದೇ ಪ್ರಶ್ನೆ. ನಾಳೆ ಬೆಳಗ್ಗೆ ದೇಶದ ಬಳಿ ಡಾಲರ್ ಇರುತ್ತದೆಯೇ? ಸಮಸ್ಯೆ ಈಗ ರಾಷ್ಟ್ರೀಯ ಗೌರವದ ಪ್ರಶ್ನೆಯಾಗಿತ್ತು. ರಾಷ್ಟ್ರ ಡೀಫಾಲ್ಟ್ ಆದರೆ ಏನಾಗುತ್ತದೆ? ಅದರ ಪರಿಣಾಮಗಳು ಭೀಕರ. ವಿದೇಶಿ ಬ್ಯಾಂಕುಗಳು ಹೊಸ ಸಾಲ ನೀಡುವುದಿಲ್ಲ. ಈಗಾಗಲೇ ನೀಡಿರುವ ಸಾಲವನ್ನು ತಕ್ಷಣ ಹಿಂದಿರುಗಿಸುವಂತೆ ಒತ್ತಾಯಿಸಬಹುದು. ದೇಶದ ಕರೆನ್ಸಿಯ ಮೇಲಿನ ವಿಶ್ವಾಸ ಕುಸಿಯುತ್ತದೆ. ಆಮದು ಮಾಡುವ ಪ್ರತಿಯೊಂದು ವಸ್ತುವೂ ದುಬಾರಿಯಾಗುತ್ತದೆ.

ರಿಸರ್ವ್ ಬ್ಯಾಂಕ್‌ನಲ್ಲಿ ಆತಂಕ

ಆಗ ರಿಸರ್ವ್ ಬ್ಯಾಂಕ್ ಗವರ್ನರ್ ಎಸ್. ವೆಂಕಿಟರಮಣನ್. ಜೊತೆಗೆ ಡೆಪ್ಯುಟಿ ಗವರ್ನರ್ ಆಗಿದ್ದ ಡಾ. ಸಿ. ರಂಗರಾಜನ್ ಸೇರಿದಂತೆ ಹಿರಿಯ ಅಧಿಕಾರಿಗಳು ಪ್ರತಿದಿನ ಪರಿಸ್ಥಿತಿ ಪರಿಶೀಲಿಸುತ್ತಿದ್ದರು. ರಿಸರ್ವ್ ಬ್ಯಾಂಕ್‌ನಲ್ಲಿ ಪರಿಸ್ಥಿತಿ ಎಷ್ಟು ಗಂಭೀರವಾಗಿತ್ತೆಂದರೆ, ವಿದೇಶಿ ವಿನಿಮಯದ ಸ್ಥಿತಿಯನ್ನು ದಿನದಿನಕ್ಕೂ ಪರಿಶೀಲಿಸುವ ವಿಶೇಷ ವ್ಯವಸ್ಥೆ ಮಾಡಲಾಗಿತ್ತು. ಪ್ರತಿ ಡಾಲರ್ ಅಮೂಲ್ಯವಾಗಿತ್ತು. ಅಧಿಕಾರಿಗಳು ಅನೇಕ ಆಯ್ಕೆಗಳನ್ನು ಪರಿಶೀಲಿಸಿದರು. ಅಂತಾರಾಷ್ಟ್ರೀಯ ಹಣಕಾಸು ನಿಧಿಯಿಂದ ತುರ್ತು ನೆರವು ಪಡೆಯಬಹುದೇ? ಹೊಸ ವಿದೇಶಿ ಸಾಲ ಸಿಗಬಹುದೇ? ಸರಕಾರದ ಕೆಲವು ವಿದೇಶಿ ಆಸ್ತಿಗಳನ್ನು ಮಾರಬಹುದೇ? ಆಮದು ಸಂಪೂರ್ಣವಾಗಿ ಕಡಿತಗೊಳಿಸಬಹುದೇ? ಆದರೆ ಯಾವುದೇ ಪರಿಹಾರ ತಕ್ಷಣ ಫಲ ನೀಡುವಂತಿರಲಿಲ್ಲ. ಭಾರತದ ಬಳಿ ಸಾವಿರಾರು ವರ್ಷಗಳ ಸಂಸ್ಕೃತಿಯ ಸಂಕೇತವಾದ ಚಿನ್ನ ಇತ್ತು. ಅದನ್ನು ಮುಟ್ಟುವುದು ಎಂದರೆ ದೇಶದ ಭಾವನೆಗಳನ್ನೇ ಮುಟ್ಟಿದಂತಾಗುತ್ತಿತ್ತು. ಚರ್ಚೆಗಳು ಹಲವು ದಿನ ನಡೆದವು. ಹಿರಿಯ ಅಧಿಕಾರಿಗಳು ಒಪ್ಪಲಿಲ್ಲ. ತಾತ್ಕಾಲಿಕವಾಗಿ ಅಡವಿಡಿ ಎಂದರು.

ಯಶವಂತ್ ಸಿನ್ಹಾ ಅವರ ಪಾತ್ರ

ಆ ಸಮಯದಲ್ಲಿ ಹಣಕಾಸು ಸಚಿವರಾಗಿದ್ದ ಯಶವಂತ್ ಸಿನ್ಹಾ ಅವರು ನಂತರ ತಮ್ಮ ಆತ್ಮಕಥೆ Confessions of a Swadeshi Reformer ನಲ್ಲಿ ಆ ದಿನಗಳ ಆತಂಕವನ್ನು ನೆನಪಿಸಿಕೊಂಡಿದ್ದಾರೆ. ಪ್ರತಿದಿನ ಹಣಕಾಸು ಸಚಿವಾಲಯದ ಮುಂದೆ ಹೊಸ ಪ್ರಶ್ನೆಗಳು ಬರುತ್ತಿದ್ದವು. ಯಾವ ಸಾಲ ಮೊದಲು ಪಾವತಿಸಬೇಕು? ಯಾವ ಆಮದಿಗೆ ಆದ್ಯತೆ ನೀಡಬೇಕು? ಯಾವ ವೆಚ್ಚ ಮುಂದೂಡಬೇಕು?

ಚಂದ್ರಶೇಖರ್ ಅವರಿಗೆ ಒಂದು ವಿಷಯ ಚೆನ್ನಾಗಿ ಗೊತ್ತಿತ್ತು. ಭಾರತೀಯರ ಭಾವನೆಯಲ್ಲಿ ಚಿನ್ನಕ್ಕೆ ಇರುವ ಸ್ಥಾನ. ಭಾರತದಲ್ಲಿ ಮಗಳು ಹುಟ್ಟಿದ ದಿನದಿಂದಲೇ ಚಿನ್ನ ಸಂಗ್ರಹಿಸುವ ಸಂಪ್ರದಾಯವಿದೆ. ಸಂಕಷ್ಟದ ಸಮಯದಲ್ಲಿ ಕುಟುಂಬವನ್ನು ಕಾಪಾಡುವುದು ಚಿನ್ನವೇ. ಅಂತಹ ದೇಶದ ಚಿನ್ನವನ್ನು ವಿದೇಶಕ್ಕೆ ಕಳುಹಿಸುವ ನಿರ್ಧಾರ ಜನರಿಗೆ ಹೇಗೆ ಕಾಣಬಹುದು ಎಂಬ ಆತಂಕ ಅವರಿಗಿತ್ತು. ಆದರೆ ಇನ್ನೊಂದು ಕಡೆ ದೇಶದ ಗೌರವವೂ ಇತ್ತು. ಅವರು ಕೊನೆಗೆ ರಾಷ್ಟ್ರದ ಹಿತವನ್ನೇ ಆಯ್ಕೆ ಮಾಡಿಕೊಂಡರು.

ನಿರ್ಧಾರವಾದ ನಂತರ ಮೊದಲ ಹೆಜ್ಜೆಯನ್ನು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಇಟ್ಟಿತು. ಮೇ 1991ರಲ್ಲಿ, 20 ಸಾವಿರ ಕೆಜಿ ಚಿನ್ನವನ್ನು ಯೂನಿಯನ್ ಬ್ಯಾಂಕ್ ಆಫ್ ಸ್ವಿಜರ್ಲ್ಯಾಂಡ್‌ಗೆ ಮರುಖರೀದಿ ಆಯ್ಕೆಯ (repurchase option) ಷರತ್ತಿನೊಂದಿಗೆ ಮಾರಿ ಸುಮಾರು 200 ಮಿಲಿಯ ಡಾಲರ್ ಸಂಗ್ರಹಿಸಿತು. ಇದರಿಂದ ಭಾರತಕ್ಕೆ ಕೆಲವಾರು ವಾರಗಳ ಉಸಿರಾಟ ಸಿಕ್ಕಿತು. ಆದರೆ ಅದು ತಾತ್ಕಾಲಿಕ ಪರಿಹಾರ ಮಾತ್ರ. ಇದರ ಮಧ್ಯೆ ಲೋಕಸಭೆ ಚುನಾವಣೆ ನಡೆಯುತ್ತಿತ್ತು. ಮೇ 21ರಂದು ರಾಜೀವ್ ಗಾಂಧಿ ಹತ್ಯೆಯಾದರು. ದೇಶ ಮತ್ತೆ ರಾಜಕೀಯ ಅನಿಶ್ಚಿತತೆಗೆ ಸಿಲುಕಿತು. ವಿದೇಶಿ ಹೂಡಿಕೆದಾರರಲ್ಲಿ ಆತಂಕ ಮತ್ತಷ್ಟು ಹೆಚ್ಚಾಯಿತು. ಜೂನ್‌ನಲ್ಲಿ ಪಿ.ವಿ. ನರಸಿಂಹ ರಾವ್ ಪ್ರಧಾನಮಂತ್ರಿಯಾದರು. ಅವರು ಆರ್ಥಿಕತೆಯನ್ನು ಚೆನ್ನಾಗಿ ಅರ್ಥ ಮಾಡಿಕೊಂಡಿದ್ದ ನಾಯಕ. ಹಣಕಾಸು ಸಚಿವರಾಗಿ ಮಾಜಿ ಆರ್‌ಬಿಐ ಗವರ್ನರ್ ಹಾಗೂ ಅರ್ಥಶಾಸ್ತ್ರಜ್ಞ ಡಾ. ಮನಮೋಹನ್ ಸಿಂಗ್ ಅವರನ್ನು ನೇಮಿಸಿದರು. ಆದರೆ ಅವರ ಮುಂದೆ ಇದ್ದ ಸಮಸ್ಯೆ ಒಂದೇ. ದೇಶದ ಖಜಾನೆ ಖಾಲಿಯಾಗಿತ್ತು. ಮೊದಲ ಹಂತದಲ್ಲಿ ಪಡೆದ ಹಣ ಸಾಕಾಗಲಿಲ್ಲ, ಹೀಗಾಗಿ ಆರ್‌ಬಿಐ ತನ್ನ ಸ್ವಂತ ಚಿನ್ನದ ಸಂಗ್ರಹದಿಂದ 47 ಸಾವಿರ ಕೆಜಿ ಚಿನ್ನವನ್ನು ವಿದೇಶಿ ಬ್ಯಾಂಕ್‌ಗಳಿಗೆ ಅಡವಿಡಲು ನಿರ್ಧರಿಸಿತು. ಬ್ಯಾಂಕ್ ಆಫ್ ಇಂಗ್ಲೆಂಡ್ ಮತ್ತು ಬ್ಯಾಂಕ್ ಆಫ್ ಜಪಾನ್ ಭಾರತಕ್ಕೆ ನೆರವಾಗಲು ಒಪ್ಪಿಕೊಂಡವು. ಅವು ಒಂದು ಸ್ಪಷ್ಟ ಷರತ್ತು ವಿಧಿಸಿದವು. ಚಿನ್ನವನ್ನು ಕಾಗದದಲ್ಲಿ ತೋರಿಸಿದರೆ ಸಾಲ ಕೊಡುವುದಿಲ್ಲ, ನಿಜವಾದ ಚಿನ್ನವನ್ನು ಲಂಡನ್ ಮತ್ತು ಟೋಕಿಯೊಗೆ ಕಳುಹಿಸಬೇಕು. ಇದು ಭಾರತದ ಅಧಿಕಾರಿಗಳ ಮುಂದೆ ಹೊಸ ಸವಾಲು ತಂದಿತು. ಚಿನ್ನವನ್ನು ಹೇಗೆ ಸಾಗಿಸಬೇಕು?

ಸಮಾಚಾರ ಸಣ್ಣದಲ್ಲ

ಬಿಜೆಪಿಯವರಿಂದ ಮತಗಳ ಕಳ್ಳತನ

ದಾವಣಗೆರೆ: ಕೇಂದ್ರ ಸರಕಾರ ಎಸ್‌ಐಆರ್ ತಂದು ಕೋಟ್ಯಂತರ ಮತದಾರರನ್ನು ಕೈಬಿಡುವ ಹಾಗೆ ಮಾಡಿ, ಅನೇಕರ ಮತದಾನದ ಹಕ್ಕು ಕಸಿದುಕೊಳ್ಳುತ್ತಿದೆ ಎಂದು ನಗರಾಭಿವೃದ್ಧಿ ಸಚಿವ ಯತೀಂದ್ರ ಸಿದ್ದರಾಮಯ್ಯ ಟೀಕಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿ, ಎಸ್‌ಐಆರ್ ವಿರುದ್ಧ ರಾಜ್ಯ ಸರಕಾರ ಷಡ್ಯಂತ್ರ ಮಾಡುತ್ತಿದೆ ಎಂಬ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರ ಆರೋಪದಲ್ಲಿ ಹುರುಳಿಲ್ಲ. ಪ್ರತಿಪಕ್ಷದವರು ಟೀಕೆ ಮಾಡುವುದಕ್ಕೇ ಇರುವುದು ಎಂದು ಹೇಳಿದರು. ಅರ್ಹ ಮತದಾರ ಹಕ್ಕು ಕಳೆದುಕೊಳ್ಳದ ಹಾಗೇ ಚುನಾವಣಾ ಆಯೋಗ ನೋಡಿಕೊಳ್ಳಬೇಕಿತ್ತು. ಆದರೆ, ಬೇರೆ ರಾಜ್ಯಗಳಲ್ಲಿ ಎಷ್ಟೋ ಜನರು ಹಕ್ಕು ಕಳೆದುಕೊಂಡಿದ್ದಾರೆ. ಚುನಾವಣಾ ಹತ್ತಿರ ಇದ್ದಿದ್ದರಿಂದ ಅವರಿಗೆ ಮನವಿ ಮಾಡಿಕೊಳ್ಳಲು ಆಗಿಲ್ಲ. ಹೀಗಾಗಿ, ಮತಗಳ್ಳತನ ಮಾಡುತ್ತಿರುವುದು ಬಿಜೆಪಿ ಎಂದು ಕಿಡಿಕಾರಿದರು.

ಮೌಲ್ವಿಗಳಿಗೆ ಅವಮಾನ ಆರೋಪ: ಪುನೀತ್ ಸೆರೆ

ಹಾಸನ: ಮುಸ್ಲಿಂ ಧರ್ಮಗುರುಗಳಿಗೆ ಅವಮಾನ ಆರೋಪದ ಮೇಲೆ ಹಿಂದೂಪರ ಹೋರಾಟಗಾರ ಪುನೀತ್ ಕೆರೆಹಳ್ಳಿಯವರನ್ನು ಕುಮಾರಸ್ವಾಮಿ ಲೇಔಟ್ ಪೊಲೀಸರು ಬಂಧಿಸಿದ್ದಾರೆ. ಮುಸ್ಲಿಂ ಧರ್ಮಗುರು ಗಳಿಗೆ ಅವಮಾನ ಮಾಡಿದ್ದಾರೆ ಎಂದು ಅಬ್ದುಲ್ ರಜಾಕ್ ಎಂಬವರು ದೂರು ಸಲ್ಲಿಸಿದ್ದರು. ಈ ದೂರಿನ ಆಧಾರದ ಮೇಲೆ, ಆಲೂರು ತಾಲೂಕಿನ ಕೆರೆಹಳ್ಳಿ ಗ್ರಾಮದ ಅವರ ನಿವಾಸದ ಮೇಲೆ ಪೊಲೀಸರು ದಾಳಿ ಮಾಡಿ, ಬಂಧಿಸಿ ಕರೆದೊಯ್ದಿದ್ದಾರೆ. ಬಂಧನದ ವೇಳೆ ಸರಕಾರದ ವಿರುದ್ಧ ಅವರು ಕಿಡಿಕಾರಿದ್ದಾರೆ. ನನಗೆ ಜೀವ ಬೆದರಿಕೆ ಇದೆ. ಅಬ್ದುಲ್ ರಜಾಕ್ ವಿರುದ್ಧ ನಾನು ದೂರು ಕೊಟ್ಟಿದ್ದೇನೆ. ಅವನನ್ನು ಬಂಧಿಸದೇ ನನ್ನನ್ನು ಬಂಧಿಸಿದ್ದಾರೆ. ಕಾಂಗ್ರೆಸ್ ಸರಕಾರ ಅಧಿಕಾರ ದುರ್ಬಳಕೆ ಮಾಡಿಕೊಂಡಿದೆ. ನನ್ನ ವಿರುದ್ಧ ಷಡ್ಯಂತ್ರ ಮಾಡಿದ್ದಾರೆ ಎಂದು ಆಕ್ರೋಶ ಹೊರಹಾಕಿದ್ದಾರೆ.

ಡಿಸಿಎಂ, ಅವಹೇಳನಕಾರಿ ವಿಡಿಯೋ: ಬಂಧನ

ತುಮಕೂರು: ಉಪಮುಖ್ಯಮಂತ್ರಿ ಡಾ.ಜಿ.ಪರಮೇಶ್ವರ್ ಮತ್ತು ಜಿಲ್ಲಾಧಿಕಾರಿ ಶುಭಾ ಕಲ್ಯಾಣ್ ಅವರ ಕುರಿತು ಸಾಮಾಜಿಕ ಜಾಲತಾಣದಲ್ಲಿ ಸುಳ್ಳು ಹಾಗೂ ಅವಹೇಳನಕಾರಿ ಸುದ್ದಿಗಳನ್ನು ಪ್ರಸಾರ ಮಾಡಿದ ಆರೋಪದ ಮೇಲೆ ಯೂಟ್ಯೂಬರ್ ಒಬ್ಬನನ್ನು ಹೊಸ ಬಡಾವಣೆ ಪೊಲೀಸರು ಬಂಧಿಸಿದ್ದಾರೆ. ಡಿಟೆಕ್ಟಿವ್ ಲೆಜೆಂಡ್ ಎಂಬ ಹೆಸರಿನ ಯೂಟ್ಯೂಬ್ ಚಾನೆಲ್ ನಡೆಸುತ್ತಿದ್ದ ಬ್ರಹ್ಮಾನಂದ ರೆಡ್ಡಿ ಬಂಧಿತ ಆರೋಪಿ. ಈ ಕುರಿತು ನಗರದ ಹೊಸ ಬಡಾವಣೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ಆರೋಪಿಯನ್ನು ವಶಕ್ಕೆ ಪಡೆದಿದ್ದಾರೆ. ಆರೋಪಿ ಬ್ರಹ್ಮಾನಂದ ರೆಡ್ಡಿ, ಜುಲೈ 1 ರಂದು ತನ್ನ ಯೂಟ್ಯೂಬ್ ಚಾನೆಲ್‌ನಲ್ಲಿ ಸುಮಾರು 17 ನಿಮಿಷಗಳ ಸುದೀರ್ಘ ವಿಡಿಯೋವೊಂದನ್ನು ಅಪ್‌ಲೋಡ್ ಮಾಡಿದ್ದು, ಈ ವಿಡಿಯೋದಲ್ಲಿ 75 ವರ್ಷದ ಡಿಸಿಎಂ ಡಾ. ಜಿ. ಪರಮೇಶ್ವರ್ ಹಾಗೂ 42 ವರ್ಷದ ಜಿಲ್ಲಾಧಿಕಾರಿ ಶುಭಾ ಕಲ್ಯಾಣ್ ಅವರ ನಡುವೆ ಅಕ್ರಮ ಸಂಬಂಧವಿದೆ ಎಂಬ ಅರ್ಥದಲ್ಲಿ ಸಂಪೂರ್ಣ ಆಧಾರರಹಿತ ಮತ್ತು ಕಟ್ಟುಕಥೆಯೊಂದನ್ನು ಹೆಣೆದಿದ್ದ. ವೈಯಕ್ತಿಕ ಜೀವನ ಮತ್ತು ಘನತೆಗೆ ಧಕ್ಕೆ ತರುವ ರೀತಿಯಲ್ಲಿ ನಿರೂಪಣೆ ಮಾಡಿದ್ದ ಆರೋಪಿಯು, ಇಬ್ಬರ ವಯಸ್ಸಿನ ವ್ಯತ್ಯಾಸವನ್ನು ಉಲ್ಲೇಖಿಸಿ ಸಾರ್ವಜನಿಕವಾಗಿ ತೇಜೋವಧೆ ಮಾಡುವ ರೀತಿಯಲ್ಲಿ ಮಾತನಾಡಿದ್ದ ಎನ್ನಲಾಗಿದೆ.

ಅಕ್ರಮ ಎಸ್‌ಐಆರ್: ಪ್ರಲ್ಹಾದ ಜೋಶಿ ಕಿಡಿ

ದೆಹಲಿ: ರಾಮನಗರ, ಶಿಗ್ಗಾವಿ, ಸವಣೂರು, ಹುಬ್ಬಳ್ಳಿ-ಧಾರವಾಡ ಸೇರಿದಂತೆ ರಾಜ್ಯದ ವಿವಿಧ ಕಡೆಗಳ ಮಸೀದಿಗಳಲ್ಲಿ ಎಸ್‌ಐಆರ್ ಅರ್ಜಿ ಭರ್ತಿ ಮಾಡಲಾಗು ತ್ತಿದೆ. ರಾಜ್ಯದಾದ್ಯಂತ ಎಸ್‌ಐಆರ್‌ನಲ್ಲಿ ಅಕ್ರಮ ನಡೆಯುತ್ತಿದೆ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಆರೋಪಿಸಿದ್ದಾರೆ. ಎಸ್‌ಐಆರ್ ನಿಯಮದ ಪ್ರಕಾರ, ಮತಗಟ್ಟೆ ಅಧಿಕಾರಿಗಳು ಕಡ್ಡಾಯವಾಗಿ ಮನೆ-ಮನೆಗೆ ತೆರಳಿ ಕುಟುಂಬ ಸದಸ್ಯರನ್ನು ಖುದ್ದಾಗಿ ಗುರುತಿ ಸಬೇಕು. ಆದರೆ, ಮಸೀದಿಗಳಲ್ಲಿ ಪ್ರಕ್ರಿಯೆ ನಡೆಸುತ್ತಿರು ವುದು ಆತಂಕಕಾರಿ ಬೆಳವಣಿಗೆ ಎಂದು ಜೋಶಿ ಕಳವಳ ವ್ಯಕ್ತಪಡಿಸಿದ್ದಾರೆ. ಕರ್ನಾಟಕದಲ್ಲಿ ಮತದಾರರ ಪಟ್ಟಿ ಪರಿಷ್ಕರಣೆ ಹೆಸರಲ್ಲಿ ಬೃಹತ್ ಹಗರಣವೇ ನಡೆಯು ತ್ತಿದೆ. ಕೇಂದ್ರ ಚುನಾವಣಾ ಆಯೋಗದ ನಿಯಮಾವಳಿ ಗಳನ್ನು ಸಂಪೂರ್ಣ ಗಾಳಿಗೆ ತೂರಲಾಗಿದೆ. ರಾಜಕೀಯ ಲಾಭಕ್ಕಾಗಿ ಮತದಾರರ ಪಟ್ಟಿಯನ್ನು ತಮಗೆ ಬೇಕಾ ದಂತೆ ಸಿದ್ಧಪಡಿಸಿಕೊಳ್ಳಲು ರಾಜ್ಯ ಸರಕಾರ ವ್ಯವಸ್ಥಿತ ಸಂಚು ರೂಪಿಸಿದೆ ಎಂದು ಆರೋಪಿಸಿದ್ದಾರೆ.

ದಿನ ವಿಶೇಷ

04 ಜುಲೈ 2026 ಶನಿವಾರ

» ಸೂರ್ಯೋದಯ	5-47
» ಸೂರ್ಯಾಸ್ತ	7-15
» ತಿಥಿ	ಚತುರ್ಥಿ
» ನಕ್ಷತ್ರ	ಧನಿಷ್ಠ
» ಸಂವತ್ಸರ	ಪರಾಭವ
» ಅಯನ	ದಕ್ಷಿಣಾಯನ
» ಋತು	ವರ್ಷ
» ಮಾಸ	ಜ್ಯೇಷ್ಠ
» ಪಕ್ಷ	ಕೃಷ್ಣಪಕ್ಷ

ಮಂತ್ರಾಲಯದ ಶ್ರೀಮಠದಿಂದ ಮುಂದಿನ ದಿನಗಳಲ್ಲಿ ವೈದ್ಯಕೀಯ ಕಾಲೇಜು, ಡೀಮ್ಡ್ ವಿವಿ ನಿರ್ಮಾಣ ಆಲೋಚನೆ

ಅನ್ನ, ಅಕ್ಷರದ ಯಜ್ಞದಲ್ಲಿ ರಾಯರ ಮಠ

ವಿಶ್ವವಾಣಿ ಸುದ್ದಿಮನೆ ಮಂತ್ರಾಲಯ

ಪ್ರತಿಯೊಬ್ಬರಿಗೂ ಅನ್ನ, ಆರೋಗ್ಯ ಹಾಗೂ ಅಕ್ಷರವನ್ನು ನೀಡಬೇಕೆಂಬುದು ಶ್ರೀ ಗುರುರಾಘವೇಂದ್ರರ ಅಭಿಲಾಷೆಯಾಗಿತ್ತು. ಮಂತ್ರಾಲಯದಲ್ಲಿ ಶ್ರೀ ಮಠ ಈ ನಿಟ್ಟಿನಲ್ಲಿ ಹತ್ತು ಹಲವು ಯೋಜನೆಗಳನ್ನು ಕೈಗೆತ್ತಿಕೊಂಡಿದೆ.

ವಿಶ್ವ ಪತ್ರಿಕಾ ದಿನಾಚರಣೆಯ ಅಂಗವಾಗಿ ಮಂತ್ರಾಲಯಕ್ಕೆ ಭೇಟಿ ನೀಡಿದ್ದ ಪತ್ರಕರ್ತರೊಂದಿಗೆ ವಿಶೇಷ ಸಂವಾದ ನಡೆಸಿದ ಮಂತ್ರಾಲಯ ಮಠದ ಪೀಠಾಧಿಪತಿಗಳಾದ ಶ್ರೀ ಸುಬುಧೇಂದ್ರ ತೀರ್ಥರು, ಶಿಕ್ಷಣಕ್ಕೆ ಒತ್ತು ನೀಡುವ ನಿಟ್ಟಿನಲ್ಲಿ ಮಠ ಸ್ವಾಯತ್ತ ವಿಶ್ವವಿದ್ಯಾಲಯ, 300 ಹಾಸಿಗೆ ಸಾಮರ್ಥ್ಯದ ಆಸ್ಪತ್ರೆ, ವೈದ್ಯಕೀಯ ಕಾಲೇಜು, ಎಂಜಿನಿಯರಿಂಗ್ ಕಾಲೇಜು ಸೇರಿದಂತೆ ಶಿಕ್ಷಣ ಸಂಸ್ಥೆ ಆರಂಭಿಸುವ ಯೋಜನೆಯಿದೆ. ಡೀಮ್ಡ್ ವಿಶ್ವವಿದ್ಯಾಲಯವನ್ನು ಬೆಂಗಳೂರು ಹೊರವಲಯ ಅಥವಾ ಉತ್ತರ ಕರ್ನಾಟಕ ಭಾಗದಲ್ಲಿ ಸ್ಥಾಪಿಸುವ ಇಚ್ಛೆಯಿದೆ ಎಂದು ಅಭಿಪ್ರಾಯಪಟ್ಟರು.

ಮಠದಿಂದ ಈಗಾಗಲೇ ಶಾಲೆಗಳನ್ನು ನಡೆಸಲಾಗುತ್ತಿದೆ. ಹುಬ್ಬಳ್ಳಿ ಹಾಗೂ ಜಮಖಂಡಿಯಲ್ಲಿ ವಿಶಾಲ ಕಟ್ಟಡಗಳನ್ನು ನಿರ್ಮಿಸಿ ಸಾವಿರಾರು ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡಲಾಗುತ್ತಿದೆ.

ಮಠ ಹಾಗೂ ಶಾಖಾ ಮಠಗಳಲ್ಲಿ ವಿದ್ಯಾರ್ಥಿಗಳಿಗೆ ವಾಸ್ತವ್ಯ ಕಲ್ಪಿಸಿ ಶಿಕ್ಷಣಕ್ಕೆ ನೆರವು ನೀಡಲಾಗುತ್ತಿದೆ. ಇದನ್ನೇ ಇನ್ನಷ್ಟು ವ್ಯವಸ್ಥಿತವಾಗಿಸಿ ನಡೆಸಲು ಹಾಸ್ಟೆಲ್‌ಗಳನ್ನು ಸ್ಥಾಪಿಸಲಾಗುವುದು ಎಂದು ವಿವರಿಸಿದರು.

ಮಂತ್ರಾಲಯ ಭಾಗದಲ್ಲಿ ವೈದ್ಯಕೀಯ ಸೇವೆ ಸಲ್ಲಿಸಲು ಈಗಾಗಲೇ ಮಠದ ವತಿಯಿಂದ ಒಂದು ಆಸ್ಪತ್ರೆ ಕಾರ್ಯನಿರ್ವಹಿಸುತ್ತಿದೆ. ಸದ್ಯ ಇದು ಕೇವಲ ಹೊರ ರೋಗಿ ಸೌಲಭ್ಯವನ್ನು ಮಾತ್ರ ಹೊಂದಿದೆ. ಆದರೆ ಮುಂದಿನ ದಿನದಲ್ಲಿ ಈ ಭಾಗದ ಜನರಿಗೆ ಅನುಕೂಲವಾಗಲು ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ತೆರೆಯುವ ಉದ್ದೇಶವಿದೆ. ಇದರೊಂದಿಗೆ ವೈದ್ಯಕೀಯ ಕಾಲೇಜು ಆರಂಭಿಸಿ, ವೈದ್ಯಕೀಯ ಶಿಕ್ಷಣದೊಂದಿಗೆ ಬಡ ರೋಗಿಗಳಿಗೆ ಅಗತ್ಯ ಚಿಕಿತ್ಸೆ ನೀಡಲಾಗುವ ಉದ್ದೇಶವಿದೆ ಎಂದರು.

ನಿತ್ಯ ಮಂತ್ರಾಲಯಕ್ಕೆ ಆಗಮಿಸುವವರ ಭಕ್ತಾದಿಗಳ ಸಂಖ್ಯೆ ಏರಿಕೆಯಾಗುತ್ತಿದೆ. ಆಗಮಿಸುವ ಭಕ್ತರು ಸ್ವಚ್ಛತೆಗೆ ಒತ್ತು ನೀಡಬೇಕು.

ಮಠದ ವತಿಯಿಂದ ದಿನಕ್ಕೆ ಎರಡು ಬಾರಿ ಮಠದ ಆವರಣ ಸ್ವಚ್ಛಗೊಳಿಸುತ್ತೇವೆ. ಆದರೆ ಭಕ್ತರು ಸ್ವಚ್ಛತೆ ಕಾಪಾಡಬೇಕು. ನದಿಯಲ್ಲಿ ಬಟ್ಟೆಗಳು, ತ್ಯಾಜ್ಯಗಳನ್ನು ಎಸೆಯಬಾರದು. ನದಿಗಳಲ್ಲಿ ಬಟ್ಟೆ ಹರಿ ಬಿಡುವುದು ಶಾಸ್ತ್ರಕ್ಕೆ ವಿರೋಧ. ಇದರಿಂದ ಯಾವ ಫಲ ಅಥವಾ ಲಾಭ ಸಿಗುವುದಿಲ್ಲ. ಹೀಗಾಗಿ ಭಕ್ತರು ಕ್ಷೇತ್ರದಲ್ಲಿ ಸ್ವಚ್ಛತೆ ಕಾಯ್ದುಕೊಳ್ಳಲು ಸಹಕರಿಸಬೇಕು ಎಂದು ಸುಬುದೇಂದ್ರ ತೀರ್ಥ ಸ್ವಾಮೀಜಿ ಹೇಳಿದರು.

ಸರಕಾರ ನೆರವು ಬಯಸದೇ ನಿರ್ವಹಣೆ: ಇನ್ನು ಸುಬುಧೇಂದ್ರ ಶ್ರೀಗಳ ನೇತೃತ್ವದಲ್ಲಿ ರಾಘವೇಂದ್ರ ಸ್ವಾಮಿಗಳ ಮಠದ ವತಿಯಿಂದ ಮಂತ್ರಾಲಯ ಹಾಗೂ ಸುತ್ತಮುತ್ತಲಿನ ಗ್ರಾಮದ ಮೂಲಸೌಕರ್ಯ ಅಭಿವೃದ್ಧಿಗೆ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಪ್ರಮುಖ ವಾಗಿ ಶಾಲೆಗಳ ನಿರ್ಮಾಣ, ಮಧ್ಯಾಹ್ನದ ಅನ್ನದಾಸೋಹ, ರಸ್ತೆ ಅಭಿವೃದ್ಧಿ, ಸ್ವಚ್ಛತೆ, ಶುದ್ಧ ನೀರಿನ ಘಟಕಗಳ ಸ್ಥಾನ ಸೇರಿದಂತೆ ಹಲವು ಕಾರ್ಯಕ್ರಮಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಗಡಿ ಪ್ರದೇಶವಾಗಿರುವುದರಿಂದ ಆಂಧ್ರ ಸರಕಾರದಿಂದ ಅಗತ್ಯ ನೆರವು ಸಿಗದಿದ್ದರೂ, ಭಕ್ತರ ಸಹಾಯ, ದೇಣಿಗೆ, ಮಠದ ಹಣವನ್ನು ಬಳಸಿಕೊಳ್ಳಲು ಮೂಲಸೌಕರ್ಯ ಅಭಿವೃದ್ಧಿ ಕೈಗೆತ್ತಿಕೊಳ್ಳಲಾಗಿದೆ ಎಂದು ಸುಬುಧೇಂದ್ರ ಶ್ರೀಗಳು ಹೇಳಿದರು.

ಪತ್ರಕರ್ತರ ನಿಯೋಗದೊಂದಿಗೆ ಮಂತ್ರಾಲಯ ಮಠದ ಪೀಠಾಧಿಪತಿ ಶ್ರೀ ಸುಬುಧೇಂದ್ರ ತೀರ್ಥರು ಸಂವಾದ ನಡೆಸಿದರು.

> ಪೀಠಾಧಿಪತಿಗಳಾಗುವ ಮೊದಲು ಪೂರ್ವಾಶ್ರಮದಲ್ಲಿ ಪತ್ರಕರ್ತನಾಗಿ ಕಾರ್ಯನಿರ್ವಹಿಸಿದ್ದೆ. ಬಿಡಿ ವರದಿಗಾರನಾಗಿ, ವರದಿಗಾರನಾಗಿ, ಅಂಕಣಕಾರನಾಗಿದ್ದೆ. ಕೆಲ ಮ್ಯಾಗಜಿನ್‌ಗಳ ಸಂಪಾದಕತ್ವವನ್ನು ವಹಿಸಿಕೊಂಡಿದ್ದೆ. ಗುರುರಾಯರ ಪ್ರೇರಣೆಯಿಂದ ಶ್ರೀಮಠದ ಪೀಠಾಧ್ಯಕ್ಷರಾದೆವು. ಮಂತ್ರಾಲಯದಲ್ಲಿ ಗುರುರಾಯರ ಪ್ರೇರಣೆಯಂತೆ ಅಕ್ಷರ, ಆರೋಗ್ಯ, ಅನ್ನದೊಂದಿಗೆ ಮೂಲಸೌಕರ್ಯವನ್ನು ವೃದ್ಧಿಸುವ ನಿಟ್ಟಿನಲ್ಲಿ ಕಾರ್ಯೋನ್ಮುಖರಾಗಿದ್ದೇವೆ. ಸರಕಾರದ ನೆರವು ನಿರೀಕ್ಷಿತ ಪ್ರಮಾಣದಲ್ಲಿ ಸಿಗದಿದ್ದರೂ, ಶ್ರೀ ಮಠ ಸ್ವಂತ ಅನುದಾನದಲ್ಲಿ, ದಾನಿಗಳ ನೆರವಿನಿಂದ ಮೂಲಸೌಕರ್ಯಕ್ಕೆ ಒತ್ತು ನೀಡಲಾಗುತ್ತಿದೆ.
>
> – **ಶ್ರೀ ಸುಬುಧೇಂದ್ರ ತೀರ್ಥರು,** ಪೀಠಾಧಿಪತಿ, ಮಂತ್ರಾಲಯ

ಶ್ರೀಗಳ ಯೋಜನೆಗಳು

- 300 ಹಾಸಿಗೆ ಸಾಮರ್ಥ್ಯದ ಆಸ್ಪತ್ರೆ, ವೈದ್ಯಕೀಯ ಕಾಲೇಜು ಸ್ಥಾಪನೆ ಗುರಿ
- ಎಂಜಿನಿಯರಿಂಗ್ ಕಾಲೇಜು ಸೇರಿ ಡೀಮ್ಡ್ ವಿವಿ ಆರಂಭದ ಉದ್ದೇಶ
- ಮಠದಿಂದ ಮಂತ್ರಾಲಯ, ಸುತ್ತಮುತ್ತಲಿನ ಗ್ರಾಮಗಳಲ್ಲಿ ಅಭಿವೃದ್ಧಿ
- ಸಿಎಸ್‌ಆರ್ ನಿಧಿಯಲ್ಲಿ ತುಂಗಭದ್ರಾ ನದಿ ನೀರು ಶುದ್ಧೀಕರಿಸಿ ಸಬರಾಜು

ಚೆಕ್‌ಡ್ಯಾಮ್ ನಿರ್ಮಾಣದ ಅಪೇಕ್ಷೆ

ತುಂಗಾಭದ್ರಾ ತಪ್ಪಲಿನಲ್ಲಿಯೇ ಮಂತ್ರಾಲಯವಿದ್ದರೂ, ವರ್ಷದ ಬಹು ತಿಂಗಳು ನೀರಿಗೆ ಬರ ಎದುರಾಗುತ್ತದೆ. ಇದರೊಂದಿಗೆ ಶುದ್ಧ ಕುಡಿಯುವ ನೀರಿನ ಅಭಾವವಿದೆ. ಇದನ್ನು ಮನಗಂಡಿರುವ ಸುಬುಧೇಂದ್ರ ತೀರ್ಥರು, ಮುಂದಿನ ದಿನದಲ್ಲಿ ಮಠದ ಸ್ವಂತ ಜಾಗದಲ್ಲಿ ಸಣ್ಣ ಪ್ರಮಾಣದ ಜಲಾಶಯವೊಂದನ್ನು ನಿರ್ಮಿಸುವ ಯೋಜನೆಯನ್ನು ರೂಪಿಸಿದ್ದಾರೆ. ಸುಮಾರು ನೂರು ಎಕರೆ ಜಾಗದಲ್ಲಿ ಜಲಸಂಗ್ರಹಾಲಯವನ್ನು ನಿರ್ಮಿಸುವ ಮೂಲಕ, ಈ ಭಾಗದ ನೀರಿನ ಅಭಾವಕ್ಕೆ ಶಾಶ್ವತ ಪರಿಹಾರ ಕಂಡುಕೊಳ್ಳುವ ಆಲೋಚನೆಯಲ್ಲಿದ್ದಾರೆ. ಇನ್ನು ನೀರಿನಲ್ಲಿ ಫ್ಲೋರೈಡ್ ಅಂಶ ಹೆಚ್ಚಾಗಿರುವುದರಿಂದ ಸ್ಥಳೀಯರ ಆರೋಗ್ಯದ ಮೇಲೆ ಪರಿಣಾಮ ಬೀರುತ್ತಿದೆ. ಕೆಲವರು ಕೀಲು, ಮೂಳೆ ಹಾಗೂ ಹಲ್ಲಿನ ಆರೋಗ್ಯ ಸಮಸ್ಯೆಯಿಂದ ಬಳಲುವಂತಾಗಿದೆ. ಆದ್ದರಿಂದ ನದಿಗೆ ಚೆಕ್‌ಡ್ಯಾಂ ನಿರ್ಮಾಣ ಯೋಜನೆ ರೂಪಿಸಲಾಗಿದೆ. ಈ ಬಗ್ಗೆ ಮಾತನಾಡಿರುವ ಶ್ರೀಗಳು, ಭವಿಷ್ಯದಲ್ಲಿ ಕುಡಿಯುವ ನೀರಿನ ಸಮಸ್ಯೆಯಾಗದಂತೆ ನೋಡಿಕೊಳ್ಳಲು ಯೋಜನೆ ಕೈಗೆತ್ತಿಕೊಳ್ಳಲಾಗಿದೆ. ನದಿ ನೀರನ್ನು ಸಂಗ್ರಹಾಗಾರದಲ್ಲಿ ಸಂಗ್ರಹಿಸಿ, ವೈಜ್ಞಾನಿಕವಾಗಿ ಶುದ್ಧೀಕರಿಸಿ ಭಕ್ತರಿಗೆ ಹಾಗೂ ಸ್ಥಳೀಯರಿಗೆ ಪೂರೈಸಲಾಗುವುದು. ಈ ಯೋಜನೆಗೆ ಎಚ್‌ಎಎಲ್ ಸೇರಿದಂತೆ ಕೆಲ ಸಂಸ್ಥೆಗಳು ಸಿಎಸ್‌ಆರ್ ಅನುದಾನ ನೀಡಲು ಮುಂದೆ ಬಂದಿವೆ ಎಂದರು.

ಬಿಜೆಪಿಯವರಿಗೂ ಘಜ್ನಿ, ಘೋರಿಗೂ ವ್ಯತ್ಯಾಸ ಇಲ್ಲ

ಕೊಪ್ಪಳ: ಬಿಜೆಪಿ ಸರಕಾರದಲ್ಲೇ ರಾಮ ಮಂದಿರದಲ್ಲಿ ಲೂಟಿ ನಡೆದಿದೆ. ಇದರಿಂದ ಮಹಮ್ಮದ್ ಘಜ್ನಿ, ಮಹಮ್ಮದ್ ಘೋರಿಗೆ ಹಾಗೂ ಬಿಜೆಪಿಗೆ ಏನೂ ವ್ಯತ್ಯಾಸ ಇಲ್ಲ. ರಾಮ ಮಂದಿರ ಲೂಟಿ ಈ ದೇಶದ ದುರಂತ ಎಂದು ಸಚಿವ ಡಾ. ಶರಣ ಪ್ರಕಾಶ ಪಾಟೀಲ್ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಮೊಹಮ್ಮದ್ ಘಜ್ನಿ, ಮೊಹಮ್ಮದ್ ಘೋರಿ ಸೋಮನಾಥ ದೇವಸ್ಥಾನ ಲೂಟಿ ಮಾಡಿದ್ದಾರೆ ಎಂಬ ಕಥೆ ಹೇಳಿಕೊಂಡು ಬಿಜೆಪಿ ಅಧಿಕಾರಕ್ಕೆ ಬಂದಿದೆ. ಹಿಂದುತ್ವ ರಕ್ಷಣೆ ಮಾಡುತ್ತೇವೆಂದು ಅಧಿಕಾರಕ್ಕೆ ಬಂದ ಮೋದಿ ಸರಕಾರದಲ್ಲೇ ರಾಮ ಮಂದಿರ ಲೂಟಿ ಆಗುತ್ತಿದೆ. ಬಿಜೆಪಿಗರ ಬಳಿ ಯಾವುದೇ ತತ್ವ ಇಲ್ಲ. ಬದ್ಧತೆ ಇಲ್ಲ. ಹಿಂದುತ್ವದ ಬಗ್ಗೆ ಕಾಳಜಿಯೂ ಇಲ್ಲ. ಇವರೆಲ್ಲ ಹಿಂದುತ್ವದ ಮುಖವಾಡ ಹಾಕಿಕೊಂಡ ಖದೀಮರು ಎಂದು ಲೇವಡಿ ಮಾಡಿದರು.

ಇದು ಕೇವಲ ದೇಣಿಗೆ ಲೂಟಿ ಮಾತ್ರ ಅಲ್ಲ, ರಾಮ ಮಂದಿರ ಕಟ್ಟಲು ನೀಡಿರುವ ಹಣದಲ್ಲೂ ಲೂಟಿ ಆಗಿದೆ. ಹಣ ಲೂಟಿ ಮಾಡಿ ಬಿಜೆಪಿಗರು, ಆರ್‌ಎಸ್‌ಎಸ್, ವಿಶ್ವ ಹಿಂದೂ ಪರಿಷತ್ ಮುಖಂಡರು ಶ್ರೀಮಂತರಾಗಿದ್ದಾರೆ. ಈ ಬಗ್ಗೆ ಮೋದಿ ಯಾಕೆ ತನಿಖೆ ಮಾಡುತ್ತಿಲ್ಲ? ಈ ಲೂಟಿಯಲ್ಲಿ ಸರಕಾರದಲ್ಲಿ ಇದ್ದವರೇ ನೇರವಾಗಿ ಭಾಗಿಯಾಗಿದ್ದಾರೆ ಎಂದು ಆರೋಪ ಮಾಡಿದರು.

> ಸುಪ್ರೀಂಕೋರ್ಟ್ ಮಾನಿಟರಿಂಗ್‌ನಲ್ಲಿ ರಾಮಮಂದಿರ ಲೂಟಿ ತನಿಖೆ ಆಗಬೇಕು. ಬಿಜೆಪಿಗರು ಹಣ ಮಾತ್ರ ಲೂಟಿ ಮಾಡಿಲ್ಲ. ಜನರ ವಿಶ್ವಾಸ ಲೂಟಿ ಮಾಡಿದ್ದಾರೆ. ಬಿಜೆಪಿಗೆ ನೈತಿಕ ಹಕ್ಕು ಇಲ್ಲ. ಇವರಿಗೆ ನಾಚಿಗೆ ಆಗಬೇಕು. ಮೋದಿ ರಾಜೀನಾಮೆ ಕೊಟ್ಟು ಮನೆಗೆ ಹೋಗಬೇಕು.
>
> – **ಶರಣಪ್ರಕಾಶ ಪಾಟೀಲ್**
> ವೈದ್ಯಕೀಯ ಶಿಕ್ಷಣ ಸಚಿವ

ಸಚಿವ ಸ್ಥಾನ ನೀಡಿ ಎಂದು ಕೇಳಲ್ಲ

ಕೊಪ್ಪಳ: ನನಗೆ ಸಚಿವ ಸ್ಥಾನ ನೀಡಿದರೆ ನಿಭಾಯಿಸುತ್ತೇನೆ. ಆದರೆ, ನಾನೇ ಹೋಗಿ ನನಗೆ ಸ್ಥಾನಮಾನ ನೀಡಿ ಎಂದು ಕೇಳುವ ಜಾಯಮಾನ ನನ್ನದಲ್ಲ. ಪಕ್ಷ ಹಾಗೂ ಸಿಎಂ ತೀರ್ಮಾನ ಮಾಡಿದರೆ ಮಂತ್ರಿಯಾಗಲು ಒಪ್ಪುತ್ತೇನೆ ಎಂದು ಶಾಸಕ ಬಸವರಾಜ ರಾಯರಡ್ಡಿ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ಸಂಪುಟ ವಿಸ್ತರಣೆ ಬಗ್ಗೆ ನನಗೆ ಗೊತ್ತಿಲ್ಲ. ಸಿಎಂ ಸಂಪುಟ ವಿಸ್ತರಣೆ ಮಾಡುತ್ತಾರೆ. ಪಕ್ಷದ ವರಿಷ್ಠರು ಅದಕ್ಕೆ ಒಪ್ಪಿಗೆ ಕೊಡಬೇಕು. ನಾನು ಮಂತ್ರಿ ಮಾತ್ರ ಅಲ್ಲ, ಸಾಕಷ್ಟು ಆಸೆ ಇಟ್ಟುಕೊಂಡಿದ್ದೇನೆ. ಪ್ರಧಾನಮಂತ್ರಿ ಆಗಬೇಕು ಅಂದುಕೊಂಡಿದ್ದೇನೆ. ಜನ ಸೇವೆ ಮಾಡಬೇಕು ಎಂಬ ಸಹಜ ಬಯಕೆ ಇರುತ್ತದೆ.

ಆದರೆ, ಆಗಬೇಕಲ್ಲ? ಮಂತ್ರಿ ಸ್ಥಾನ ಕೊಟ್ಟರೆ ಏಕೆ ಬೇಡ ಎನ್ನಬೇಕು? ಎಂದು ಪ್ರಶ್ನಿಸಿದರು. ಸಿಎಂ ಆರ್ಥಿಕ ಸಲಹೆಗಾರ ಹುದ್ದೆ ರದ್ದು ಮಾಡಿಲ್ಲ. ಸಿಎಂ ರಾಜೀನಾಮೆ ನೀಡಿದರೆ ಬೈ ಡೆಫಾಲ್ಟ್ ಹುದ್ದೆ ಹೋಗುತ್ತದೆ. ಸಿಎಂ ಆರ್ಥಿಕ ಸಲಹೆಗಾರ ಹುದ್ದೆ ಹೋದರೆ ಏನಾಯಿತು, ನಾನೊಬ್ಬನೇ ಅಲ್ಲ, ಸಿಎಂ ಕಾನೂನು ಸಲಹೆಗಾರ, ವೈದ್ಯಕೀಯ ಸಲಹೆಗಾರರ ಹುದ್ದೆಯೂ ಹೋಗಿವೆ. ಹಾಗಂತಾ ನನ್ನನ್ನು ಡಿ.ಕೆ.ಶಿವಕುಮಾರ್ ತೆಗೆದಿಲ್ಲ ಎಂದು ಸಮರ್ಥಿಸಿಕೊಂಡರು.

> ಅತಿಕ್ ಅವರನ್ನು ಆರ್ಥಿಕ ಸಲಹೆಗಾರರಾಗಿ ನೇಮಕ ಮಾಡಿಕೊಂಡಿ ದ್ದಾರೆ. ಅದರಲ್ಲಿ ತಪ್ಪೇನಿದೆ? ನಾನೇ ಆದೇಶ ಮಾಡಿ ಎಂದು ಹೇಳಿದ್ದೇನೆ. ಸಿಎಂ ಡಿ.ಕೆ.ಶಿವಕುಮಾರ್ ನನ್ನ ವಿರುದ್ಧ ಇಲ್ಲ. ಯಾವನೋ ಏನೋ ಮಾತನಾಡುತ್ತಾನೆ ಎಂದರೆ ನಾನು ತಲೆ ಕೆಡಿಸಿಕೊಳ್ಳುವುದಿಲ್ಲ. ಕಾದು ನೋಡಿ.
>
> – **ಬಸವರಾಜ ರಾಯರಡ್ಡಿ** ಶಾಸಕ

ಠಾಣೆಯಿಂದ ಪರಾರಿ ಆಗಿದ್ದ ಆರೋಪಿ ಸೆರೆ

ಕಲಬುರಗಿ: ಜಿಲ್ಲೆಯ ಅಫ್ಜಲಪುರ ಠಾಣೆಯಿಂದ ಪರಾಗಿ ಆಗಿದ್ದ ಪೋಕ್ಸೊ ಪ್ರಕರಣದ ಆರೋಪಿಯನ್ನು 24 ಗಂಟೆಯೊಳಗೆ ಪತ್ತೆಹಚ್ಚುವಲ್ಲಿ ಪೊಲೀಸರು ಯಶಸ್ವಿ ಆಗಿದ್ದಾರೆ. ಮಂಜುನಾಥ್ ಮರು ಬಂಧಿತ ಆರೋಪಿ. ಮಹಾರಾಷ್ಟ್ರಕ್ಕೆ ಪರಾಗಿ ಆಗುವ ವೇಳೆ ತೆಲ್ಲೂರು ಬಳಿ ಬಂಧಿಸಲಾಗಿದೆ. ಕರ್ತವ್ಯ ನಿರತ ಪೊಲೀಸರು ಠಾಣೆಯಲ್ಲಿ ನಿದ್ದೆಗೆ ಜಾರಿದ ವೇಳೆ ಸೆಲ್‌ನಿಂದ ಆರೋಪಿ ಪರಾಗಿ ಆಗಿದ್ದನು. ಈ ಘಟನೆಯಿಂದ ಪೊಲೀಸರು ತೀವ್ರ ಮುಜುಗರಕ್ಕೀಡಾಗಿದ್ದರು. ಸದ್ಯ ಆರೋಪಿಯ ಬಂಧನ ಆಗಿದ್ದು, ಪೊಲೀಸರು ನಿಟ್ಟುಸಿರುಬಿಟ್ಟಿದ್ದಾರೆ. ಅಪ್ರಾಪ್ತೆಯ ಮೇಲಿನ ದೌರ್ಜನ್ಯಕ್ಕೆ ಸಂಬಂಧಿಸಿದಂತೆ ಕಳೆದ ಒಂದು ವಾರದ ಹಿಂದೆ ಅಫಜಲಪುರ ಠಾಣೆಯಲ್ಲಿ ಮಂಜುನಾಥ್ ವಿರುದ್ಧ ಪೋಕ್ಸೋ ಕಾಯ್ದೆಯಡಿ ಪ್ರಕರಣ ದಾಖಲಾಗಿತ್ತು.

ಭೂಮಿ ಮತ್ತು ನಮ್ಮ ಭವಿಷ್ಯವನ್ನು ಸುರಕ್ಷಿತವಾಗಿಡಲು ಜಲ ಮತ್ತು ವಿದ್ಯುತ್‌ನ ಸಂರಕ್ಷಣೆ ಅತ್ಯಂತ ಅಗತ್ಯವಾಗಿದೆ. ನೀರನ್ನು ಉಳಿಸುವುದು ಎಂದರೆ ವಿದ್ಯುತ್ ಅನ್ನು ಸಹ ಉಳಿಸುವುದಾಗಿದೆ. ಏಕೆಂದರೆ ನೀರನ್ನು ಶುದ್ಧೀಕರಿಸಿ ಮನೆಗಳಿಗೆ ಪೂರೈಸಲು ಹೆಚ್ಚಿನ ವಿದ್ಯುತ್ ಬಳಸಲಾಗುತ್ತದೆ. ಆದ್ದರಿಂದ ಈ ಸಂಪನ್ಮೂಲಗಳನ್ನು ಸಂರಕ್ಷಿಸುವ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವುದು ಇಂದಿನ ಅಗತ್ಯವಾಗಿದೆ. ದೈನಂದಿನ ಜೀವನದಲ್ಲಿ ಸಣ್ಣ ಬದಲಾವಣೆಗಳೂ ದೊಡ್ಡ ಪರಿಣಾಮ ಉಂಟುಮಾಡಬಹುದು. ಆದುದರಿಂದ, ಕೆಲವು ಉತ್ತಮ ಅಭ್ಯಾಸಗಳನ್ನು ಈ ಲೇಖನದ ಮೂಲಕ ಹಂಚಿಕೊಳ್ಳಬಯಸುತ್ತೇನೆ.

ಸುಸ್ಥಿರ ನಾಳೆಗಾಗಿ ಜಲ ಮತ್ತು ವಿದ್ಯುತ್ ಸಂರಕ್ಷಣೆ

ಡಾ. ಶಾಲಿನಿ ರಜನೀಶ್ ಸರಕಾರದ ಮುಖ್ಯ ಕಾರ್ಯದರ್ಶಿ

ಪ್ರತಿಯೊಬ್ಬ ಜೀವಿಯ ಬದುಕಿಗೆ ನೀರು ಅತ್ಯಗತ್ಯ. ಭೂಮಿಯ ಶೇ.70ರಷ್ಟು ಭಾಗ ನೀರಿನಿಂದ ಕೂಡಿದ್ದರೂ ಕುಡಿಯಲು ಯೋಗ್ಯವಾದ ಸಿಹಿ ನೀರು ಕೇವಲ ಶೇ.2ರಷ್ಟು ಮಾತ್ರ ಇದೆ. ಜಲ ಸಂರಕ್ಷಣೆ ಎಂದರೆ ಲಭ್ಯವಿರುವ ಶುದ್ಧ ನೀರನ್ನು ಸಮರ್ಥವಾಗಿ ಬಳಸುವುದು. ಹೆಚ್ಚುತ್ತಿ ರುವ ಜನಸಂಖ್ಯೆ, ಮಾಲಿನ್ಯ ಮತ್ತು ನಿರ್ಲಕ್ಷ್ಯದ ಬಳಕೆಯಿಂದಾಗಿ ಜಲಕ್ಷಾಮವು ಇಂದು ಜಾಗತಿಕ ಸಮಸ್ಯೆಯಾಗಿದೆ. ಆದ್ದರಿಂದ, ಭವಿಷ್ಯದ ಪೀಳಿಗೆಗೆ ನೀರನ್ನು ಉಳಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ.

ಈಗಾಗಲೇ ಎಲ್ ನಿನೊ ಹವಾಮಾನ ವೈಪರೀತ್ಯದ ಪರಿಣಾಮದಿಂದ ವಿಶ್ವದಾದ್ಯಂತ ಸಾಮಾನ್ಯ ಹವಾಮಾನ ಮಾದರಿಗಳನ್ನು ವ್ಯತ್ಯಯ ಗೊಳಿಸುತ್ತಿದ್ದು, ದೇಶದಲ್ಲಿ ಅತಿವೃಷ್ಟಿ, ಪ್ರವಾಹ ಮತ್ತು ಬರಗಾಲ ಮೊದಲಾದ ತೀವ್ರ ಹವಾಮಾನ ಪರಿಸ್ಥಿತಿಗಳಿಗೆ ಕಾರಣವಾಗಿದೆ. ಅಲ್ಲದೇ ದೇಶದಲ್ಲಿ ಮಳೆಯ ಕೊರತೆಯುಂಟಾಗುತ್ತಿದೆ. ಇದರಿಂದ, ನಮ್ಮ ರೈತರ ಕೃಷಿ ಉತ್ಪಾದನೆ ಮೇಲೆ ಪರಿಣಾಮ ಬೀರುತ್ತಿದೆ. ಆದುದರಿಂದ, ನಾವು ನಮ್ಮಲ್ಲಿರುವ ಅತ್ಯಮೂಲ್ಯ ನೈಸರ್ಗಿಕ ಸಂಪನ್ಮೂಲ ಮತ್ತು ಜೀವಜಲವಾದ ನೀರನ್ನು ಉಪಯೋಗಿಸುವಾಗ ಆದಷ್ಟು ಎಚ್ಚರಿಕೆಯನ್ನು ವಹಿಸಬೇಕಾಗಿದೆ.

ನೀರು ಏಕೆ ಮುಖ್ಯ?: ನೀರು ಜೀವನ, ಕೃಷಿ, ಕೈಗಾರಿಕೆ ಹಾಗೂ ಪರಿಸರ ವ್ಯವಸ್ಥೆಗೆ ಅತ್ಯಗತ್ಯವಾದ ಅಮೂಲ್ಯ ಮತ್ತು ಸೀಮಿತ ಸಂಪನ್ಮೂಲವಾಗಿದೆ. ವೇಗವಾದ ನಗರೀಕರಣ, ಜನಸಂಖ್ಯೆಯ ಹೆಚ್ಚಳ ಮತ್ತು ಹವಾಮಾನ ವೈಪರೀತ್ಯಗಳು ಜಲ ಸಂಪನ್ಮೂಲಗಳ ಮೇಲೆ ಹೆಚ್ಚಿನ ಒತ್ತಡ ಉಂಟುಮಾಡುತ್ತಿವೆ. ಇಂದು ನೀರನ್ನು ಸಂರಕ್ಷಿಸುವುದರಿಂದ ಭವಿಷ್ಯದ ಪೀಳಿಗೆಗಳಿಗೆ ನೀರಿನ ಲಭ್ಯತೆ ಖಚಿತವಾಗುತ್ತದೆ. ನೀರನ್ನು ಮಿತವಾಗಿ ಬಳಸಿ, ಪ್ರಕೃತಿಯನ್ನು ರಕ್ಷಿಸಿ.

ನೀರಿನ ಸಂರಕ್ಷಣೆ ಮಾರ್ಗೋಪಾಯಗಳು: ಪ್ರತಿ ನಾಗರೀಕರು ಸಣ್ಣ ಸಣ್ಣ ಪ್ರಮಾಣದಲ್ಲಿ ನೀರನ್ನು ಉಳಿಸುವ ಪ್ರಯತ್ನವನ್ನು ಮಾಡಿದರೆ, ನಾಳೆ ದೊಡ್ಡ ಪ್ರಮಾಣದಲ್ಲಿ ನೀರಿನ ಸಂರಕ್ಷಣೆ ಮಾಡಬಹುದಾಗಿದೆ.

ವಿದ್ಯುತ್ ಸಂರಕ್ಷಣೆ: ಆಧುನಿಕ ಜಗತ್ತಿನಲ್ಲಿ ವಿದ್ಯುತ್ ನಮ್ಮ ದೈನಂದಿನ ಜೀವನದ ಅವಿಭಾಜ್ಯ ಅಂಗವಾಗಿದೆ. ಬೆಳಕು, ಫ್ಯಾನ್, ಮೊಬೈಲ್ ಚಾರ್ಜರ್ ಮತ್ತು ಕೈಗಾರಿಕೆಗಳು ಸೇರಿದಂತೆ ಎಲ್ಲದಕ್ಕೂ ವಿದ್ಯುತ್ ಬೇಕೇ ಬೇಕು. ಆದರೆ ವಿದ್ಯುತ್ ಅನ್ನು ಹೆಚ್ಚಾಗಿ ಕಲ್ಲಿದ್ದಲು ಸುಡುವ ಮೂಲಕ ಉತ್ಪಾದಿಸಲಾಗುತ್ತದೆ.

ಇದರಿಂದ ವಾಯುಮಾಲಿನ್ಯ ಉಂಟಾಗುತ್ತದೆ ಮತ್ತು ಭೂಮಿಯ ತಾಪಮಾನ ಹೆಚ್ಚುತ್ತಿದೆ. ಈ ಸಮಸ್ಯೆಗಳನ್ನು ತಡೆಯಲು ವಿದ್ಯುತ್ ಸಂರಕ್ಷಣೆ ಅತ್ಯಗತ್ಯ. ಇಂದಿನ ವಿದ್ಯುತ್ ಉಳಿತಾಯವೇ, ನಾಳೆಯ ಭವಿಷ್ಯದ ಆಧಾರ.

ವಿದ್ಯುತ್ ಸಂರಕ್ಷಣೆ ಏಕೆ ಮುಖ್ಯ? ವಿದ್ಯುತ್ ಉತ್ಪಾದನೆಗೆ ಅಪಾರ ಪ್ರಮಾಣದ ನೈಸರ್ಗಿಕ ಸಂಪನ್ಮೂಲಗಳ ಅಗತ್ಯವಿದೆ. ವಿದ್ಯುತ್ ಸಂರಕ್ಷಣೆಯಿಂದ ವೆಚ್ಚ ಕಡಿಮೆಯಾಗುತ್ತದೆ, ಪರಿಸರ ಮಾಲಿನ್ಯ ತಗ್ಗುತ್ತದೆ ಮತ್ತು ಶಕ್ತಿ ಭದ್ರತೆ ಹೆಚ್ಚುತ್ತದೆ. ಜವಾಬ್ದಾರಿಯುತ ವಿದ್ಯುತ್ ಬಳಕೆ ಸುಸ್ಥಿರ ಅಭಿವೃದ್ಧಿಗೆ ಅಗತ್ಯವಾಗಿದೆ.

ವಿದ್ಯುತ್ ಅನ್ನು ಉತ್ಪಾದಿಸಲು ಪ್ರಮುಖವಾಗಿ ನೀರನ್ನು ಬಳಸಲಾಗುವುದರಿಂದ, ರಾಜ್ಯದ ಶೇ.15-20ರಷ್ಟು ವಿದ್ಯುತ್ ಉತ್ಪಾದನೆ ಇದರಿಂದ ಆಗುತ್ತಿದೆ. ಒಂದು ವೇಳೆ, ನೀರಿನ ಕೊರತೆಯಾದರೆ, ನೀರಿನಿಂದ ಉತ್ಪಾದಿಸುವ ವಿದ್ಯುತ್ ಕೊರತೆ ಸಹ ಉಂಟಾಗುತ್ತದೆ. ಇದರಿಂದಾಗಿ, ದೈನಂದಿನ ಬಳಕೆಗಾಗಿ ಲಭ್ಯವಾಗುವ ವಿದ್ಯುತ್ ಪ್ರಮಾಣ ಕಡಿಮೆಯಾಗುತ್ತದೆ.

ಆದುದರಿಂದ, ಸಾರ್ವಜನಿಕರು ನೀರಿನ ಮಿತವ್ಯಯ ಅಭ್ಯಾಸಗಳನ್ನು ಸ್ವಯಂಪ್ರೇರಿತರಾಗಿ ರೂಢಿಸಿಕೊಳ್ಳುವುದರಿಂದ, ನಮ್ಮ ನಾಡಿಗೆ, ದೇಶಕ್ಕೆ ಮತ್ತು ಈ ಭೂಮಿಗೆ ಒಳಿತಾಗುತ್ತದೆ ಎಂಬುದು ನನ್ನ ಆಶಾಭಾವನೆ. ಬನ್ನಿ! ಇಂದೇ ಜಲ ಮತ್ತು ವಿದ್ಯುತ್ ಅನ್ನು ಸಂರಕ್ಷಿಸೋಣ-ಸುಸ್ಥಿರತೆ, ಸಮೃದ್ಧಿ ಹಾಗೂ ಭವಿಷ್ಯದ ಪೀಳಿಗೆಗಳಿಗೆ ಉತ್ತಮ ಜೀವನಮಟ್ಟವನ್ನು ಖಚಿತಪಡಿಸೋಣ.

- ಪ್ರತಿಯೊಂದು ನೀರಿನ ಹನಿಯೂ ಅಮೂಲ್ಯ; ನೀರಿನ ವ್ಯರ್ಥತೆಯನ್ನು ತಪ್ಪಿಸುವುದು.
- ಸೋರಿಕೆಯಾಗಿರುವ ಕೊಳವೆಗಳು, ಪೈಪ್‌ಗಳು ಮತ್ತು ನೀರು ಸಂಗ್ರಹ ವ್ಯವಸ್ಥೆಗಳನ್ನು ತಕ್ಷಣ ದುರಸ್ತಿ ಮಾಡುವುದು.
- ಮುಖ ತೊಳೆಯುವಾಗ ಹಾಗೂ ಪಾತ್ರೆ ತೊಳೆಯುವಾಗ ನೀರಿನ ಕೊಳವೆಗಳನ್ನು ನಿಲ್ಲಿಸುವುದು.
- ಸಾಧ್ಯವಾದಷ್ಟು ಬಕೆಟ್ ಬಳಸಿ ಸ್ನಾನ ಮಾಡುವುದು.
- ನೀರು ಉಳಿತಾಯ ಮಾಡುವ ಉಪಕರಣ ಅಳವಡಿಸುವುದು.
- ಮನೆ, ಶಾಲೆ, ಕಚೇರಿ ಹಾಗೂ ಸಾರ್ವಜನಿಕ ಕಟ್ಟಡಗಳಲ್ಲಿ ಮಳೆನೀರು ಸಂಗ್ರಹಣೆಯನ್ನು ಅನುಸರಿಸುವುದು.
- ಕುಡಿಯುವ ನೀರನ್ನು ತೋಟಗಾರಿಕೆ, ವಾಹನಗಳ ಸ್ವಚ್ಛತೆಯಂತಹ ಇತರೆ ಕೆಲಸಗಳಿಗೆ ಬಳಸದೇ, ತ್ಯಾಜ್ಯ ಸಂಸ್ಕರಿಸಿದ ನೀರನ್ನು ತೋಟಗಾರಿಕೆ ಮತ್ತು ಸ್ವಚ್ಛತೆಗೆ ಮರುಬಳಕೆ ಮಾಡುವುದು.
- ಸಾಧ್ಯವಾದಷ್ಟು ನೀರಿನ ಕಡಿಮೆ ಬಳಕೆ, ಮರುಬಳಕೆ ಮತ್ತು ಮರು ಸಂಸ್ಕರಣೆ ಮಾದರಿಗಳನ್ನು ಅನುಸರಿಸುವುದು.
- ಕೃಷಿಯಲ್ಲಿ ಹನಿ ನೀರಾವರಿ ಮತ್ತು ತುಂತುರು ನೀರಾವರಿ ವಿಧಾನಗಳನ್ನು ಅಳವಡಿಸುವುದು.
- ಕೆರೆ, ನದಿ ಹಾಗೂ ಭೂಗರ್ಭ ಜಲಮೂಲಗಳನ್ನು ಮಾಲಿನ್ಯ ಮತ್ತು ಅತಿಕ್ರಮಣದಿಂದ ರಕ್ಷಿಸುವುದು.
- ಅಂತರ್ಜಲ ನಿರ್ವಹಣೆಗಾಗಿ ಗಿಡಗಳನ್ನು ನೆಡುವುದು.

ವಿದ್ಯುತ್ ಸಂರಕ್ಷಣೆ

- ಶಾಲೆ/ಕಾಲೇಜು ಮತ್ತು ಕಚೇರಿಗಳಲ್ಲಿ ಜಲ ಮತ್ತು ವಿದ್ಯುತ್ ಸಂರಕ್ಷಣಾ ಪ್ರತಿಜ್ಞಾ ಕಾರ್ಯಕ್ರಮಗಳನ್ನು ಆಯೋಜಿಸುವುದು.
- ಜಾಗೃತಿ ಮೆರವಣಿಗೆಗಳು ಮತ್ತು ಬೀದಿ ನಾಟಕಗಳನ್ನು ಆಯೋಜಿಸುವುದು.
- ಸಾರ್ವಜನಿಕ ಸ್ಥಳಗಳು ಮತ್ತು ಸರಕಾರಿ ಕಚೇರಿಗಳಲ್ಲಿ ಪೋಸ್ಟರ್‌ಗಳು ಹಾಗೂ ಬ್ಯಾನರ್‌ಗಳನ್ನು ಪ್ರದರ್ಶಿಸುವುದು.
- ಸಮುದಾಯದ ಭಾಗವಹಿಸುವಿಕೆಯಿಂದ ಜಲ ಸಂರಕ್ಷಣಾ ವಾರ ಮತ್ತು ವಿದ್ಯುತ್ ಸಂರಕ್ಷಣಾ ದಿನವನ್ನು ಆಚರಿಸುವುದು.

ವಿದ್ಯುತ್ ಸಂರಕ್ಷಣೆ ಮಾರ್ಗೋಪಾಯಗಳು

- ಬಳಕೆಯಿಲ್ಲದಾಗ ದೀಪಗಳು, ಫ್ಯಾನ್‌ಗಳು ಮತ್ತು ಇತರ ಉಪಕರಣಗಳನ್ನು ಆರಿಸುವುದು. ಸಾಮಾನ್ಯ ಬಲ್ಬುಗಳ ಬದಲಿಗೆ ಎಲ್‌ಇಡಿ ದೀಪಗಳನ್ನು ಬಳಸುವುದು.
- ಮೇಲ್ಛಾವಣಿ ಸೌರ ವ್ಯವಸ್ಥೆಗಳು ಮತ್ತು ನವೀಕರಿಸಬಹುದಾದ ಶಕ್ತಿ ಮೂಲಗಳನ್ನು ಉತ್ತೇಜಿಸುವುದು, ಸೋಲಾರ್ ಉಪಕರಣಗಳನ್ನು ಬಳಸುವುದು.
- ಸಾಧ್ಯವಾದಷ್ಟು ನೈಸರ್ಗಿಕ ಬೆಳಕು ಮತ್ತು ಗಾಳಿಯನ್ನು ಬಳಸುವುದು.
- ಚಾರ್ಜರ್‌ಗಳು,ವಿದ್ಯುತ್ ಸಾಧನಗಳನ್ನು ಬಳಕೆಯ ನಂತರ ಬೇರ್ಪಡಿಸುವುದು.
- ಏರ್ ಕಂಡೀಷನರ್‌ಗಳನ್ನು 24-26 ಡಿಗ್ರಿ ಸೆಲ್ಸಿಯಸ್ ತಾಪಮಾನದಲ್ಲಿ ನಿರ್ವಹಿಸಿ.
- ಶಾಲೆ/ಕಾಲೇಜುಗಳು, ಕಚೇರಿಗಳಲ್ಲಿ ವಿದ್ಯುತ್ ಲೆಕ್ಕಪರಿಶೋಧನೆ ನಡೆಸುವುದು.
- ಮನೆ ಮತ್ತು ಕೆಲಸದ ಸ್ಥಳಗಳಲ್ಲಿ ವಿದ್ಯುತ್ ಉಳಿಸುವ ಪದ್ಧತಿ ಅನುಸರಿಸುವುದು.
- ಮಕ್ಕಳಿಗೆ ಮತ್ತು ಸಮುದಾಯಕ್ಕೆ ವಿದ್ಯುತ್ ಸಂರಕ್ಷಣೆಯ ಮಹತ್ವ ತಿಳಿಸುವುದು.

ಅಚ್ಚುಕಟ್ಟು ಪ್ರದೇಶ
RNI no: 3918/59
VISHVAVANI, Printed & Published by : VISHWESHWAR BHAT, On behalf of Vishwakshara Media Private Ltd., #483/1A/2A/3 Shri Ram plaza, 3rd floor, opp to Jain college, behind Kotak Mahindra Bank, Club Road, Hubli. Printed at M/s Elegant Offset Printers Pvt. Ltd. Plot No.33/1 & 15/1(part)M.T.Sagar Industrial Estate, Gokul Road, Hubballi-580030.
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:68, Issue: 351

ನೀರು ಕುಡಿದು 80 ಮಂದಿ ಅಸ್ವಸ್ಥ

ಶಿಡ್ಲಘಟ್ಟ: ಕಲುಷಿತ ನೀರು ಸೇವಿಸಿ ತಾಲೂಕಿನ ಚಿಕ್ಕತೇಕಹಳ್ಳಿ ಗ್ರಾಮದ 80ಕ್ಕೂ ಹೆಚ್ಚು ಮಂದಿ ಅಸ್ವಸ್ಥಗೊಂಡಿದ್ದಾರೆ. ವಾಂತಿ ಹಾಗೂ ಭೇದಿಯಿಂದ ಬಳಲುತ್ತಿರವವರು ವಿವಿಧ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಕಳೆದ ಒಂದು ವಾರದಿಂದ ಈ ಸಮಸ್ಯೆ ಮುಂದುವರಿದಿದ್ದು, ಗ್ರಾಮದಲ್ಲಿ ಆತಂಕ ನಿರ್ಮಾಣವಾಗಿದೆ. ಕುಡಿಯುವ ನೀರಿನ ಪೈಪ್‌ಗೆ ಚರಂಡಿ ನೀರು ಸೇರಿರುವ ಸಾಧ್ಯತೆಯಿದ್ದು, ಆ ನೀರನ್ನು ಸೇವಿಸಿ ಅಸ್ವಸ್ಥರಾಗಿದ್ದಾರೆ ಎನ್ನಲಾಗಿದೆ. ಗ್ರಾಪಂ ಅಧಿಕಾರಿಗಳು ಹಾಗೂ ತಾಲೂಕು ವೈದ್ಯರ ನಿಯೋಗ ಗ್ರಾಮಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದೆ. ಶಿಡ್ಲಘಟ್ಟ ತಾಲೂಕು ಆರೋಗ್ಯಾಧಿಕಾರಿ ಡಾ.ವೆಂಕಟೇಶ್ ಮೂರ್ತಿ ನೇತೃತ್ವದ ಆರೋಗ್ಯ ಇಲಾಖೆ ತಂಡ ಗ್ರಾಮದ ಹಲವರ ಆರೋಗ್ಯ ತಪಾಸಣೆ ನಡೆಸಿದೆ. ಕುಡಿಯುವ ನೀರಿನ ಮಾದರಿಗಳನ್ನು ಸಂಗ್ರಹಿಸಿ ಪ್ರಯೋಗಾಲಯ ಪರೀಕ್ಷೆಗೆ ಕಳುಹಿಸಲಾಗಿದೆ.

ಕರ್ನಾಟಕ ಸರ್ಕಾರ
ಆಯುಷ್ ಇಲಾಖೆ, ಜಿಲ್ಲಾ ಪಂಚಾಯತ್,
ಜಿಲ್ಲಾಆಯುಷ್ ಅಧಿಕಾರಿಗಳ ಕಾರ್ಯಾಲಯ, ಬಳ್ಳಾರಿ/ವಿಜಯನಗರ
ವೀರನಗೌಡ ಕಾಲೋನಿ, ಅಶೋಕ ನಗರ, ಕುಮಾರಸ್ವಾಮಿ ದೇವಸ್ಥಾನದ ಎದುರುಗಡೆ, ಭಾಗ್ಯ ಆಸ್ಪತ್ರೆ ಹತ್ತಿರ, ಬಳ್ಳಾರಿ–583103
Email- dao.bellary09@gmail.com
ಸಂಖ್ಯೆ: ಜಿಆಕಬ/ಹೊ.ಗು/ಗ್ರೂಪ್–ಡಿ/ಸಿಬ್ಬಂದಿ(2)2025–26 ದಿನಾಂಕ:02.07.2026

ಇ–ಟೆಂಡರ್ ಪ್ರಕಟಣೆ

ಜಿಲ್ಲಾ ಆಯುಷ್ ಇಲಾಖೆ, ವಿಜಯನಗರ ಜಿಲ್ಲೆಯ ಅಧೀನ ಕಾರ್ಯನಿರ್ವಹಿಸುವ ಸರ್ಕಾರಿ ಆಯುಷ್ ಆಸ್ಪತ್ರೆಗಳು/ ಚಿಕಿತ್ಸಾಲಯಗಳಲ್ಲಿ ಖಾಲಿ ಇರುವ 31 ಗ್ರೂಪ್–ಡಿ ಹುದ್ದೆಗಳ ಎದುರು ಮಸಾಜಿಸ್ಟ್ ಹುದ್ದೆಗಳನ್ನು ಹೊರ ಗುತ್ತಿಗೆ ಆಧಾರದ ಮೇಲೆ 2026–27 ನೇ ಸಾಲಿಗೆ ಅಥವಾ ಕರಾರು ಒಪ್ಪಂದದ ದಿನಾಂಕದಿಂದ ಒಂದು ವರ್ಷದವರೆಗೆ ಕನಿಷ್ಠ ವೇತನದ ಆಧಾರದಲ್ಲಿ ಸೇವೆಯನ್ನು ಒದಗಿಸಲು ಇ–ಟೆಂಡರ್ ಕರೆಯಲಾಗಿದೆ. ಇ–ಪ್ರೋಕ್ಯೂರ್‌ಮೆಂಟ್ ವೆಬ್‌ಸೈಟ್ www.kppp.karnataka.gov.in ನಲ್ಲಿ ವೀಕ್ಷಣೆ, ಡೌನ್‌ಲೋಡ್ ಮತ್ತು ಅಪ್‌ಲೋಡ್‌ಗೆ ಮಾಡಲು ಕೊನೆಯ ದಿನಾಂಕ: 18.07.2026 ಸಾಯಂಕಾಲ 05.00 ಗಂಟೆಯವರೆಗೂ ನಿಗಧಿಪಡಿಸಲಾಗಿದೆ. ಇ–ಟೆಂಡರ್ ಅಂದಾಜು ಮೌಲ್ಯ ಒಟ್ಟು ರೂ. 76.34 ಲಕ್ಷಗಳು ಇರುತ್ತದೆ. ಆಸಕ್ತಿವುಳ್ಳವರು ನಿಗದಿತ ಸಮಯದಲ್ಲಿ ಅರ್ಜಿಯನ್ನು ಸಲ್ಲಿಸಬಹುದಾಗಿದೆ.

ಸಹಿ/– ಜಿಲ್ಲಾ ಆಯುಷ್ ಅಧಿಕಾರಿಗಳು ಜಿಲ್ಲಾ ಆಯುಷ್ ಕಛೇರಿ, ಬಳ್ಳಾರಿ.
ವಾ.ಸಾ.ಸಂ.ಇ/ಬಳ್ಳಾರಿ/2026–27/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/299

ಕರ್ನಾಟಕ ಸರ್ಕಾರ
ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್
ಉಪನಿರ್ದೇಶಕರು (ಆಡಳಿತ) ಹಾಗು ಪದನಿಮಿತ್ತ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳ ಕಛೇರಿ, ಜಿಲ್ಲಾಡಳಿತ ಭವನ,
ಕೊಠಡಿ ಸಂಖ್ಯೆ: 119, ಬೀರಸಂದ್ರ ಗ್ರಾಮ, ಕುಂದಾಣ ಹೋಬಳಿ,
ದೇವನಹಳ್ಳಿ ತಾಲ್ಲೂಕು–562110, ಇ–ಮೇಲ್: egovbrural@gmail.com
ಸಂಖ್ಯೆ:ಸಿ1/ಸಶಿಕ/ಕೆ.ಕೆ.ಜಿ.ಬಿ.ವಿ/ಆಹಾರ ಪೂರೈಕೆ/05–2026–27 ದಿನಾಂಕ:03.07.2026

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ

2026–27ನೇ ಸಾಲಿಗೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಕೆಕೆಜಿಬಿವಿ ವಸತಿ ನಿಲಯ ಹೊಸಕೋಟೆ ಇಲ್ಲಿಗೆ 100 ವಿದ್ಯಾರ್ಥಿನಿಯರಿಗೆ ಆಹಾರ ಪೂರೈಕೆ ಮತ್ತು ಅಡುಗೆ ಸಿಬ್ಬಂದಿ ಸೇವೆ ಒದಗಿಸುವ ಸಂಬಂಧ ಸರ್ಕಾರೇತರ ಸಂಘ/ ಸಂಸ್ಥೆಗಳಿಂದ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಅಲ್ಪಾವಧಿ ಟೆಂಡರ್‌ನ್ನು ಕರೆದಿದ್ದು, ಅರ್ಹ ಸ್ವಸಹಾಯ ಗುಂಪು, ಸ್ತ್ರೀಶಕ್ತಿ ಸಂಘಕ್ಕೆ ಅಥವಾ ಸರ್ಕಾರೇತರ ಸ್ವಯಂ ಸೇವಾ ಸಂಸ್ಥೆಗಳಿಂದ ದರಪಟ್ಟಿಯನ್ನು ಆಹ್ವಾನಿಸಿದೆ. ಆಸಕ್ತಿಯುಳ್ಳ ಸಂಘ/ ಸಂಸ್ಥೆಗಳು http://www.eproc.karnataka.gov.in ವೆಬ್ ವಿಳಾಸದಲ್ಲಿ ಅರ್ಜಿಯನ್ನು ಸಲ್ಲಿಸುವುದು ಹಾಗೂ ಹೆಚ್ಚಿನ ಮಾಹಿತಿಗಾಗಿ ಉಪನಿರ್ದೇಶಕರ ಕಛೇರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೀರಸಂದ್ರ ಗ್ರಾಮ, ದೇವನಹಳ್ಳಿ, ದೂರವಾಣಿ ಸಂಖ್ಯೆ: 080–29566353 / ಮೊಬೈಲ್ ಸಂಖ್ಯೆ: 9448999384 ಇಲ್ಲಿಗೆ ಸಂಪರ್ಕಿಸುವುದು.

ಸಹಿ/–
ಉಪನಿರ್ದೇಶಕರು (ಆಡಳಿತ) ಹಾಗೂ ಪದನಿಮಿತ್ತ
ಜಿಲ್ಲಾ ಯೋಜನಾ ಸಮನ್ವಯಧಿಕಾರಿ, ಸ.ಶಿ.ಕ,
ಬೆಂಗಳೂರು ಗ್ರಾಮಾಂತರ ಜಿಲ್ಲೆ
ವಾಸಾಸಂಇ/ವಾಪ್ರ/1464/ಶಿರಡಿಸಾಯಿ/2026–27

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ
ಲೋಕೋಪಯೋಗಿ ಇಲಾಖೆ ಹಾಸನ ವಿಭಾಗ, ಹಾಸನ.
ಸಂಖ್ಯೆ: 19:ಕಾಇಂ:ಲೋಇ:ಹಾವಿಹಾ:ಸ.ಇಂ–1:2026–27
ದಿನಾಂಕಃ 01.07.2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ 1999 ಹಾಗೂ ನಿಯಮಗಳು 2000 ರಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ–4 ನಿಯಮದನ್ವಯ ಹಾಸನ ವಿಭಾಗ ವ್ಯಾಪ್ತಿಯ ಕಾಮಗಾರಿಗಳಿಗೆ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತರಾದ ಅರ್ಹ ದರ್ಜೆ ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಹಾಸನ ವಿಭಾಗ ವ್ಯಾಪ್ತಿಯ ಒಟ್ಟು 02 ಸಂಖ್ಯೆ ಕಾಮಗಾರಿಗಳಿಗಾಗಿ ಅಲ್ಪಾವದಿ ಟೆಂಡರ್‌ನ್ನು ಕರೆಯಲಾಗಿದೆ. ಸದರಿ ಟೆಂಡರ್‌ನಲ್ಲಿನ ಕನಿಷ್ಠ ಕಾಮಗಾರಿ ಅಂದಾಜು ಮೊತ್ತ ರೂ. 319.50 ಲಕ್ಷ ಹಾಗೂ ಗರಿಷ್ಠ ಕಾಮಗಾರಿ ಅಂದಾಜು ಮೊತ್ತ ರೂ. 319.70 ಲಕ್ಷ,. ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಕಾಮಗಾರಿಗಳಿಗೆ ಅರ್ಜಿ ಸಲ್ಲಿಸಲು ನಿಗಧಿಪಡಿಸಿರುವ ಕಡೆಯ ದಿನಾಂಕ: 17.07.2026, ಸಂಜೆ 4.00 ಗಂಟೆ ವರೆಗೆ. ಹೆಚ್ಚಿನ ವಿವರಗಳಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ಮೂಲಕ ನೋಡುವುದು ಅಥವಾ ಈ ಕಛೇರಿಯ ಸಹಾಯಕ ದೂರವಾಣಿ ಸಂಖ್ಯೆ: 08172–268437 ರಿಂದ ಕಛೇರಿಯ ವೇಳೆಯಲ್ಲಿ ಮಾಹಿತಿ ಪಡೆಯಬಹುದಾಗಿದೆ.

ಸಹಿ/–ಕಾರ್ಯಪಾಲಕ ಇಂಜಿನಿಯರ್,
ಲೋಇ ಹಾಸನ ವಿಭಾಗ, ಹಾಸನ.
ವಾಸಾಸಂಇ/ಹಿಸನಿ/ಹಾಸನ/290/ಕೆಎಸ್‌ಎಂಸಿಎ/2026–27

ಅಬಕಾರಿ ಉಪ ಆಯುಕ್ತರ ಕಚೇರಿ,
ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ.
ಸಂಖ್ಯೆ:ಇಕ್ಸ್‌ಇ/ಐಎಂಎಲ್/ಇ–ಹರಾಜು/57/2025–26
ದಿನಾಂಕ:03.07.2026

ಸಾರ್ವಜನಿಕ ಪತ್ರಿಕಾ ಪ್ರಕಟಣೆ

ಅಬಕಾರಿ ಪರವಾನಗಿ ಇ–ಹರಾಜು ಪ್ರಕ್ರಿಯೆ ಕುರಿತು ಸಂಭಾವ್ಯ ಬಿಡ್‌ದಾರರಿಗೆ ತರಬೇತಿ.

ಅಬಕಾರಿ ಇಲಾಖೆ ಭಾರತೀಯ ದೇಶಿ ಮತ್ತು ವಿದೇಶಿ ಮದ್ಯ ಎರಡನ್ನು ಮಾರಾಟ ಮಾಡಲು ಯಶಸ್ವಿ ಹೆಚ್–1 ಬಿಡ್ಡರ್‌ಗಳಿಗೆ ಸಿಎಲ್–2ಎ ಮತ್ತು ಸಿಎಲ್–9ಎ ನಮೂನೆಗಳಲ್ಲಿ ಖಾಲಿ ಅಥವಾ ಲಭ್ಯವಿರುವ ಅಬಕಾರಿ ಸನ್ನದು ನೀಡಲು ಬಿಡ್ಡರ್‌ಗಳಿಂದ ಬಿಡ್‌ಗಳನ್ನು ಆಹ್ವಾನಿಸುತ್ತಿದ್ದು, ಈ ಪ್ರಕ್ರಿಯೆಯು ಇ–ಹರಾಜು ವೆಬ್‌ಸೈಟ್ https://www.mstcecommerce.com ಮೂಲಕ ನಡೆಯಲಿದ್ದು, ಹರಾಜು ನಡೆಯುವ ಮತ್ತು ಅಂಗೀಕಾರ ಪತ್ರ (LOA) ನೀಡುವ ವರ್ಷವನ್ನು ಒಳಗೊಂಡಂತೆ ಐದು ಅಬಕಾರಿ ವರ್ಷಗಳ ಅವಧಿಗೆ, ಅಂದರೆ 2026–27 ರಿಂದ 2030–31 ರವರೆಗೆ ನೀಡಲಾಗುವುದು.
ಅದರಂತೆ, ಚಿತ್ರದುರ್ಗ ಜಿಲ್ಲೆಗೆ ಒಟ್ಟು 12 ಸಿಎಲ್–2ಎ ಸನ್ನದುಗಳನ್ನು ಹಂಚಿಕೆ ಮಾಡಿದ್ದು, ಅದರಲ್ಲಿ ಚಳ್ಳಕೆರೆ ಸಿಎಲ್–2ಎ 02 (1-SC-A, 1-GEN), ಚಿತ್ರದುರ್ಗ ಸಿಎಲ್–2ಎ 02 (1-SC-B, 1-GEN), ಹಿರಿಯೂರು ಸಿಎಲ್–2ಎ 02 (1-SC-C, 1-GEN), ಹೊಳಲ್ಕೆರೆ ಸಿಎಲ್–2ಎ 02 (1-ST, 1-GEN), ಹೊಸದುರ್ಗ ಸಿಎಲ್–2ಎ 02 (2-GEN) & ಮೊಳಕಾಲ್ಮೂರು ಸಿಎಲ್–2ಎ 02 (2-GEN)ಗಳನ್ನು (ಸರ್ಕಾರದ ಕರ್ನಾಟಕ ರಾಜ್ಯ ಪತ್ರ ಅ ಅಧಿಸೂಚನೆ ಸಂ. ಆಇ/17/ಪಿಇಎಸ್/2026, ದಿನಾಂಕ:26.05.2026ರ ಪ್ರಕಾರ ಪರಿಶಿಷ್ಟ ಜಾತಿ–ಎ–5.25%, ಬಿ–5.25% ಮತ್ತು ಸಿ–4.5% ಹಾಗೂ ಪರಿಶಿಷ್ಟ ಪಂಗಡ–3% ಇ–ಹರಾಜಿನಲ್ಲಿ ಮೀಸಲಾತಿ ಇರುತ್ತದೆ) ಹಂಚಿಕೆ ಮಾಡಿರುವುದರಿಂದ ಬಿಡ್‌ದಾರರ ನೋಂದಣಿ ಪ್ರಾರಂಭ ದಿನಾಂಕ:08.07.2026 ಸಂಭಾವ್ಯ ಬಿಡ್‌ದಾರರಿಗೆ ಹಾಗೂ ಜಿಲ್ಲಾ ಇ–ಹರಾಜು ನೋಡಲ್ ಅಧಿಕಾರಿಗಳಿಗೆ ತರಬೇತಿ ದಿನಾಂಕ: 06.07.2026 ರಿಂದ 14.07.2026 ಹಾಗೂ ನೇರ ಹರಾಜು ದಿನಾಂಕ: 24.07.2026 ರಿಂದ 31.07.2026 ಇರುತ್ತದೆ. ಇ–ಹರಾಜಿಗೆ ಸಂಬಂಧಿಸಿದ ವಿವರವಾದ ಮಾರ್ಗಸೂಚಿಗಳು ಇಲಾಖೆಯ ವೆಬ್‌ಸೈಟ್ https://stateexcise.karnataka.gov.inನಲ್ಲಿ ಲಭ್ಯವಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 8762342678 ಮತ್ತು 08394–200250 ಸಂಖ್ಯೆಗೆ ಕರೆ ಮಾಡಿ ಮಾಹಿತಿ ಪಡೆಯಬಹುದಾಗಿರುತ್ತದೆ.

DIPR/CTA/KSMCA/202/2026-27
ಸಹಿ/– ಅಬಕಾರಿ ಉಪ ಆಯುಕ್ತರು,
ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ.

180 ಕೋಟಿ ರು. ವೆಚ್ಚದ ಮಟಮಾರಿ ಶ್ರೀವೀರಭದ್ರೇಶ್ವರ ಏತ ನೀರಾವರಿ ಯೋಜನೆಗೆ ಸಂಪುಟ ಒಪ್ಪಿಗೆ | ಶಾಸಕರ ಇಚ್ಛಾಶಕ್ತಿಗೆ ಮೆಚ್ಚುಗೆ

ಗರಿ ಬಿಚ್ಚಿದ ಕೊನೆಯಂಚಿನ ರೈತರ ಕನಸು

ಬಸವರಾಜ ನಾಗಡದಿನ್ನಿ ರಾಯಚೂರು

ರಾಜಕೀಯ ಇಚ್ಛಾಶಕ್ತಿ ಮತ್ತು ಮತ ನೀಡಿದ ಜನತೆಗೆ ಒಳಿತು ಮಾಡುವ ಮನಸ್ಸಿದ್ದರೆ ಮಾತ್ರ ಕ್ಷೇತ್ರ ಅಭಿವೃದ್ಧಿಯಾಗಲು ಸಾಧ್ಯ ಎನ್ನುವುದನ್ನು ರಾಯಚೂರು ಗ್ರಾಮೀಣ ವಿಧಾನಸಭಾ ಕ್ಷೇತ್ರದ ಶಾಸಕ ಬಸನಗೌಡ ದದ್ದಲ್ ನಿಜವಾಗಿಸುತ್ತಿದ್ದಾರೆ.

ರಾಯಚೂರು ಗ್ರಾಮೀಣ ಕ್ಷೇತ್ರದ ಕೆಲ ಭಾಗ ತುಂಗಭದ್ರಾ ಎಡದಂಡೆ ಕಾಲುವೆ ನೀರಾವರಿಗೆ ಒಳಪಟ್ಟಿದ್ದರೂ, ಕೊನೆ ಹಂಚಿನ ರೈತರು ನೀರು ಸಿಗದೆ ಪರಿತಪಿಸುತ್ತಿದ್ದಾರೆ. ಇದಕ್ಕೆ ಶಾಶ್ವತ ಪರಿಹಾರ ಕಲ್ಪಿಸುವಲ್ಲಿ ಶಾಸಕ ಬಸನಗೌಡ ದದ್ದಲ್ ಸೈ ಎನಿಸಿಕೊಂಡಿದ್ದಾರೆ.

ಬಹಳ ವರ್ಷಗಳಿಂದ ನನೆಗುದಿಗೆ ಬಿದ್ದಿದ್ದ ಮಟಮಾರಿ ವೀರಭದ್ರೇಶ್ವರ ಏತ ನೀರಾವರಿ ಯೋಜನೆ ಪ್ರಾರಂಭಿಸಲು ಸಿಎಂ ಬಳಿ ಪಟ್ಟು ಹಿಡಿದಿದ್ದ ಶಾಸಕ ಬಸನಗೌಡ ದದ್ದಲ್ ಅವರು ಸಚಿವ ಸಂಪುಟದಿಂದ ಅನುಮೋದನೆ ಕೊಡಿಸಿದ್ದಾರೆ. ಕಾಮಗಾರಿಗೆ 180 ಕೋಟಿ ರು.ಮೀಸಲಿಟ್ಟಿದ್ದು, ಡಿಪಿಆರ್ ಹಾಗೂ ಟೆಂಡರ್ ಪ್ರಕ್ರಿಯೆ ಶೀಘ್ರದಲ್ಲೇ ನಡೆಯಲಿವೆ.

ಮಟಮಾರಿ ಶ್ರೀವೀರಭದ್ರೇಶ್ವರ ಏತ ನೀರಾವರಿ ಯೋಜನೆಯಿಂದ ನೀರು ವಂಚಿತ ರಾಯಚೂರು ತಾಲೂಕಿನ ಮಟಮಾರಿ, ಪುರತಿಪ್ಲಿ, ತುರುಕನಡೋಣಿ, ವೀರಾಪುರ, ವಲ್ಕಂದಿನ್ನಿ, ರಾಜಲಬಂಡ, ಆಲ್ಕೂರು, ಗಟ್ಟುಬಿಚ್ಚಾಲಿ,

ಬಿ.ಯದ್ಲಾಪುರ ಸೇರಿದಂತೆ ವಿವಿಧ ಹಳ್ಳಿಗಳ ಸುಮಾರು 18,000 ರಿಂದ 20,000 ಅಚ್ಚುಕಟ್ಟು ಪ್ರದೇಶಕ್ಕೆ ನೀರು ಸರಬರಾಜು ಮಾಡಬಹುದಾಗಿದೆ. ಈ ಭಾಗವು ತುಂಗಭದ್ರಾ ಎಡದಂಡೆ ಕಾಲುವೆ ಕೆಳಭಾಗದ ವ್ಯಾಪ್ತಿಗೆ ಬರುತ್ತಿರುವುದರಿಂದ 102 ಮತ್ತು 102 ಎ ಮುಖ್ಯಕಾಲುವೆ, ಉಪಕಾಲುವೆ ಹಾಗೂ ವಿತರಣಾ ಕಾಲುವೆಗಳು ಈಗಾಗಲೇ ಇರುವುದರಿಂದ ಸಮೀಪದ ತುಂಗಭದ್ರಾ ನದಿಯಿಂದ ಹರಿಯುವ ನೀರನ್ನು ಪಡೆದು ಅಚ್ಚುಕಟ್ಟು ಪ್ರದೇಶಕ್ಕೆ ನೀರುಣಿಸಲಾಗುವುದು. ಮೊದಲ ಹಂತದಲ್ಲಿ ಜಾಕ್ವೆಲ್ ಹಾಗೂ ಪಂಪ್ ಹೌಸ್ ನಿರ್ಮಿಸಿ ಅಲ್ಲಿಂದ ನೀರನ್ನು ಎತ್ತಿ ಮುಖ್ಯ ವಿತರಣಾ ಚೇಂಬರ್ಗೆ ನೀರು ಹರಿಸಲಾಗುವುದು. ಎರಡನೇ ಹಂತದಲ್ಲಿ ಮುಖ್ಯಕಾಲುವೆ ಮುಖಾಂತರ ಗುರುತ್ವಾಕರ್ಷಣೆಯಡಿ ವಿತರಣಾ, ಉಪಕಾಲುವೆಗಳ ಮುಖಾಂತರ ರೈತರ ಜಮೀನುಗಳಿಗೆ ನೀರು ಬಿಡುವ ಯೋಜನೆಯು ಇದಾಗಿದೆ.

ತುಂಗಭದ್ರಾ ಎಡದಂಡೆ ವಿತರಣಾ ಕಾಲುವೆ 108ರ ಕೆಳ ಭಾಗದ ಅಚ್ಚುಕಟ್ಟು ಪ್ರದೇಶದ ರೈತರು ನೀರಿನಿಂದ ವಂಚಿತಗೊಂಡಿದ್ದರು. ನೀರಾವರಿಯಿದ್ದರೂ ಸಹ ಮಳೆಯಾಶ್ರಿತ ಹಾಗೂ ಬೋರ್‌ವೆಲ್ ಆಧಾರಿತ ಬೆಳೆಗಳಾದ ಹತ್ತಿ, ಜೋಳ, ಮೆಣಸಿನಕಾಯಿ, ಕಾಯಿಪಲ್ಲೆ, ತೋಟಗಾರಿಕೆ ಬೆಳೆಗಳನ್ನು ಬೆಳೆಯುತ್ತಿದ್ದರು. ಇದೀಗ ಏತ ನೀರಾವರಿ ಯೋಜನೆ ಕಾರ್ಯರೂಪ ತಾಳಿದ್ದು, ಜಮೀನುಗಳಿಗೆ ನೀರು ಬಂದಂತಾದಲ್ಲಿ ರೈತರ ಬಹುದಿನಗಳ ಕನಸು ನನಸಾಗಲಿದೆ.

ಯಾವ ಗ್ರಾಮಗಳಿಗೆ ಉಪಯೋಗ

ಮಟಮಾರಿ ಶ್ರೀವೀರಭದ್ರೇಶ್ವರ ಏತ ನೀರಾವರಿ ಯೋಜನೆಯಿಂದ ನೀರು ವಂಚಿತ ರಾಯಚೂರು ತಾಲೂಕಿನ ಮಟಮಾರಿ, ಪುರತಿಪ್ಲಿ, ತುರುಕನಡೋಣಿ, ವೀರಾಪುರ, ವಲ್ಕಂದಿನ್ನಿ, ರಾಜಲಬಂಡ, ಆಲ್ಕೂರು, ಗಟ್ಟುಬಿಚ್ಚಾಲಿ, ಬಿ.ಯದ್ಲಾಪುರ ಸೇರಿದಂತೆ ವಿವಿಧ ಹಳ್ಳಿಗಳ ಸುಮಾರು 18,000 ರಿಂದ 20,000 ಅಚ್ಚುಕಟ್ಟು ಪ್ರದೇಶಕ್ಕೆ ನೀರು ಸರಬರಾಜು ಮಾಡಬಹುದಾಗಿದೆ.

ರಾಯಚೂರು ಗ್ರಾಮೀಣ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ನೀರಾವರಿಯಿಂದ ವಂಚಿತಗೊಂಡಿರುವ ಹತ್ತಾರು ಹಳ್ಳಿಗಳ ಸುಮಾರು 20 ಸಾವಿರ ಎಕರೆಗೆ ನೀರು ಕಲ್ಪಿಸುವ ನಿಟ್ಟಿನಲ್ಲಿ ಮಟಮಾರಿ ಶ್ರೀವೀರಭದ್ರೇಶ್ವರ ಏತ ನೀರಾವರಿ ಯೋಜನೆಯನ್ನು ರೂಪಿಸಿದೆ. 182.70 ಕೋಟಿ ರು.ವೆಚ್ಚದ ಈ ಯೋಜನೆ ಕಾಮಗಾರಿಗೆ ಸಚಿವ ಸಂಪುಟ ಅನುಮೋದನೆ ಕೊಟ್ಟಿದೆ. ಶೀಘ್ರದಲ್ಲೇ ಟೆಂಡರ್ ಪ್ರಕ್ರಿಯೆ ಆರಂಭಿಸಲಾಗುವುದು.

-ಬಸನಗೌಡ ದದ್ದಲ್
ರಾಯಚೂರು ಗ್ರಾಮೀಣ ಶಾಸಕ

ಕೂಡಲೇ ಸರ್ವಪಕ್ಷಗಳ ಸಭೆ ಕರೆಯಿರಿ: ಎನ್.ರವಿಕುಮಾರ್

ಬರ ಘೋಷಿಸುವಂತೆ ಸರಕಾರಕ್ಕೆ ಆಗ್ರಹ

ಕಲಬುರಗಿ: ರಾಜ್ಯದಲ್ಲಿ ಭೀಕರ ಬರಗಾಲ ಆವರಿಸಿದ್ದರೂ ರೈತರ ಗೋಳು ಕೇಳುವವರೇ ಇಲ್ಲದಂತಾಗಿದ್ದು, ಸರಕಾರ ತಕ್ಷಣವೇ ಎಚ್ಚೆತ್ತುಕೊಂಡು ಇಡೀ ರಾಜ್ಯವನ್ನು ಬರಪೀಡಿತ ಎಂದು ಘೋಷಿಸಬೇಕು ಹಾಗೂ ಕುಡಿಯುವ ನೀರಿನ ಸಮಸ್ಯೆ ಕುರಿತು ಚರ್ಚಿಸಲು ಕೂಡಲೇ ಸರ್ವಪಕ್ಷಗಳ ತುರ್ತು ಸಭೆ ಕರೆಯಬೇಕು ಎಂದು ಎಂಎಲ್‌ಸಿ ಎನ್.ರವಿಕುಮಾರ್ ಒತ್ತಾಯಿಸಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದ ಜಲಾಶಯಗಳು ಸಂಪೂರ್ಣ ಖಾಲಿಯಾಗುತ್ತಿದ್ದು, ಕುಡಿಯುವ ನೀರಿಗಾಗಿ ಜನ ತತ್ತರಿಸುತ್ತಿದ್ದಾರೆ.

ಆದರೆ, ಕಾಂಗ್ರೆಸ್ ಸರಕಾರಕ್ಕೆ ಇದು ಸಮಸ್ಯೆಯಾಗಿಯೇ ಕಾಣುತ್ತಿಲ್ಲ. ಇದೊಂದು ಕೇವಲ 'ವಾಸ್ತು ಸರಕಾರ'ವಾಗಿದ್ದು, ಜನಹಿತ ಕಾರ್ಯಗಳಿಗೆ ಇವರಿಗೆ ವಾಸ್ತು ಅಡ್ಡ ಬರುತ್ತಿದೆ. ರಾಜ್ಯದಲ್ಲಿ ಬರದ ಛಾಯೆ ಇದ್ದರೂ ಇರೋ ಮಂತ್ರಿಗಳಲ್ಲೇ ಅಸಮಾಧಾನವಿದ್ದು, ಯಾರೂ ಜನರ ಬಳಿ ಹೋಗುತ್ತಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪ್ರಿಯಾಂಕ್ ಖರ್ಗೆ ಕಾಣೆಯಾಗಿದ್ದಾರೆ ಅಭಿಯಾನದ ಎಚ್ಚರಿಕೆ: ಕಲಬುರಗಿ ಜಿಲ್ಲೆಗೆ ಉಸ್ತುವಾರಿ ಸಚಿವರಾಗಿದ್ದರೂ ಪ್ರಿಯಾಂಕ್ ಖರ್ಗೆ ಅವರು ಬೆಂಗಳೂರನ್ನೇ ತಮ್ಮ ಕೇಂದ್ರ ಮಾಡಿಕೊಂಡಿದ್ದಾರೆ. ಜಿಲ್ಲೆಯ ಜನರ ಸಮಸ್ಯೆಗಳಿಗೆ ಸ್ಪಂದಿಸುತ್ತಿಲ್ಲ. ಅವರು ಹೀಗೆಯೇ ಮುಂದುವರಿದರೆ ಶೀಘ್ರದಲ್ಲೇ ಜಿಲ್ಲೆಯಲ್ಲಿ 'ಉಸ್ತುವಾರಿ ಸಚಿವರನ್ನು ಹುಡುಕಿಕೊಡಿ' ಎಂದು ಬಿಜೆಪಿ ವತಿಯಿಂದ ಬೃಹತ್ ಅಭಿಯಾನ ಹಮ್ಮಿಕೊಳ್ಳಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಈ ವೇಳೆ ಬಿಜೆಪಿ ಜಿಲ್ಲಾಧ್ಯಕ್ಷ ಅಶೋಕ್ ಬಗಲಿ, ಆನಂದ್ ಪಾಟೀಲ್ ಕೊರಳ್ಳಿ, ವೀರೇಶ್ ಪಾಟೀಲ್, ಗಿರೀಶ್ ಭಜಂತ್ರಿ ಇದ್ದರು.

ಲಾಡ್ಲೇ ಮಶಾಕ್ ದರ್ಗಾ ಪ್ರಕರಣದ ಕೇಸ್ ವಾಪಸ್ ಪಡೆದಿದ್ದಕ್ಕೆ ಹೈಕೋರ್ಟ್ ಸರಕಾರಕ್ಕೆ ಕಪಾಳಮೋಕ್ಷ ಮಾಡಿದೆ. ಹಿಂದೂಗಳು ಏನೇ ಮಾಡಿದರು ಕೇಸ್‌ಗಳನ್ನು ಹಾಕುತ್ತಾರೆ. ಆದರೆ, ಬೇರೆಯವರು ಏನೇ ಮಾಡಿದರು ಕೇಸ್ ಹಾಕಲು ಹಿಂದೇ ಮುಂದೆ ನೋಡುತ್ತಾರೆ. ಗೃಹ ಸಚಿವರು ಸಂಪೂರ್ಣವಾಗಿ ತುಷ್ಟೀಕರಣ ನೀತಿ ಅನುಸರಿಸುತ್ತಿದ್ದಾರೆ. ತುಷ್ಟೀಕರಣ ನೀತಿ ಕೂಡಲೇ ಬಿಡಬೇಕು.

- ಎನ್.ರವಿಕುಮಾರ್
ವಿಧಾನ ಪರಿಷತ್ ಸದಸ್ಯ

ಶಾಂತಿ ಒಪ್ಪಂದಕ್ಕೆ ಚೂರಿ ಹಾಕಲು ಇಸ್ರೇಲ್ ಯತ್ನ

← ಐದನೇ ಪುಟದಿಂದ

ಅನಂತರ ಆರಂಭವಾದ ಯುದ್ಧದಲ್ಲಿ, ಇರಾನ್‌ನ ಉನ್ನತ ನಾಯಕರನ್ನು ಗುರಿಯಾಗಿಸುವುದೇ ಇಸ್ರೇಲ್‌ನ ಪ್ರಮುಖ ತಂತ್ರವಾಗಿತ್ತು ಎಂದು ಹೇಳಲಾಗಿದೆ.

ಇಸ್ರೇಲ್ ಯುದ್ಧ ಆರಂಭವಾದ ದಿನಗಳಿಂದಲೇ ಇರಾನ್‌ನ ಉನ್ನತ ನಾಯಕತ್ವವನ್ನು ಗುರಿಯಾಗಿಸುವ ತಂತ್ರವನ್ನು ಅನುಸರಿಸುತ್ತಿತ್ತು. ಇಸ್ರೇಲ್ ನಡೆಸಿದ ದಾಳಿಯಲ್ಲಿ ಇರಾನ್‌ನ ಪರಮೋಚ್ಚ ನಾಯಕ ಆಯತೊಲ್ಲಾ ಅಲಿ ಖಮೇನಿ ಸೇರಿದಂತೆ ಹಲವು ಉನ್ನತ ಅಧಿಕಾರಿಗಳು ಮೃತಪಟ್ಟಿದ್ದರು. ಆದರೆ, ಶಾಂತಿ ಮಾತುಕತೆಗಳು ಏಪ್ರಿಲ್‌ನಲ್ಲಿ ಆರಂಭವಾದ ನಂತರ ಪರಿಸ್ಥಿತಿ ಬದಲಾಗಿದೆ ಎಂದು ಅಮೆರಿಕದ ಅಧಿಕಾರಿಗಳು ತಿಳಿಸಿದ್ದಾರೆ.

ಜೂನ್ ವೇಳೆಗೆ ಅಮೆರಿಕ ಮತ್ತು ಇರಾನ್ ನಡುವೆ ಹೊರ್ಮುಜ್ ಜಲಸಂಧಿಯನ್ನು ಮರು ತೆರೆಯುವ ಹಾಗೂ ಅಣು ಕಾರ್ಯಕ್ರಮದ ಕುರಿತು ಮುಂದಿನ ಮಾತುಕತೆಗಳಿಗೆ ದಾರಿ ಮಾಡಿಕೊಡುವ ತಾತ್ಕಾಲಿಕ ಚೌಕಟ್ಟಿನ ಒಪ್ಪಂದವೂ ರೂಪುಗೊಂಡಿತ್ತು. ಆದರೆ, ಈ ಒಪ್ಪಂದವನ್ನು ಇಸ್ರೇಲ್ ತನ್ನ ಯುದ್ಧ ಗುರಿಗಳಿಗೆ ವಿರೋಧವಾಗಿದೆಯೆಂದು ಪರಿಗಣಿಸಿತ್ತು.

ಅದೇ ಸಮಯದಲ್ಲಿ ಇಸ್ರೇಲ್, ಇರಾನ್‌ನ ಪ್ರಮುಖ ನಾಯಕರನ್ನು ಗುರಿ ಪಟ್ಟಿಯಲ್ಲಿ ಸೇರಿಸಿದ್ದರೂ, ಅಮೆರಿಕದ ಒತ್ತಡದ ನಂತರ ಕೆಲವರ ಹೆಸರುಗಳನ್ನು ತಾತ್ಕಾಲಿಕವಾಗಿ ಕೈಬಿಟ್ಟಿದ್ದಾಗಿ ವರದಿಗಳು ತಿಳಿಸಿವೆ.

ಇದರ ಮಧ್ಯೆ ಇರಾನ್ ಸಂಧಾನಕಾರರಾದ ಅಬ್ಬಾಸ್ ಅರಾಘ್ಚಿ ಮತ್ತು ಮೊಹಮ್ಮದ್ ಬಘೇರ್ ಘಲಿಬಾಫ್ ಹಲವು ಬಾರಿ ಜೀವ ಅಪಾಯದಿಂದ ಪಾರಾಗಿರುವ ಘಟನೆಗಳೂ ನಡೆದಿರುವುದಾಗಿ ವರದಿಗಳು ತಿಳಿಸಿವೆ.

ಘಲಿಬಾಫ್ ಎರಡು ಬಾರಿ ಹತ್ಯೆ ಯತ್ನಗಳಿಂದ ತಪ್ಪಿಸಿಕೊಂಡಿದ್ದಾರೆ ಎಂದು ಹೇಳಲಾಗುತ್ತಿದ್ದು, ಕೆಲವು ಸಂದರ್ಭಗಳಲ್ಲಿ ಭೂಗತ ಸಭಾಂಗಣದಲ್ಲಿ ನಡೆದ ಉನ್ನತ ಮಟ್ಟದ ಸಭೆಯ ಮೇಲೆಯೇ ದಾಳಿ ನಡೆದಿದ್ದು, ಅವರು ಅವಶೇಷಗಳಡಿ ಸಿಲುಕಿದ್ದರೂ ನಂತರ ರಕ್ಷಿಸಲ್ಪಟ್ಟಿದ್ದಾರೆ ಎಂದು ವರದಿಗಳು ತಿಳಿಸಿವೆ.

ರಾಜತಾಂತ್ರಿಕ ಚಟುವಟಿಕೆಗಳ ಸಂದರ್ಭದಲ್ಲಿ ಭದ್ರತಾ ಅಪಾಯ ಹೆಚ್ಚಾಗಿದ್ದ ಕಾರಣ, ಪಾಕಿಸ್ತಾನದಲ್ಲಿ ನಡೆದ ಮಾತುಕತೆ ವೇಳೆ ಇರಾನ್ ನಿಯೋಗಕ್ಕೆ ಯುದ್ಧ ವಿಮಾನಗಳ ಭದ್ರತಾ ಕಾವಲು ನೀಡಲಾಗಿತ್ತು. 70ಕ್ಕೂ ಹೆಚ್ಚು ಸದಸ್ಯರಿದ್ದ ನಿಯೋಗವನ್ನು ಪಾಕಿಸ್ತಾನದಿಂದ ಇಸ್ಲಾಮಾಬಾದ್‌ವರೆಗೆ ಯುದ್ಧವಿಮಾನಗಳು ಬೆಂಗಾವಲಾಗಿ ಕರೆದೊಯ್ದಿದ್ದವು ಎಂದು ತಿಳಿದುಬಂದಿದೆ. ಆದರೆ, ಹಿಂದಿರುಗುವ ವೇಳೆ, ಇಸ್ರೇಲ್ ದಾಳಿ ಸಾಧ್ಯತೆ ಕುರಿತು ಗುಪ್ತಚರ ಮಾಹಿತಿ ದೊರೆತ ಹಿನ್ನೆಲೆಯಲ್ಲಿ ಇರಾನ್ ಅಧಿಕಾರಿಗಳು ತಕ್ಷಣ ಕ್ರಮ ಕೈಗೊಂಡು, ಘಲಿಬಾಫ್ ಪ್ರಯಾಣಿಸುತ್ತಿದ್ದ ವಿಮಾನವನ್ನು ಭದ್ರತಾ ಕಾರಣಗಳಿಂದ ಮಶ್ಹದ್ ನಗರದಲ್ಲಿ ತುರ್ತು ಲ್ಯಾಂಡ್ ಮಾಡಿಸಿ, ನಂತರ ನಿಯೋಗ ರಸ್ತೆ ಮಾರ್ಗದ ಮೂಲಕ ಟೆಹರಾನ್ ತಲುಪುವಂತೆ ಮಾಡಲಾಗಿತ್ತು ಎಂದು ಹೇಳಲಾಗುತ್ತಿದೆ.

ಕಾಂಗ್ರೆಸ್‌ನಿಂದ ಅಧಿಕಾರ ದುರುಪಯೋಗ

ರಾಮನಗರ: ರಾಜ್ಯದಲ್ಲಿ ನಡೆಯುತ್ತಿರುವ ಮತದಾರರ ಪಟ್ಟಿ ವಿಶೇಷ ತೀವ್ರ ಪರಿಷ್ಕರಣೆಯಲ್ಲಿ ಕಾಂಗ್ರೆಸ್ ಸರಕಾರ ವ್ಯವಸ್ಥಿತವಾಗಿ ಅಧಿಕಾರ ದುರುಪಯೋಗ ಮಾಡಿಕೊಳ್ಳುತ್ತಿದೆ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ತೀವ್ರ ವಾಗ್ದಾಳಿ ನಡೆಸಿದ್ದಾರೆ.

ರಾಮನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾಂಗ್ರೆಸ್ ಸರಕಾರದ ಅಕ್ರಮಗಳ ವಿರುದ್ಧ ಚುನಾವಣಾ ಆಯೋಗಕ್ಕೆ ವಿಡಿಯೋ ಸಾಕ್ಷ್ಯ ಹಾಗೂ ದಾಖಲೆ ಸಮೇತ ದೂರು ನೀಡುವುದಾಗಿ ತಿಳಿಸಿದ್ದಾರೆ.

ರಾಜ್ಯದ ಹಲವು ಭಾಗಗಳಿಂದ ತಮಗೆ ಅಕ್ರಮದ ಬಗ್ಗೆ ಮಾಹಿತಿ ಬರುತ್ತಿದೆ, ಕಾಂಗ್ರೆಸ್ ಪಕ್ಷವು ತನ್ನ ಮತದಾರರ ಸಂಖ್ಯೆಯನ್ನು ಹೆಚ್ಚಿಸಿಕೊಳ್ಳಲು ಅಕ್ರಮವಾಗಿ ಹೆಸರುಗಳನ್ನು ಸೇರಿಸುತ್ತಿದೆ. ಸಂವಿಧಾನದ ಬಗ್ಗೆ ಮಾತನಾಡುವ ಕಾಂಗ್ರೆಸ್ ರಾಜ್ಯಾಧ್ಯಕ್ಷರು ಮತ್ತು ಪ್ರಿಯಾಂಕ್ ಖರ್ಗೆ ಅವರು ರಾಜ್ಯದಲ್ಲಿ ಏನು ನಡೆಯುತ್ತಿದೆ ಎಂಬುದನ್ನು ನೋಡಲಿ ಎಂದು ಕುಟುಕಿದರು.

ಇವರ ಬಂಡವಾಳ ತೆಗೆಯಲು ನಾನು ಇಲ್ಲಿರುವೆ: ರಾಮನಗರ ಜಿಲ್ಲೆಯಿಂದ ಕುಮಾರಸ್ವಾಮಿ ಮತ್ತು ದೇವೇಗೌಡರ ಕುಟುಂ ಬವನ್ನು ಓಡಿಸಿದ್ದೇವೆ, ಇಲ್ಲಿ ಅವರಿಗೇನು ಕೆಲಸ ಅಂತಾವ್ರೆ, ನನ್ನ ಭೂಮಿ ಮತ್ತು ವೋಟ್ ಇರುವುದು ಇದೇ ರಾಮನಗರ ಜಿಲ್ಲೆಯಲ್ಲಿ. ವಿರೋಧಿ ಗಳು ಇಲ್ಲೇ ಹುಟ್ಟಿರಬಹುದು, ನಾನು ಇಲ್ಲಿ ಹುಟ್ಟದೇ ಇರಬಹುದು. ಆದರೆ ನನಗೆ ರಾಜಕೀಯವಾಗಿ ಜನ್ಮ ನೀಡಿದ ಜಿಲ್ಲೆ ಇದು. ನಮ್ಮನ್ನು ಇಲ್ಲಿಂದ ಎಲ್ಲೂ ಕಳಿಸಲು ಸಾಧ್ಯವಿಲ್ಲ. ಕಾಲಚಕ್ರ ಸುತ್ತುತ್ತದೆ. ಈಗ ನಮ್ಮ ಕೆಲಸ ಪ್ರಾರಂಭವಾಗಿದೆ. ಕಾರ್ಯಕರ್ತರ ಜತೆಗೂಡಿ ಇಲ್ಲೇ ಕೆಲಸ ಆರಂಭಿಸಿದ್ದೇನೆ. ಇವರ ಬಂಡವಾಳ ತೆಗೆಯಲೆಂದೇ ನಾನು ಇನ್ನು ಬದುಕಿದ್ದೇನೆ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಕಿಡಿಕಾರಿದರು.

ಕಾರ್ಯಪಾಲಕ ಪಂಚಾಯತ್ ರಾಜ್ ಇಂಜಿನಿಯರ್.ವಿಭಾಗ ಮಡಿಕೇರಿ
ಸಂ:ಕಾ.ಇಂ/ಪಂ.ರಾ.ಇಂ.ವಿ-ಮಡಿಕೇರಿ/ಟೆಂಡರ್ ಪ್ರಕಟಣೆ ಸಂಖ್ಯೆ:/04/2026-27/585 ದಿನಾಂಕ:30-06-2026

"ಟೆಂಡರ್ ಪ್ರಕಟಣೆ"
(ಕೆ.ಪಿ.ಪಿ ಮುಖಾಂತರ ಮಾತ್ರ)

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಈ ಕೆಳಗಿನ ಕಾಮಗಾರಿಗಳಿಗೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ವೇದಿಕೆ ಪದ್ಧತಿಯಲ್ಲಿ KW-2 ನಿಬಂಧನೆಗೊಳಪಟ್ಟು ಟೆಂಡರ್ ಕರೆಯಲಾಗಿದೆ. ಅರ್ಹ ಗುತ್ತಿಗೆದಾರರು ಟೆಂಡರ್‌ನಲ್ಲಿ ಭಾಗವಹಿಸಲು ಕೋರಿದೆ.

ಕ್ರ.ಸಂ	ಕಾಮಗಾರಿಯ ವಿವರ	ಮೀಸಲಾತಿ	ಕಾಮಗಾರಿಯ ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)
1	ಕರ್ಣಂಗೇರಿ ಗ್ರಾಮದ ಸರ್ವೆ ನಂ: 542/1 ರಲ್ಲಿರುವ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ವಸತಿ ಗೃಹ ಕಟ್ಟಡದ ಉನ್ನತೀಕರಣ ಹಾಗೂ ಅಗತ್ಯ ಮೂಲಸೌಕರ್ಯ ಕಾಮಗಾರಿಗಳನ್ನು ನಿರ್ವಹಿಸುವುದು.	GEN	50.00
2	ಕರ್ಣಂಗೇರಿ ಗ್ರಾಮದ ಸರ್ವೆ ನಂ: 542/1 ರಲ್ಲಿರುವ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ವಸತಿ ಗೃಹ ಕಟ್ಟಡದ ಮೇಲ್ಭಾಗಕ್ಕೆ ಮಳೆಯಿಂದ ರಕ್ಷಣೆಗಾಗಿ ಸ್ಟೀಲ್ ರೂಫ್ ನಿರ್ಮಿಸಿ ಹೆಂಚುಗಳನ್ನು ಅಳವಡಿಸುವುದು, ಕಾರ್ ಪಾರ್ಕಿಂಗ್ ಶೆಡ್ ನಿರ್ಮಿಸುವುದು ಹಾಗೂ ಇತರ ಅವಶ್ಯಕ ಕಾಮಗಾರಿಗಳನ್ನು ನಿರ್ವಹಿಸುವುದು.	GEN	50.00
3	ಕೆ.ಬಾಡಗ ಗ್ರಾಮದಲ್ಲಿರುವ ಕೊಡಗು ಜಿಲ್ಲಾ ಪಂಚಾಯತ್ ಕಚೇರಿ ಕಟ್ಟಡಕ್ಕೆ ಸ್ಟೀಲ್ ರೂಫ್ ನಿರ್ಮಿಸಿ ಶೀಟ್ ಅಳವಡಿಸುವುದು, ಮುಖ್ಯ ಸಭಾಂಗಣದ ಹಿಂದಿನ ಮೂರು ಬಾಗಿಲುಗಳನ್ನು ಬದಲಾಯಿಸಿ ಹಿಂಭಾಗದ ಶೀಟ್ ವಿಸ್ತರಿಸುವುದು ಹಾಗೂ ಮೇನ್ ಗೇಟ್ ಪಕ್ಕ ರಕ್ಷಣಾತ್ಮಕ ತಡೆಗೋಡೆ ನಿರ್ಮಾಣ ಹಾಗೂ ಕಟ್ಟಡದ ಮೊದಲ ಹಾಗೂ ಎರಡನೇ ಮಹಡಿಯಲ್ಲಿ ರೈಲಿಂಗ್ ಗೆ ರಕ್ಷಣಾತ್ಮಕ ಗ್ಲಾಸ್ ಅಳವಡಿಸುವುದು,	GEN	40.00

1. ಭರ್ತಿಮಾಡಿದ ಟೆಂಡರ್‌ಗಳನ್ನು KPP ಪೋರ್ಟಲ್ ಮುಖಾಂತರ ಸಲ್ಲಿಸಲು ಕೊನೆಯ ದಿನಾಂಕ: 20-07-2026 ಸಂಜೆ 5:00 ಗಂಟೆಯವರೆಗೆ
2. ಟೆಂಡರ್‌ಗಳ ಬಿಡ್ ತೆರೆಯುವ ದಿನಾಂಕ: 21-07-2026 ಸಂಜೆ 5:00 ಗಂಟೆ ನಂತರ.
3. ಮಳೆಗಾಲ ಸಮೀಪಿಸಿರುವ ಕಾರಣ ಈ ಮೇಲಿನ ಕಾಮಗಾರಿಗಳಿಗೆ ಸಮಯಾವಕಾಶದ ಕೊರತೆ ಇರುವುದರಿಂದಾಗಿ ಅಲ್ಪಾವಧಿ ಟೆಂಡರ್ ಕರೆಯಲಾಗಿದೆ.

ಟೆಂಡರ್ ಪ್ರಕಟಣೆ ಷರತ್ತು ಹಾಗೂ ಕಾಮಗಾರಿಗಳ ವಿವರಗಳನ್ನು ವಿಭಾಗ ಕಚೇರಿಯಲ್ಲಿ ಅಥವಾ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ವೆಬ್ ಸೈಟ್ (www.kppp.karnataka.gov.in) ನಲ್ಲಿ ಪಡೆಯಬಹುದಾಗಿದೆ.

ಕಾರ್ಯಪಾಲಕ ಇಂಜಿನಿಯರ್
ಪಂಚಾಯತ್ ರಾಜ್ ಇಂ.ವಿಭಾಗ
ಮಡಿಕೇರಿ

ಕರ್ನಾಟಕ ಸರಕಾರ
(ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಇಂಜಿನೀಯರ್‌ರವರ ಕಛೇರಿ,
ಲೋಕೋಪಯೋಗಿ ಇಲಾಖೆ, ವಿಭಾಗ, ಯಾದಗಿರಿ
ಸಂ.ಕಾನಿಅ/ಲೋಇ/ಯಾವಿ/ತಾಶಾ–1&2/ಇ–ಟೆಂಡರ್ ಪ್ರಕಟಣೆ/2026–27/794 ದಿನಾಂಕ: 29.06.2026

ಅಲ್ಪಾವಧಿ ಇ –ಟೆಂಡರ್ ಅಧಿಸೂಚನೆ

1)ಕಾಮಗಾರಿ ವಿವರ :ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ, ಇಲಾಖೆ, ಯಾದಗಿರಿ ವಿಭಾಗ ಕಾರ್ಯಾಲಯದಿಂದ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿನಿಯಮದಂತೆ ಸ್ಟ್ಯಾಂಡರ್ಡ ಬಿಡ್ ಡಾಕ್ಯುಮೆಂಟ್ ಕೆಡಬ್ಲ್ಯೂ–3 & 4 ರಂತೆ ದ್ವಿ–ಲಕೋಟೆ ಪದ್ಧತಿಯಲ್ಲಿ ಈ ವಿಭಾಗ ವ್ಯಾಪ್ತಿಯಲ್ಲಿ ಬರುವ 2025–26ನೇ ಸಾಲಿನ ಲೆಕ್ಕಶೀರ್ಷಿಕೆ ಸಿಎಂಐಡಿಪಿ ಯೋಜನೆ ಮತ್ತು 5054 ಕೆ.ಆರ್.ಐ.ಡಿ.ಸಿ.ಎಲ್ ಅಡಿಯಲ್ಲಿ ಕೆಪಿಪಿಪಿ ಪೋರ್ಟಲ್ ಮುಖಾಂತರ ಯಾದಗಿರಿ ತಾಲೂಕಿನ (1)36253, (2)36741 & ಸುರಪುರ ತಾಲೂಕಿನ (1)32928/2ನೇ ಕರೆ, ಒಟ್ಟು 03 (ಮೂರು) ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ. **2)ಟೆಂಡರಿಗಿಟ್ಟ ಅಂದಾಜು ಮೊತ್ತ:** ಕನಿಷ್ಠ ರೂ.40.00 ಲಕ್ಷಗಳು ಹಾಗೂ ಗರಿಷ್ಠ ರೂ:120.00 ಲಕ್ಷಗಳು **3)ಗುತ್ತಿಗೆದಾರರ ಅರ್ಹತೆ ವಿವರ : ಸಿವಿಲ್ 3ನೇ ದರ್ಜೆ ಹಾಗೂ ಮೇಲ್ಪಟ್ಟು 4) ಟೆಂಡರ ಅರ್ಜಿಯ ಬೆಲೆ ಹಾಗೂ ಇ.ಎಮ್.ಡಿ. ಮೊತ್ತದ ವಿವರ :** ಅರ್ಜಿ ಬೆಲೆ, ಇ.ಎಮ್.ಡಿ ಮತ್ತು ಕಾಲಾವಧಿ kppp portal ನಂತೆ, **5) ಪ್ರೀ ಬಿಡ್ ಮೀಟಿಂಗ್ ದಿನಾಂಕ** :01.07.2026 (11.30 ಗಂಟೆ ನಂತರ) **6)ಟೆಂಡರ ಬಗ್ಗೆ ಮಾಹಿತಿ ಹಾಗೂ ಸ್ಪಷ್ಟೀಕರಣ ಕೋರುವ ಕೊನೆಯ ದಿನಾಂಕ** :04.07.2026 (17.30 ಗಂಟೆವರೆಗೆ) **7) ಟೆಂಡರ ಸಲ್ಲಿಸುವ ಕೊನೆಯ ದಿನಾಂಕ:** 09.07.2026 (16.00 ಗಂಟೆವರೆಗೆ) **8) ಟೆಂಡರ ತೆರೆಯುವ ದಿನಾಂಕ ತಾಂತ್ರಿಕ ಬಿಡ್** : 10.07.2026 (16.30 ಗಂಟೆ ನಂತರ) **9) ಆರ್ಥಿಕ ಬಿಡ್ ತೆರೆಯುವ ದಿನಾಂಕ** :13.07.2026 (11.30 ಗಂಟೆ ನಂತರ) **10)ಹೆಚ್ಚಿನ ವಿವರಗಳಿಗೆ** :ಕಾರ್ಯನಿರ್ವಾಹಕ ಇಂಜೀನಿಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಯಾದಗಿರಿ ಕಚೇರಿ **11)ಅಂತರ್ಜಾಲ ತಾಣದ ವಿಳಾಸ:**https://kppp.karnataka.gov.in

ವಿಶೇಷ ಸೂಚನೆಃ ತಾಂತ್ರಿಕ ಕಾರಣಗಳಿಂದ ತಿದ್ದುಪಡಿ/ಬದಲಾವಣೆಯಾದಲ್ಲಿ ಕೆಪಿಪಿಪಿ ಪೋರ್ಟಲ್‌ನಲ್ಲಿ ಮಾತ್ರ ಗಮನಿಸಬಹುದಾಗಿದೆ.

ವಾ.ಸಾ.ಸಂ.ಇ/ಯಾದಗಿರಿ/137/ಕೆ.ಎಸ್.ಎಂ.ಸಿ.&ಎ/2026–
ಸಹಿ/– ಕಾರ್ಯನಿರ್ವಾಹಕ ಇಂಜೀನೀಯರರು,
ಲೋಕೋಪಯೋಗಿ ಇಲಾಖೆ, ವಿಭಾಗ ಯಾದಗಿರಿ.

ಎಸ್‌ಐಆರ್ ದಂಗಲ್

← ಐದನೇ ಪುಟದಿಂದ

ಪ್ರಸ್ತುತ ಗೊಂದಲಗಳು ಪ್ರಮುಖವಾಗಿ ಬೆಂಗಳೂರು ನಗರ, ರಾಮನಗರ, ಕೋಲಾರ ಜಿಲ್ಲೆಗಳಲ್ಲಿ ತೀವ್ರವಾಗಿ ಕಂಡುಬಂದಿವೆ. ಅರ್ಹ ಮತದಾರರ ಹೆಸರುಗಳನ್ನು ಏಕಾಏಕಿ ಪಟ್ಟಿಯಿಂದ ತೆಗೆದು ಹಾಕಲಾಗುತ್ತಿದೆ ಎಂಬ ಆರೋಪಗಳು ಕೇಳಿಬರುತ್ತಿವೆ. ಸ್ಥಳೀಯರನ್ನು ಕಡೆಗಣಿಸಿ, ಹೊರಗಿನವರನ್ನು ಪಟ್ಟಿಗೆ ಸೇರಿಸಲಾಗುತ್ತಿದೆ ಎಂಬ ದೂರುಗಳು ವ್ಯಾಪಕವಾಗಿವೆ. ಸಾರ್ವಜನಿಕರು ಮಾಹಿತಿ ಕೇಳಲು ಹೋದಾಗ ಅಧಿಕಾರಿಗಳು ಸರಿಯಾದ ಪ್ರತಿಕ್ರಿಯೆ ನೀಡುತ್ತಿಲ್ಲ ಎಂಬುದು ಪ್ರಮುಖ ಆರೋಪವಾಗಿದೆ.

ಮನೆಮನೆಗೆ ತೆರಳಿ ಎಸ್‌ಐಆರ್ ಅರ್ಜಿ ವಿತರಿಸುವಂತೆ ಬಿಎಲ್‌ಒಗಳಿಗೆ ಸೂಚನೆ:

ಎಸ್‌ಐಆರ್ ಸಂಬಂಧಿಸಿದ ಗಣತಿ ಅರ್ಜಿಗಳನ್ನು ಕಡ್ಡಾಯವಾಗಿ ಮನೆ ಮನೆಗೆ ತೆರಳಿ ಮತದಾರರಿಗೆ ವಿತರಣೆ ಮಾಡಬೇಕೆಂದು ಆಯೋಗ ಎಲ್ಲಾ ಬಿಎಲ್‌ಒಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದೆ. ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಬರೆದಿದ್ದ ಪತ್ರ ಸಂಬಂಧ ರಾಜ್ಯ ಮುಖ್ಯ ಚುನಾವಣಾಧಿಕಾರಿ ಅನ್ಬುಕುಮಾರ್, ಭಾರತೀಯ ಚುನಾವಣಾ ಆಯೋಗದ ನಿರ್ದೇಶನದಂತೆ ಎಸ್‌ಐಆರ್ ಪ್ರಕ್ರಿಯೆ ಕೈಗೊಳ್ಳಬೇಕೆಂದು ಸೂಚಿಸಿದ್ದಾರೆ. ಈ ಸಂಬಂಧ ರಾಜ್ಯದ ಎಲ್ಲಾ ಜಿಲ್ಲೆಗಳ ಜಿಲ್ಲಾ ಚುನಾವಣಾ ಅಧಿಕಾರಿಗಳು, ವಿಶೇಷ ಆಯುಕ್ತರು (ಚುನಾವಣೆಗಳು), ಜಿಬಿಎ, ಹೆಚ್ಚುವರಿ ಜಿಲ್ಲಾ ಚುನಾವಣಾ ಅಧಿಕಾರಿಗಳು, ಬಿಬಿಎಂಪಿ ಕೇಂದ್ರ, ಬಿಬಿಎಂಪಿ ಉತ್ತರ ಮತ್ತು ಬಿಬಿಎಂಪಿ ದಕ್ಷಿಣ ಚುನಾವಣಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲಾಧಿಕಾರಿಗಳು (ಬೆಂಗಳೂರು ಉತ್ತರ, ದಕ್ಷಿಣ ಮತ್ತು ಮಧ್ಯ) ಆಯುಕ್ತರು, ಹೆಚ್ಚುವರಿ ಜಿಲ್ಲಾ ಚುನಾವಣಾಧಿಕಾರಿಗಳು ಮತ್ತು ಉಪ ಆಯುಕ್ತರುಗಳಿಗೆ ಪತ್ರದ ಮೂಲಕ ಈ ನಿರ್ದೇಶನ ನೀಡಿದ್ದಾರೆ. ಅಲ್ಲದೆ, ಬಿಎಲ್‌ಒಗಳು ಎಸ್‌ಐಆರ್ ನಡೆಸುವಾಗ ಕಡ್ಡಾಯವಾಗಿ ಮತದಾರರ ಮನೆಮನೆಗೆ ತೆರಳಿ ಗಣತಿ ಅರ್ಜಿಗಳನ್ನು ವಿತರಿಸುವಂತೆ ಸೂಚಿಸಿ ದ್ದಾರೆ. ಕೆಲವೊಂದು ಲೋಪದೋಷಗಳ ಬಗ್ಗೆ ಕಚೇರಿಗೆ ದೂರುಗಳು ಬಂದಿದ್ದು, ಕಡ್ಡಾಯವಾಗಿ ಆಯೋಗದ ಸೂಚನೆ ಪಾಲಿಸಬೇಕು ಎಂದು ಆದೇಶಿಸಿದ್ದಾರೆ.

ಜಿಬಿಎ ವ್ಯಾಪ್ತಿಯ 27 ವಾರ್ಡ್‌ನಲ್ಲಿ ಎಸ್‌ಐಆರ್ ಅನ್ನು ತಕ್ಷಣ ನಿಲ್ಲಿಸಬೇಕು. ಬಿಎಲ್‌ಒಗಳು ಮನೆಮನೆಗೆ ಹೋಗಿ ಪರಿಶೀಲಿಸಬೇಕಿತ್ತು. ಆಯೋಗ ನೀಡಿದ ಎಲ್ಲ ಸೂಚನೆಯನ್ನು ಉಲ್ಲಂಘಿಸಲಾಗುತ್ತಿದೆ. ಸೈಬರ್ ಕೇಂದ್ರಗಳಲ್ಲಿ ಬರ್ತ್ ಸರ್ಟಿಫಿಕೇಟ್ ಕೊಡುತ್ತಿದ್ದಾರೆ. ಶಾಶ್ವತ ನಿವಾಸಿ ದೃಢೀಕರಣ ಪತ್ರ ಕೊಡುತ್ತೇವೆ ಎಂದು ಮುಖ್ಯಮಂತ್ರಿ ಹೇಳುತ್ತಿದ್ದಾರೆ. ಅಕ್ರಮವಾಗಿ ಪಕ್ಷವನ್ನು ಮುಂದಿನ ಬಾರಿ ಅಧಿಕಾರಕ್ಕೆ ತರಲು ಈ ಯೋಜನೆ ಮಾಡಲಾಗಿದೆ.

-ಶೋಭಾ ಕರಂದ್ಲಾಜೆ, ಕೇಂದ್ರ ಸಚಿವೆ

ಬಿಎಲ್‌ಒಗಳ ದುರುಪಯೋಗ ಆಗುತ್ತಿದೆ. ಅಧಿಕಾರಿಗಳನ್ನು ಮಸೀದಿಯಲ್ಲಿ ಕೂರಿಸಿ ಎಸ್‌ಐಆರ್ ಪ್ರಕ್ರಿಯೆ ಪೂರ್ಣಗೊಳಿಸುತ್ತಿದೆ. ರಾಜ್ಯ ಸರಕಾರದಿಂದ ಹಿಂದೂಗಳ ವಿರುದ್ಧ ಷಡ್ಯಂತ್ರ ನಡೆಯುತ್ತಿದೆ. ಸಾಗರದಲ್ಲಿ ಬಿಎಲ್‌ಒಗಳನ್ನು ಕಾಂಗ್ರೆಸ್ ಪರ ಪ್ರಚಾರಕ್ಕೆ ಬಳಸಿಕೊಳ್ಳುತ್ತಿದ್ದಾರೆ. ಮುಖ್ಯಮಂತ್ರಿ ಇದನ್ನು ಸರಿಪಡಿಸಬೇಕು.

-ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

ಬಿಎಲ್‌ಒಗಳು ಭಾರತ ಚುನಾವಣಾ ಆಯೋಗದ ಮಾರ್ಗಸೂಚಿಯಂತೆ ಪ್ರಕಾರ ಗಣತಿ ಫಾಮ್‌ಗಳನ್ನು ವಿತರಿಸಲು ಮನೆ-ಮನೆಗೆ ಭೇಟಿ ನೀಡಬೇಕು ಹಾಗೂ ಕಟ್ಟುನಿಟ್ಟಾಗಿ ನಿರ್ದೇಶನಗಳನ್ನು ಪಾಲಿಸಬೇಕು. ಇದಲ್ಲದೆ, ಗಣತಿ ಫಾರ್ಮ್‌ಗಳನ್ನು ಭರ್ತಿ ಮಾಡಲು ಕಷ್ಟಪಡುವ ಮತದಾರರು ಅಗತ್ಯ ಸಹಾಯಕ್ಕಾಗಿ ಮತದಾರರ ಸೌಲಭ್ಯ ಕೇಂದ್ರಗಳಿಗೆ ಭೇಟಿ ನೀಡುವ ಆಯ್ಕೆ ಕಲ್ಪಿಸಲಾಗಿದೆ.

-ಅನ್ಬುಕುಮಾರ್, ರಾಜ್ಯ ಮುಖ್ಯ ಚುನಾವಣಾಧಿಕಾರಿ

ಎಸ್‌ಐಆರ್ ಕಾನೂನಾತ್ಮಕವಾಗಿ ನಡೆಸಬೇಕಾದದ್ದು ಆಯೋಗದ ಕೆಲಸ ಸಿಎಂ ಕೆಲಸವಲ್ಲ. ಸಿಎಂ ಪ್ರತಿ ಬೂತ್ ನೋಡಲಿಕ್ಕೆ ಆಗುತ್ತಾ? ಅಲ್ಲಲ್ಲಿ ಸಮುದಾಯ ಭವನ, ಮಸೀದಿ, ಮಂದಿರಗಳಲ್ಲಿ ನಡೆಸಿದರೆ ಪ್ರಕ್ರಿಯೆ ಬೇಗ ಮುಗಿಯುತ್ತದೆ ಎಂದು ಸ್ಥಳೀಯ ನಾಯಕರು ಹೇಳಿರಬಹುದು. ಚುನಾವಣಾ ಆಯೋಗವು ರಾಜ್ಯದ ಪ್ರಶ್ನೆಗಳಿಗೆ ಸ್ಪಷ್ಟನೆ ನೀಡದಿದ್ದರೆ, ಲಭ್ಯವಿರುವ ಎಲ್ಲಾ ಕಾನೂನು ಮತ್ತು ಸಾಂವಿಧಾನಿಕ ಆಯ್ಕೆಗಳನ್ನು ಸರಕಾರ ಪರಿಶೀಲಿಸಲಿದೆ.

-ಪ್ರಿಯಾಂಕ್ ಖರ್ಗೆ, ಗೃಹ ಸಚಿವ

ಕೃಷ್ಣಮೂರ್ತಿ ಶೃಂಗೇರಿ ಕೋರ್ಟ್‌ಗೆ ಹಾಜರು

ಶೃಂಗೇರಿ: ನಕ್ಸಲ್ ನಾಯಕ ಬಿ.ಜಿ. ಕೃಷ್ಣಮೂರ್ತಿಯನ್ನು ಕೇರಳ ಪೊಲೀಸರು ಶೃಂಗೇರಿ ಜೆಎಂಎಫ್‌ಸಿ ನ್ಯಾಯಾಲಯಕ್ಕೆ ಶುಕ್ರವಾರ ಹಾಜರುಪಡಿಸಿದರು. ಶೃಂಗೇರಿ ತಾಲೂಕಿನ ಬುಕ್ಕಡಿಬೈಲು ಗ್ರಾಮದ ನಿವಾಸಿಯಾಗಿರುವ ಬಿ.ಜಿ. ಕೃಷ್ಣಮೂರ್ತಿ ವಿರುದ್ಧ ಕರ್ನಾಟಕದಲ್ಲಿ ಒಟ್ಟು 54 ಪ್ರಕರಣಗಳು ದಾಖಲಾಗಿವೆ. ಪ್ರಸ್ತುತ ಕೇರಳದ ವಿಯೂರು ಸೆಂಟ್ರಲ್ ಜೈಲಿನಲ್ಲಿ ನ್ಯಾಯಾಂಗ ಬಂಧನದಲ್ಲಿದ್ದಾರೆ.

ಚಂದ್ರಕಾಂತ್ ಅವರ ಮನೆ ಮೇಲಿನ ದಾಳಿ ಪ್ರಕರಣಕ್ಕೆ ಸಂಬಂಧಿಸಿದಂತೆ ಅವರನ್ನು ಕೇರಳದಿಂದ ಶೃಂಗೇರಿ ನ್ಯಾಯಾಲಯಕ್ಕೆ ಕರೆತರಲಾಗಿತ್ತು. ಪ್ರಕರಣದ ಮುಂದಿನ ವಿಚಾರಣೆಯನ್ನು ನ್ಯಾಯಾಲಯ ಜುಲೈ 16ಕ್ಕೆ ಮುಂದೂಡಿದೆ. ಪ್ರಕರಣದ ವಿಚಾರಣೆಯನ್ನು ನ್ಯಾಯಾಧೀಶ ಆರ್.ಎಸ್.ಜೀತು ನಡೆಸಿದರು. ವಿಚಾರಣೆ ವೇಳೆ ಆರೋಪಿ ಪರ ವಕೀಲ ವಿ.ಆರ್.ನಟಶೇಖರ್ ಹಾಜರಿದ್ದರು. ಈ ವೇಳೆ ಕೇರಳ ಹಾಗೂ ಕರ್ನಾಟಕ ಪೊಲೀಸರಿಂದ ಬಿಗಿ ಭದ್ರತೆ ಏರ್ಪಡಿಸಲಾಗಿತ್ತು.

ಸಮಾಚಾರ ಸಣ್ಣದಲ್ಲ

ಭಾರತ ಪಾಸ್‌ಪೋರ್ಟ್ ರ‍್ಯಾಂಕಿಂಗ್ ಇಳಿಕೆ

ದೆಹಲಿ: ಭಾರತ ಆರ್ಥಿಕವಾಗಿ ಪ್ರಗತಿಗತಿಯಲ್ಲಿ ಸಾಗುತ್ತಿದ್ದರೂ ಅಶೋಕ ಸ್ಥಂಭ ಲಾಂಛನದ ಪಾಸ್‌ಪೋರ್ಟ್ ಮಾತ್ರ ವಿಶ್ವದ ಶ್ರೇಯಾಂಕ ಪಟ್ಟಿಯಲ್ಲಿ ಕುಸಿತ ಕಂಡಿದೆ. 2026ರ ಫೆಬ್ರವರಿಯಲ್ಲಿ ವಿಶ್ವದ ವಿವಿಧ ದೇಶಗಳ ಪಾಸ್‌ಪೋರ್ಟ್ ನಡುವಿನ ಪೈಪೋಟಿಯಲ್ಲಿ 75ನೇ ಶ್ರೇಣಿಯಲ್ಲಿದ್ದ ಭಾರತದ ಪಾಸ್‌ಪೋರ್ಟ್, ಆರು ತಿಂಗಳ ಬಳಿಕ ಈಗ 80ನೇ ಸ್ಥಾನಕ್ಕೆ ಕುಸಿದಿದೆ. ಆದರೆ, ಹಿಂದಿನ ವರ್ಷಕ್ಕೆ ಹೋಲಿಸಿದರೆ ಭಾರತದ ಪಾಸ್‌ಪೋರ್ಟ್ ಸ್ಥಾನ ಸ್ವಲ್ಪ ಮೇಲು ಮಟ್ಟದಲ್ಲಿಯೇ ಇದೆ. 2025ರಲ್ಲಿ ಅಶೋಕ ಸ್ಥಂಭ ಲಾಂಛನದ ಪಾಸ್‌ಪೋರ್ಟ್ 85ನೇ ಸ್ಥಾನದಲ್ಲಿತ್ತು ಎಂಬುದು ಉಲ್ಲೇಖಾರ್ಹ. ಹಾಗಿದ್ದೂ ಭಾರತದ ಪಾಸ್‌ಪೋರ್ಟ್ ಹೊಂದಿರುವವರು ವಿಶ್ವದ ವಿವಿಧೆಡೆಯ 56 ದೇಶಗಳಿಗೆ ಮುಂಚಿತವಾಗಿ ವೀಸಾ ಪಡೆಯದೇ ಇದ್ದರೂ ಹೋರಬಹುದಾಗಿದೆ.

ಟೆಲಿಗ್ರಾಂ, ಸಿಗ್ನಲ್‌ಗೂ ಕೇಂದ್ರದ ನೋಟಿಸ್

ದೆಹಲಿ: ಕೇಂದ್ರ ಸರಕಾರದ ಟೆಲಿಕಾಂ ಸಚಿವಾಲಯವು ಮೆಟಾ ಸಮೂಹದ 'ವಾಟ್ಸಾಪ್' ಕಂಪನಿಗೆ 'ಯೂಸರ್ ನೇಮ್' ವೈಶಿಷ್ಟ್ಯ ಆರಂಭಿಸುತ್ತಿರುವುದರ ಬಗ್ಗೆ ನೋಟಿಸ್ ನೀಡಿದ ಬೆನ್ನಲ್ಲೇ ಟೆಲಿಗ್ರಾಮ್ ಮತ್ತು ಸಿಗ್ನಲ್ ಸೋಷಿಯಲ್ ಮಿಡಿಯಾ ಸೇವಾ ಸಂಸ್ಥೆಗಳಿಗೂ ನೋಟಿಸ್ ಜಾರಿ ಮಾಡಿದೆ. ಆನ್‌ಲೈನ್ ವಂಚನೆ ತಡೆಯಲು ಮೆಸೇಜಿಂಗ್ ಆ್ಯಪ್‌ಗಳು ಕೈಗೊಂಡಿರುವ ಸುರಕ್ಷತಾ ಕ್ರಮಗಳ ಕುರಿತು ವಿವರ ವರದಿ ಸಲ್ಲಿಸುವಂತೆ ಕೇಂದ್ರ ಸರಕಾರ ಸೂಚಿಸಿದೆ. ಯೂಸರ್ ನೇಮ್ ಆಧಾರಿತ ಸ್ಮಾರ್ಟ್‌ಫೋನ್ ಸೇವೆಗಳು ಮೊಬೈಲ್ ಸಂಖ್ಯೆಯ ಅಗತ್ಯವೇ ಇಲ್ಲದೆ ಸಂಪರ್ಕ ಸಾಧಿಸಲು ಅವಕಾಶ ಮಾಡಿಕೊಡುವುದರಿಂದ ಆನ್‌ಲೈನ್ ವಂಚನೆಗೆ ರಹದಾರಿ ಮಾಡಿಕೊಟ್ಟಂತಾಗಲಿದೆ. ಜನಪ್ರಿಯ ವ್ಯಕ್ತಿಗಳು, ಗಣ್ಯರ ಹೆಸರನ್ನು ಹೋಲುವಂತೆ ಯೂಸರ್ ನೇಮ್ ಬಳಸಿಕೊಂಡು ದುಷ್ಕರ್ಮಿಗಳು ಈ ಸೇವೆಯ ದುರುಪಯೋಗ ಮಾಡಿಕೊಳ್ಳುವ ಸಾಧ್ಯತೆ ಹೆಚ್ಚಿದೆ. ಇದನ್ನು ತಡೆಯಲು ಕಟ್ಟುನಿಟ್ಟಿನ ನಿಯಮಗಳ ಅನುಸರಣೆಗೆ ಸರಕಾರ ದೂರಸಂಪರ್ಕ ಸೇವಾ ಸಂಸ್ಥೆಗಳನ್ನು ಒತ್ತಾಯಿಸಿದೆ.

3 ರಾಜ್ಯದ 3 ಕ್ಷೇತ್ರ ಉಪ ಚುನಾವಣೆ

ದೆಹಲಿ: ಬಿಹಾರ, ಮಧ್ಯಪ್ರದೇಶ ಮತ್ತು ಗುಜರಾತ್ ರಾಜ್ಯಗಳಲ್ಲಿ ತಲಾ 1 ವಿಧಾನಸಭಾ ಕ್ಷೇತ್ರಗಳಿಗೆ ಉಪ ಚುನಾವಣೆ ನಡೆಯಬೇಕಿದ್ದು, ಭಾರತೀಯ ಚುನಾವಣಾ ಆಯೋಗ ಚುನಾವಣಾ ಪ್ರಕ್ರಿಯೆಗಳ ದಿನಾಂಕಗಳನ್ನು ಪ್ರಕಟಿಸಿದೆ. ಬಿಹಾರದ ಬಂಕಿಪುರ, ಮಧ್ಯಪ್ರದೇಶದ ದಾಟಿಯಾ ಮತ್ತು ಗುಜರಾತ್ ಮಂಜಲ್‌ಪುರ ವಿಧಾನಸಭಾ ಕ್ಷೇತ್ರಗಳಿಗೆ ಉಪ ಚುನಾವಣೆ ನಡೆಯಲಿವೆ. ಜುಲೈ 30ರಂದು ಮತದಾನ, ಆ.3ರಂದು ಫಲಿತಾಂಶ ಪ್ರಕಟ ಎಂದು ಆಯೋಗ ಹೇಳಿದೆ. ಬಿಹಾರದ ಬಂಕಿಪುರ ಕ್ಷೇತ್ರದ ಶಾಸಕರಾಗಿದ್ದ ಬಿಜೆಪಿ ಅಧ್ಯಕ್ಷ ನಿತಿನ್ ನವೀನ್ ಸಂಸತ್ತಿಗೆ ತೆರಳಿದ್ದರಿಂದ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಮಧ್ಯಪ್ರದೇಶದಲ್ಲಿ ಕಾಂಗ್ರೆಸ್ ಶಾಸಕ ರಾಜೇಂದ್ರ ಭಾರ್ತಿ ವಂಚನೆ ಪ್ರಕರಣದಲ್ಲಿ ಶಿಕ್ಷೆಗೊಳಗಾಗಿದ್ದರಿಂದ ಶಾಸಕ ಸ್ಥಾನ ಕಳೆದುಕೊಂಡರು. ಗುಜರಾತ್‌ನ ಮಂಜಲ್‌ಪುರ ಕ್ಷೇತ್ರದ ಬಿಜೆಪಿ ಶಾಸಕರಾಗಿದ್ದ ಯೋಗೇಶ್ ಭಾಯ್ ನಾರಾಯಣದಾಸ್ ಪಟೇಲ್ ನಿಧನರಾಗಿದ್ದರಿಂದ ಆ ಸ್ಥಾನ ತೆರವಾಗಿದೆ.

ಮಹಾರಾಷ್ಟ್ರ: 5ರಿಂದ ರಾಮರಕ್ಷಾ ಹೋರಾಟ

ಮುಂಬೈ: ಅಯೋಧ್ಯೆಯಲ್ಲಿನ ಶ್ರೀ ರಾಮ ಮಂದಿರಕ್ಕಾಗಿ ದೇಶ-ವಿದೇಶದ ಭಕ್ತರು ನೀಡಿದ್ದ ನಗದು ಹಣ, ಚಿನ್ನ-ಬೆಳ್ಳಿ ದೇಣಿಗೆಯಲ್ಲಿ ದೊಡ್ಡ ಮಟ್ಟದ ಲೂಟಿ ನಡೆದಿರುವುದನ್ನು ಖಂಡಿಸಿ ಶಿವಸೇನೆ(ಉದ್ಧವ್ ಬಣ) ಮುಖ್ಯಸ್ಥ ಉದ್ಧವ್ ಠಾಕ್ರೆ ಅವರು ಮಹಾರಾಷ್ಟ್ರದಲ್ಲಿ ಜು.5ರಿಂದ 'ರಾಮ ರಕ್ಷಾ' ಹೋರಾಟ ಹಮ್ಮಿಕೊಂಡಿದ್ದಾರೆ. ರಾಮ ಮಂದಿರ ದೇಣಿಗೆ ಲೂಟಿಯಲ್ಲಿ ಬಿಜೆಪಿಯನ್ನು ಹೊಣೆಗಾರರನ್ನಾಗಿ ಮಾಡಲು ಜನ ದೊಡ್ಡ ಸಂಖ್ಯೆಯಲ್ಲಿ ಈ ಹೋರಾಟದಲ್ಲಿ ಭಾಗವಹಿಸಬೇಕು ಎಂದು ಉದ್ಧವ್ ಠಾಕ್ರೆ ರಾಜ್ಯದ ಜನತೆಯಲ್ಲಿ ಮನವಿ ಮಾಡಿದ್ದಾರೆ. ಭಾನುವಾರ ಸೆಂಟ್ರಲ್ ಮುಂಬೈನ ದಾದರ್‌ನಲ್ಲಿರುವ ಹನುಮಾನ್ ದೇವಾಲಯದಲ್ಲಿ ಸಭೆ ಸೇರಿ, ಹನುಮಾನ್ ಸ್ತೋತ್ರ ಮತ್ತು ಹನುಮಾನ್ ಚಾಲೀಸಾ ಪಠಿಸುವ ಮೂಲಕ ಹೋರಾಟ ಆರಂಭಿಸುತ್ತೇವೆ. ದೇಣಿಗೆ 'ಲೂಟಿ' ಹೊಣೆ ಹೊರುವಂತೆ ಬಿಜೆಪಿ ಮೇಲೆ ಒತ್ತಡ ಹೇರುತ್ತೇವೆ ಎಂದು ಠಾಕ್ರೆ ಹೇಳಿದರು.

{ ಅರವಿಂದ್ ಕೇಜ್ರಿವಾಲ್ }
ಎಎಪಿ ಮುಖಂಡ

ಶ್ರೀ ರಾಮ ಮಂದಿರ ದೇಣಿಗೆ ಲೂಟಿ ಪ್ರಕರಣದಲ್ಲಿ ನೇರವಾಗಿ ಭಾಗಿಯಾಗಿರುವ ಕೆಲವು ಪ್ರಭಾವಿ ವ್ಯಕ್ತಿಗಳನ್ನು ರಕ್ಷಿಸುವ ಪ್ರಯತ್ನ ನಡೆದಿದೆ. ಅದೇ ಕಾರಣವಾಗಿ 8 ತಿಂಗಳ ಅವಧಿಯಲ್ಲಿನ ಸಿಸಿಟಿವಿ ದೃಶ್ಯಾವಳಿ ಮತ್ತಿತರ ಸಾಕ್ಷ್ಯಗಳ ನಾಶ ಮಾಡಲಾಗಿದೆ. ಲೂಟಿ ಹಿಂದಿನ ಪ್ರಭಾವಿಗಳು ಯಾರು? ದೇಶದ ಜನತೆಗೆ ತಿಳಿಸ ಬೇಕು. ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು.

ದೇಣಿಗೆ ಕಳವು ಮೊದಲೇ ಗೊತ್ತಿದ್ದೂ ಸುಮ್ಮನಾಗಿದ್ದ ಪ್ರ.ಕಾರ್ಯದರ್ಶಿ ಚಂಪತ್ ರಾಯ್ | ಜೂ.26ರಂದು ರಾಜೀನಾಮೆ ಘೋಷಿಸಿದ್ದರೂ ಚಂಪತ್ ರಾಯ್ ಹಿಡಿತದಲ್ಲಿ ಟ್ರಸ್ಟ್ ಕಚೇರಿ | ಒರಿಜಿನಲ್ ಬಿಲ್ ಇಲ್ಲದಿದ್ದರೂ ಚಿನ್ನ ದೇಣಿಗೆ ಸ್ವೀಕಾರ, ಸಿಸಿಟಿವಿ ನಿಯಂತ್ರಿಸುವ ಭರವಸೆ

ರಾಮ ಮಂದಿರದಲ್ಲಿ ನಿಲ್ಲದ ಹುಂಡಿ ಕಳವು

ಅಯೋಧ್ಯೆ: ಚಂಪತ್ ರಾಯ್ ಮೂಗಿನ ಕೆಳಗೇ ಶ್ರೀರಾಮಲಲ್ಲಾ ದೇವರ ಹುಂಡಿಯ ಕಳವು ನಡೆಯುತ್ತಿತ್ತು. ಕಳವು ಮಾಡುವಾಗ ಸಿಸಿಟಿವಿ ಕ್ಯಾಮೆರಾಗಳನ್ನು ಚಂಪತ್ ರಾಯ್ ಕಚೇರಿಯ ಸಿಬ್ಬಂದಿಗಳು ಸ್ಥಗಿತಗೊಳಿಸುತ್ತಿದ್ದರು. ಶ್ರೀರಾಮ ಮಂದಿರಕ್ಕಾಗಿ ದೇಶ-ವಿದೇಶದ ಭಕ್ತರು ರುಪಾಯಿ, ಡಾಲರ್, ಚಿನ್ನ-ಬೆಳ್ಳಿ ರೂಪದಲ್ಲಿ ನೀಡಿದ ದೇಣಿಗೆಗಳಲ್ಲಿ ಬಹಳಷ್ಟನ್ನು ತನ್ನದೇ ಕಚೇರಿಯ ಸಿಬ್ಬಂದಿಗಳು ಲಪಟಾಯಿಸುತ್ತಿದ್ದಾರೆ ಎಂಬುದೆಲ್ಲವೂ ಚಂಪತ್ ರಾಯ್‌ಗೂ ಸ್ಪಷ್ಟವಾಗಿಯೇ ತಿಳಿದಿತ್ತು. ಈ ಸ್ಫೋಟಕ ಸಂಗತಿಯು ಆಂಗ್ಲ ಮಾಧ್ಯಮದ ಪ್ರತಿನಿಧಿಗಳು ದೇಣಿಗೆ ನೀಡುವ ಭಕ್ತರ ವೇಷದಲ್ಲಿ ಚಂಪತ್ ರಾಯ್‌ನ ಕಚೇರಿಯನ್ನು ಪ್ರವೇಶಿಸಿದ ಬಳಿಕ ಪತ್ತೆಯಾಗಿದೆ.

ಅಷ್ಟೇ ಅಲ್ಲದೇ, ದೇಣಿಗೆ ಕಳವು ಪ್ರಕರಣಗ ಬಹಿರಂಗಗೊಂಡ ನಂತರ ಚಂಪತ್ ರಾಯ್ ಶ್ರೀರಾಮ ಜನ್ಮಭೂಮಿ ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ಹುದ್ದೆಗೆ ರಾಜೀನಾಮೆ ನೀಡಿದ ನಾಟಕ ಆಡಿರುವುದೂ ಬಹಿರಂಗವಾಗಿದೆ. ರಾಜೀನಾಮೆ ನೀಡಿ ವಾರವೇ ಕಳೆದಿದ್ದರೂ ಚಂಪತ್ ರಾಯ್ ಈಗಲೂ ಶ್ರೀರಾಮ ಜನ್ಮಭೂಮಿ ಟ್ರಸ್ಟ್‌ನ ಕಚೇರಿಯಲ್ಲೇ ಇದ್ದಾರೆ. ಆತನ ಆದೇಶದ ಪ್ರಕಾರವೇ ಈಗಲೂ ಕಚೇರಿ ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದಾರೆ. ದೇಣಿಗೆ ಕಳವು ಪ್ರಕರಣ ಹೊರಬಿದ್ದ ಬಳಿಕವಾದರೂ ಶ್ರೀರಾಮಲಲ್ಲಾನ ಹುಂಡಿ ಹಣ ಕದಿಯುವುದು ನಿಂತಿದೆಯೇ? ಎಂದರೆ ಅದೂ ಇಲ್ಲ. ಈಗಲೂ ಭಕ್ತರು ನೀಡುವ ದುಡ್ಡು, ಚಿನ್ನ-ಬೆಳ್ಳಿ ಪದಾರ್ಥಗಳನ್ನು ಕದ್ದು ಮನೆಗೆ ಸಾಗಿಸುವ ಕಾರ್ಯ ನಡೆದೇ ಇದೆ ಎಂಬುದು ಆಂಗ್ಲ ಪತ್ರಿಕೆಯ ರಹಸ್ಯ ಕಾರ್ಯಾಚರಣೆಯಿಂದ ತಿಳಿದುಬಂದಿದೆ.

ಆಂಗ್ಲ ಸುದ್ದಿವಾಹಿನಿ 'ಟೈಮ್ಸ್ ನೌ' ಸಂಸ್ಥೆ ಸಿಬ್ಬಂದಿ ಮೊದಲು ಚಂಪತ್ ರಾಯ್ ಕಾರ್ಯ ನಿರ್ವಹಿಸುವ ಕಚೇರಿಗೆ ತೆರಳಿ ಮಾಹಿತಿ ಸಂಗ್ರಹಿಸಲು ಯತ್ನಿಸಿದರು. ಆದರೆ, ಅಲ್ಲಿದ್ದ ಸಿಬ್ಬಂದಿ ಮಾಧ್ಯಮ ಸಿಬ್ಬಂದಿಗಳನ್ನು

ಶ್ರೀರಾಮಲಲ್ಲಾನ ಕಾಣಿಕೆಗೇ ನಾಮ

ಕಚೇರಿಗಿರಲಿ, ಗೇಟ್‌ನ ಒಳಕ್ಕೂ ಬಿಡಲಿಲ್ಲ.

ಬಳಿಕ ಮಾಧ್ಯಮ ಪ್ರತಿನಿಧಿಗಳು ಮಾರುವೇಷದಲ್ಲಿ 'ಆಪರೇಷನ್ ಚಂದಾಚೋರಿ' ಹೆಸರಿನಲ್ಲಿ ಕಾರ್ಯಾಚರಣೆ ನಡೆಸಿ ಚಂಪತ್ ರಾಯ್ ಮತ್ತು ಅವರ ಕಚೇರಿಯಲ್ಲಿ ಈಗಲೂ(ಜುಲೈ 1) ದೇಣಿಗೆ ಲೂಟಿ ನಡೆಯುತ್ತಿರುವುದನ್ನು ಸಾಕ್ಷಿ ಸಮೇತ ರಹಸ್ಯ ಕ್ಯಾಮೆರಾದಲ್ಲಿ ದಾಖಲಿಸಿಕೊಂಡಿದ್ದಾರೆ. ಈ ಸ್ಫೋಟಕ ಸುದ್ದಿಯ ತುಣುಕುಗಳನ್ನು 'ಟೈಮ್ಸ್ ನೌ' ಸುದ್ದಿವಾಹಿನಿ ಫೇಸ್‌ಬುಕ್ ಖಾತೆಯಲ್ಲಿ ಹಂಚಿಕೊಂಡಿದೆ.

ಬಳಿಕ ಮಾಧ್ಯಮ ಪ್ರತಿನಿಧಿಗಳು, 'ನಾವು ಶ್ರೀರಾಮನ ಭಕ್ತರು, ಚಿನ್ನವನ್ನು ದೇಣಿಗೆಯಾಗಿ ನೀಡಬೇಕಿದೆ. ಆದರೆ, ಆ ಚಿನ್ನಕ್ಕೆ ಒರಿಜಿನಲ್ ಬಿಲ್ ಇಲ್ಲ. ಅಲ್ಲದೇ, ಚಂಪತ್ ರಾಯ್ ಅವರ ಕಚೇರಿಯಲ್ಲೇ ಖುದ್ದಾಗಿ ನೀಡಬೇಕಿದೆ. ಚಂಪತ್ ರಾಯ್ ಅವರನ್ನೂ ಭೇಟಿ ಮಾಡಬೇಕಿದೆ ಎಂದು ಹೇಳಿದ ಬಳಿಕ ಚಂಪತ್ ರಾಯ್ ಕಚೇರಿಗೆ ಪ್ರವೇಶ ಸಿಕ್ಕಿದೆ.

ಆದರೆ, ಒರಿಜಿನಲ್ ಬಿಲ್ ಇಲ್ಲದಿದ್ದರೂ ಪರವಾಗಿಲ್ಲ, ದೇಣಿಗೆ ಸ್ವೀಕರಿಸಲಾಗುತ್ತದೆ ಎಂದು ಹೇಳಿದ ಕಚೇರಿ ಸಿಬ್ಬಂದಿ, ದೇಣಿಗೆ ಸ್ವೀಕರಿಸಿದ್ದಾರೆ. ದೇಣಿಗೆ ನೀಡುವ ಸಂದರ್ಭ ಮಾರುವೇಷದ ಭಕ್ತರು ಸಿಸಿಟಿವಿ ಕ್ಯಾಮೆರಾಗಳ ಬಗ್ಗೆ ಪ್ರಶ್ನೆ ಮಾಡಿದಾಗ, ಅದನ್ನು ನಾವು ಮ್ಯಾನೇಜ್ ಮಾಡುತ್ತೇವೆ. ನೀವೇನೂ ತಲೆ ಕೆಡಿಸಿಕೊಳ್ಳಬೇಕಿಲ್ಲ ಎಂದು ಚಂಪತ್ ರಾಯ್‌ಗೆ ಆಪ್ತರಾದ ಪೂರ್ಣ ಕೇಸರಿ ವಸ್ತ್ರಧಾರಿ ಸಿಬ್ಬಂದಿ ಪ್ರದ್ಯುಮ್ನ ಎಂಬವರು ಹೇಳಿದ್ದಾರೆ.

ಅಷ್ಟೇ ಅಲ್ಲದೇ, 'ನಂತರದಲ್ಲಿ ಈ ಚಿನ್ನದ ಕಾಣಿಕೆ ಯಾವುದಕ್ಕೆ ಬಳಕೆಯಾಯಿತು, ಹೇಗೆಲ್ಲಾ ಬಳಕೆಯಾಯಿತು? ಎಂದು ಪ್ರಶ್ನೆ ಮಾಡುವುದಿಲ್ಲ' ಎಂಬ ಪ್ರಮಾಣಪತ್ರ ರೀತಿಯ ಲಿಖಿತ ಹೇಳಿಕೆಯನ್ನೂ ಈ ಮಾರುವೇಷದ ಭಕ್ತರಿಂದ ಪ್ರದ್ಯುಮ್ನ ಬರೆಸಿಕೊಂಡಿದ್ದಾರೆ. ಬಳಿಕ ಚಂಪತ್ ರಾಯ್ ಅವರ ಭೇಟಿಗೆ ಮನವಿ ಮಾಡಿದಾಗ, 'ಬಾಬೂಜಿ(ಚಂಪತ್ ರಾಯ್) ಕಚೇರಿಯ ಇನ್ನೊಂದು ಪಾರ್ಶ್ವದಲ್ಲಿ ಮೀಟಿಂಗ್‌ನಲ್ಲಿದ್ದಾರೆ. ಟ್ರಸ್ಟ್‌ನ ಕೆಲಸಗಳಲ್ಲಿ ಬಿಜಿಯಾಗಿದ್ದಾರೆ. ಸದ್ಯ ಯಾರನ್ನೂ ಭೇಟಿ ಮಾಡಲು ಒಪ್ಪುವುದಿಲ್ಲ' ಎಂದು ಪ್ರದ್ಯುಮ್ನ ಹೇಳಿದ್ದಾರೆ.

ಕೆಲವು ನಿಮಿಷಗಳ ಕಾಲ ಕಚೇರಿಯ ಒಳಗಿದ್ದಾಗಲೇ ಅಲ್ಲಿನ ಚಟುವಟಿಕೆಗಳನ್ನು ಮಾಧ್ಯಮ ಪ್ರತಿನಿಧಿಗಳು ಸೂಕ್ಷ್ಮವಾಗಿ ಗಮನಿಸಿದ್ದಾರೆ. ಚಂಪತ್ ರಾಯ್ ಜೂ.26ರಂದೇ ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ಹುದ್ದೆಗೆ ರಾಜೀನಾಮೆ ನೀಡಿರುವುದಾಗಿ ಘೋಷಿಸಿದ್ದಾರೆ. ಆದರೆ, ಈಗಲೂ(ಜುಲೈ 1) ಟ್ರಸ್ಟ್‌ನ ಕಚೇರಿ ಕೆಲಸ ಕಾರ್ಯಗಳು ಚಂಪತ್ ರಾಯ್ ನಿರ್ದೇಶನದ ಮೇರೆಗೇ ನಡೆಯುತ್ತಿರುವುದು ಮಾಧ್ಯಮ ಪ್ರತಿನಿಧಿಗಳು ಗಮನಿಸಿದಾಗ ದೃಢಪಟ್ಟಿದೆ.

ವಿಶ್ವ ಹಿಂದೂ ಪರಿಷತ್(ವಿಎಚ್‌ಪಿ) ಉಪಾಧ್ಯಕ್ಷರೂ ಆಗಿರುವ ಚಂಪತ್ ರಾಯ್ ಮೂಗಿನ ಕೆಳಗೇ ಈವರೆಗೂ ದೇಣಿಗೆ ಲೂಟಿ ನಡೆದಿರುವುದು, ಅಲ್ಲದೇ, ಈಗಲೂ ಲೂಟಿ ಕಾರ್ಯ ಮುಂದುವರಿದಿರುವುದು ದೃಢಪಟ್ಟಿದೆ.

ವಿಷಯ ಮೊದಲೇ ಗೊತ್ತಿತ್ತು

ಬುಧವಾರ ಮತ್ತು ಗುರುವಾರ ಚಂಪತ್ ರಾಯ್‌ರನ್ನು ಉತ್ತರ ಪ್ರದೇಶ ಸರಕಾರದ ಎಸ್‌ಐಟಿ ತಂಡ ಮತ್ತು ಪೊಲೀಸರು 3 ಗಂಟೆಗಳ ಕಾಲ ತನಿಖೆಗೆ ಒಳಪಡಿಸಿ ನೇರವಾಗಿ ಪ್ರಶ್ನೆ ಮಾಡಿದಾಗ, ದೇಣಿಗೆ ಕಳವು ಪ್ರಕರಣದಲ್ಲಿ ತಮ್ಮ ಅಧಿಕೃತ ವಾಹನದ ಚಾಲಕ ರಾಮಶಂಕರ್ ಯಾದವ್ ಅಲಿಯಾಸ್ ಟಿನ್ನು ಯಾದವ್ ಕೈವಾಡವೂ ಇದೆ ಎಂದು ಹೇಳಿಕೆ ನೀಡಿದ್ದಾರೆ.ಅಲ್ಲದೇ, ದೇಣಿಗೆ ಕಳವು ಪ್ರಕರಣ ಸಾರ್ವಜನಿಕವಾಗಿ ಬಹಿರಂಗವಾಗುವುದಕ್ಕೆ ಮುಂಚಿತವಾಗಿಯೇ ಪ್ರಕರಣ ತಮ್ಮ ಗಮನಕ್ಕೆ ಬಂದಿತ್ತು. ಆದರೆ, ತಮ್ಮಿಂದ ಯಾವುದೇ ಕ್ರಮ ಕೈಗೊಳ್ಳಲು ಆಗಿರಲಿಲ್ಲ ಎಂದೂ ಚಂಪತ್ ರಾಯ್ ತಪ್ಪೊಪ್ಪಿ ಕೊಂಡಿದ್ದಾರೆ.

ಚಂಪತ್ ರಾಯ್ ವಿರುದ್ಧ ವಕೀಲರ ಕ್ರಿಮಿನಲ್ ಕೇಸ್



ಅಯೋಧ್ಯೆ ಶ್ರೀರಾಮ ಮಂದಿರ ದೇಣಿಗೆ ಲೂಟಿ ಪ್ರಕರಣದಲ್ಲಿ ಶ್ರೀರಾಮ ಜನ್ಮಭೂಮಿ ಟ್ರಸ್ಟ್‌ನ ಪ್ರಧಾನಿ ಕಾರ್ಯದರ್ಶಿಯಾಗಿದ್ದ ಚಂಪತ್ ರಾಯ್ ನೇರ ಪಾತ್ರವಿದೆ. ಅವರ ವಿರುದ್ಧ ಎಫ್‌ಐಆರ್ ದಾಖಲಿಸಬೇಕು, ಬಂಧಿಸಿ ತನಿಖೆಗೆ ಒಳಪಡಿಸಬೇಕು ಎಂದು ಪೊಲೀಸರಿಗೆ ನಿರ್ದೇಶನ ನೀಡುವಂತೆ ಕೋರಿ ಫೈಜಾಬಾದ್ ವಕೀಲರ ಸಂಘವು ನ್ಯಾಯಾಲಯದ ಮೊರೆ ಹೋಗಿದೆ. ಚಂಪತ್ ರಾಯ್ ವಿರುದ್ಧ ಖಾಸಗಿ ದೂರು ದಾಖಲಿಸಿದೆ.

ಸಿಸಿಟಿವಿ ಇದ್ದರೂ ಹೆದರದೇ ಕದಿಯುತ್ತಿದ್ದ ಶುಕ್ಲಾ-ಮಿಶ್ರಾ

ದೇಣಿಗೆ ಲೂಟಿ ಆರೋಪಿಗಳಲ್ಲಿ ಇಬ್ಬರಾದ ಅವಿನಾಶ್ ಶುಕ್ಲಾ ಮತ್ತು ಅನುಕಲ್ಪ್ ಮಿಶ್ರಾ ಶ್ರೀರಾಮ ಮಂದಿರ ದೇಣಿಗೆಗಳಲ್ಲಿನ ನೋಟುಗಳ ಎಣಿಕೆ, ಚಿನ್ನ-ಬೆಳ್ಳಿ ಪದಾರ್ಥಗಳ ಮೌಲ್ಯಮಾಪನ ಕಾರ್ಯ ನಡೆಸುತ್ತಿದ್ದ ಶ್ರೀರಾಮಜನ್ಮಭೂಮಿ ಟ್ರಸ್ಟ್‌ನ ಕಚೇರಿಯ ಕೊಠಡಿಯಲ್ಲಿ ಕುಳಿತಿರುವ ಚಿತ್ರ ಇದೇ ಮೊದಲ ಬಾರಿಗೆ ಹೊರಬಿದ್ದಿದ್ದು, ಎನ್‌ಡಿಟಿವಿ ಅದನ್ನು ಶುಕ್ರವಾರ ಪ್ರಕಟಿಸಿದೆ.ಶ್ರೀರಾಮ ಮಂದಿರ ನಿರ್ಮಾಣದ ಸಂದರ್ಭ ಮತ್ತು ಆರಂಭದ ದಿನಗಳಲ್ಲಿ ಎಣಿಕೆ ಕೇಂದ್ರದಲ್ಲಿ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಿರಲಿಲ್ಲ. ಆ ದಿನಗಳಲ್ಲಿ ಈ ಆರೋಪಿಗಳು ದೇಣಿಗೆ ಮೊತ್ತದಿಂದ ಸಾಕಷ್ಟು ಹಣವನ್ನು ಕದ್ದಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.ಸಿಸಿಟಿವಿ ಅಳವಡಿಸಿದ ಬಳಿಕವೂ ಈ ಆರೋಪಿಗಳು ಚಾಣಾಕ್ಷತೆಯಿಂದ ದೇಣಿಗೆ ಮೊತ್ತವನ್ನು ಎಗರಿಸಿರುವುದು ಸಿಸಿಟಿವಿ ದೃಶ್ಯಗಳಲ್ಲಿ ಅಲ್ಲಲ್ಲಿ ಕಾಣಬರುತ್ತದೆ. ಕೆಲವೊಮ್ಮೆ ಯಾವುದೇ ಭಯವಿಲ್ಲದೇ ಹಣವನ್ನು ಜೇಬಿಗಿಳಿಸಿದ್ದಾರೆ. ಕಂಟ್ರೋಲ್ ರೂಂನಲ್ಲಿ ಸಿಸಿಟಿವಿ ಕ್ಯಾಮೆರಾಗಳನ್ನು ಸರಿಯಾಗಿ ನಿರ್ವಹಣೆ ಮಾಡುತ್ತಿರಲಿಲ್ಲ ಎಂಬ ಅಂಶವೇ ಆರೋಪಿಗಳಲ್ಲಿನ ಈ ಕೆಟ್ಟ ಧೈರ್ಯಕ್ಕೆ ಕಾರಣವಾಗಿದೆ ಎಂದು ತನಿಖೆ ನಡೆಸುತ್ತಿರುವ ಅಯೋಧ್ಯೆ ಪೊಲೀಸರು ಸುದ್ದಿಸಂಸ್ಥೆಗೆ ಗುರುವಾರ ತಿಳಿಸಿದ್ದಾರೆ.ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿಯಾಗಿದ್ದ ಚಂಪತ್ ರಾಯ್ ದಿನಗಳು ಕಳೆದಂತೆಲ್ಲಾ ಅನಿಲ್ ಮಿಶ್ರಾನನ್ನು ಹೆಚ್ಚು ನಂಬಲಾರಂಭಿಸುತ್ತಾರೆ. ಆತನಿಗೇ ಹೆಚ್ಚಿನ ಅಧಿಕಾರವನ್ನು ನೀಡುತ್ತಾರೆ. ಆ ನಂತರವಂತೂ ದೇಣಿಗೆ ಲೂಟಿ ಭಾರೀ ಪ್ರಮಾಣದಲ್ಲಿ ಹೆಚ್ಚಳವಾಗಿರುವುದು ತನಿಖೆಯಿಂದ ತಿಳಿದುಬಂದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಸಿಎಂ ವಿಜಯ್ ನಿಂದೆ: ಡಿಎಂಕೆ ಶಾಸಕ ಬಂಧನ

ಚೆನ್ನೈ: ತಮಿಳುನಾಡು ಮುಖ್ಯಮಂತ್ರಿ ಸಿ.ಜೋಸೆಫ್ ವಿಜಯ್ ವಿರುದ್ಧ ಅವಹೇಳನಕಾರಿ ಭಾಷಣ ಮಾಡಿದ ಪ್ರಕರಣದಲ್ಲಿ ಡಿಎಂಕೆ ಸರಕಾರದ ಅವಧಿಯಲ್ಲಿ ಸಚಿವರಾಗಿದ್ದ, ಹಾಲಿ ತಿರುಚೆಂಡೂರು ವಿಧಾನಸಭಾ ಕ್ಷೇತ್ರದ ಶಾಸಕ ಅನಿತಾ ಆರ್.ರಾಧಾಕೃಷ್ಣನ್ ಅವರನ್ನು ಶುಕ್ರವಾರ ಚೆನ್ನೈನಲ್ಲಿ ಬಂಧಿಸಲಾಗಿದೆ. ಈ ಪ್ರಕರಣ ಸಂಬಂಧ ನಿರೀಕ್ಷಣಾ ಜಾಮೀನು ಕೋರಿ ರಾಧಾಕೃಷ್ಣನ್ ಸಲ್ಲಿಸಿದ್ದ ಅರ್ಜಿಯನ್ನು ಮದ್ರಾಸ್ ಹೈಕೋರ್ಟ್ ತಿರಸ್ಕರಿಸಿದ ಬಳಿಕ ರಾಧಾಕೃಷ್ಣನ್ ಅವರು ಆಥೂರ್‌ಗೆ ಭೇಟಿ ನೀಡಿದ್ದ ವೇಳೆ ಪೊಲೀಸರು ಬಂಧಿಸಿದ್ದಾರೆ. ರಾಧಾಕೃಷ್ಣನ್ ಬಂಧನ ಖಂಡಿಸಿ ಬೆಂಬಲಿಗರು ದಿಕ್ಕಾರದ ಘೋಷಣೆ ಕೂಗಿದರು.

ಸಾಮೂಹಿಕ ಅತ್ಯಾಚಾರ ಆರೋಪಿ ಟಿವಿಕೆ ಶಾಸಕರ ವಿರುದ್ಧ ಮಹಿಳೆ ದೂರು ಸಲ್ಲಿಸಿದ್ದರೂ ಟಿವಿಕೆ ಸರಕಾರ ಕ್ರಮ ಕೈಗೊಂಡಿಲ್ಲ. ಹಾಗಿರುವಾಗ ರಾಧಾಕೃಷ್ಣನ್‌ರನ್ನು ಭಾಷಣ ಮಾಡಿರುವುದಕ್ಕೆ ಬಂಧಿಸಿರುವುದು ಎಷ್ಟು ಸರಿ? ಮಾನನಷ್ಟ ಪ್ರಕರಣಗಳಲ್ಲಿ ಬಂಧಿಸುವುದಾದರೆ ರಾಜಕಾರಣಿಗಳು ಅದೆಷ್ಟೋ ಬಾರಿ ಬಂಧನಕ್ಕೆ ಒಳಗಾಗಬೇಕೊ? ಎಂದು ಮಾಜಿ ಸಿಎಂ-ಡಿಎಂಕೆ ಅಧ್ಯಕ್ಷ ಎಂಕೆ ಸ್ಟಾಲಿನ್ ಪ್ರಶ್ನಿಸಿದ್ದಾರೆ.

'ಕುದುರೆ ವ್ಯಾಪಾರ' ಮಾಡಿ ಅಧಿಕಾರ ಉಳಿಸಿಕೊಳ್ಳಲೆತ್ನಿಸುತ್ತಿರುವ ಮುಖ್ಯಮಂತ್ರಿ, ತಮ್ಮನ್ನು ಟೀಕಿಸುವ ಪ್ರತಿಪಕ್ಷ ನಾಯಕರನ್ನು ಬಂಧಿಸುತ್ತಾ ಕಾಲಹರಣ ಮಾಡುತ್ತಿದ್ದಾರೆ. ಈ ಅಹಂಕಾರ ವಿನಾಶಕ್ಕೆ ದಾರಿ ಮಾಡಿಕೊಡುತ್ತದೆ ಎಂದು ಸ್ಟಾಲಿನ್ ಗುಡುಗಿದ್ದಾರೆ.

ರಾಧಾಕೃಷ್ಣನ್ ಜೂ.20ರಂದು ಸಿಎಂ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡಿದ್ದಾರೆಂದು ಆರೋಪಿಸಿ ಟಿವಿಕೆ ಪಕ್ಷ ಪೊಲೀಸರಿಗೆ ದೂರು ನೀಡಿತ್ತು. ಶಾಸಕರ ವಿರುದ್ಧ ಬಿಎನ್‌ಎಸ್‌ನ ಸೆಕ್ಷನ್ 352 ಮತ್ತು 353(2) ಅನ್ವಯ ಅಪರಾಧ ಪ್ರಕರಣ ದಾಖಲಾಗಿದೆ.

ಮೊದಲಿಗೆ ವಿವಿಧ ನಗರಗಳಲ್ಲಿ ಮೆರವಣಿಗೆ, ಧಾರ್ಮಿಕ ವಿಧಿ, ಜು.9ರಂದು ಸಮಾಧಿ

ಖಮೇನಿ ಅಂತಿಮವಿಧಿ ಇಂದು ಆರಂಭ

ಟೆಹರಾನ್: ಇಸ್ಲಾಂ ಆಡಳಿತದ ಇರಾನ್ ದೇಶದಲ್ಲಿ ಸರ್ವೋಚ್ಚ ನಾಯಕರಾಗಿದ್ದ, ಷಿಯಾ ಧಾರ್ಮಿಕ ಮುಖಂಡರೂ ಆಗಿದ್ದ ಅಯತೊಲ್ಲ ಸಯ್ಯದ್ ಅಲಿ ಖಮೇನಿ ಅವರ ಅಂತ್ಯಕ್ರಿಯೆಯ ಮೊದಲ ಹಂತದ ವಿಧಿವಿಧಾನಗಳು ಶನಿವಾರದಿಂದ ಆರಂಭಗೊಳ್ಳಲಿವೆ. ಭಾರತ ಸೇರಿದಂತೆ ವಿವಿಧ ದೇಶಗಳಿಗೆ ಖಮೇನಿ ಅವರ ಅಂತಿಮ ವಿಧಿವಿಧಾನಗಳಲ್ಲಿ ಭಾಗಿಯಾಗಿ ಗೌರವ ಸಲ್ಲಿಸುವಂತೆ ಇರಾನ್‌ನಿಂದ ಅಧಿಕೃತ ಆಹ್ವಾನ ಹೋಗಿದೆ. ಭಾರತ ಸರಕಾರದ ಪರವಾಗಿ ವಿದೇಶಾಂಗ ವ್ಯವಹಾರಗಳ ಸಹಾಯಕ ಸಚಿವ ಪಬಿತ್ರಾ ಮಾರ್ಗರಿಟಾ ಅವರು ಮತ್ತು ಬಿಹಾರದ ರಾಜ್ಯಪಾಲ ಜನರಲ್ ಸೈಯದ್ ಅತಾ ಹಸನೈನ್ ಅವರು ಅಧಿಕೃತ ಪ್ರತಿನಿಧಿಗಳಾಗಿ ಭಾಗಿಯಾಗಲಿದ್ದಾರೆ. ಇದಕ್ಕೆ ಹೊರತಾಗಿ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೂ ಆಹ್ವಾನ ಬಂದಿದೆ. ಕಾಂಗ್ರೆಸ್ ಪಕ್ಷದ ಪರವಾಗಿ ಮಾಜಿ ವಿದೇಶಾಂಗ ಸಚಿವ ಸಲ್ಮಾನ್ ಖುರ್ಷಿದ್ ಭಾಗಿಯಾಗುವರು. ಇವರಲ್ಲದೇ ಜಮ್ಮು-ಕಾಶ್ಮೀರದ ಮಾಜಿ ಸಿಎಂ, ಪಿಡಿಪಿ ಮುಖ್ಯಸ್ಥೆ ... ಅವರೂ ಖಮೇನಿ ಅಂತ್ಯಕ್ರಿಯೆಯಲ್ಲಿ ಪಾಲ್ಗೊಳ್ಳಲಿದ್ದಾರೆ.



ಆಯತೊಲ್ಲ ಖಮೇನಿ

ಪಬಿತ್ರಾ ಮಾರ್ಗರಿಟಾ



ಸಯ್ಯದ್ ಅತಾ ಹಸ್ನೈನ್

ಆದರೆ, ಅಮೆರಿಕ-ಇಸ್ರೇಲ್ ಮತ್ತು ಅಮೆರಿಕ ಬೆಂಬಲಿತ ಕೆಲವು ಕೊಲ್ಲಿ ರಾಷ್ಟ್ರಗಳಿಗೆ ಇರಾನ್ ಆಹ್ವಾನ ನೀಡಿಲ್ಲ ಎಂದು ವರದಿಯಾಗಿದೆ.

36 ವರ್ಷ ಇರಾನ್ ದೇಶದ ಆಡಳಿತ ನಡೆಸಿದ್ದ ಅಲಿ ಖಮೇನಿ ಫೆ.28ರಂದು ಅಮೆರಿಕ-ಇಸ್ರೇಲ್ ಸೇನಾಪಡೆಗಳು ನಡೆಸಿದ ವೈಮಾನಿಕ ದಾಳಿಯಲ್ಲಿ ಮೊಮ್ಮಕ್ಕಳು, ಸೊಸೆ ಮತ್ತು ಸಚಿವ ಸಂಪುಟದ ಹಿರಿಯ ಸಚಿವರ ಸಮೇತ ಒಂದೇ ಕಟ್ಟಡದಲ್ಲಿ ಮೃತಪಟ್ಟಿದ್ದರು.

ಅಮೆರಿಕ-ಇಸ್ರೇಲ್ ಜಂಟಿಯಾಗಿ ನಡೆಸುತ್ತಿದ್ದ ಯುದ್ಧ ತೀವ್ರಗೊಂಡಿದ್ದರಿಂದ ಅಲಿ ಖಮೇನಿ ಅವರ ಅಂತ್ಯಕ್ರಿಯೆಯ ವಿಧಿವಿಧಾನಗಳು ವಿಳಂಬವಾಗಿದ್ದವು.

ಜು.4ರಂದು ರಾಜಧಾನಿ ಟೆಹರಾನ್‌ನಲ್ಲಿ ಅಂತ್ಯಕ್ರಿಯೆಯ ಮೊದಲ ಧಾರ್ಮಿಕ ಪ್ರಕ್ರಿಯೆ ಆರಂಭವಾಗಲಿದೆ.

ಜು.7ರಂದು ಪವಿತ್ರ ನಗರವಾದ ಕೋಮ್‌ನಲ್ಲಿ ಧಾರ್ಮಿಕ ಆಚರಣೆ. ಜು.9ರಂದು ಖಮೇನಿ ಅವರ ತವರು ನಗರ ಮಶಾದ್‌ನಲ್ಲಿ ಸಮಾಧಿ ಪ್ರಕ್ರಿಯೆ ನಡೆಯಲಿದೆ.

ಪುತ್ರ ಮೊಜ್ತಬಾ ಖಮೇನಿ ಗೈರು

ಇರಾನ್ ದೇಶದ ಹಾಲಿ ಸರ್ವೋಚ್ಚ ನಾಯಕ ಮೊಜ್ತಬಾ ಖಮೇನಿ ಅವರು ಭದ್ರತಾ ಕಾರಣಗಳಿಂದಾಗಿ ತಂದೆ ಅಯತೊಲ್ಲ ಸಯ್ಯದ್ ಅಲಿ ಖಮೇನಿ ಅವರ ಅಂತಿಮ ಸಂಸ್ಕಾರದ ವಿಧಿವಿಧಾನಗಳಲ್ಲಿ ಪಾಲ್ಗೊಳ್ಳುತ್ತಿಲ್ಲ ಎಂದು ವರದಿಯಾಗಿದೆ. ಇಸ್ರೇಲ್ ದೇಶದ ವೈಮಾನಿಕ ದಾಳಿಯ ಬೆದರಿಕೆ ಹಾಗೂ ಅಮೆರಿಕದ ಕಣ್ಗಾವಲು ಹೆಚ್ಚಿರುವ ಕಾರಣ ಮೊಜ್ತಬಾ ಅವರು ಸಾರ್ವಜನಿಕವಾಗಿ ಕಾಣಿಸಿಕೊಳ್ಳುವುದು ಅಪಾಯಕಾರಿ ಎಂದು ಇರಾನ್ ಸರಕಾರವೇ ನಿರ್ಧರಿಸಿದೆ. ಹಾಗಾಗಿಯೇ ಮೊಜ್ತಬಾ ಗೈರಾಗುತ್ತಿದ್ದಾರೆ ಇರಾನ್ ಸರಕಾರದ ಪ್ರತಿನಿಧಿಗಳು ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಸಿಂಧೂ ನದಿ: ಚೀನಾ ನೆರವು ಕೋರಿದ ಪಾಕ್

ಇಸ್ಲಾಮಾಬಾದ್: ಜಮ್ಮು-ಕಾಶ್ಮೀರದ ಪಹಲ್ಗಾಮ್‌ನಲ್ಲಿ ಭಯೋತ್ಪಾದಕ ದಾಳಿ ನಡೆಸಿದ ಪಾಕಿಸ್ತಾನಕ್ಕೆ ಕಠಿಣ ಪ್ರತಿಕ್ರಿಯೆ ನೀಡುವ ಸಲುವಾಗಿ 4 ದಿನಗಳ 'ಆಪರೇಷನ್ ಸಿಂಧೂರ್' ಸೇನಾ ಕಾರ್ಯಾಚರಣೆಯ ಜತೆಗೇ ಪಾಕ್ ಜತೆಗಿನ 'ಸಿಂಧೂ ಜಲ ಒಪ್ಪಂದ'ವನ್ನು ಅಮಾನತುಗೊಳಿಸಿದೆ. ಜತೆಗೆ ಸಿಂಧೂ ನದಿಯ ನೀರು ಪಾಕ್‌ನತ್ತ ಹರಿಯದಂತೆ ತಡೆದು ನಿಲ್ಲಿಸಿದೆ.

ಭಾರತದ ಈ ಕ್ರಮ ಪಾಕ್‌ನಲ್ಲಿ ಕೃಷಿ ಕ್ಷೇತ್ರಕ್ಕೆ ಭಾರಿ ಹೊಡೆತ ನೀಡಿದೆ. ತೀವ್ರ ಜಲಕ್ಷಾಮ ಎದುರಿಸುತ್ತಿರುವ ಪಾಕಿಸ್ತಾನ, ಭಾರತದ ಮೇಲೆ ರಾಜತಾಂತ್ರಿಕ ಒತ್ತಡ ಹೇರಲು ಸಿಂಧೂ ಜಲ ಒಪ್ಪಂದದಲ್ಲಿ ಈಗ ಸೃಷ್ಟಿಯಾಗಿರುವ ಸಮಸ್ಯೆಯನ್ನು ಪರಿಹರಿಸಿಕೊಡುವಂತೆ ಚೀನಾಕ್ಕೆ ಮನವಿ ಮಾಡಿದೆ. ಪಾಕ್ ವಿದೇಶಾಂಗ ಸಚಿವಾಲಯ ವಕ್ತಾರ ತಹಿರ್ ಅಂದ್ರಾಬಿ ಇತ್ತೀಚೆಗೆ ನೀಡಿದ ಹೇಳಿಕೆಯಲ್ಲಿ, ಹಿಮಾಲಯ ಭಾಗದಲ್ಲಿ ಹುಟ್ಟುವ ನದಿಗಳು ಭಾರತ-ಪಾಕಿಸ್ತಾನಕ್ಕಷ್ಟೇ ಸೇರಿಲ್ಲ. ಅವು ಇಡೀ ಮಾನವಕುಲಕ್ಕೆ ಹಂಚಿಕೆ ಆಗುವಂತಹವಾಗಿವೆ. ಸಿಂಧೂ ನದಿಯಷ್ಟೇ ಅಲ್ಲ, ಮೆಕಾಂಗ್ ನದಿ ಸೇರಿದಂತೆ ಹಲವು ನದಿಗಳು ಚೀನಾ ಭಾಗದಲ್ಲೇ ಹುಟ್ಟುವುದರಿಂದ ಈ ಜಲ ಬಿಕ್ಕಟ್ಟಿನಲ್ಲಿ ಚೀನಾ ಕೂಡ ಪ್ರಮುಖ ಪಾಲುದಾರ. ಸಿಂಧೂ ನದಿ ವಿಚಾರದಲ್ಲಿ ಚೀನಾದ ಪಾತ್ರವೂ ನಿರ್ಣಾಯಕ ಎಂದು ಹೇಳುವ ಮೂಲಕ ಚೀನಾ ಎಳೆದು ತರಲು ಯತ್ನಿಸಿದ್ದಾರೆ.

ಥಾಯ್ಲೆಂಡ್: ಕಾರು ಡಿಕ್ಕಿ, 9 ಬೌದ್ಧ ಸನ್ಯಾಸಿ ಸಾವು

ಬ್ಯಾಂಕಾಕ್: ಥಾಯ್ಲೆಂಡ್ ದೇಶದ ಮುಕ್ದಹಾನ್ ಪ್ರದೇಶದಲ್ಲಿ 11 ವರ್ಷದ ಬಾಲಕನೊಬ್ಬ ಅಪ್ಪ ಅಮ್ಮನಿಗೆ ತಿಳಿಸದೇ ಮನೆಯಿಂದ ವೇಗವಾಗಿ ಕಾರು ಚಲಾಯಿಸಿಕೊಂಡು ಬಂದು ರಸ್ತೆಯಂಚಿನಲ್ಲಿ ನಡೆಯುತ್ತಾ ಯಾತ್ರೆಗೆ ಹೋಗುತ್ತಿದ್ದ ಬೌದ್ಧ ಸನ್ಯಾಸಿಗಳ ಸಮೂಹದ ಮೇಲೆ ನುಗ್ಗಿಸಿದ್ದಾನೆ. ಕಾರು ಡಿಕ್ಕಿ ಹೊಡೆದ ರಭಸಕ್ಕೆ 9 ಬೌದ್ಧ ಸನ್ಯಾಸಿಗಳು ಸಾವಿಗೀಡಾದರೆ, ಹಲವರು ಗಾಯಗೊಂಡಿದ್ದಾರೆ. ಈ ಘೋರ ಅಪಘಾತದ ದೃಶ್ಯಗಳು ಜಾಲತಾಣದಲ್ಲಿ ವೈರಲ್ ಆಗಿದ್ದು, ಇಡೀ ಥಾಯ್ಲೆಂಡ್ ತಲ್ಲಣಗೊಂಡಿದೆ. 35 ಸನ್ಯಾಸಿಗಳು ಮತ್ತು ಐವರು ಅನುಯಾಯಿಗಳು ಬೌದ್ಧ ಧರ್ಮದ ಪತಾಕೆ ಹಿಡಿದು ಒಬ್ಬರ ಹಿಂದೊಬ್ಬರಂತೆ ಸಾಲಾಗಿ ರಸ್ತೆಯಂಚಲ್ಲಿ ನಡೆದು ಸಾಗುತ್ತಿದ್ದಾಗ ಮುಕ್ದಹಾನ್ ಪ್ರಾಂತ್ಯದ ಬಳಿ ಕಾರೊಂದು ಅತ್ಯಂತ ವೇಗವಾಗಿ ಬಂದು ಅಪ್ಪಳಿಸಿತು. 'ಬುದ್ಧೋ ಬುದ್ಧೋ' ಎಂದು ಮಂತ್ರ ಜಪಿಸುತ್ತಾ ಯಾತ್ರೆಗೆ ನಡೆದುಕೊಂಡು ಹೋಗುತ್ತಿದ್ದಾಗಲೇ ಕಾರು ವೇಗವಾಗಿ ಬಂದು ಅಪ್ಪಳಿಸಿತು ಎಂದು ಕೂದಲೆಳೆ ಅಂತರದಲ್ಲಿ ಅಪಘಾತದಿಂದ ಪಾರಾಗಿರುವ ಫ್ರಾ ಸೋಂಪಾಂಗ್ ಎಂಬ ಬೌದ್ಧ ಸನ್ಯಾಸಿ ಆಘಾತ ವ್ಯಕ್ತಪಡಿಸಿದ್ದಾರೆ. ಕಾರು ಡಿಕ್ಕಿ ಹೊಡೆದ ರಭಸಕ್ಕೆ 9 ಸನ್ಯಾಸಿಗಳೂ ಗಾಳಿಯಲ್ಲಿ ಅಷ್ಟೆತ್ತರಕ್ಕೆ ಹಾರಿ ನೆಲಕ್ಕೆ ಅಪ್ಪಳಿಸಿದರು



ಎಂದು ಕಣ್ಣೀರಾದರು. ಅಪಘಾತದ ತೀವ್ರತೆಗೆ ಐವರು ಸನ್ಯಾಸಿಗಳು ಸ್ಥಳದಲ್ಲೇ ಮೃತಪಟ್ಟರೆ, ನಾಲ್ವರು ಚಿಕಿತ್ಸೆ ಫಲಕಾರಿಯಾಗದೆ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದರು. ಸದ್ಯ ಗಾಯಾಳುಗಳನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಅವರಲ್ಲಿ ಮೂವರು ಸನ್ಯಾಸಿಗಳ ಸ್ಥಿತಿ ಗಂಭೀರವಾಗಿದೆ. ಬಾಲಕ ಅನಾರೋಗ್ಯದ ಕಾರಣ ನೀಡಿ ಶಾಲೆಗೆ ಹೋಗಿರಲಿಲ್ಲ. ಮನೆಯವರಿಗೆ ತಿಳಿಯದಂತೆ ಕಾರು ಚಲಾಯಿಸಿಕೊಂಡು ಬಂದು ವೇಗವಾಗಿ ಚಲಾಯಿಸಿ ಅಪಘಾತ ನಡೆಸಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ. ಪೋಷಕರು ಮಕ್ಕಳ ಮೇಲೆ ನಿಗಾ ಇಡುವುದು ಎಷ್ಟು ಮುಖ್ಯ ಎಂಬುದಕ್ಕೂ ಕಾರಣವಾಗಿದೆ ಎಂದು ಗವರ್ನರ್ ವೊರಾಯನ್ ಬುನ್ನಾರತ್ ಪ್ರತಿಕ್ರಿಯಿಸಿದ್ದಾರೆ.

ಸೋಮನಾಥ-ವಿಕಸಿತ ಭಾರತ ಸಂಕಲ್ಪಕ್ಕೆ ಪ್ರಶಂಸೆ

ದೆಹಲಿ: ಕರ್ನಾಟಕದ ಎ.ಕೆ.ದಾಸ್ ಅವರು ಸೋಮನಾಥ ದೇವಾಲಯದ ಪುನರ್ನಿರ್ಮಾಣದ 75 ವರ್ಷಗಳ ಅಂಗವಾಗಿ ತಮಗೆ ಬರೆದ ಹೃದಯಸ್ಪರ್ಶಿ ಪತ್ರಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರು ಜೂ.24ರಂದು ಉತ್ತರಿಸಿದ್ದಾರೆ. ಸೋಮ ನಾಥ ದೇವಾಲಯ ಪುನರ್ ನಿರ್ಮಾಣ ಮತ್ತು ಜ್ಯೋತಿರ್‌ಲಿಂಗದ ಮರುಸ್ಥಾಪನೆಯನ್ನು ಸ್ವತಂತ್ರ ಭಾರತದ ಇತಿಹಾಸದಲ್ಲಿ ನಿರ್ಣಾಯಕ ಮೈಲುಗಲ್ಲು ಎಂದು ಬಣ್ಣಿಸಿದ್ದಾರೆ. ಇದು ನಾಗರಿಕ ಪ್ರಜ್ಞೆಯ ಪುನರುತ್ಥಾನದ ಸಂಕೇತ ಎಂದೂ ಪ್ರಶಂಸಿಸಿದ್ದಾರೆ.

ಸೋಮನಾಥ ದೇವಾಲಯ ಭಾರತದ ಆಧ್ಯಾತ್ಮಿಕ ಪರಂಪರೆ, ಸ್ವಾಭಿಮಾನ ಮತ್ತು ಸಾಂಸ್ಕೃತಿಕ ಪುನರುಜ್ಜೀವನದ ಕಾಲಾತೀತ

ಸಂಕೇತವಾಗಿದೆ ಎಂದು ಮೋದಿ ಬರೆದಿದ್ದಾರೆ.

ದೇವಾಲಯದ ಅದ್ಭುತ ಪಯಣವನ್ನು ಮೆಲುಕು ಹಾಕಿರುವ ಪ್ರಧಾನಿ, ಶತಮಾನ'ಗಳಿಂದ ಸೋಮನಾಥ ದೇವಾಲಯವು ಪದೇ ಪದೇ ಆಕ್ರಮಣಕ್ಕೆ ತುತ್ತಾಗಿದ್ದರೂ, ಅಸಂಖ್ಯಾತ ಭಕ್ತರ ಅಚಲ ನಂಬಿಕೆಯಿಂದ ಪುನರುತ್ಥಾನಗೊಂಡಿದೆ. ದೇಗುಲದ ಚೈತನ್ಯ ಎಂದೂ ಮರೆಯಾಗದಂತೆ ಜನರ ನಂಬಿಕೆ ನೋಡಿಕೊಂಡಿದೆ ಎಂದು ಉಲ್ಲೇಖಿಸಿದ್ದಾರೆ.

ಈ ಪವಿತ್ರ ಪರಂಪರೆ ಸಂರಕ್ಷಿಸಿದವರಿಗೆ ಗೌರವ ಸಲ್ಲಿಸುತ್ತಾ, ವಿಕಸಿತ ಭಾರತವನ್ನು ನಿರ್ಮಿಸುವ ಆಕಾಂಕ್ಷೆಯು ಸೋಮನಾಥದ ಪುನರ್ನಿರ್ಮಾಣಕ್ಕೆ ಮಾರ್ಗದರ್ಶನ ನೀಡಿದ ಅದೇ ನಂಬಿಕೆ, ಅಭ್ಯುದಯ ಮತ್ತು ಆತ್ಮವಿಶ್ವಾಸದಿಂದ ಪ್ರೇರಿತವಾಗಿದೆ ಎಂದೂ ಮೋದಿ ತಿಳಿಸಿದ್ದಾರೆ. ಈ ವಿಚಾರಗಳಲ್ಲಿ ದಾಸ್ ಅವರ ದೇಶಭಕ್ತಿಯ ಭಾವನೆಗಳನ್ನು ಪ್ರಧಾನಿ ಮೋದಿ ಅವರು ಬಹಳವಾಗಿ ಶ್ಲಾಘಿಸಿದ್ದು, ಉತ್ತಮ ಆರೋಗ್ಯ, ಸಂತೋಷ ಮತ್ತು ರಾಷ್ಟ್ರಕ್ಕೆ ನಿರಂತರ ಸೇವೆಗಾಗಿ ಶುಭ ಹಾರೈಸಿದ್ದಾರೆ.

ಕವಚದಂತೆ ರಕ್ಷಿಸಿದ ಸೆಲ್ಲಾರ್‌ನಲ್ಲಿನ ಸೆಕ್ಯುರಿಟಿ ಗಾರ್ಡ್ ಕ್ಯಾಬಿನ್ | 7 ದೇಶಗಳ ರಕ್ಷಣಾ ತಂಡಗಳಿಂದ 100 ಗಂಟೆ ಕಾರ್ಯಾಚರಣೆ

ವೆನೆಜುವೆಲಾ: 8 ದಿನ ಅವಶೇಷದಡಿಯಿದ್ದರೂ ಗಾರ್ಡ್ ಪವಾಡಸದೃಶ ಪಾರು

ಕ್ಯಾರಾಕಾಸ್: ವೆನೆಜುವೆಲಾದಲ್ಲಿನ ಕರಾವಳಿ ಭಾಗದ ನಗರದ ಲಾ ಗುವಾರಿಯ ನಗರದಲ್ಲಿನ ಬಹು ಮಹಡಿ ಕಟ್ಟಡವಾದ ಗ್ಯಾಲರಿಯಾಸ್ ಗ್ರ್ಯಾಂಡೆ ಶಾಪಿಂಗ್ ಮಾಲ್ ಕೂಡಾ ಜೂ.24ರ ಬುಧವಾರ ಸಂಜೆ 6.04ಕ್ಕೆ ಅವಳಿ ಭೂಕಂಪಗಳಾದ ಕುಸಿದುಬಿದ್ದು ನೆಲಸಮವಾಗಿತ್ತು. ಶಾಪಿಂಗ್ ಮಾಲ್‌ನ ನೆಲದಡಿಯ ಮಾಳಿಗೆಯಲ್ಲಿ 8 ದಿನಗಳಿಂದಲೂ ಅಲುಗಾಡಲೂ ಆಗದಂತೆ ಕಟ್ಟಡದ ಅವಶೇಷಗಳಡಿ ಸಿಲುಕಿಕೊಂಡಿದ್ದರೂ ಬದುಕುಳಿದಿದ್ದ ಸೆಕ್ಯುರಿಟಿ ಗಾರ್ಡ್ ಹೆರ್ನನ್ ಆಲ್ಬರ್ಟೊ ಗಿಲ್ ಫ್ಲೋರೆಸ್(43) ಅವರನ್ನು ರಕ್ಷಣಾ ಕಾರ್ಯಾಚರಣೆಯ ಸಿಬ್ಬಂದಿ ಕಡೆಗೂ ಹೊರತಂದಿದ್ದಾರೆ.

ಶಾಪಿಂಗ್ ಮಾಲ್ ಬಹುಮಹಡಿ ಕಟ್ಟಡದ ಕಾಂಕ್ರೀಟ್ ಕಂಬಗಳು, ಹಲವಾರು ಮಹಡಿಗಳ ತಾರಸಿಗಳು ಮೊದಲಾದ ಅವಶೇಷಗಳನ್ನೆಲ್ಲಾ 100 ಗಂಟೆಗಳಿಗೂ ಅಧಿಕ ಕಾಲದ ಪರಿಶ್ರಮದ ಮೂಲಕ ಹೊರತೆಗೆದು ಸ್ಥಳಾಂತರಿಸಿರುವ ರಕ್ಷಣಾ ಕಾರ್ಯಾಚರಣೆ ತಂಡಗಳು, ದುರಂತ ಸಂಭವಿಸಿ 8 ದಿನಗಳ ಬಳಿಕವಾದರೂ ಬದುಕಿದ್ದ ಆಲ್ಬರ್ಟೊ ಅವರನ್ನು ಜೀವಂತ ಹೊರತಂದು ಆಸ್ಪತ್ರೆಗೆ ದಾಖಲಿಸಿದ್ದಾರೆ. ಕುತ್ತಿಗೆ ಸೇರಿದಂತೆ ದೇಹದ ಹಲವೆಡೆ ಮೂಳೆಗಳು ಮುರಿದಿರುವುದರಿಂದ ಅವರನ್ನು ಸ್ಟ್ರೆಚರ್‌ನಲ್ಲಿಯೇ ಮೇಲಕ್ಕೆ ಕರೆತಂದು ಆಸ್ಪತ್ರೆಗೆ



ದಾಖಲಿಸಲಾಗಿದ್ದು, ಆಲ್ಬರ್ಟೊ ನಿದಾನವಾಗಿ ಚೇತರಿಸಿಕೊಳ್ಳುತ್ತಿದ್ದಾರೆ.

ವೆನೆಜುವೆಲಾ, ಅಮೆರಿಕ, ಚಿಲಿ, ಪೋರ್ಚುಗಲ್, ಮೆಕ್ಸಿಕೊ, ಕೋಸ್ಟರಿಕಾ, ಎಲ್ ಸಲ್ವಾಡೋರ್ ದೇಶಗಳ ನುರಿತ ರಕ್ಷಣಾ ಕಾರ್ಯಾಚರಣೆ ತಂಡ 100 ಗಂಟೆಗಳಿಗೂ ಹೆಚ್ಚು ಕಾಲ ಶ್ರಮಿಸಿ ಅವಶೇಷಗಳನ್ನು ತೆಗೆದುಹಾಕಿ ಆಲ್ಬರ್ಟೊ ಅವರನ್ನು ರಕ್ಷಣೆ ಮಾಡಿದೆ.

'8 ದಿನಗಳ ಕಾಲ ಹಲವು ಮಹಡಿಗಳ ಅವಶೇಷಗಳಡಿ, ಕತ್ತಲ ಕೂಪದಲ್ಲಿ ಸಿಲುಕಿಕೊಂಡು

ಆಹಾರ-ನೀರು, ಸ್ವಚ್ಛಗಾಳಿ ಇಲ್ಲದಿದ್ದರೂ ಧೃತಿಗೆಡದೇ ಜೀವ ಉಳಿಸಿಕೊಂಡಿದ್ದ ಆಲ್ಬರ್ಟೊ ನಿಜಕ್ಕೂ ಗಟ್ಟಿಗ. ಅವಶೇಷಗಳಡಿ ಸಿಲುಕಿದ್ದ ಆತನ ಬಳಿಗೆ ರಕ್ಷಣಾ ತಂಡಗಳು ತಲುಪಿದಾಗ ಆತ ಮೊದಲ ಹೇಳಿದ ಮಾತು ಏನೆಂದರೆ, 'ನಾನೀಗ ಜೀವಂತವಾಗಿ ಅವಶೇಷಗಳಡಿ ಸಿಕ್ಕಿರುವ ಸುದ್ದಿಯನ್ನು ನನ್ನ ಹೆಂಡತಿಗೆ ಹೇಳಬೇಡಿ. ಏಕೆಂದರೆ ಇಲ್ಲಿಂದ ಬದುಕಿ ಮೇಲೆ ಬರುತ್ತೇನೆ ಎಂಬ ನಂಬಿಕೆಯಿಲ್ಲ. ಹಾಗೇನಾದರೂ ಆಗಿ ನಾನು ನಂತರದಲ್ಲಿ ಸಾವಿಗೀಡಾದರೆ ನನ್ನ ಪತ್ನಿಗೆ ಎರಡನೇ ಬಾರಿ ಆಘಾತವಾಗುತ್ತದೆ. ಆ ದುಃಖ ಸಹಿಸುವುದು ಆಕೆ ಕಷ್ಟವಾಗುತ್ತದೆ'. ಆಲ್ಬರ್ಟೊನ ಈ ಮಾತುಗಳನ್ನು ಸುದ್ದಿಸಂಸ್ಥೆಗೆ ತಿಳಿಸಿದ್ದು ಕೋಸ್ಟರಿಕಾದ ರೆಡ್ ಕ್ರಾಸ್ ಸಂಸ್ಥೆಯ ರಕ್ಷಣಾ ತಂಡದ ಕಾರ್ಯಕರ್ತ ಮಿನ್ಯಾರ್ ಕೊಲ್ಲಾಡೊ.ಅಲ್ಲದೇ, 'ನಾವು ಆತನನ್ನು ಹಾಗೇ ಅವಶೇಷಗಳಡಿ ಸಾಯಲು ಬಿಡಲು ಸಾಧ್ಯವೇ? ಆಲ್ಬರ್ಟೊನನ್ನು ಜೀವಂತ ಮೇಲಕ್ಕೆ ಕರೆತರುವ ಶಪಥ ಮಾಡಿದೆವು. ನಮ್ಮ ತಂಡ ಅದನ್ನು ನಿಜವಾಗಿಸಿತು' ಎಂದೂ ಮಿನ್ಯಾರ್ ಹೇಳಿದ್ದಾರೆ.

ಆಲ್ಬರ್ಟೊ ಮಡದಿ ಗುಸ್ಟಿಮರ್ ಗೊನ್ಸಾಲ್ವೆಜ್ ಮಾತನಾಡಿ, ಭೂಕಂಪವಾದ ದಿನ ನಾನು ಆಲ್ಬರ್ಟೊನನ್ನು ಸಂಪರ್ಕಿಸಲು ಯತ್ನಿಸಿದೆ. ಆತ ಕೆಲಸ ಮಾಡುತ್ತಿದ್ದ ಶಾಪಿಂಗ್ ಮಾಲ್ ಕಟ್ಟಡವೂ ನೆಲಸಮವಾಗಿರುವುದು ತಿಳಿದ ಬಳಿಕ ಆತ ಬದುಕಿರುವ ಸಾಧ್ಯತೆಯೇ ಇಲ್ಲ ಎಂದು ಕೊಂಡು ದುಃಖಿತಳಾಗಿದ್ದೆ. ಎರಡು ದಿನದ ಹಿಂದೆ ರಕ್ಷಣಾ ತಂಡಕ್ಕೆ ಆತ ಬದುಕಿರುವುದು ತಿಳಿದ ಬಳಿಕ ನನಗೆ ಹೋದ ಜೀವ ಮರಳಿ ಬಂದಂತಾಯಿತು. ಇಷ್ಟು ದೊಡ್ಡ ಭೂಕಂಪದಲ್ಲೇ ಬದುಕಿರುವಾತನಿಗೆ ಮತ್ತೇನೂ ಆಗುವುದಿಲ್ಲ ಎಂಬ ಆಶಾವಾದ ಮೂಡಿದೆ' ಎಂದು ಭಾವುಕವಾಗಿ ಪ್ರತಿಕ್ರಿಯಿಸಿದ್ದಾರೆ. ಆಲ್ಬರ್ಟೊ ದಂಪತಿಗೆ 8 ಮತ್ತು 10 ವರ್ಷದ ಇಬ್ಬರು ಮಕ್ಕಳಿದ್ದಾರೆ.

'ನೆಲದಡಿಯ ಮಹಡಿಯಲ್ಲಿ (ಸೆಲ್ಲಾರ್‌ನಲ್ಲಿ) ಸೆಕ್ಯುರಿಟಿ ಗಾರ್ಡ್ ಆಗಿದ್ದ ಆಲ್ಬರ್ಟೊ ಭೂಕಂಪವಾದಾಗ ತಮಗೆ ಮೀಸಲಾದ ಕ್ಯಾಬಿನ್‌ನಲ್ಲಿ ಕುಳಿತಿದ್ದರು. ಹಾಗಾಗಿ ಮೇಲಿನ ಕಟ್ಟಡದ ಅವಶೇಷಗಳು ನೇರವಾಗಿ ಅವರ ಮೇಲೆ ಬಿದ್ದಿಲ್ಲ. ಅವರು ಕುಳಿತಿದ್ದ ಕ್ಯಾಬಿನ್ನೇ ಅವರನ್ನು ರಕ್ಷಣಾ ಕವಚದಂತೆ ಆವರಿಸಿಕೊಂಡು ಕಾಪಾಡಿದೆ. ಅಲ್ಲೊಂದಿಷ್ಟು ಖಾಲಿ ಜಾಗವೂ ಉಳಿದಿದ್ದರಿಂದ ಉಸಿರಾಡಿಕೊಂಡಿರಲು ಸಾಧ್ಯವಾಗಿದೆ. ಆ ಕ್ಯಾಬಿನ್ನೇ ಆಲ್ಬರ್ಟೊನ ಜೀವ ಉಳಿಸಿದೆ' ಎಂದು ರಕ್ಷಣಾ ತಂಡದ ಅಧಿಕಾರಿಗಳು ಹೇಳಿದ್ದಾರೆ.

2200 ದಾಟಿದ ಮೃತರ ಸಂಖ್ಯೆ

ವೆನೆಜುವೆಲಾದಲ್ಲಿ ಜೂ.24ರ ಸಂಜೆ ಸಂಭವಿಸಿದ ಅವಳಿ ಭೂಕಂಪದಲ್ಲಿ ರಾಜಧಾನಿ ನಗರ ಕ್ಯಾರಾಕಾಸ್ ಮತ್ತು ಸಮೀಪದ ಲಾ ಗುವೆರಾ ನಗರಗಳು ಹೆಚ್ಚು ಹಾನಿಗೀಡಾಗಿವೆ. 10 ಸಾವಿರಕ್ಕೂ ಅಧಿಕ ಕಟ್ಟಡಗಳು ನೆಲಸಮವಾಗಿವೆ. ಅವಳಿ ಭೂಕಂಪದಿಂದಾಗಿ ದೇಶಾದ್ಯಂತ ಈವರೆಗೆ ಮಡಿದವರ ಸಂಖ್ಯೆ 2200ರ ಗಡಿ ದಾಟಿದೆ. ಕಾಣೆಯಾದವರ ಸಂಖ್ಯೆಯೂ 55 ಸಾವಿರಕ್ಕೂ ಮಿಗಿಲಾಗಿದೆ. ಗಾಯಾಳುಗಳ ಸಂಖ್ಯೆ 11 ಸಾವಿರಕ್ಕೂ ಅಧಿಕವಾಗಿದೆ. ರಕ್ಷಣಾ ಕಾರ್ಯಾಚರಣೆಗೆ ಅತ್ಯಗತ್ಯ ಸಂಪನ್ಮೂಲಗಳ ಕೊರತೆ ಅನುಭವಿಸುತ್ತಿದ್ದ ವೆನೆಜುವೆಲಾ ದೇಶಕ್ಕೆ ಸಂಕಷ್ಟ ಕಾಲದಲ್ಲಿ ಅಮೆರಿಕ, ಭಾರತ, ಚಿಲಿ, ಪೋರ್ಚುಗಲ್, ಮೆಕ್ಸಿಕೊ, ಕೋಸ್ಟರಿಕಾ, ಎಲ್ ಸಲ್ವಾಡೋರ್ ಮೊದಲಾದ ದೇಶಗಳಿಂದ ರಕ್ಷಣಾ ತಜ್ಞರು ಮತ್ತು ವೈದ್ಯಕೀಯ ತಂಡಗಳು ಆಗಮಿಸಿ ಸಹಾಯ ಹಸ್ತ ಚಾಚಿವೆ.

ಸಮಾಚಾರ ಸಣ್ಣದಲ್ಲ

‘ರಂಗಾರೋಹಣ’ ಇಂದು ನೃತ್ಯ ಪ್ರಸ್ತುತ

ಹುಬ್ಬಳ್ಳಿ: ನಗರದ ಪ್ರತಿಷ್ಠಿತ ನೃತ್ಯ ಸಂಸ್ಥೆ ''ಅಭಿನಯ ಸ್ಕೂಲ್ ಆಫ್ ಡ್ಯಾನ್ಸ್'' ವತಿಯಿಂದ ಭರತನಾಟ್ಯ ನೃತ್ಯ ''ರಂಗಾರೋಹಣ'' ಕಾರ್ಯಕ್ರಮ ಜು. 4ರಂದು ಸಂಜೆ 5 ಗಂಟೆಗೆ ನಗರದ ಸವಾಯಿ ಗಂಧರ್ವ ಹಾಲ್‌ನಲ್ಲಿ ಆಯೋಜಿಸಲಾಗಿದೆ ಎಂದು ಸಂಸ್ಥೆಯ ಸಂಸ್ಥಾಪಕಿ ಡಾ. ಸೀಮಾ ಎಸ್. ಉಪಾಧ್ಯಾಯ ತಿಳಿಸಿದರು. ಈ ಕುರಿತು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತಮ್ಮ , ಶಿಷ್ಯೆಯರಾದ ಅವನಿ ಜೋಶಿ, ಕು. ಅಲ್ಕಾ ಹಾಗೂ ಕು. ಆರಾಧ್ಯ ಅವರು ತಮ್ಮ ನೃತ್ಯ ಪ್ರತಿಭೆಯನ್ನು ಪ್ರಸ್ತುತಪಡಿಸಲಿದ್ದಾರೆ ಎಂದು ತಿಳಿಸಿದರು. ಮುಖ್ಯ ಅತಿಥಿಗಳಾಗಿ ಮೈಸೂರಿನ ಹಿರಿಯ ವಿದ್ವಾಂಸ ಪ್ರೊ. ರಾಮಮೂರ್ತಿ ರಾವ್, ಕೆಎಂಸಿ ನಿರ್ದೇಶಕ ಡಾ. ಕಮ್ಮಾರ್, ಧಾರವಾಡ ಜಿಲ್ಲಾಧಿಕಾರಿ ಸ್ನೇಹಲ್ ಆರ್. ಅವರು ಆಗಮಿಸಲಿದ್ದಾರೆ. ವೈವಿಧ್ಯಮಯ ನೃತ್ಯ ಪ್ರಸ್ತುತಿಗಳ ಮೂಲಕ ಸಾಗುವ ಈ ಕಲಾ ಸಂಭ್ರಮ ''ತಿಲ್ಲಾನ'' ನೃತ್ಯದೊಂದಿಗೆ ಸಮಾರೋಪಗೊಳ್ಳಲಿದೆ ಎಂದು ತಿಳಿಸಿದರು.

ಪಟ್ಟಿ ವಿಶೇಷ ಪರಿಷ್ಕರಣೆ ಶೇ.8 ನಮೂನೆ ವಿತರಣೆ

ಧಾರವಾಡ: ಮತದಾರರ ಪಟ್ಟಿಗಳ ವಿಶೇಷ ಸಮಗ್ರ ಪರಿಷ್ಕರಣೆಗೆ ಸಂಬಂಧಿಸಿದಂತೆ, ಜಿಲ್ಲೆಯ ಎಲ್ಲಾ ವಿಧಾನ ಸಭಾ ಕ್ಷೇತ್ರಗಳ ಮತಗಟ್ಟೆ ಮಟ್ಟದ ಅಧಿಕಾರಿಗಳು ಜು.29 ರವರೆಗೆ ಮತದಾರರ ಮನೆ-ಮನೆಗಳಿಗೆ ಭೇಟಿ ನೀಡಿ, ನಮೂನೆ ವಿತರಣೆ ಮಾಡುತ್ತಾರೆ. ನವಲಗುಂದ ಕ್ಷೇತ್ರದಲ್ಲಿ ಶೇ. 7.04 ನಮೂನೆ ವಿತರಣೆ ಮಾಡಿ, ಶೇ. 0.14 ನಮೂನೆ ಸ್ವೀಕರಿಸಿದರು. ಕುಂದಗೋಳ ಶೇ. 10.09 ವಿತರಣೆ ಮಾಡಿ, ಶೇ. 0.01 ಸ್ವೀಕರಿಸಿದರು. ಧಾರವಾಡ ಶೇ. 6.67 ವಿತರಣೆ ಮಾಡಿ, ಶೇ. 0.10 ಸ್ವೀಕರಿಸಿದರು. ಹು-ಧಾ ಪೂರ್ವ ಕ್ಷೇತ್ರದಲ್ಲಿ ಶೇ. 7.21 ವಿತರಣೆ ಮಾಡಿ, ಶೇ.0.01 ಸ್ವೀಕರಿಸಿದರು. ಹು-ಧಾ ಕೇಂದ್ರ ಕ್ಷೇತ್ರದಲ್ಲಿ ಶೇ.7.47 ವಿತರಣೆ ಮಾಡಿ, ಶೇ. 0.02 ಸ್ವೀಕರಿಸಿದರು. ಪಶ್ಚಿಮ ಕ್ಷೇತ್ರದಲ್ಲಿ ಶೇ. 7.90 ವಿತರಣೆ ಮಾಡಿ, ಶೇ. 0.09 ಸ್ವೀಕರಿಸಿದರು. ಕಲಘಟಗಿ ಕ್ಷೇತ್ರದಲ್ಲಿ ಶೇ. 15.07 ವಿತರಣೆ ಮಾಡಿ, ಶೇ. 0.08 ಸ್ವೀಕರಿಸಿದರು. ಒಟ್ಟು 7 ವಿಧಾನಸಭಾ ಕ್ಷೇತ್ರದಲ್ಲಿ ಶೇ.8.61 ನಮೂನೆಗಳನ್ನು ಮತದಾರರಿಗೆ ವಿತರಣೆ ಮಾಡಿ, ಶೇ. 0.06 ಭರ್ತಿ ಮಾಡಿದ ನಮೂನೆಗಳನ್ನು ಮತದಾರರಿಂದ ಸ್ವೀಕರಿಸಲಾಗಿದೆ ಎಂದು ಜಿಲ್ಲಾಧಿಕಾರಿ ಸ್ನೇಹಲ್ ಆರ್. ತಿಳಿಸಿದ್ದಾರೆ.

ಜು.5ರಂದು ನಿನಾದ ಸಂಗೀತೋತ್ಸವ

ಧಾರವಾಡ: ನಗರದ ಆಲೂರ ವೆಂಕಟರಾವ ಸಾಂಸ್ಕೃತಿಕ ಭವನದಲ್ಲಿ ಜು.5ರಂದು ಸಂಜೆ 5:30ಕ್ಕೆ ಪದ್ಮವಿಭೂಷಣ ಡಾ. ಗಂಗೂಬಾಯಿ ಹಾನಗಲ್ ಪುಣ್ಯತಿಥಿ ನಿಮಿತ್ತ ಗಾನ-ವಾದನಗಳ ನಿನಾದ ಸಂಗೀತೋತ್ಸವ ನಡೆಯಲಿದೆ. ಈ ಕುರಿತು ಭಾರತೀಯ ಸಂಗೀತ ವಿದ್ಯಾಲಯದ ಅಧ್ಯಕ್ಷೆ ಡಾ.ಸೌಭಾಗ್ಯ ಕುಲಕರ್ಣಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಹುಬ್ಬಳ್ಳಿಯ ಗಂಗೂಬಾಯಿ ಹಾನಗಲ್ ಸಂಗೀತ ವಿದ್ಯಾಲಯ, ಸೋಹಂ ಆರ್ಕಿಟೆಕ್ಟ್ ಸಹಯೋಗದಲ್ಲಿ ನಡೆಯುವ ಸಂಗೀತೋತ್ಸವಕ್ಕೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಪ್ರಶಾಂತ ಐಎಫ್ ಸೆಂಟರ್, ನ್ಯೂಯಾರ್ಕ್ ರವಿ ಹಾಗೂ ಜಯಾ ಭೂಪಳಾಪುರ ಫೌಂಡೇಶನ್ ಕೈ ಜೋಡಿಸಿವೆ ಎಂದರು. ಬೆಂಗಳೂರಿನ ಯುವ ಕಲಾವಿದ ಸರ್ಫರಾಜ್ ಖಾನ್ರ ಸಾರಂಗಿ ವಾದನದ ಮೂಲಕ ಸಂಗೀತೋತ್ಸವಕ್ಕೆ ಚಾಲನೆ ದೊರೆಯಲಿದೆ. ನಂತರ ಪುಣೆಯ ಮಂಜೂಷಾ ಪಾಟೀಲ ಕುಲಕರ್ಣಿ ಗಾಯನ ಪ್ರಸ್ತುತಪಡಿಸುವರು. ಕೇಶವ ಜೋಶಿ, ಹೇಮಂತ ಜೋಶಿ, ತಬಲಾ ಸಾಥ್ ನೀಡಿದರೆ, ಬಸವರಾಜ ಹಿರೇಮಠ ಸಂವಾದಿನಿ ಸಾಥ್ ಸಂಗತ್ ನೀಡುವರು ಎಂದು ನುಡಿದರು.

ಜಿಲ್ಲಾ ನೌಕರರ ಸಂಘದ ಪ್ರತಿಭಾ ಪುರಸ್ಕಾರ ನಾಳೆ

ಹಾವೇರಿ: ಎಸ್ಸೆಸ್ಸೆಲ್ಸಿ ಮತ್ತು ದ್ವಿತೀಯ ಪಿಯುಸಿಯಲ್ಲಿ ಶೇ.90ಕ್ಕಿಂತ ಹೆಚ್ಚು ಅಂಕ ಗಳಿಸಿದ ಹಾವೇರಿ, ಧಾರವಾಡ ಹಾಗೂ ಗದಗ ಜಿಲ್ಲೆಗಳ ರಾಜ್ಯ ಸರಕಾರಿ ನೌಕರರ ಮಕ್ಕಳ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಜು.5ರಂದು ಪ್ರತಿಭಾ ಪುರಸ್ಕಾರ ಆಯೋಜಿಸಿದೆ ಎಂದು ನೌಕರರ ಸಂಘದ ಜಿಲ್ಲಾಧ್ಯಕ್ಷ ಮಲ್ಲೇಶಪ್ಪ ಕರಿಗಾರ ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಯತ್ತಿನಹಳ್ಳಿ ಗ್ರಾಮದ ಸಾಯಿ ಪರಮೇಶ್ವರ ಸಭಾಂಗಣದಲ್ಲಿ ಜು.5ರಂದು ಸಂಜೆ 4 ಗಂಟೆಗೆ ಸಮಾರಂಭ ನಡೆಯಲಿದೆ. ಹಾವೇರಿ, ಗದಗ ಹಾಗೂ ಧಾರವಾಡ ಜಿಲ್ಲೆಗಳ ಸುಮಾರು 700 ವಿದ್ಯಾರ್ಥಿಗಳಿಗೆ ಸನ್ಮಾನ ನಡೆಯಲಿದ್ದು, ಮೂರು ಜಿಲ್ಲೆಗಳ ಸಾಧಕ ವಿದ್ಯಾರ್ಥಿಗಳು, ಪೋಷಕರು ಭಾಗವಹಿಸಬೇಕು ಎಂದು ತಿಳಿಸಿದರು. ವಿಧಾನಸಭಾಧ್ಯಕ್ಷ ರುದ್ರಪ್ಪ ಲಮಾಣಿ, ಸಂಸದ ಬಸವರಾಜ ಬೊಮ್ಮಾಯಿ ಉದ್ಘಾಟಿಸಲಿದ್ದು, ರಾಜ್ಯ ಸರಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್. ಷಡಕ್ಷರಿ ಅಧ್ಯಕ್ಷತೆ, ಕಾರ್ಮಿಕರ ಮಂಡಳಿ ಕಾರ್ಯದರ್ಶಿ ರವಿ ಡಿ. ಚನ್ನಣ್ಣನವರ ಪ್ರೇರಣಾ ನುಡಿಗಳನ್ನಾಡಲಿದ್ದಾರೆ ಎಂದರು.

{ಬಸವರಾಜ ರಾಯರೆಡ್ಡಿ} ಶಾಸಕ

ನನಗೆ ಸಚಿವ ಸ್ಥಾನ ನೀಡಿದರೇ ನಿಭಾಯಿಸುತ್ತೇನೆ. ಆದರೆ, ನಾನೇ ಹೋಗಿ ಸ್ಥಾನಮಾನ ಕೊಡಿ ಎಂದು ಕೇಳುವ ಜಾಯಮಾನ ನನ್ನದಲ್ಲ. ಪಕ್ಷ ಹಾಗೂ ಸಿಎಂ ತೀರ್ಮಾನ ಮಾಡಿದರೆ ಮಂತ್ರಿಯಾಗಲು ಒಪ್ಪುತ್ತೇನೆ. ಸಿಎಂ ಸಂಪುಟ ವಿಸ್ತರಣೆ ಮಾಡುತ್ತಾರೆ. ಅದಕ್ಕೆ ಪಕ್ಷದ ವರಿಷ್ಠರು ಒಪ್ಪಿಗೆ ಕೊಡಬೇಕು. ನನಗೆ ಬರೀ ಮಂತ್ರಿ ಸ್ಥಾನ ಅಲ್ಲ. ಪ್ರಧಾನಿ ಕೂಡ ಆಗಬೇಕು ಎಂಬ ಆಸೆ ಇರುತ್ತದೆ. ಆದರೆ, ಆಗಬೇಕಲ್ಲ?

ಜಿಲ್ಲಾ ಮಟ್ಟದ ನೀರು- ನೈರ್ಮಲ್ಯ ಸಮಿತಿ ಸಭೆ | ಜಿಪಂ ಸಿಇಒ ಭುವನೇಶ ಪಾಟೀಲ

ಶುದ್ಧ ಕುಡಿವ ನೀರಿಗೆ ಕ್ರಮ ವಹಿಸಿ

ವಿಶ್ವವಾಣಿ ಸುದ್ದಿಮನೆ, ಧಾರವಾಡ

ಗ್ರಾಮೀಣ ಭಾಗದ ಜನರು ಕುಡಿಯುವ ನೀರಿನ ಗುಣಮಟ್ಟವನ್ನು ಕಾಲಕಾಲಕ್ಕೆ ಪರಿಶೀಲನೆ ಮಾಡಬೇಕು. ಜನರಿಗೆ ಶುದ್ಧ ಕುಡಿಯುವ ನೀರು ಒದಗಿಸಲು ಅಧಿಕಾರಿಗಳು ಕ್ರಮ ವಹಿಸಬೇಕು ಎಂದು ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಭುವನೇಶ ಪಾಟೀಲ ಅಧಿಕಾರಿಗಳಿಗೆ ಸೂಚಿಸಿದರು.

ನಗರದ ಜಿಪಂ ಸಭಾಭವನದಲ್ಲಿ ಜಿಲ್ಲಾ ಮಟ್ಟದ ನೀರು ಮತ್ತು ನೈರ್ಮಲ್ಯ ಸಮಿತಿ ಸಭೆ ಹಾಗೂ ಜಿಲ್ಲಾ ತಾಂತ್ರಿಕ ಅನುಮೋದನಾ ಸಭೆಯ ಅಧ್ಯಕ್ಷತೆ ವಹಿಸಿ, ಮಾತನಾಡಿದರು.

ಜನರು ಕುಡಿಯುವ ನೀರು ಯೋಗ್ಯವಾಗಿದೆಯೇ ಎಂಬುದನ್ನು ಪರಿಶೀಲಿಸಬೇಕು. ಒಂದು ವೇಳೆ ಸಾರ್ವಜನಿಕರು ಬೋರವೆಲ್ ನೀರನ್ನು ಕುಡಿಯಲು ಬಳಕೆ ಮಾಡುತ್ತಿದ್ದರೆ, ಸೂಚನಾ ಫಲಕವನ್ನು ಅಳವಡಿಸಬೇಕಾಗುತ್ತದೆ. ಕಲುಷಿತ ನೀರು ಪೂರೈಕೆ ಮಾಡುತ್ತಿದ್ದಲ್ಲಿ, ಸಂಬಂಧಪಟ್ಟ ಅಧಿಕಾರಿಗಳ ಮೇಲೆ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳಲಾಗುವುದು. ಶಾಲೆ, ಅಂಗನವಾಡಿ ಹಾಗೂ ಮನೆಗಳಿಗೆ ಸಮರ್ಪಕವಾಗಿ ಕುಡಿಯುವ ನೀರು ಒದಗಿಸುವುದು ಅಧಿಕಾರಿಗಳ ಜವಾಬ್ದಾರಿಯಾಗಿದೆ ಎಂದರು.

ಶುದ್ಧ ಕುಡಿಯುವ ನೀರಿನ ಘಟಕಗಳು ಸುಸ್ಥಿತಿಯಲ್ಲಿರುವಂತೆ ನೋಡಿಕೊಳ್ಳಬೇಕು. ಈಗಾಗಲೇ ದುರಸ್ತಿ ಮಾಡುತ್ತಿರುವ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಒಂದು ವಾರದೊಳಗೆ ದುರಸ್ತಿ ಕಾರ್ಯ ಪೂರ್ಣಗೊಳಿಸಬೇಕು. ದುರಸ್ತಿ ಕಾರ್ಯ ಕೈಗೊಳ್ಳದ ಗುತ್ತಿಗೆದಾರರನ್ನು ತೆಗೆದು ಹಾಕಲಾಗುವುದು. ಜಲ ಜೀವನ್ ಮಿಷನ್ ಯೋಜನೆಯ ಕಾಮಗಾರಿಗಳನ್ನು ಪರಾಮರ್ಶೆ ಮಾಡಬೇಕು. ಮೇಲ್ಮಟ್ಟದ ಕುಡಿಯುವ ನೀರಿನ ಟ್ಯಾಂಕ್‌ಗಳನ್ನು ಸ್ವಚ್ಛಗೊಳಿಸಬೇಕು ಎಂದು ತಿಳಿಸಿದರು.

ನಗರದ ಜಿಪಂ ಸಭಾಭವನದಲ್ಲಿ ನಡೆದ ಜಿಲ್ಲಾ ಮಟ್ಟದ ನೀರು ನೈರ್ಮಲ್ಯ ಸಮಿತಿ ಸಭೆಯಲ್ಲಿ ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಭುವನೇಶ ಪಾಟೀಲ ಮಾತನಾಡಿದರು.

ತಾಲೂಕು ಮಟ್ಟದ ಸಭೆಗಳಿಗೆ ಅಧಿಕಾರಿಗಳು ಕಡ್ಡಾಯವಾಗಿ ಹಾಜರಾಗಬೇಕು. ಅಧಿಕಾರಿಗಳು ಸರಿಯಾಗಿ ಕರ್ತವ್ಯ ನಿರ್ವಹಿಸದಿದ್ದಲ್ಲಿ, ಅವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲಾಗುವುದು. ಮುಂದಿನ ಸಭೆಗೆ ಸಮಗ್ರ ಮಾಹಿತಿಯೊಂದಿಗೆ ಹಾಜರಾಗಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಗ್ರಾಮೀಣ ನೀರು ನೈರ್ಮಲ್ಯ ಇಲಾಖೆ ಕಾರ್ಯನಿರ್ವಾಹಕ ಎಂಜಿನಿಯರ್‌ಜಗದೀಶ ಪಾಟೀಲ, ಜಿಲ್ಲಾ ಆರೋಗ್ಯ ಕಲ್ಯಾಣ ಅಧಿಕಾರಿ ಡಾ. ಪರಶುರಾಮ ಎಫ್.ಕೆ., ಜಿಲ್ಲಾ ಕಾರ್ಯಕ್ರಮ ಅಧಿಕಾರಿ ಡಾ. ಕಮಲಾ ಬೈಲೂರು, ತಾಪಂ ಕಾರ್ಯನಿರ್ವಾಹಕ ಅಧಿಕಾರಿಗಳು, ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

ತಕ್ಷಣ ನೀರಿನ ಘಟಕಗಳ ದುರಸ್ತಿಗೊಳಿಸಲು ಸೂಚನೆ

ಶುದ್ಧ ಕುಡಿಯುವ ನೀರಿನ ಘಟಕಗಳು ಸುಸ್ಥಿತಿಯಲ್ಲಿರುವಂತೆ ನೋಡಿಕೊಳ್ಳಬೇಕು. ಈಗಾಗಲೇ ದುರಸ್ತಿ ಮಾಡುತ್ತಿರುವ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಒಂದು ವಾರದೊಳಗೆ ದುರಸ್ತಿ ಕಾರ್ಯ ಪೂರ್ಣಗೊಳಿಸಬೇಕು. ದುರಸ್ತಿ ಕಾರ್ಯ ಕೈಗೊಳ್ಳದ ಗುತ್ತಿಗೆದಾರರನ್ನು ತೆಗೆದು ಹಾಕಲಾಗುವುದು ಎಂದು ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಭುವನೇಶ ಪಾಟೀಲ ಅಧಿಕಾರಿಗಳಿಗೆ ಎಚ್ಚರಿಸಿದರು.

ವರುಣದೇವನ ಕೃಪೆಗಾಗಿ ಕತ್ತೆಗಳ ಮದುವೆ ಇಂದು

ಧಾರವಾಡ: ಮುಂಗಾರಿಗೆ ಬಿತ್ತನೆ ಮಾಡಿರುವ ರೈತರು ಮಳೆ ಬಾರದೇ ಈಗ ಕಂಗಾಲಾಗಿದ್ದಾರೆ. ನಿತ್ಯವೂ ಮಳೆಯ ನಿರೀಕ್ಷೆ ಹುಸಿಗೊಳ್ಳುತ್ತಿದ್ದು ಮಳೆ ತರಿಸಲು ಈಗ ರೈತರು ಆಚರಣೆಗಳ ಮೊರೆ ಹೋಗಿದ್ದಾರೆ. ತಾಲೂಕಿನ ಅಮ್ಮಿನಬಾವಿ ಗ್ರಾಮದ ರೈತರು ಅದ್ದೂರಿಯಿಂದ ಕತ್ತೆಗಳ ಮದುವೆ ಮಾಡಲು ಮುಂದಾಗಿದ್ದಾರೆ.

ಗ್ರಾಮದ ಎಲ್ಲ ಜಾತಿ, ವರ್ಗ, ಪಂಗಡಗಳ ರೈತರು ಒಗ್ಗೂಡಿ ಯುವಕ ಸಂಘಗಳ, ಮಹಿಳಾ ಮಂಡಳಗಳ, ಭಜನಾ ಮಂಡಳಗಳ ಮತ್ತು ವಿವಿಧ ದೇವಾಲಯಗಳ ಸೇವಾ ಸಮಿತಿಗಳ ಪದಾಧಿಕಾರಿಗಳು ಸೇರಿ ಈ ವಿವಾಹ ಕಾರ್ಯಕ್ಕೆ ಮುಂದಾಗಿದ್ದಾರೆ. ಅಮ್ಮಿನಬಾವಿ ಗ್ರಾಮದ ದೊಡ್ಡೋಣಿಯ ಕೊನೆಯ ಹಂತದಲ್ಲಿರುವ ಗ್ರಾಮದೇವಿಯರ ಪಾದಗಟ್ಟೆಯ ತಾಣದ ಹಂದರದಲ್ಲಿ ಜು.4 ರಂದು ಮಧ್ಯಾಹ್ನ 12-30 ಗಂಟೆಗೆ ಸಲ್ಲುವ ಅಭಿಜಿತ್ ಲಗ್ನದ ಶುಭ ಮುಹೂರ್ತದಲ್ಲಿ ಮೇಘರಾಜ ಎಂದು ಸಂಬೋಧಿಸುವ ಗಂಡು ಕತ್ತೆಯ ಜೊತೆಗೆ ವಸುಂಧರಾದೇವಿ ಎಂದು ಹೆಸರಿನ ಹೆಣ್ಣು ಕತ್ತೆಯ ವಿವಾಹ ಜರುಗಲಿದೆ. ಇದಕ್ಕೂ ಮೊದಲು ರೈತರು ವರುಣನ ಕೃಪೆಗಾಗಿ ಭಕ್ತಿಯ ಸಂಕಲ್ಪ ಪೂಜೆ ನೆರವೇರಿಸಲಿದ್ದಾರೆ.

ಲಗ್ನ ಪತ್ರಿಕೆ ಮುದ್ರಣ: ಲಗ್ನಪತ್ರಿಕೆ ಮುದ್ರಿಸುವಂತೆ ಕತ್ತೆಗಳ ಮದುವೆಗೂ ಅಧಿಕೃತವಾಗಿ ಲಗ್ನಪತ್ರಿಕೆ ಮುದ್ರಿಸಲಾಗಿದ್ದು, ಅಮ್ಮಿನಬಾವಿಯ ಕೆಲವು ಓಣಿಯವರು ವರನ ಕಡೆಯವರಾಗಿ ಮತ್ತು ಇನ್ನು ಕೆಲವು ಓಣಿಯವರು ಕನ್ಯೆಯ ಕಡೆಯವರಾಗಿ ಈ ಬೀಗತನಕ್ಕೆ ಮುಂದಾಗಿದ್ದಾರೆ. ಇದಕ್ಕಾಗಿ ರೈತರೂ ಸ್ವಯಂಸ್ಫೂರ್ತಿಯಿಂದ ದೇಣಿಗೆ ನೀಡಿದ್ದು, ವಿವಾಹ ಕಾರ್ಯದಲ್ಲಿ ಗ್ರಾಮದ ಸಮಸ್ತ ಜನತೆ ಪಾಲ್ಗೊಂಡು ಮದುವೆಯ ಊಟ ಶಿರಾ, ಅನ್ನ, ಸಾರು ಮತ್ತು ಬದನೆಕಾಯಿ ಪಲ್ಯ ಸವಿಯುವಂತೆ ಈಗಾಗಲೇ ಎಲ್ಲೆಡೆ ಮನವಿ ಮಾಡಲಾಗಿದೆ. ಈ ಮಂಗಳ ಕಾರ್ಯದಲ್ಲಿ ಡೊಳ್ಳು, ಕರಡಿಮಜಲು ವಾದ್ಯ ಮೇಳಗಳು ಮೇಳೈಸಲಿವೆ.

ಜನಪದರ ನಂಬಿಕೆ: ಕತ್ತೆಗಳ ಮದುವೆ ಮಾಡಿದರೆ ಮಳೆ ಬರುತ್ತದೆ ಎನ್ನುವುದಕ್ಕೆ ಯಾವುದೇ ವೈಜ್ಞಾನಿಕ ಸಾಕ್ಷ್ಯಗಳಿಲ್ಲ. ಆದರೂ ನೂರಾರು ವರ್ಷಗಳಿಂದ ಕತ್ತೆಗಳ ಮದುವೆಯಂತಹ ಜಾನಪದ ಆಚರಣೆಗಳು ಭಾರತೀಯರಲ್ಲಿ ಹಾಸುಹೊಕ್ಕಾಗಿವೆ. ಜಲಸಂರಕ್ಷಣೆ ಮತ್ತು ಸುಸ್ಥಿರ ಕೃಷಿಯ ಜನಪರ ಆಲೋಚನೆಯ ಒಳ ಆಶಯವೂ ಇಲ್ಲಿ ಹುದುಗಿದೆ.

ಗ್ರಾಮಗಳ ಅಭಿವೃದ್ಧಿಗೆ ಜಿ ರಾಮ ಜಿ ಜಾರಿ

ಹಾವೇರಿ: ಜಿಲ್ಲೆಯಾದ್ಯಂತ ಜುಲೈ 1 ರಿಂದ ವಿಕಸಿತ ಭಾರತ್-ಗ್ಯಾರಂಟಿ ಫಾರ್ ರೋಜ್ಗಾರ್‌ಮತ್ತು ಅಜೀವಿಕ ಮಿಷನ್ -ಗ್ರಾಮೀಣ (ವಿಬಿ- ಜಿ ರಾಮಜಿ) ಯೋಜನೆ ಅನುಷ್ಠಾನಗೊಳಿಸಲಾಗಿದೆ. ಗ್ರಾಮೀಣ ಕುಟುಂಬದ ಜೀವನೋಪಾಯ ಭದ್ರಪಡಿಸುವುದು, ಮೂಲ ಸೌಕರ್ಯ ಅಭಿವೃದ್ಧಿಪಡಿಸುವುದು ಇದರ ಉದ್ದೇಶ ಎಂದು ಜಿಪಂ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ದಲ್ಜಿತ್ ಕುಮಾರ ಅವರು ಹೇಳಿದರು.

ಈ ಯೋಜನೆಯಡಿ ಪ್ರತಿ ಅರ್ಹ ಗ್ರಾಮೀಣ ಕುಟುಂಬಕ್ಕೆ ಒಂದು ಆರ್ಥಿಕ ವರ್ಷದಲ್ಲಿ 125 ದಿನಗಳವರೆಗೆ ಅಕುಶಲ ಕೂಲಿ ಉದ್ಯೋಗ ನೀಡಲು ಅವಕಾಶ ಕಲ್ಪಿಸಲಾಗಿದೆ. ಗ್ರಾಮೀಣ ಕುಟುಂಬಗಳಿಗೆ ಸ್ಥಳೀಯ ಮಟ್ಟದಲ್ಲೇ ಉದ್ಯೋಗ ದೊರೆಯುವುದರಿಂದ ವಲಸೆ ಕಡಿಮೆಯಾಗುವುದರ ಜೊತೆಗೆ ಆರ್ಥಿಕವಾಗಿ ಸದೃಢ ಜೀವನ ನಡೆಸಲು ಸಹಕಾರಿಯಾಗಲಿದೆ ಎಂದರು. ಕೇಂದ್ರ ಸರಕಾರ ಅನುಮೋದಿತ 318 ಕಾಮಗಾರಿಗಳನ್ನು ಈ ಯೋಜನೆಯಡಿ ಕೈಗೊಳ್ಳಲು ಅಧಿಕಾರಿಗಳಿಗೆ ನೀಡಲಾಗಿದೆ. ಈಗಾಗಲೇ ಪ್ರಗತಿಯಲ್ಲಿರುವ ಕಾಮಗಾರಿಗಳನ್ನು ಕೂಡ ಇದರಡಿ ಮುಂದುವರಿಸಬಹುದು ಎಂದು ಹೇಳಿದರು.

ಜಿಪಂ ಸಿಇಒ ದಲ್ಜಿತ್ ಕುಮಾರ ಅವರು ಜಿ ರಾಮಜಿ ಯೋಜನೆ ಅನುಷ್ಠಾನಕ್ಕೆ ಚಾಲನೆ ನೀಡಿದರು.

ಗ್ರಾಮೀಣ ರಸ್ತೆ , ಕೆರೆ-ಕಟ್ಟೆಗಳ ಅಭಿವೃದ್ಧಿ ಮಳೆನೀರು ಸಂಗ್ರಹಣೆ, ಜಲ ಸಂರಕ್ಷಣೆ, ವನೀಕರಣ, ಕೃಷಿ ಅಭಿವೃದ್ಧಿ, ತೋಟಗಾರಿಕೆ, ಸಾರ್ವಜನಿಕ ಆಸ್ತಿ , ಗ್ರಾಮ ಸ್ವಚ್ಛತೆ, ನೀರಿನ ಸಂರಕ್ಷಣೆ ಕಾಮಗಾರಿಗಳಿಗೆ ಆದ್ಯತೆ ನೀಡಲಾಗುತ್ತದೆ. ಈ ಹೊಸ ಯೋಜನೆಯಡಿ 318 ಕಾಮಗಾರಿಗಳನ್ನು 4 ವರ್ಗೀಕರಣ ಮಾಡಲಾಗಿದೆ ಎಂದರು.

ವಿಬಿ- ಜಿ ರಾಮ ಜಿ ಯಡಿ ಪ್ರತಿ ಆರ್ಥಿಕ ವರ್ಷಕ್ಕೆ 125 ದಿನಗಳ ಉದ್ಯೋಗ ಖಾತರಿ, ಕೂಲಿ ಮೊತ್ತವನ್ನು ನೇರವಾಗಿ ಬ್ಯಾಂಕ್ ಖಾತೆಗೆ ಜಮೆ, ಪಾರದರ್ಶಕ ಹಾಗೂ ತಂತ್ರಜ್ಞಾನ ಆಧಾರಿತ ಅನುಷ್ಠಾನ, ಮಹಿಳೆಯರ ಹೆಚ್ಚಿನ ಭಾಗವಹಿಸುವಿಕೆಗೆ ಉತ್ತೇಜನ, ಗ್ರಾಪಂ ಬೇಡಿಕೆ ಆಧಾರಿತ ಉದ್ಯೋಗ ನೀಡುವ ವ್ಯವಸ್ಥೆ, ಕೆಲಸದ ಸ್ಥಳದಲ್ಲಿ ಸುರಕ್ಷತೆ ಒದಗಿಸುವಿಕೆ, ಶಾಶ್ವತ ಅಭಿವೃದ್ಧಿಗೆ ಆದ್ಯತೆ ನೀಡುವುದಾಗಿದೆ ಎಂದು ತಿಳಿಸಿದರು.

ಅಕುಶಲ ಕೂಲಿ ಕೆಲಸ ಮಾಡಲು ಆಸಕ್ತಿ ಇರುವವರು, ಸಂಬಂಧಿಸಿದ ಗ್ರಾಪಂ ಕೂಡಲೇ ಸಂಪರ್ಕಿಸಿ ಉದ್ಯೋಗಕ್ಕಾಗಿ ಬೇಡಿಕೆ ಸಲ್ಲಿಸಬೇಕು.

ಗ್ರಾಪಂ ಅಧಿಕಾರಿಗಳಿಗೆ ಅಗತ್ಯ ತರಬೇತಿ ನೀಡಲಾಗಿದ್ದು, ಅರ್ಹ ಫಲಾನುಭವಿಗೂ ಯೋಜನೆಯ ಸೌಲಭ್ಯ ತಲುಪುವಂತೆ ಕಾರ್ಯ ನಿರ್ವಹಿಸಲಾಗುವುದು ಎಂದರು.

ಜಿ.ಪಂ. ಉಪ ಕಾರ್ಯದರ್ಶಿ ಡಾ. ಪುನೀತ್ ಬಿ.ಆರ್. ಅವರು ಮಾತನಾಡಿ, ಜಿಲ್ಲೆಯ ಗ್ರಾಮ ಪಂಚಾಯತಿಗಳಲ್ಲಿ ಯೋಜನೆ ಅನುಷ್ಠಾನ ಪ್ರಾರಂಭಿಸಲಾಗಿದೆ ಎಂದು ತಿಳಿಸಿದರು.

ಗ್ರಾಮೀಣ ಎಲ್‌ಪಿಜಿ ವಿತರಕರಿಗೆ ಅನ್ಯಾಯ

ಹಾವೇರಿ: ಆಯಿಲ್ ಕಂಪನಿಯವರು ಹಾಗೂ ನಗರ ಪ್ರದೇಶಗಳಲ್ಲಿರುವ ಎಲ್ಪಿಜಿ ಸಿಲಿಂಡರ್ ವಿತರಕರು ಒಗ್ಗಟ್ಟಾಗಿ ಗ್ರಾಮೀಣ ಪ್ರದೇಶದ ಎಲ್ಪಿಜಿ ಗ್ರಾಹಕರಿಗೆ ಸಿಲಿಂಡರ್‌ಪೂರೈಸುತ್ತಿದ್ದು , ಈ ಅನ್ಯಾಯ ಸರಿಪಡಿಸುವಂತೆ ಆಗ್ರಹಿಸಿ ಗ್ರಾಮೀಣ ವಿತರಕರ ಒಕ್ಕೂಟದ ಪದಾಧಿಕಾರಿಗಳು ಆಹಾರ ಇಲಾಖೆ ಉಪನಿರ್ದೇಶಕರಿಗೆ ಮನವಿ ಸಲ್ಲಿಸಿದರು.

ಎಲ್ಪಿಜಿ ಗ್ರಾಮೀಣ ವಿತರಕರ ಒಕ್ಕೂಟದ ರಾಜ್ಯಾಧ್ಯಕ್ಷ ತಿಪ್ಪಣ್ಣ ವೈ.ಎನ್., ಮಾತನಾಡಿ, ಗ್ರಾಮೀಣ ಭಾಗದ ಅಡುಗೆ ಅನಿಲ ಗ್ರಾಹಕರಿಗೆ ಅನಕೂಲವಾಗುವಲ್ಲಿ ಕೇಂದ್ರ ಸರಕಾರ ಎಲ್ಪಿಜಿ ಗ್ರಾಮೀಣ ವಿತರಕರನ್ನು ನೇಮಿಸಿಕೊಂಡಿತ್ತು. ಆದರೆ ಅಧಿಕಾರಿಗಳು ವ್ಯವಸ್ಥೆಯ ನಿರ್ಲಕ್ಷ್ಯದಿಂದಾಗಿ ಗ್ರಾಮೀಣ ಗ್ಯಾಸ್ ವಿತರಕರು ಬೀದಿಗೆ ಬೀಳುವ ಸ್ಥಿತಿ ನಿರ್ಮಾಣವಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ನಿಯಮಗಳ ಪ್ರಕಾರ ಯಾವುದೇ ಅನಿಲ ವಿತರಕರು ತಮ್ಮ ಕೇಂದ್ರ ಸ್ಥಾನದಿಂದ 15 ಕಿಮೀ ವ್ಯಾಪ್ತಿಯಲ್ಲಿ ಮಾತ್ರ ಸಿಲಿಂಡರ್ ಪೂರೈಸಬೇಕು. ಆದರೆ ಗ್ರಾಮೀಣ ವಿತರಕರ ನೇಮಕಕ್ಕಿಂತ ಮುಂಚೆ ನಗರ ವಿತರಕರು 90-95 ಕಿಮೀ ದೂರದವರೆಗೆ ಸಿಲಿಂಡರ್ ಪೂರೈಸಬೇಕಿತ್ತು. ಇದರಿಂದ ಸಮಸ್ಯೆ ಎದುರಾಗಿದರಿಂದ ಕೇಂದ್ರ ಸರಕಾರ ಗ್ರಾಮೀಣ ಗ್ರಾಹಕರಿಗೆ ಉತ್ತಮ ಸೇವೆ ನೀಡಲು ಗ್ರಾಮೀಣ ಎಲ್ಪಿಜಿ ವಿತರಕರನ್ನು ನೇಮಕ ಮಾಡಿಕೊಂಡಿತ್ತು. ಆರಂಭದಲ್ಲಿ 50 ಲಕ್ಷದಿಂದ 2 ಕೋಟಿವರೆಗೆ ಹೂಡಿಕೆ ಹಣ ಪಡೆದು ಡೀಲರ್‌ಶಿಪ್ ನೀಡಿದೆ. ಇದೀಗ ಮತ್ತೆ ನಗರದ ಪ್ರಭಾವಿ ಗ್ಯಾಸ್ ವಿತರಕರು ಆಯಿಲ್ ಕಂಪನಿಗಳ ಜತೆಗೆ ಶಾಮೀಲಾಗಿ ಗ್ರಾಮೀಣ ಪ್ರದೇಶದಲ್ಲಿಯೂ ಅತಿಕ್ರಮಿಸಿ ಗ್ಯಾಸ್ ಸಿಲಿಂಡರ್ಗಳನ್ನು ಪೂರೈಸುತ್ತಿದ್ದಾರೆ. ನಮಗೆ ಅನ್ಯಾಯವಾಗುತ್ತಿದೆ ಎಂದರು.

ಈ ಬಗ್ಗೆ ಜನಪ್ರತಿನಿಧಿಗಳ ಗಮನಕ್ಕೂ ತಂದಿದ್ದು, ಸಂಬಂಧಿಸಿದ ಅಧಿಕಾರಿಗಳಿಗೆ ಪತ್ರ ಬರೆಯುವುದಾಗಿ ತಿಳಿಸಿದ್ದರು. ಆದರೂ ಸಹಿತ ಯಾವುದೇ ಪ್ರಯೋಜನವಾಗುತ್ತಿಲ್ಲ ಎಂದು ಅಳಲು ತೋಡಿಕೊಂಡರು.

ಈ ವೇಳೆ ಅಕ್ಕಿಆಲೂರಿನ ಡೀಲರ್‌ಸದಾಶಿವ ಬೆಲ್ಲದ, ಮೇಡ್ಲೇರಿಯ ದರ್ಶನ ಕಣವಿ, ಹಾಲಗಿಯ ಪ್ರದೀಪಗೌಡ ಪಾಟೀಲ, ತಿಳವಳ್ಳಿಯ ಶಿವಪುತ್ರಪ್ಪ ಗೌಳೇರ, ಹಂಸಭಾವಿಯ ವೀರೇಂದ್ರ ಶೆಟ್ಟರ, ಕಾಗಿನೆಲೆಯ ಭರತೇಶ ಚೂರಿ, ಸೌಭಾಗ್ಯ ಎಸ್.ಜಿ. ಇದ್ದರು.

ಎಲ್ಪಿಜಿ ಗ್ರಾಮೀಣ ವಿತರಕರ ಒಕ್ಕೂಟದವರು ಹಾವೇರಿಯಲ್ಲಿ ಆಹಾರ ಇಲಾಖೆ ಉಪನಿರ್ದೇಶಕರಿಗೆ ಮನವಿ ಸಲ್ಲಿಸಿದರು.

ನಾಯಕತ್ವ ಬೆಳೆಸುವ ಶಾಲಾ ಸಂಸತ್

ಧಾರವಾಡ: ವಿದ್ಯಾರ್ಥಿಗಳಲ್ಲಿ ನಾಯಕತ್ವದ ಗುಣ, ಶಿಸ್ತು, ಜವಾಬ್ದಾರಿಯುತ ಸೇವಾ ಮನೋಭಾವ ಹಾಗೂ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಬೆಳೆಸುವಲ್ಲಿ ಶಾಲಾ ಸಂಸತ್ತಿನ ಪಾತ್ರ ಮಹತ್ವದ್ದಾಗಿದೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಸುಜಾತ ತಿಮ್ಮಾಪುರ ಹೇಳಿದರು.

ದಕ್ಷಿಣ ಭಾರತ ಹಿಂದಿ ಪ್ರಚಾರ ಸಭೆಯ ಅಧೀನದ ರಾಜೀವ್ ಗಾಂಧಿ ಇಂಗ್ಲಿಷ್ ಮಾಧ್ಯಮ ಪ್ರೌಢಶಾಲೆಯಲ್ಲಿ ಆಯೋಜಿಸಲಾದ ಶಾಲಾ ಸಂಸತ್ ಉದ್ಘಾಟಿಸಿ ಮಾತನಾಡಿದರು.

ಶಾಲಾ ಸಂಸತ್ತಿನ ಮೂಲಕ ವಿದ್ಯಾರ್ಥಿಗಳು ಉತ್ತಮ ನಾಯಕತ್ವದ ಗುಣಗಳನ್ನು ರೂಢಿಸಿಕೊಂಡು ಸಮಾಜದ ಜವಾಬ್ದಾರಿಯುತ ನಾಗರಿಕರಾಗಿ ರೂಪುಗೊಳ್ಳಬೇಕು ಎಂದರು. ಮಾಜಿ ಮೇಯರ್‌ಈರೇಶ ಅಂಚಟಗೇರಿ ಮಾತನಾಡಿ, ವಿದ್ಯಾರ್ಥಿ ಜೀವನದಲ್ಲೇ ನಾಯಕತ್ವದ ಜವಾಬ್ದಾರಿಗಳನ್ನು ಅರ್ಥೈಸಿಕೊಂಡು ಶಿಸ್ತು, ಸೇವಾ ಮನೋಭಾವ ಹಾಗೂ ಸಾಮಾಜಿಕ ಕಾಳಜಿಯೊಂದಿಗೆ ಕಾರ್ಯನಿರ್ವಹಿಸುವುದು ಅಗತ್ಯ . ಇವು ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನಕ್ಕೆ ಪೂರಕವಾಗಿದ್ದು, ಭವಿಷ್ಯದ ಸಮರ್ಥ ನಾಯಕರನ್ನು ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ ಎಂದು ಹೇಳಿದರು.

ರಾಘವೇಂದ್ರ ತವನಪ್ಪನವರ, ಜಿ.ಜಿ. ಹಿರೇಮಠ, ಜಗದೀಶ ಮಳಗಿ, ಉಮಾ ಚವ್ಹಾಣ, ಎಸ್. ರಾಧಾಕೃಷ್ಣನ್, ವೀಣಾ ತುಪ್ಪದ, ಸುದಾ ಕಾಳೆ, ಶಾಲೆಯ ಶಿಕ್ಷಕ ವೃಂದ ಉಪಸ್ಥಿತರಿದ್ದರು.

ಕ್ಷೇತ್ರ ಶಿಕ್ಷಣಾಧಿಕಾರಿ ಸುಜಾತ ತಿಮ್ಮಾಪುರ ಅವರು ದಕ್ಷಿಣ ಭಾರತ ಹಿಂದಿ ಪ್ರಚಾರ ಸಭೆಯ ಅಧೀನದ ರಾಜೀವ್ ಗಾಂಧಿ ಪ್ರೌಢಶಾಲೆಯಲ್ಲಿ ಶಾಲಾ ಸಂಸತ್ ಉದ್ಘಾಟಿಸಿದರು.

ಶಾಲೆಗೆ ಅನಂತ್‌ಮೂರ್ತಿ ಹೆಗಡೆ ಫಿಲ್ಟರ್ ಕೊಡುಗೆ

ಸಿದ್ದಾಪುರ: ತಾಲೂಕಿನ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನೂತನವಾಗಿ ಕೊಠಡಿಗಳು ನಿರ್ಮಾಣಗೊಂಡ ಹಿನ್ನಲೆ ಗಣಹೋಮ, ವಾಸ್ತು ಶಾಂತಿ ಪೂಜೆ ಮತ್ತು ಶ್ರೀ ಸತ್ಯನಾರಾಯಣ ಪೂಜಾ ಕಾರ್ಯಕ್ರಮಗಳು ವಿಜೃಂಭಣೆಯಿಂದ ನಡೆದವು. ಪೂಜಾ ಕಾರ್ಯಕ್ರಮದಲ್ಲಿ ಚರಿಟೇಬಲ್ ಟ್ರಸ್ಟ್ ಅಧ್ಯಕ್ಷ ಅನಂತ್ ಮೂರ್ತಿ ಹೆಗಡೆ ಪಾಲ್ಗೊಂಡು ಪ್ರಸಾದ ಸ್ವೀಕರಿಸಿದರು. ಅವರು ಇತ್ತೀಚಿಗೆ ಶಾಲೆಗೆ ಫಿಲ್ಟರ್‌ಕೊಡುಗೆ ನೀಡಿದ ಹಿನ್ನಲೆಯಲ್ಲಿ ಇದೇ ಸಂದರ್ಭದಲ್ಲಿ ಅವರನ್ನು ಎಸ್ ಡಿಎಂಸಿ ಹಾಗೂ ಗ್ರಾಮಸ್ಥರ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು.

ಈ ವೇಳೆ ಗೌರವ ಸ್ವೀಕರಿಸಿ ಮಾತನಾಡಿದ ಅವರು ಶಾಲೆ ಮಕ್ಕಳು ಸುಂದರ ವಾತಾವರಣದಲ್ಲಿ ಉತ್ತಮ ಆಹಾರ ಮತ್ತು ನೀರು ಸೇವನೆಯಿಂದ ಸದೃಡ ದೇಹವನ್ನು ನಿರ್ಮಿಸಿಕೊಳ್ಳಬೇಕು. ದೇಶಕ್ಕೆ ಸಂಪತ್ತಾಗಿ ಬೆಳೆಯಬೇಕಾದ ಮಕ್ಕಳು ಬಾಲ್ಯದಲ್ಲಿ ಉತ್ತಮ ದೇಹ ನಿರ್ಮಿಸಿಕೊಂಡರೆ ಸಾಧನೆ ಸಾಧ್ಯ. ಹಾಗಾಗಿ ನಾವು 150 ಹೆಚ್ಚು ಶಾಲೆಗಳಿಗೆ ಈಗಾಗಲೇ ವಾಟರ್‌ಫಿಲ್ಟರ್‌ನೀಡಿದ್ದೇವೆ ಮತ್ತು ಕೇವಲ ಶಾಲೆಗೆ ಅಷ್ಟೇ ಅಲ್ಲದೆ ಬೇರೆ ಬೇರೆ ಕ್ಷೇತ್ರಗಳಿಗೆ ದಾನ ನೀಡುತ್ತಾ ಬಂದಿದ್ದೇವೆ. ಪುನೀತ್ ರಾಜಕುಮಾರ್‌ಅವರು ಮನುಷ್ಯ ಜೀವಿತ ಅವಧಿಯಲ್ಲಿ ಒಳ್ಳೆಯದನ್ನು ಮಾಡಿ ನಾಲ್ಕು ಜನರಿಗೆ ಸಹಾಯ ಆಗಬೇಕು ಎನ್ನುವ ಮಾರ್ಗದರ್ಶನ ನೀಡಿ ಹೋಗಿದ್ದಾರೆ. ಅವರಂತೆ ಆದರ್ಶ ಬದುಕನ್ನು ನಾವು ನಡೆಸಬೇಕು ಎಂದರು. ಈ ಸಂದರ್ಭದಲ್ಲಿ ಎಸ್ ಡಿ ಎಂಸಿ ಅಧ್ಯಕ್ಷರು, ಉಪಾಧ್ಯಕ್ಷರು, ಪದಾಧಿಕಾರಿಗಳು ಹಾಗೂ ಪಾಲಕ, ಪೋಷಕರು, ಗ್ರಾಮಸ್ಥರು ಉಪಸ್ಥಿತರಿದ್ದರು.

ತಾಲೂಕಿನ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಚರಿಟೇಬಲ್ ಟ್ರಸ್ಟ್ ಅಧ್ಯಕ್ಷ ಅನಂತ್ ಮೂರ್ತಿ ಹೆಗಡೆ ಅವರು ಫಿಲ್ಟರ್‌ಕೊಡುಗೆ ನೀಡಿದರು.

ಶ್ರೀ ರಾಮನ ದೇಣಿಗೆ ಲೂಟಿ ಸರಕಾರ ವಿಸರ್ಜನೆ ಆಗಲಿ

ಹುಬ್ಬಳ್ಳಿ : ಅಯೋಧ್ಯೆ ಶ್ರೀ ರಾಮಮಂದಿರದ ನೂರಾರು ಕೋಟಿ ರೂ. ದೇಣಿಗೆ ಲೂಟಿ, ಭಕ್ತರು ನೀಡಿದ ಚಿನ್ನಾಭರಣಗಳ ಕಳ್ಳತನದ ನೈತಿಕ ಹೊಣೆ ಹೊತ್ತು ಕೇಂದ್ರ ಸರಕಾರ ವಿಸರ್ಜನೆಗೊಳ್ಳಬೇಕು ಎಂದು ಪಾಲಿಕೆ ಮಾಜಿ ಸದಸ್ಯ ಶಿವಾನಂದ ಮುತ್ತಣ್ಣವರ ಆಗ್ರಹಿಸಿದರು. ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಹಗರಣದ ಹಿಂದೆ ದೇಶದ ಪ್ರಮುಖ ವ್ಯಕ್ತಿಗಳ ಕೈವಾಡವಿದೆ. ಇದರ ಹೊಣೆಯನ್ನು ಕೇಂದ್ರದ ಬಿಜೆಪಿ ಸರಕಾರವೇ ಹೊರಬೇಕು.

ತಕ್ಷಣವೇ ರಾಷ್ಟ್ರಪತಿಗಳು ಮಧ್ಯಪ್ರವೇಶಿಸಿ ಕೇಂದ್ರ ಸರಕಾರವನ್ನು ವಿಸರ್ಜಿಸಿ, ದೇಶದಲ್ಲಿ ರಾಷ್ಟ್ರಪತಿ ಆಡಳಿತ ಜಾರಿಗೊಳಿಸಿ ಹೊಸದಾಗಿ ಲೋಕಸಭಾ ಚುನಾವಣೆ ಘೋಷಿಸಬೇಕು ಎಂದು ಒತ್ತಾಯಿಸಿದರು. ರಾಮಮಂದಿರದ ಟ್ರಸ್ಟಿಗಳಾದ ಚಂಪತ್ ರಾಯ್, ಅನಿಲ್ ಮಿಶ್ರಾ, ಗೋವಿಂದ ದೇವಗಿರಿ ಹಾಗೂ ಕರ್ನಾಟಕದ ಗೋಪಾಲರಾವ್ ಅವರನ್ನು ಉತ್ತರ ಪ್ರದೇಶದ ಪೊಲೀಸರು ತಕ್ಷಣವೇ ಬಂಧಿಸಬೇಕು ಎಂದರು.

ನರೇಗಲ್ ಕೃತ್ಯ: ಕಠಿಣ ಕ್ರಮ

ಹಾನಗಲ್: ತಾಲೂಕಿನ ನರೇಗಲ್ ಗ್ರಾಮದಲ್ಲಿ ಕಾರ ಹುಣ್ಣಿಮೆ ಸಮಯದಲ್ಲಿ ನಡೆದ ಅಹಿತಕರ ಘಟನೆ ಅತ್ಯಂತ ದುಃಖಕರ ಹಾಗೂ ಖಂಡನೀಯ. ಯಾವುದೇ ಕಾರಣಕ್ಕೂ ಹಿಂಸೆಗೆ ಸಮಾಜದಲ್ಲಿ ಸ್ಥಾನವಿಲ್ಲ. ಕಾನೂನನ್ನು ಕೈಗೆತ್ತಿಕೊಂಡು ಹಲ್ಲೆ ನಡೆಸಿದವರ ವಿರುದ್ಧ ಸರಕಾರ ಹಾಗೂ ಪೊಲೀಸ್ ಇಲಾಖೆ ಕಾನೂನು ಪ್ರಕಾರ ಕಠಿಣ ಕ್ರಮ ಕೈಗೊಳ್ಳಲಿವೆ ಎಂದು ಶಾಸಕ ಶ್ರೀನಿವಾಸ ಮಾನೆ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಮಾಧ್ಯಮ ಹೇಳಿಕೆ ಬಿಡುಗಡೆ ಮಾಡಿರುವ ಅವರು, ಮೊದಲಿನಿಂದಲೂ ಗ್ರಾಮೀಣ ಭಾಗಗಳಲ್ಲಿ ಹಲವು ವರ್ಷಗಳಿಂದ ವಿವಿಧ ಧರ್ಮಗಳ ಜನರು ಶಾಂತಿ, ಸೌಹಾರ್ದತೆ, ಸಹಬಾಳ್ವೆ ಮತ್ತು ಗೌರವದೊಂದಿಗೆ ಬದುಕುತ್ತಿದ್ದಾರೆ. ಹಬ್ಬ, ಹರಿದಿನ, ಇತರ ಆಚರಣೆಗಳ ಸಂದರ್ಭದಲ್ಲಿ ಪರಸ್ಪರ ಗೌರವ ಮತ್ತು ಸಂಯಮ ಪಾಲಿಸುವಂತಹ ಸ್ಥಳೀಯ ಸಂಪ್ರದಾಯಗಳನ್ನು ರೂಢಿಸಿಕೊಂಡಿದ್ದು, ಅದರಿಂದಲೇ ಇಂದಿಗೂ ಸೌಹಾರ್ದತೆ ಉಳಿದುಕೊಂಡಿದೆ. ಇತ್ತೀಚಿನ ಪೀಳಿಗೆ ಸಹ ಇಂತಹ ಉತ್ತಮ ಸಂಪ್ರದಾಯಗಳನ್ನು ಗೌರವಿಸಿ, ಹಿರಿಯರ ಮಾರ್ಗದರ್ಶನ, ಆದರ್ಶ ಪಾಲಿಸಿದರೆ ಅಹಿತಕರ ಘಟನೆಗಳಿಗೆ ಕಡಿವಾಣ ಹಾಕುವುದು ಸಾಧ್ಯವಿದೆ ಎಂದು ಶ್ರೀನಿವಾಸ ಮಾನೆ ಅಭಿಪ್ರಾಯಪಟ್ಟಿದ್ದಾರೆ.

ನರೇಗಲ್ ಘಟನೆಯನ್ನು ಈಗಾಗಲೇ ಎಲ್ಲಾ ಸಮುದಾಯಗಳ ಜನರು, ಜಾತಿ-ಧರ್ಮ ಮೀರಿ ಖಂಡಿಸಿದ್ದಾರೆ. ಸದ್ಯ ಗ್ರಾಮದಲ್ಲಿ ಪರಿಸ್ಥಿತಿ ಶಾಂತಿಯುತವಾಗಿದೆ. ಈ ಸಂದರ್ಭದಲ್ಲಿ ಹೊರಗಿನವರು ಬಂದು ಘಟನೆಯನ್ನು ರಾಜಕೀಯಕ್ಕೆ ಬಳಸಿಕೊಳ್ಳದೇ ಗ್ರಾಮದ ಹಿರಿಯರ ವಿವೇಚನೆಗೆ ಬಿಟ್ಟರೆ ಸೌಹಾರ್ದತೆ ನೆಲೆಸಲು ಸಾಧ್ಯವಿದೆ. ಪೊಲೀಸರು ತಮ್ಮ ಕೆಲಸ ಮಾಡಲಿದ್ದಾರೆ. ಹಾಗಾಗಿ ಶಾಂತಿ ಕದಡದೇ ಪ್ರೀತಿ, ವಿಶ್ವಾಸದಿಂದ ಬದುಕಲು ಸಂಕಲ್ಪಿಸಬೇಕಿದೆ ಎಂದು ಅವರು ಮನವಿ ಮಾಡಿದ್ದಾರೆ.

ಸ್ವಾತಂತ್ರ್ಯದ ಓಟ ರಂಗಾಯಣ ನಾಟಕ ನಾಳೆ

ವಿಶ್ವವಾಣಿ ಸುದ್ದಿಮನೆ, ಧಾರವಾಡ

ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಸಾಹಿತಿ ಬೊಳುವಾರು ಮಹಮ್ಮದ್ ಕುಂಞ ಅವರ ಕಾದಂಬರಿ ಆಧಾರಿತ, ರಂಗಕರ್ಮಿ ನಟರಾಜ್ ಹೊನ್ನವಳ್ಳಿ ನಿರ್ದೇಶನದ, ಶಿವಮೊಗ್ಗದ ರಂಗಾಯಣದಿಂದ ಸಿದ್ಧಗೊಂಡು ಪ್ರಸ್ತುತಪಡಿಸಲಿರುವ 'ಸ್ವಾತಂತ್ರ್ಯದ ಓಟ' ನಾಟಕವನ್ನು ಜು. 5 ರಂದು ಸಂಜೆ 5:30 ಗಂಟೆಗೆ ಕರ್ನಾಟಕ ವಿದ್ಯಾವರ್ಧಕ ಸಂಘದ ನಾಡೋಜ ಡಾ. ಪಾಟೀಲ ಪುಟ್ಟಪ್ಪ ಸಭಾ ಭವನದಲ್ಲಿ ಪ್ರದರ್ಶಿಸಲಾಗುವುದು ಎಂದು ರಂಗಾಯಣ ನಿರ್ದೇಶಕ ಝುಕೀರ ನದಾಫ ಹೇಳಿದರು.

ನಗರದ ರಂಗಾಯಣ ಸುವರ್ಣ ಸಾಂಸ್ಕೃತಿಕ ಸಮುಚ್ಚಯ ಸಭಾಭವನದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ದೇಶ ವಿಭಜನೆಯ ಸಂದರ್ಭದಲ್ಲಿ ಎಲ್ಲವನ್ನೂ ಕಳೆದುಕೊಂಡ ಜನರ ಬದುಕು, ಅನುಮಾನ ಮತ್ತು ಅಸಹನೆಯ ನಡುವೆಯೂ ಮಾನವೀಯ ಮೌಲ್ಯಗಳನ್ನು ಉಳಿಸಿಕೊಂಡ ಚಾಂದ್ ಅಲಿ ಎಂಬ ಯುವಕನ ಜೀವನಗಾಥೆಯನ್ನು ನಾಟಕ ಕಟ್ಟಿಕೊಡುತ್ತದೆ. ಪಾಕಿಸ್ತಾನದಿಂದ ಭಾರತಕ್ಕೆ ಬಂದು ತನ್ನ ಗುರುತನ್ನು ಮುಚ್ಚಿಟ್ಟುಕೊಂಡು ಬದುಕಬೇಕಾದ ಅನಿವಾರ್ಯತೆ. ಮುತ್ತುಪ್ಪಾಡಿಯಲ್ಲಿ ಮಾನವೀಯ ಸಂಬಂಧಗಳ ಆಶ್ರಯ ಪಡೆದ ಅವನ ಬದುಕಿನ ಅತಂತ್ರತೆಯನ್ನು ನಾಟಕ ಪರಿಣಾಮಕಾರಿಯಾಗಿ ಚಿತ್ರಿಸುತ್ತದೆ ಎಂದು ತಿಳಿಸಿದರು.

ರಂಗಾಯಣ ನಿರ್ದೇಶಕ ಝುಕೀರ ನದಾಫ ನಗರದ ರಂಗಾಯಣ ಸಭಾ ಭವನದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ಸ್ವಾತಂತ್ರ್ಯದ ನಿಜವಾದ ಅರ್ಥವನ್ನು ಮಾನವೀಯ ಸಂಬಂಧಗಳ ಮೂಲಕ ಅನಾವರಣಗೊಳಿಸುವ ಈ ನಾಟಕ ಜಾತಿ, ಧರ್ಮಗಳನ್ನು ಮೀರಿ ಮನುಷ್ಯತ್ವವೇ ಶ್ರೇಷ್ಠ ಎಂಬ ಸಂದೇಶ ಸಾರುತ್ತದೆ. ವಾಘಾ ಗಡಿಯಿಂದ ಆರಂಭವಾಗಿ ಕರಾಚಿ, ಲಾಹೋರ್, ದೆಹಲಿ, ಮುತ್ತುಪ್ಪಾಡಿ, ಕ್ಯಾಲಿಫೋರ್ನಿಯಾ ಹಾಗೂ ಬರ್ಲಿನ್‌ವರೆಗೆ ಸಾಗುವ ಕಥಾನಕ ದೇಶ ವಿಭಜನೆಯಿಂದ ಸುವರ್ಣ ಸ್ವಾತಂತ್ರ್ಯೋತ್ಸವದವರೆಗಿನ ಭಾರತದ ಸಾಮಾಜಿಕ, ಧಾರ್ಮಿಕ ಹಾಗೂ ಆರ್ಥಿಕ ಬದುಕಿನ ಅನುಭವಗಳನ್ನು ಪ್ರೇಕ್ಷಕರ ಮುಂದೆ ತೆರೆದಿಡುತ್ತದೆ ಎಂದು ಹೇಳಿದರು.

ಸಮಾಜದಲ್ಲಿರುವ ಅಪನಂಬಿಕೆ ಹಾಗೂ ಸಂಘರ್ಷಗಳನ್ನು ಕಡಿಮೆ ಮಾಡಿ ಸಾಮರಸ್ಯದ ಸಂದೇಶ ಸಾರುವ ಪ್ರಯತ್ನವೇ 'ಸ್ವಾತಂತ್ರ್ಯದ ಓಟ' ನಾಟಕದ ಪ್ರಮುಖ ವೈಶಿಷ್ಟ್ಯ . ನಾಟಕ ವೀಕ್ಷಣೆಗೆ 100 ರು. ಪ್ರವೇಶ ದರ ನಿಗದಿಪಡಿಸಲಾಗಿದೆ ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ರಂಗಾಯಣ ಆಡಳಿತಾಧಿಕಾರಿ ಶಶಿಕಲಾ ಹುಡೇದ ಇದ್ದರು.

ಮನುಷ್ಯತ್ವದ ಸಂದೇಶ ಸಾರುವ ನಾಟಕ ಇದು

ಸ್ವಾತಂತ್ರ್ಯದ ನಿಜವಾದ ಅರ್ಥವನ್ನು ಮಾನವೀಯ ಸಂಬಂಧಗಳ ಮೂಲಕ ಅನಾವರಣಗೊಳಿಸುವ ಈ ನಾಟಕ ಜಾತಿ, ಧರ್ಮಗಳನ್ನು ಮೀರಿ ಮನುಷ್ಯತ್ವವೇ ಶ್ರೇಷ್ಠ ಎಂಬ ಸಂದೇಶ ಸಾರುತ್ತದೆ. ದೇಶ ವಿಭಜನೆಯಿಂದ ಸುವರ್ಣ ಸ್ವಾತಂತ್ರ್ಯೋತ್ಸವದವರೆಗಿನ ಭಾರತದ ಸಾಮಾಜಿಕ, ಧಾರ್ಮಿಕ ಹಾಗೂ ಆರ್ಥಿಕ ಬದುಕಿನ ಅನುಭವಗಳನ್ನು ಪ್ರೇಕ್ಷಕರ ಮುಂದೆ ತೆರೆದಿಡುತ್ತದೆ.

ಸಮಾಚಾರ ಸಣ್ಣದಲ್ಲ

ಖಾಲಿ ಹುದ್ದೆ ಭರ್ತಿಗೆ ನೇರ ಸಂದರ್ಶನ ಇಂದು

ಹೊಸಪೇಟೆ: ಇದೇ ಜುಲೈ 4 ರಂದು ಬೆಳಗ್ಗೆ 10 ರಿಂದ ಮಧ್ಯಾಹ್ನ 2 ಗಂಟೆಯವರೆಗೆ ಇಂಡಸ್ಇಂಡ್ ಬ್ಯಾಂಕ್ನಲ್ಲಿ ಖಾಲಿ ಇರುವ ಹುದ್ದೆಗಳಿಗೆ ನೇರ ಸಂದರ್ಶನ ಆಯೋಜಿಸಲಾಗಿದೆ. ಈ ನೇರ ಸಂದರ್ಶನದಲ್ಲಿ ಭಾಗವಹಿಸಲು ಯಾವುದೇ ಶುಲ್ಕ ಇರುವುದಿಲ್ಲ. ಸಂದರ್ಶನದಲ್ಲಿ ಪುರುಷರು ಮತ್ತು ಮಹಿಳೆಯರು ಭಾಗವಹಿಸಬಹುದು. ಪಿಯುಸಿ ಮತ್ತು ಪದವಿ ವಿದ್ಯಾರ್ಹತೆಯೊಂದಿಗೆ ದ್ವಿಚಕ್ರ ವಾಹನ ಕಡ್ಡಾಯವಾಗಿ ಹೊಂದಿರುವ ಅಭ್ಯರ್ಥಿಗಳು ಸಂದರ್ಶನದಲ್ಲಿ ಭಾಗವಹಿಸಬಹುದು. ಅಭ್ಯರ್ಥಿಗಳು ತಮ್ಮ ಆಧಾರ್‌ಕಾರ್ಡ್ ಪ್ರತಿ, ಸ್ವ-ವಿವರ ಪ್ರತಿಗಳೊಂದಿಗೆ ಎಂ.ಪಿ ಪ್ರಕಾಶ್ ನಗರ, 9ನೇ ವಾರ್ಡ್‌ನ್ನಲ್ಲಿನ ಭಾರತ್ ಫೈನಾನ್ಸಿಯಲ್ ಇನ್‌ಕ್ಲೂಶನ್ ಲಿಮಿಟೆಡ್, ಡಿ ಬ್ಯಾಂಚ್ ಕಚೇರಿಗೆ ಭಾಗವಹಿಸಬಹುದು. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಉದ್ಯೋಗ ವಿನಿಮಯ ಕಛೇರಿ ದೂರವಾಣಿ ಸಂಖ್ಯೆ 7619207762, 9663263086, 7676774293, 6360408094ಗೆ ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಗೃಹಜ್ಯೋತಿ ಸ್ಥಾವರಗಳ ದಾಖಲಾತಿ ಪರಿಶೀಲನೆ

ಹೊಸಪೇಟೆ: ನಗರ ಉಪವಿಭಾಗ-2ರ ವ್ಯಾಪ್ತಿಗೆ ಒಳಪಡುವ ಅರವಿಂದ್ ನಗರ, ಮೆಹಬೂಬ್ ನಗರ್, ಕಂಚಗಾರಪೇಟೆ, ಹಂಪಿರೋಡ್, ಜಂಬುನಾಥ್ ರೋಡ್, ಎಸ್.ಎಲ್.ಚೌಕಿ, ಗಾಂದಿ ಚೌಕ್, ಪೋಲಿಸ್ ಕ್ವಾಟರ್ಸ್, ವಾಲ್ಮೀಕಿ ಸರ್ಕಲ್, ಆಕಾಶವಾಣಿ, ರಾಣಿಪೇಟೆ, ಉಕ್ಕಡ್ಕೇರಿ, ತಳವಾರ್ಕೇರಿ, ಮ್ಯಾಸ್ಕೇರಿ, ಎಸ್.ಆರ್‌ನಗರ, ರಾಮ ಟಾಕೀಸ್, ಕೊಂಡನಾಯಕನ ಹಳ್ಳಿ, ಎಂ.ಪಿ.ಪ್ರಕಾಶ್ ನಗರ, ಸಂಕ್ಲಾಪುರ, ಕಾರಿಗನೂರು, ಮುದ್ಲಾಪುರ, ಅನಂತಶಯನಗುಡಿ, ಬಳ್ಳಾರಿ ರೋಡ್, ಬಸ್ಡಿಪೋ ಏರಿಯಾ, ಅಜಾದ್ ನಗರ, ಜೆ.ಪಿ ನಗರ, ಪಟೇಲ್ ನಗರ ಶಾಖೆಗಳಿಗೆ ಒಳಪಡುವ ಗೃಹಜ್ಯೋತಿ ಸ್ಥಾವರಗಳ ದಾಖಲಾತಿ ಪರಿಶೀಲಿಸಲಾಗುವುದು. ಈ ಹಿನ್ನೆಲೆಯಲ್ಲಿ ಜೆಸ್ಕಾಂ ಇಲಾಖೆ ಸಿಬ್ಬಂದಿ ತಮ್ಮ ಮನೆಗೆ ಬೇಟಿ ನೀಡಿದಾಗ ಆಧಾರ್‌ಕಾರ್ಡ್, ವೋಟರ್‌ಐಡಿ, ರೇಷನ್ ಕಾರ್ಡ್, ಪಾನ್ ಕಾರ್ಡ್, ಜಾತಿ ಪ್ರಮಾಣಪತ್ರ ಹಾಗೂ ಪಾಸ್ ಪೋರ್ಟ್ ಸೈಜ್ ಪೋಟೋ ದಾಖಲೆಗಳನ್ನು ನೀಡಿ ಸಹಕರಿಸುವಂತೆ ಜೆಸ್ಕಾಂ ನಗರ ಉಪವಿಭಾಗ-2 ರ ಕಾರ್ಯ ಮತ್ತು ಪಾಲನಾ ಇಂಜಿನಿಯರ್‌ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮದ್ಯ ಮಾರಾಟ ನಿಷೇಧ: ಡಿಸಿ

ಹೊಸಪೇಟೆ: ಹೊಸಪೇಟೆ ಉಪವಿಭಾಗದ ಒಟ್ಟು 75 ಸ್ಥಳಗಳಲ್ಲಿ ಇದೇ ಜುಲೈ 5ರವರಿಗೆ ಛೋಟಾ ಮೊಹರಂ ಪಂಜಾಗಳನ್ನು ಕೂಡಿಸಲಾಗುತ್ತಿದ್ದು, ಛೋಟಾ ಮೊಹರಂ ಹಬ್ಬ ಶಾಂತಿಯುತವಾಗಿ ಯಾವುದೇ ರೀತಿಯ ಅಹಿತಕರ ಘಟನೆಗಳು ಜರುಗದಂತೆ ಮುಂಜಾಗ್ರತ ಕ್ರಮವಾಗಿ ಜುಲೈ 4 ರಂದು ಬೆಳಗ್ಗೆ 6 ರಿಂದ ಜುಲೈ 5ರ ಬೆಳಗ್ಗೆ 6 ಗಂಟೆಯವರೆಗೆ ಮದ್ಯ ಮಾರಾಟ ಮತ್ತು ಸಾಗಣೆ ಮಾಡದಂತೆ ಹಾಗೂ ಮದ್ಯದಂಗಡಿ, ಬಾರ್‌ಅಂಡ್ ರೆಸ್ಟೋರೆಂಟ್ ಮುಚ್ಚುವಂತೆ ಜಿಲ್ಲಾಧಿಕಾರಿ ಕವಿತಾ ಎಸ್ ಮನ್ನಿಕೇರಿ ಅವರು ನಿಷೇಧಾಜ್ಞೆ ಜಾರಿಗೊಳಿಸಿ ಆದೇಶಿಸಿದ್ದಾರೆ.

ಮಳೆ ಬಾರದೇ ಕೃಷಿ ಚಟುವಟಿಕೆ ಕುಂಠಿತ

ಹೂವಿನಹಡಗಲಿ: ಜುಲೈ ಆರಂಭವಾದರೂ ತಾಲೂಕಿನಲ್ಲಿ ಸಮರ್ಪಕ ಮಳೆಯಾಗಿಲ್ಲ. ವಾಡಿಕೆಗಿಂತ ಶೇ52ರಷ್ಟು ಮಳೆ ಕೊರತೆ ಉಂಟಾಗಿ, ಕೃಷಿ ಚಟುವಟಿಕೆಗಳು ಕುಂಠಿತಗೊಂಡಿವೆ. ಆರಂಭಿಕ ಮುಂಗಾರಿನಲ್ಲೇ ಬರದ ಛಾಯೆ ಆವರಿಸಿದಂತೆ ಕಾಣಿಸುತ್ತದೆ. ಮೇ ಅಂತ್ಯ ಹಾಗೂ ಜೂನ್ ಮೊದಲ ವಾರದಲ್ಲಿ ಅಲ್ಪ ಮಳೆ ಬಂದು ಭೂಮಿ ಹದಗೊಳಿಸಿಕೊಂಡಿದ್ದ ರೈತರು ಜೋಳ, ಮೆಕ್ಕೆಜೋಳ, ಸೂರ್ಯಕಾಂತಿ, ತೊಗರಿ ಬಿತ್ತನೆ ಮಾಡಿದ್ದಾರೆ. ಒಂದು ತಿಂಗಳಾದರೂ ಮಳೆ ಬಾರದೇ ಇರುವುದರಿಂದ ಬೀಜದಿಂದ ಮೊಳಕೆಯೊಡೆದ ಸಸಿ ಬಿಸಿಲ ತಾಪಕ್ಕೆ ಬಿತ್ತನೆಯಾದ ಹೊಲಗಳಲ್ಲಿ ಎಳೆಯ ಪೈರು ಒಣಗಲು ಆರಂಭಿಸಿವೆ. ಒಂದು ವಾರದೊಳಗೆ ಮಳೆ ಬಾರದಿದ್ದರೆ ಬಿತ್ತನೆಯ ಕ್ಷೇತ್ರದ ಎಲ್ಲ ಬೆಳೆ ಸಂಪೂರ್ಣ ಹಾನಿಗೀಡಾಗಲಿದೆ ಎಂದು ರೈತರು ಆತಂಕದಲ್ಲಿದ್ದಾರೆ. ತಾಲೂಕಿನಲ್ಲಿ ಜೂನ್ 20ರವರೆಗೆ 148ಮಿ.ಮೀ. ವಾಡಿಕೆ ಮಳೆಯಾಗಬೇಕಿತ್ತು. 78ಮಿ.ಮೀ. ಮಾತ್ರ ಮಳೆಯಾಗಿದ್ದು, ಶೇ52ರಷ್ಟು ಮಳೆ ಕೊರತೆಯಾಗಿದೆ.

ವಿರಾಮ
ಪ್ರತಿ ಭಾನುವಾರ

{ಶೋಭಾ ಕರಂದ್ಲಾಜೆ} ಕೇಂದ್ರ ಸಚಿವೆ

ಮಸೀದಿ ಹಾಗೂ ಸಮುದಾಯ ಭವನಗಳಲ್ಲಿ ನಿಯಮ ಬಾಹಿರವಾಗಿ ಎಸ್‌ಐಆರ್ ಪ್ರಕ್ರಿಯೆ ನಡೆಯುತ್ತಿದೆ . 2028ರ ಚುನಾವಣೆ ಗೆಲ್ಲಲು ಬಾಂಗ್ಲಾದೇಶಿಯರ ಸಕ್ರಮಕ್ಕೆ ಕಾಂಗ್ರೆಸ್ ಸರಕಾರ ಸಂಚು ಮಾಡಿದೆ. ಮುಖ್ಯಮಂತ್ರಿಗಳೇ ನಿಮ್ಮ ಮೂಗಿನ ನೇರದಲ್ಲೇ ಅಧಿಕಾರಿಗಳು ಅಕ್ರಮ ಮತದಾರರನ್ನು ಪಟ್ಟಿಗೆ ಸೇರಿಸುತ್ತಿದ್ದಾರೆ. ಪಶ್ಚಿಮ ಬಂಗಾಳ ಮತ್ತು ಬಿಹಾರದಲ್ಲಿ ಎಸ್‌ಐಆರ್ ಪ್ರಕ್ರಿಯೆಯ ಬಳಿಕ ಬಾಂಗ್ಲಾದೇಶಿಯರನ್ನು ಓಡಿಸಿದ ಮೇಲೆ ಅವರೆಲ್ಲಾ ಕರ್ನಾಟಕಕ್ಕೆ ವಲಸೆ ಬಂದಿದ್ದಾರೆ.

ಪ್ರಕೃತಿ ವಿಕೋಪ ನಿರ್ವಹಣೆ ಮೇಲುಸ್ತುವಾರಿ ಸಭೆ | ಸಚಿವ ಡಾ.ಶರಣಪ್ರಕಾಶ ಪಾಟೀಲ್ ಸೂಚನೆ

ಮಳೆ ಕೊರತೆ: ಬರ ನಿರ್ವಹಣೆಗೆ ಸಿದ್ಧವಿರಿ

ಕೊಪ್ಪಳ: ರಾಜ್ಯಾದ್ಯಂತ ಮುಂಗಾರು ಮಳೆಯ ಕೊರತೆಯ ಮುನ್ಸೂಚನೆ ಕಾಣುತ್ತಿದೆ. ಇದರಿಂದ ಪರಿಸ್ಥಿತಿ ಎದುರಿಸಲು ಅಧಿಕಾರಿಗಳು ಸಿದ್ಧರಾಗಬೇಕು. ಕುಡಿವ ನೀರಿನ ಜೊತೆಗೆ ಜನರಿಗೆ ಉದ್ಯೋಗ ಒದಗಿಸುವ ಕ್ರಿಯಾ ಯೋಜನೆ ಸಿದ್ಧಪಡಿಸಬೇಕು ಎಂದು ವೈದ್ಯಕೀಯ ಶಿಕ್ಷಣ ಸಚಿವ ಹಾಗೂ ಕೊಪ್ಪಳ ಜಿಲ್ಲೆ ಪ್ರಕೃತಿ ವಿಕೋಪ ನಿರ್ವಹಣೆ ಮೇಲುಸ್ತುವಾರಿ ಸಚಿವ ಡಾ. ಶರಣಪ್ರಕಾಶ ಆರ್.ಪಾಟೀಲ್ ಸೂಚನೆ ನೀಡಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಆಯೋಜಿಸಿದ್ದ ಜಿಲ್ಲೆಯ ಪ್ರಕೃತಿ ವಿಕೋಪ ನಿರ್ವಹಣೆಯ ಮೇಲುಸ್ತುವಾರಿ ಸಭೆಯ ಅಧ್ಯಕ್ಷತೆ ವಹಿಸಿ ಶುಕ್ರವಾರ ಮಾತನಾಡಿ, ಮಳೆ ಕೊರತೆಯಿಂದ ಕೃಷಿ ಚಟುವಟಿಕೆ ಕಡಿಮೆಯಾದರೆ, ಸರಕಾರ ಉದ್ಯೋಗ ಸೃಜಿಸುವುದು ಅನಿವಾರ್ಯವಾಗಲಿದೆ. ಆದ್ದರಿಂದ ಗ್ರಾಪಂ ವ್ಯಾಪ್ತಿಯಲ್ಲಿ ಅಗತ್ಯ ಇರುವ ಕಾಮಗಾರಿ ಬಗ್ಗೆ ವಿಬಿ ಜಿ ರಾಮ್ ಜಿ ಯೋಜನೆಯಡಿ ಮಾನವ ದಿನ ಸೃಜಿಸಲು ಕ್ರಿಯಾ ಯೋಜನೆ ರೂಪಿಸಬೇಕು. ಜಾಬ್ ಕಾರ್ಡ್ ವಿತರಣೆಗೆ ಕ್ರಮ ವಹಿಸಬೇಕು. ಬೆಳೆ ವಿಮೆ ಯೋಜನೆಗೆ ಜಿಲ್ಲೆಯ ಎಲ್ಲ ಅರ್ಹ ರೈತರು ನೋಂದಣಿ ಮಾಡಿಕೊಳ್ಳುವಂತೆ ಕೃಷಿ ಇಲಾಖೆ ಅಧಿಕಾರಿಗಳು ಜಾಗೃತಿ ಮೂಡಿಸಬೇಕು ಎಂದು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಇವರೆಗೆ ವಾಡಿಕೆ ಮಳೆಯಾಗಿಲ್ಲ. ಇದರಿಂದ ಬಿತ್ತನೆಗೆ ಅಡಚಣೆ ಉಂಟಾಗಿದೆ. ಮುಂದೆ ಕುಡಿವ ನೀರಿನ ಸಮಸ್ಯೆ ಉಲ್ಬಣಿಸುವ ಸಾಧ್ಯತೆ ಇದೆ. ಆದ್ದರಿಂದ ಸರಕಾರದ ಅನುದಾನ ಬಳಸಿಕೊಂಡು ಅಗತ್ಯ ಇರುವ ಕಡೆ ಆದ್ಯತೆ ಮೇರೆಗೆ ಕುಡಿವ ನೀರು ಪೂರೈಕೆ ಮಾಡಬೇಕು. ಖಾಸಗಿ ಬೋರ್‌ವೆಲ್ ಬಾಡಿಗೆ ಪಡೆಯುವುದು, ಟ್ಯಾಂಕರ್‌ಮೂಲಕ ನೀರು ಪೂರೈಸುವುದು ಅಥವಾ ಅನಿವಾರ್ಯ ಪರಿಸ್ಥಿತಿಯಲ್ಲಿ ಹೊಸ ಬೋರ್‌ವೆಲ್ ಕೊರೆಸುವುದು ಮುಂತಾದ ಪರಿಹಾರ ಉಪಾಯ ಆದ್ಯತೆ ಮೇರೆಗೆ ನಿರ್ವಹಿಸಿ ಎಂದು ತಿಳಿಸಿದರು.

ಕೊಪ್ಪಳದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಆಯೋಜಿಸಿದ್ದ ಜಿಲ್ಲೆಯ ಪ್ರಕೃತಿ ವಿಕೋಪ ನಿರ್ವಹಣೆಯ ಮೇಲುಸ್ತುವಾರಿ ಸಭೆ ಸಚಿವ ಡಾ.ಶರಣ ಪ್ರಕಾಶ ಅಧ್ಯಕ್ಷತೆಯಲ್ಲಿ ಶುಕ್ರವಾರ ನಡೆಯಿತು.

> **ಪ್ರಕೃತಿ ವಿಕೋಪಕ್ಕೆ ಸಂಬಂಧಿಸಿದಂತೆ ಯಾವುದೇ ಸನ್ನಿವೇಶ ಎದುರಿಸಲು ಕೊಪ್ಪಳ ಜಿಲ್ಲಾಡಳಿತ ಸಿದ್ಧವಿದೆ. ಜೀವ ಹಾನಿ ಪ್ರಕರಣಗಳಿಗೆ ನಿಯಮಾನುಸಾರ ಪರಿಹಾರ ಒದಗಿಸಲಾಗಿದೆ. ರೈತ ಆತ್ಮಹತ್ಯೆ ಪ್ರಕರಣಗಳಿಗೆ ಪರಿಹಾರ ಒದಗಿಸಲಾಗಿದೆ. 39 ಪ್ರಾಣಿ ಮರಣ ಹೊಂದಿದ್ದು ಸೂಕ್ತ ಪರಿಹಾರ ವಿತರಣೆ ಮಾಡಲಾಗಿದೆ. ಮಳೆಯಿಂದ ಭಾಗಶಃ ಹಾನಿಯಾದ 44 ಮನೆಗೆ ಪರಿಹಾರ ಒದಗಿಸಿದೆ. ಕುಡಿವ ನೀರು ಪೂರೈಕೆಗೆ ಅನುದಾನದ ಕೊರತೆ ಇಲ್ಲ.**
> **- ಡಾ.ಸುರೇಶ ಇಟ್ನಾಳ, ಜಿಲಾಧಿಕಾರಿ**

> **ಕುಷ್ಟಗಿ ತಾಲೂಕಿನಲ್ಲಿ ಕುಡಿವ ನೀರಿನ ಸಮಸ್ಯೆ ಇದೆ. ಜೆಜೆಎಂ ಅಡಿ ಪೂರೈಕೆ ಆಗುವ ನೀರಿನಲ್ಲಿ ವ್ಯತ್ಯಯವಾಗುತ್ತಿದೆ. ಶಾಲೆ-ಕಾಲೇಜು ಸಮಯಕ್ಕೆ ತಕ್ಕಂತೆ ಬಸ್ ಒದಗಿಸಬೇಕು. ಬಸ್ ಸಂಖ್ಯೆ ಕಡಿಮೆ ಇದ್ದು, ಸಾರ್ವಜನಿಕರು ವಿದ್ಯಾರ್ಥಿಗಳಿಗೆವತೊಂದರೆ ಆಗಿದೆ. ಈ ಸಮಸ್ಯೆ ಬಗ್ಗೆ ಸಂಬಂಧಿಸಿದ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು.**
> **- ದೊಡ್ಡನಗೌಡ ಪಾಟೀಲ್, ವಿಧಾನಸಭೆ ವಿರೋಧ ಪಕ್ಷದ ಮುಖ್ಯ ಸಚೇತಕ**

> **ಭಾರತ ಚುನಾವಣೆ ಆಯೋಗದ ವೇಳಾಪಟ್ಟಿಯಂತೆ ಎಸ್‌ಐಆರ್‌ಪ್ರಕ್ರಿಯೆ ಪೂರ್ಣಗೊಳಿಸಬೇಕು. ನಂತರ ಗ್ರಾಪಂ ಹಾಗು ವಾರ್ಡ್ ವಾರು ಸಹಾಯವಾಣಿ ಸ್ಥಾಪಿಸಬೇಕು. ಮತದಾರರ ಗೊಂದಲ, ದೂರುಗಳಿಗೆ ಸ್ಪಂದಿಸುವ ಕೆಲಸ ಆಗಬೇಕು.**
> **- ಡಾ.ಶರಣಪ್ರಕಾಶ ಪಾಟೀಲ್, ಸಚಿವ**

ಎಸ್‌ಐಆರ್‌ಅಚ್ಚುಕಟ್ಟಾಗಲಿ: ದೇಶಾದ್ಯಂತ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ಕಾರ್ಯ ಜುಲೈ 29ರ ವರೆಗೆ ನಡೆಯಲಿದೆ. ಕೊಪ್ಪಳ ಜಿಲ್ಲೆಯಲ್ಲಿ ಅಚ್ಚುಕಟ್ಟಾಗಿ ನಡೆಯಬೇಕು. ಗಣತಿ ನಮೂನೆ ಮತದಾರರಿಗೆ ಕೊಡುವ ಮತ್ತು ಅದನ್ನು ಮರಳಿ ಪಡೆಯುವ ಕಾರ್ಯ ಆಗಬೇಕು. ಭರ್ತಿ ಮಾಡಿದ ಗಣತಿ ನಮೂನೆಯನ್ನು ಮತದಾರರು ಹಿಂದುರುಗಿಸದೇ ಇದ್ದಲ್ಲಿ ಕರಡು ಮತದಾರರ ಪಟ್ಟಿಯಲ್ಲಿ ಅವರ ಹೆಸರು ಸೇರುವುದಿಲ್ಲ. ಮರಣ ಹೊಂದಿದ, ವಲಸೆ ಹೋದ ಮತದಾರರನ್ನು ಗುರುತಿಸಬೇಕು ಎಂದು ಸೂಚಿಸಿದರು.

ಯಲಬುರ್ಗಾ ಶಾಸಕ ಬಸವರಾಜ ರಾಯರೆಡ್ಡಿ ಮಾತನಾಡಿ, ಯಲಬುರ್ಗಾ ಹಾಗೂ ಕುಕನೂರ ತಾಲೂಕಿನಲ್ಲಿ ಕುಡಿವ ನೀರಿನ ಸಮಸ್ಯೆ ಇದೆ. ಬಿತ್ತನೆ ಪ್ರಮಾಣ ಕಡಿಮೆ ಆಗಿದೆ. ಎಡಿಸಿ, ಜಿಪಂ ಉಪ ಕಾರ್ಯದರ್ಶಿ, ತೋಟಗಾರಿಕೆ ಹಾಗೂ ಕೃಷಿ ಜಂಟಿ ನಿರ್ದೇಶಕರು ಮತ್ತು ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆ ಇಇ ಒಳಗೊಂಡು ತಂಡ ರಚನೆಯಾಗಬೇಕು. ಈ ತಂಡವು ಜಿಲ್ಲೆಯ ಎಲ್ಲ ತಾಲೂಕಿಗೆ ಸಂಚರಿಸಿ ಆಯಾ ಕಡೆಯಲ್ಲಿ ತಹಸೀಲ್ದಾರ್, ತಾಪಂ ಇಒ, ಬಿಇಒ ಸೇರಿ ತಾಲೂಕು ಮಟ್ಟದ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಬಿತ್ತನೆ ಪ್ರಮಾಣ, ಕುಡಿವ ನೀರಿನ ಪರಿಸ್ಥಿತಿ ಸೇರಿ ಮಳೆ ಕೊರತೆ ಹಿನ್ನೆಲೆ ಎಲ್ಲ ರೀತಿಯ ಮಾಹಿತಿ ಸಂಗ್ರಹಿಸಿ ವರದಿ ಸಿದ್ಧಪಡಿಸಬೇಕು ಎಂದು ತಿಳಿಸಿದರು. ವಿಧಾನಸಭೆ ವಿರೋಧ ಪಕ್ಷದ ಮುಖ್ಯ ಸಚೇತಕ ದೊಡ್ಡನಗೌಡ ಪಾಟೀಲ್

ಜಿಲ್ಲಾಧಿಕಾರಿ ಡಾ.ಸುರೇಶ ಬಿ.ಇಟ್ನಾಳ ಸಿದ್ಧತೆ ಬಗ್ಗೆ ಸಭೆಗೆ ಮಾಹಿತಿ ನೀಡಿದರು. ಜಂಟಿ ಕೃಷಿ ನಿರ್ದೇಶಕ ಜೆ.ಡಿ ಕೃಷ್ಣಮೂರ್ತಿ, ಜಿಪಂ ಸಿಇಒ ವರ್ಣಿತ್ ನೇಗಿ, ಅಪರ ಜಿಲ್ಲಾಧಿಕಾರಿ ಸಿದ್ರಾಮೇಶ್ವರ, ಜಿಪಂ ಉಪ ಕಾರ್ಯದರ್ಶಿ ಕೃಷ್ಣಮೂರ್ತಿ ಟಿ., ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಮಂಜುನಾಥ ಗುಂಡೂರ, ಉಪ ವಿಭಾಗಾಧಿಕಾರಿ ಮಹಮ್ಮದ್ ಜೀಲಾನ್ ಸೇರಿ ವಿವಿಧ ಇಲಾಖೆ ಜಿಲ್ಲಾ ಮಟ್ಟದ ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿಗಳು ಇದ್ದರು.

ಕಾಲೇಜು ವಿದ್ಯಾರ್ಥಿಗಳಿಂದ ಪರಿಷ್ಕರಣೆ ಪ್ರಕ್ರಿಯೆ ಜಾಗೃತಿ ಜಾಥಾ

ಪೋಷಕರಲ್ಲಿ ಎಸ್‌ಐಆರ್ ಅರಿವು ಮೂಡಿಸಿ

ಬಳ್ಳಾರಿ: ಭಾರತೀಯ ಚುನಾವಣಾ ಆಯೋಗದ ನಿರ್ದೇಶನದಂತೆ, ಅರ್ಹ ನಾಗರಿಕರು ಮತದಾರರ ಪಟ್ಟಿಗೆ ಹೆಸರು ಸೇರಿಸಲು ಮತ್ತು ತಿದ್ದುಪಡಿ ಮಾಡಿಕೊಳ್ಳಲು ಹಮ್ಮಿಕೊಳ್ಳಲಾಗಿರುವ 'ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ' ಪ್ರಕ್ರಿಯೆ ಕುರಿತು ಪೋಷಕರಲ್ಲಿ ಅರಿವು ಮೂಡಿಸಲು ಸರಕಾರಿ (ಮಾ.ಪು) ಪದವಿ ಪೂರ್ವ (ಪಿಯು) ಕಾಲೇಜು ವಿದ್ಯಾರ್ಥಿಗಳಿಂದ ಬೃಹತ್ ಜಾಗೃತಿ ಜಾಥಾವನ್ನು ಹಮ್ಮಿಕೊಳ್ಳಲಾಗಿತ್ತು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಸ್ವೀಪ್ ಸಮಿತಿ ಹಾಗೂ ಪದವಿ ಪೂರ್ವ ಶಿಕ್ಷಣ ಇಲಾಖೆಯ ಜಂಟಿ ಆಶ್ರಯದಲ್ಲಿ ಸರಕಾರಿ (ಮಾ.ಪು) ಪದವಿ ಪೂರ್ವ ಕಾಲೇಜು ಸಭಾಂಗಣದಲ್ಲಿ ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್.ಕೆ ಮಾತನಾಡಿ, ಮತದಾರರ ಪಟ್ಟಿಯು ಪ್ರಜಾಪ್ರಭುತ್ವದ ಅಡಿಪಾಯವಾಗಿದ್ದು, ಪ್ರತಿಯೊಬ್ಬ ನಾಗರಿಕರು ತಮ್ಮ ಮಾಹಿತಿಯನ್ನು ಸರಿಯಾಗಿ ಪರಿಶೀಲಿಸಿ ಎಸ್‌ಐಆರ್‌ಗಣತಿ ನಮೂನೆಗಳನ್ನು ಭರ್ತಿ ಮಾಡಿ ಸಂಬಂಧಿಸಿದ ಚುನಾವಣಾ ಅಧಿಕಾರಿಗಳಿಗೆ ಸಲ್ಲಿಸಬೇಕು. ಇದರಿಂದ ಪಾರದರ್ಶಕ ಹಾಗೂ ವಿಶ್ವಾಸಾರ್ಹ ಮತದಾರರ ಪಟ್ಟಿ ಸಿದ್ಧಗೊಳ್ಳಲು ಸಾಧ್ಯವಾಗುತ್ತದೆ. ಈ ಕುರಿತು ತಮ್ಮ ಮನೆಗಳಲ್ಲಿ ಹಾಗೂ ಪೋಷಕರಿಗೆ ಅರಿವು ಮೂಡಿಸಬೇಕು ಎಂದು ವಿದ್ಯಾರ್ಥಿಗಳಿಗೆ ತಿಳಿಸಿದರು.

ಎಸ್‌ಐಆರ್ ಪ್ರಕ್ರಿಯೆ ಜಾಗೃತಿ ಜಾಥಾದಲ್ಲಿ ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್.ಕೆ ಮಾತನಾಡಿದರು.

> **18 ವರ್ಷ ತುಂಬಿದ ಪ್ರತಿಯೊಬ್ಬರಿಗೂ ಮತದಾನದ ಹಕ್ಕು ಸಂವಿಧಾನಬದ್ಧವಾಗಿ ಸಿಕ್ಕಿದೆ. 18 ವರ್ಷ ತುಂಬುವ ಯುವಕ-ಯುವತಿಯರು ಸಹ ಫಾರ್ಮ್-6 ರ ಮೂಲಕ ಹೆಸರು ನೋಂದಾಯಿಸಿಕೊಳ್ಳಬಹುದು. ಈ ವಿಶೇಷ ಸಮಗ್ರ ಪರಿಷ್ಕರಣೆ ಅವಧಿಯಲ್ಲಿ ಸಾರ್ವಜನಿಕರು ಮತದಾರರ ಪಟ್ಟಿಯಲ್ಲಿರುವ ತಪ್ಪುಗಳ ತಿದ್ದುಪಡಿ (ಫಾರ್ಮ್-8) ಹಾಗೂ ಮರಣ ಹೊಂದಿದವರ ಅಥವಾ ಸ್ಥಳಾಂತರಗೊಂಡವರ ಹೆಸರುಗಳ ಪತ್ತೆ ಮತ್ತು ತೆಗೆದುಹಾಕುವಿಕೆಗೆ ಸಹಕರಿಸಬೇಕು.**
> **-ನಾಗೇಂದ್ರ ಪ್ರಸಾದ್, ಡಿಸಿ**

ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಮಹಮ್ಮದ್ ಹಾರೀಸ್ ಸುಮೇರ್‌ಮಾತನಾಡಿ, ಸಾರ್ವಜನಿಕರು ಕಚೇರಿಗಳಿಗೆ ಅಲೆಯದೆ ವೋಟರ್‌ಹೆಲ್ಪ್ ಲೈನ್ ಆಪ್ ಅಥವಾ ವೋಟರ್‌ಸರ್ವೀಸ್ ಪೋರ್ಟಲ್ ಮೂಲಕ ಆನ್ಲೈನ್‌ನಲ್ಲೇ ಸುಲಭವಾಗಿ ಮತದಾರರ ಪಟ್ಟಿ, ಹೆಸರು ಸೇರ್ಪಡೆ ಹಾಗೂ ತಿದ್ದುಪಡಿ ಮಾಡಿಕೊಳ್ಳಬಹುದು ಎಂದು ಮಾಹಿತಿ ನೀಡಿದರು.

ಬಳಿಕ ಗಣ್ಯರು ಹಸಿರು ನಿಶಾನೆ ತೋರಿಸುವ ಮೂಲಕ ಜಾಗೃತಿ ಜಾಥಾಗೆ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಶಶಿಕಾಂತ್ ಶಿವಪುರೆ, ಜಿಪಂ ಸಹಾಯಕ ನಿರ್ದೇಶಕ ಬಸವರಾಜ ಹಿರೇಮಠ, ಸರಕಾರಿ (ಮಾ.ಪು) ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯ ಸುಂಕಪ್ಪ ಸೇರಿದಂತೆ ಪ್ರಾಧ್ಯಾಪಕರು ಹಾಗೂ ಕಾಲೇಜು ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಸರಕಾರಿ ಜಾಗ ಒತ್ತುವರಿ ತೆರವು ಕಾರ್ಯಾಚರಣೆ

ಬಳ್ಳಾರಿ: ನಗರದ ವಿವಿಧ ವಾರ್ಡ್‌ಗಳಲ್ಲಿರುವ ಕೋಟ್ಯಂತರ ರೂಪಾಯಿ ಮೌಲ್ಯದ ಸರಕಾರಿ ಜಾಗ ಹಾಗೂ ಅಂಗನವಾಡಿ ಕೇಂದ್ರಗಳಿಗೆ ಕಾಯ್ದಿರಿಸಿದ ಜಾಗಗಳಲ್ಲಿ ಅತಿಕ್ರಮವಾಗಿ ಆಕ್ರಮಿಸಿಕೊಂಡಿರುವುದನ್ನು ಖಚಿತಪಡಿಸಿಕೊಂಡು ಜಿಲ್ಲಾಡಳಿತ ಒತ್ತುವರಿ ಕಾರ್ಯಾಚರಣೆ ನಡೆಸಿದೆ. ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್.ಕೆ ಅವರ ನಿರ್ದೇಶನದಂತೆ ಅಪರ ಜಿಲ್ಲಾಧಿಕಾರಿ ಮಹಮ್ಮದ್ ಝುಬೇರ್.ಎನ್., ಸಹಾಯಕ ಆಯುಕ್ತ ರಾಜೇಶ್ ಎಚ್.ಡಿ ಹಾಗೂ ತಹಶೀಲ್ದಾರ್‌ಟಿ.ರೇಖಾ ನೇತೃತ್ವದ ಅಧಿಕಾರಿಗಳ ತಂಡವು ನಗರದ ವಿವಿಧೆಡೆ ಭೇಟಿ ನೀಡಿ ಪರಿಶೀಲನೆ ನಡೆಸಿ ಸಾರ್ವಜನಿಕ ಮತ್ತು ಸರಕಾರಿ ಜಾಗಗಳನ್ನು ರಕ್ಷಿಸಲಾಯಿತು. ಬೆಳ್ಳಂಬೆಳಗ್ಗೆ ವಿವಿಧ ಯಂತ್ರೋಪಕರಣಗಳ ಮೂಲಕ ಸರ್ಕಾರಕ್ಕೆ ಸೇರಬೇಕಾದ ಜಾಗಗಳನ್ನು ಜಿಲ್ಲಾಡಳಿತದ ವತಿಯಿಂದ ತೆರವುಗೊಳಿಸಲಾಯಿತು. ಬಳ್ಳಾರಿ ನಗರದ ಸಿಟಿಎಸ್ ವಾರ್ಡ್ ನಂ. 21, ಬ್ಲಾಕ್ ನಂ. 3ರಲ್ಲಿದ್ದ 0.08 ಸೆಂಟ್ಸ್ ಜಾಗವನ್ನು ಅಂಗನವಾಡಿ ಕೇಂದ್ರಕ್ಕೆ ನಿಗದಿಪಡಿಸಲಾಗಿದ್ದು, ಇಲ್ಲಿ ಅತಿಕ್ರಮಣಗೊಂಡ ಜಾಗವನ್ನು ಸುಪರ್ದಿಗೆ ಪಡೆದುಕೊಂಡು ಅತಿಕ್ರಮಣದಾರರ ವಿರುದ್ಧ ಕಾನೂನು ಕ್ರಮ ಜರುಗಿಸುವುದಾಗಿ ಬೋರ್ಡ್ ಹಾಕಲಾಗಿದೆ ಎಂದರು.

ಅತಿಥಿ ಶಿಕ್ಷಕ ಸಾವು: 10 ಲಕ್ಷ ಪರಿಹಾರ ನೀಡಿ

ಮಸ್ಕಿಯ ತಹಸೀಲ್ದಾರ್ ಕಚೇರಿ ಬಳಿ ಅತಿಥಿ ಶಿಕ್ಷಕರು ಅಧಿಕಾರಿಗೆ ಮನವಿ ಸಲ್ಲಿಸಿದರು.

ಮಸ್ಕಿ: ಶಾಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ವೇಳೆ ಹೃದಯಾಘಾತ ದಿಂದ ನಿಧನರಾದ ಅತಿಥಿ ಶಿಕ್ಷಕ ವೀರನಗೌಡ ಪಾಟೀಲ್ ಅವರ ಕುಟುಂಬಕ್ಕೆ ಸರಕಾರ 10 ಲಕ್ಷ ರು. ಪರಿಹಾರ ನೀಡಲು ಆಗ್ರಹಿಸಿ, ಅತಿಥಿ ಶಿಕ್ಷಕರು ತಹಸಿಲ್ ಕಚೇರಿ ಬಳಿ ಪ್ರತಿಭಟನೆ ಗುರುವಾರ ನಡೆಸಿದರು. ತಾಲೂಕಿನ ಮೆದ್ಕಿನಾಳ ಗ್ರಾಮದ ಸರಕಾರಿ ಶಾಲೆಯಲ್ಲಿ ಜೂ. 25 ರಂದು ಕರ್ತವ್ಯ ನಿರ್ವಹಿಸುತ್ತಿದ್ದ ಸಂದರ್ಭದಲ್ಲಿ ಅತಿಥಿ ಶಿಕ್ಷಕ ವೀರನ ಗೌಡ ಪಾಟೀಲ್ ಅವರಿಗೆ ಹೃದಯಾಘಾತವಾಗಿ ನಿಧನರಾದರು. ಮೃತರ ಕುಟುಂಬಕ್ಕೆ ಸರಕಾರ 10 ಲಕ್ಷ ರು. ಪರಿಹಾರ ನೀಡಬೇಕು ಎಂದು ಅತಿಥಿ ಶಿಕ್ಷಕರ ಸಂಘದ ಅಧ್ಯಕ್ಷ ಹನುಮಂತ ಮುದಬಾಳ ಆಗ್ರಹಿಸಿದರು. ಅತಿಥಿ ಶಿಕ್ಷಕರು ಕರ್ತವ್ಯ ನಿರ್ವಹಿಸುತ್ತಿರ ವೇಳೆ ಅಪಘಾತ, ಮರಣ ಹೊಂದಿದರೆ ಅವರ ಕುಟುಂಬಕ್ಕೆ ಪರಿಹಾರ ನೀಡಬೇಕು, ಅತಿಥಿ ಶಿಕ್ಷಕರಿಗೆ ಖಾಯಂ ಗೊಳಿಸುವ ಜತೆಗೆ ಸಮಾನ ಕೆಲಸಕ್ಕೆ ಸಮಾನ ವೇತನ ನೀಡಲು ಆಗ್ರಹಿಸಿದರು. ನಾನಾ ಬೇಡಿಕೆ ಗಳ ಮನವಿ ಉಪ ತಹಸೀಲ್ದಾರ್‌ಗುರು ಲಿಂಗಯ್ಯ ಅವರಿಗೆ ಸಲ್ಲಿಸಿದರು. ಸಂಘದ ಪದಾಧಿಕಾರಿಗಳು, ಅತಿಥಿ ಶಿಕ್ಷಕರು, ನಾನಾ ಸಂಘಟನೆ ಗಳ ಮುಖಂಡರು ಇದ್ದರು.

ವೈದ್ಯರಿಗೆ ಹಣ ಸಂಪಾದನೆ ಮುಖ್ಯ ಅಲ್ಲ

ಔಷಧ ವಿತರಕರ ಸಂಘದ ವತಿಯಿಂದ ಪಟ್ಟಣದ ಔಷಧ ವರ್ತಕ ರಾಘವೇಂದ್ರ, ಸುರಪುರ ಅವರ ವಸತಿ ನಿಲಯದಲ್ಲಿ ಅಂತಾರಾಷ್ಟ್ರೀಯ ವೈದ್ಯರ ದಿನಾಚರಣೆ ಮಾಡಲಾಯಿತು.

ಮುದಗಲ್: ಔಷಧ ವಿತರಕರ ಸಂಘದ ವತಿಯಿಂದ ಪಟ್ಟಣದ ಔಷಧ ವರ್ತಕ ರಾಘವೇಂದ್ರ ಸುರಪುರ ಅವರ ವಸತಿ ನಿಲಯದಲ್ಲಿ ಅಂತಾರಾಷ್ಟ್ರೀಯ ವೈದ್ಯರ ದಿನಾಚರಣೆ ಮಾಡಲಾಯಿತು.

ಡಾ. ಬಿಧನ್ ಚಂದ್ರ ರಾಯ್ ಅವರ ಭಾವಚಿತ್ರ ಹೂಮಾಲೆ ಹಾಕಿ ಗೌರವ ನಮನ ಸಲ್ಲಿಸಿ ಹಾಗೂ ನಂತರ ಕೇಕ್ ಕತ್ತರಿಸುವ ಮೂಲಕ ಹಿರಿಯ ವೈದ್ಯರಾದ ಎಂ ವಿ ಜೋಶಿ ಕಾರ್ಯಕ್ರಮದ ಉದ್ಘಾಟನೆ ಮಾಡಿದರು. ನಂತರ ಮಾತನಾಡಿದ ಅವರು, ವೈದ್ಯರನ್ನು ಪ್ರತ್ಯಕ್ಷ ದೇವರು ಎಂದೇ ಕರೆಯಲಾಗುತ್ತದೆ. ಅದಕ್ಕೆ ಅರ್ಥ ಬರಬೇಕಾದರೆ ತ್ರಿಕರಣ ಶುದ್ಧಿಯಿಂದ ಸೇವೆ ಸಲ್ಲಿಸಬೇಕು. ಹಣ ಸಂಪಾದನೆ ಮುಖ್ಯ ಆಗಬಾರದು ಆಗಾದರೆ ಮಾತ್ರ ಸಮಾಜದಲ್ಲಿ ಗೌರವ ಮತ್ತು ಸ್ಥಾನ ಮಾನಗಳು ಸಿಗುತ್ತವೆ. ಜನರ ವೈದ್ಯರ ಮೇಲೆ ಅಪಾರವಾದ ನಂಬಿಕೆ ಇಟ್ಟಿದ್ದಾರೆ ಬಂದ ರೋಗಿಗಳನ್ನು ತಾಯಿಯಂತೆ ಮಮತೆಯಿಂದ ಮತ್ತು ಭರವಸೆಯ ನುಡಿಗಳನ್ನು ಜನರ ಆಶೋತ್ತ ರಗಳಿಗೆ ಪ್ರತಿಕ್ರಿಯಿಸಿ ಗುಣಮಟ್ಟದ ಚಿಕಿತ್ಸೆ ನೀಡುವ ಪ್ರಾಮಾಣಿಕ ಪ್ರಯತ್ನ ಮಾಡಬೇಕು ಎಂದರು.

ಕಾರ್ಯಕ್ರಮ ನಿರೂಪಣೆ ಶಿಕ್ಷಕ ಸಂಗಮೇಶ ಸರಗಣಾಚಾರಿ ನೆರವೇರಿಸಿದರು. ಈ ಸಂದರ್ಭದಲ್ಲಿ ಡಾ . ಗುರುರಾಜ ದೇಶಪಾಂಡೆ, ಡಾ.ವಿಶ್ವನಾಥ ಮಾಟೂರು ಔಷಧ ವ್ಯಾಪಾರಸ್ಥರ ಸಂಘದ ಅಧ್ಯಕ್ಷ ವೆಂಕಟೇಶ ಕುಲಕರ್ಣಿ, ದೊಡ್ಡನಗೌಡ ಕನ್ನಾಳ, ಮುದಿವೀರಪ್ಪ ಜೇಡಿ, ಬಸವರಾಜ ಕರಡಿ, ರಾಜು ಬುಜರಕರ್, ರಾಘವೇಂದ್ರ ಸುರುಪುರ, ಆಲಂಖಾನ್, ಶರಣಬಸವ ಅಂಗಡಿ, ನಾಗರಾಜ, ಮಂಜುನಾಥ ಇದ್ದರು.

ಜಿಲ್ಲಾ ಜಾಗೃತಿ ಸಮಿತಿ ಸಭೆ | ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಕವಿತಾ ಮನ್ನಿಕೇರಿ ಸೂಚನೆ

ಬೀಜ, ಗೊಬ್ಬರ ಕೃತಕ ಅಭಾವಕ್ಕೆ ಕ್ರಮ ಜರುಗಿಸಿ

ಹೊಸಪೇಟೆ: ಮುಂಗಾರು ಹಂಗಾಮು ಹಿನ್ನೆಲೆಯಲ್ಲಿ ಬಿತ್ತನೆ ಕೃಷಿ ಚಟುವಟಿಕೆ ಆರಂಭವಾಗಿದ್ದು, ಯಾವುದೇ ರೀತಿಯ ಬಿತ್ತನೆ ಬೀಜ, ರಸಗೊಬ್ಬರ ಅಭಾವ ಎದುರಾಗದಂತೆ ಮುಂಜಾಗ್ರತಾ ಕ್ರಮ ಕೈಗೊಳ್ಳಬೇಕು ಹಾಗೂ ಕೃತಕ ಅಭಾವ ಸೃಷ್ಟಿಸುವ ವರ್ತಕರ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕ್ರಮ ವಹಿಸಬೇಕು ಎಂದು ಜಿಲ್ಲಾಧಿಕಾರಿ ಕವಿತಾ ಎಸ್ ಮನ್ನಿಕೇರಿ ನಿರ್ದೇಶಿಸಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜಿಲ್ಲಾ ಮಟ್ಟದ ಬೀಜ, ರಸಗೊಬ್ಬರ ಹಾಗೂ ಕೀಟನಾಶಕ ಜಾಗೃತಿ ಸಮಿತಿ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿದರು.

ಜುಲೈ ಮೊದಲ ವಾರದಿಂದ ಮುಂಗಾರು ಹಂಗಾಮು ಮಳೆಗಾಲ ಆರಂಭವಾಗಲಿದೆ. ಈಗಾಗಲೇ ಜಿಲ್ಲಾದ್ಯಂತ ಕೃಷಿ ಚಟುವಟಿಕೆಗಳು ಭರದಿಂದ ಸಾಗುತ್ತಿವೆ. ಭತ್ತ 13827 ಎಕರೆ ಪ್ರದೇಶದಲ್ಲಿ ಬಿತ್ತನೆಗೆ ಗುರಿ ಹೊಂದಿದ್ದು, ಈ ಪೈಕಿ ಕೇವಲ 2230 ಎಕರೆ ಪ್ರದೇಶದಲ್ಲಿ ಬಿತ್ತನೆ ಮಾಡಲಾಗಿದೆ ಎಂದರು.

ಜಿಲ್ಲೆಯಾದ್ಯಂತ ಅಲ್ಲಲ್ಲಿ ಮಳೆಯಾಗುತ್ತಿದ್ದು, ಬಿತ್ತನೆ ಕಾರ್ಯ ಚುರುಕುಗೊಂಡಿದೆ. ಆದ್ದರಿಂದ ಯೂರಿಯಾ, ಡಿ.ಎ.ಪಿ, ಪೊಟ್ಯಾಶ್ ಹಾಗೂ ಕಾಂಪ್ಲೆಕ್ಸ್ ಗೊಬ್ಬರಗಳ ಬೇಡಿಕೆಗೆ ತಕ್ಕಂತೆ ಪೂರೈಕೆ ಮಾಡಲು ಕ್ರಮ ಕೈಗೊಳ್ಳಬೇಕು. ಜಿಲ್ಲೆಯ ಎಲ್ಲಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಮತ್ತು ನೋಂದಾಯಿತ ಖಾಸಗಿ ಡೀಲರ್ಗಳ ಬಳಿ ಸದ್ಯಕ್ಕೆ ಪ್ರಸ್ತುತ ಅಗತ್ಯಕ್ಕೆ ಬೇಕಾದಷ್ಟು ದಾಸ್ತಾನಿರಬೇಕು ಎಂದು ತಾಕೀತು ಮಾಡಿದರು. ಕೆಲವು ಕಡೆ ರಸಗೊಬ್ಬರಗಳ ಜೊತೆಗೆ ಬೇಡಿಕೆಯಿಲ್ಲದ ಪೋಷಕಾಂಶಗಳು ಅಥವಾ ಇತರೆ ಉತ್ಪನ್ನಗಳನ್ನು ಕಡ್ಡಾಯವಾಗಿ ಖರೀದಿಸಬೇಕೆಂದು ರೈತರಿಗೆ ಒತ್ತಾಯಿಸುವ ದೂರುಗಳು ಕೇಳಿಬರುತ್ತಿವೆ. ಇಂತಹ ದಂಧೆಯಲ್ಲಿ ತೊಡಗುವ ಅಥವಾ ನಿಗದಿತ ಗರಿಷ್ಠ ಮಾರಾಟ ಬೆಲೆಗಿಂತ ಹೆಚ್ಚಿನ ದರಕ್ಕೆ ಗೊಬ್ಬರ ಮಾರುವ ಅಂಗಡಿಗಳ ಪರವಾನಗಿಯನ್ನು ತಕ್ಷಣವೇ ರದ್ದುಗೊಳಿಸಿ, ಕ್ರಿಮಿನಲ್ ಪ್ರಕರಣ ದಾಖಲಿಸುವಂತೆ ನಿರ್ದೇಶಿಸಿದರು.

ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆಯಡಿ ಸಾಲ ಪಡೆಯಲು ಬಯಸುವ ರೈತರು ಕಡ್ಡಾಯವಾಗಿ ಬೆಳೆ ವಿಮೆಯಡಿ ಅಧಿಸೂಚಿತ ಬೆಳೆಗೆ ನೋಂದಾಯಿಸಿಕೊಳ್ಳಲು ಯಾವುದೇ ಬ್ಯಾಂಕುಗಳಲ್ಲಿ ಸಾಲ ಅಥವಾ ಕೃಷಿ ಸಾಲ ವ'ಂಜೂರಾಗಿರ'ಂವ'್ರದಿಲ್ಲವ'ಂದ'ಂ ಸ್ವಯಂ-ಘೋಷಣೆ ಸಲ್ಲಿಸಬೇಕು. ಬೆಳೆ ವಿಮೆ ಮಾಡಿಸಲು ಜೋಳ, ತೊಗರಿ, ಸೂರ್ಯಕಾಂತಿ, ಮುಸುಕಿನ ಜೋಳ, ಹತ್ತಿ ಮತ್ತು ಈರುಳ್ಳಿ ಬೆಳೆಗಳಿಗೆ ಜುಲೈ 31 ಹಾಗೂ ಭತ್ತ, ರಾಗಿ, ನವಣೆ, ಹುರುಳಿ, ನೆಲಗಡಲೆ ಹಾಗೂ ಸಜ್ಜೆ ಬೆಳೆಗಳಿಗೆ ಆಗಸ್ಟ್ 14 ಕೊನೆಯ ದಿನವಾಗಿದೆ ಎಂದರು.

ಇದೇ ಸಂದರ್ಭದಲ್ಲಿ ಬೆಳೆ ವಿಮೆ ಹಾಗೂ ಪ್ರಧಾನ ಮಂತ್ರಿ ಫಸಲ್ ಭೀಮಾ ಯೋಜನೆ ಸಂಬಂಧಿಸಿದ ಕರಪತ್ರ ಬಿಡುಗಡೆಗೊಳಿಸಿದರು.

ಜಾಗೃತಿ ಸಮಿತಿ ಸಭೆಯಲ್ಲಿ ಬೆಳೆ ವಿಮೆ ಹಾಗೂ ಪ್ರಧಾನ ಮಂತ್ರಿ ಫಸಲ್ ಭೀಮಾ ಯೋಜನೆ ಸಂಬಂಧಿಸಿದ ಕರಪತ್ರವನ್ನು ಜಿಲ್ಲಾಧಿಕಾರಿ ಕವಿತಾ ಎಸ್ ಮನ್ನಿಕೇರಿ ಬಿಡುಗಡೆಗೊಳಿಸಿದರು.

ಬೆಳೆ ವಿಮೆ ಪ್ರಕ್ರಿಯೆ ಪಾರದರ್ಶಕವಾಗಿರಲಿ

ರೈತರ ಬೆಳೆ ಸಮೀಕ್ಷೆ ಮತ್ತು ಬೆಳೆ ವಿಮೆ ಪ್ರಕ್ರಿಯೆಯನ್ನು ಯಾವುದೇ ಲೋಪದೋಷಗಳಿಲ್ಲದೆ ಸರಿಯಾದ ರೀತಿಯಲ್ಲಿ ಪೂರ್ಣಗೊಳಿಸಬೇಕು. ಅಧಿಕಾರಿಗಳು ಯಾವುದೇ ರೀತಿಯ ಆಸೆ, ಆಮಿಷಗಳಿಗೆ ಒಳಗಾಗದೆ, ಅತ್ಯಂತ ಪಾರದರ್ಶಕವಾಗಿ ಮತ್ತು ಪ್ರಾಮಾಣಿಕವಾಗಿ ಈ ಕಾರ್ಯವನ್ನು ನಿಭಾಯಿಸಬೇಕು. ಒಂದು ವೇಳೆ ವೈಯಕ್ತಿಕ ಲಾಭ ಅಥವಾ ಆಸೆ ಆಮಿಷಗಳಿಗೆ ಬಲಿಯಾಗಿ ಬೆಳೆ ಸಮೀಕ್ಷೆಯಲ್ಲಿ ಯಾವುದೇ ರೀತಿಯ ಲೋಪದೋಷ ಎಸಗಿದರೆ ಅಥವಾ ಅಕ್ರಮಗಳಲ್ಲಿ ಭಾಗಿಯಾಗಿದ್ದು ಕಂಡುಬಂದಲ್ಲಿ, ಸಂಬಂಧಪಟ್ಟ ಅಧಿಕಾರಿಗಳು ಹಾಗೂ ವಿಮಾ ಕಂಪನಿಯ ವಿರುದ್ಧ ಯಾವುದೇ ಮುಲಾಜಿಲ್ಲದೆ ನಿರ್ದಾಕ್ಷಿಣ್ಯವಾಗಿ ಕಠಿಣ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿ ಕವಿತಾ ಎಸ್ ಮನ್ನಿಕೇರಿ ಎಚ್ಚರಿಕೆ ನೀಡಿದರು.

> **ಕೇಂದ್ರ ಮತ್ತು ರಾಜ್ಯ ಸರಕಾರಗಳ ನಿಯಮಾನುಸಾರ ಪ್ರತಿಯೊಬ್ಬ ರೈತರಿಗೂ ಕಡ್ಡಾಯವಾಗಿ ಪಿಓಎಸ್ ಯಂತ್ರದ ಮೂಲಕ, ಆಧಾರ್‌ಕಾರ್ಡ್ ಪಡೆದು ಬಯೋಮೆಟ್ರಿಕ್ ದೃಢೀಕರಣದ ಆಧಾರದ ಮೇಲೆಯೇ ರಸಗೊಬ್ಬರ ವಿತರಿಸಬೇಕು. ಇದರಿಂದ ರಸಗೊಬ್ಬರ ಕಳ್ಳಸಾಗಣೆ, ದುರ್ಬಳಕೆ ಸಂಪೂರ್ಣವಾಗಿ ತಡೆಯಬಹುದು. ರೈತರು ಕೇವಲ ಯೂರಿಯಾ ಮತ್ತು ಡಿಎಪಿ ಗೊಬ್ಬರಗಳ ಮೇಲೆಯೇ ಅವಲಂಬಿತರಾಗದೆ, ಮಣ್ಣಿನ ಫಲವತ್ತತೆ ಸಮತೋಲಿತ ಕಾಪಾಡಲು ತಂತ್ರಜ್ಞಾನ ಆಧಾರಿತ ಹಾಗೂ ಅತ್ಯಂತ ಪರಿಣಾಮಕಾರಿಯಾದ ನ್ಯಾನೋ ಯೂರಿಯಾ ಮತ್ತು ನ್ಯಾನೋ ಡಿಎಪಿ ಬಳಕೆಯನ್ನು ಹೆಚ್ಚಿಸಬೇಕು. ಕೃಷಿ ಇಲಾಖೆಯು ತಾಲೂಕು ಮತ್ತು ಗ್ರಾಮ ಮಟ್ಟದಲ್ಲಿ ವ್ಯಾಪಕ ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸಬೇಕು.**
> **ಕವಿತಾ ಎಸ್ ಮನ್ನಿಕೇರಿ, ಜಿಲ್ಲಾಧಿಕಾರಿ**

ಸಮಾಚಾರ ಸಣ್ಣದಲ್ಲ

ಕೆನಡಾ ಬ್ಯಾಡ್ಮಿಂಟನ್: 2ನೇ ಸುತ್ತಿಗೆ ತಾನ್ಯಾ

ಮರ್ಖಮ್: ಇಲ್ಲಿ ನಡೆಯುತ್ತಿರುವ ಕೆನಡಾ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಫಿಟ್ನೆಸ್ ಸಮಸ್ಯೆಯ ಕಾರಣದಿಂದ ಕಿದಂಬಿ ಶ್ರೀಕಾಂತ್ ಅವರು ಟೂರ್ನಿಯ ಮೊದಲ ಸುತ್ತಿನ ಪಂದ್ಯದ ಆರಂಭದಲ್ಲೇ ಹಿಂದೆ ಸರಿದಿದ್ದಾರೆ. ಭಾರತದ ಯುವ ಆಟಗಾರರಾದ ತಾನ್ಯಾ ಹೇಮಂತ್ ಮತ್ತು ಆಕರ್ಷಿ ಕಶ್ಯಪ್ ಸಿಂಗಲ್ಸ್ ಎರಡನೇ ಸುತ್ತು ತಲುಪಿದರು. ತಾನ್ಯಾ, 21-16, 21-18ರಿಂದ ಅಮೆರಿಕದ ದಿಶಾ ಗುಪ್ತಾ ಅವರನ್ನು ಸೋಲಿಸಿದ್ದು, ಮುಂದಿನ ಸುತ್ತಿನಲ್ಲಿ ಅವರು ಜಪಾನ್‌ನ ರಿಕೊ ಗುಂಜಿ ಅವರನ್ನು ಎದುರಿಸಲಿದ್ದಾರೆ. ಆಕರ್ಷಿ ಅವರು 14-21, 21-12ರಿಂದ ಫ್ರಾನ್ಸ್‌ನ ಅನ್ನಾ ತತ್ರನೋವಾ ಅವರನ್ನು ಸೋಲಿಸಿದರು. ಅವರು ತಮ್ಮ ಮುಂದಿನ ಸುತ್ತಿನಲ್ಲಿ ನಾಲ್ಕನೇ ಶ್ರೇಯಾಂಕದ ಅಮೆರಿಕದ ಬೀವೆನ್ ಝಾಂಗ್ ಅವರನ್ನು ಎದುರಿಸಲಿದ್ದಾರೆ.

ಕಿರಿಯರ ಟೆಸ್ಟ್ ಕ್ರಿಕೆಟ್: ಸಾಯಿ ಸುದರ್ಶನ್ ಶತಕ

ಗಾಲೆ: ಇಲ್ಲಿನ ಅಂತಾರಾಷ್ಟ್ರೀಯ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಭಾರತ-ಎ ಮತ್ತು ಶ್ರೀಲಂಕಾ-ಎ ನಡುವಿನ ಎರಡನೇ ಅನಧಿಕೃತ ಟೆಸ್ಟ್ ಪಂದ್ಯದ ಎರಡನೇ ದಿನದಾಟ ಮುಕ್ತಾಯಗೊಂಡಿದೆ. 2ನೇ ದಿನದಂದು ಶ್ರೀಲಂಕಾ ತಂಡವನ್ನು ಮೊದಲ ಇನಿಂಗ್ಸ್‌ನಲ್ಲಿ 366 ರನ್‌ಗಳಿಗೆ ಆಲೌಟ್ ಮಾಡಿದ ಟೀಮ್ ಇಂಡಿಯಾ, ಬ್ಯಾಟಿಂಗ್‌ನಲ್ಲಿ ಸಂಪೂರ್ಣ ಮೇಲುಗೈ ಸಾಧಿಸಿದೆ. ಭಾರತದ ಪರ ಆರಂಭಿಕ ಬ್ಯಾಟ್ಸ್‌ಮನ್ ಸಾಯಿ ಸುದರ್ಶನ್ ಸತತ ಎರಡನೇ ಪಂದ್ಯದಲ್ಲಿ ಅಜೇಯ ಶತಕ ಬಾರಿಸಿದರೆ, ದೇವದತ್ ಪಡಿಕ್ಕಲ್ ಕೂಡ 94 ರನ್ ಗಳಿಸಿ ಶತಕದ ಸಮೀಪದಲ್ಲಿದ್ದಾರೆ. ಇಬ್ಬರೂ ಆಟಗಾರರು ಈಗಾಗಲೇ ಎರಡನೇ ವಿಕೆಟ್‌ಗೆ 181 ರನ್‌ಗಳ ಜತೆಯಾಟವನ್ನು ಹಂಚಿಕೊಂಡಿದ್ದಾರೆ. ಹೀಗಾಗಿ ಎರಡನೇ ದಿನದ ಅಂತ್ಯದ ವೇಳೆಗೆ ಭಾರತ 1 ವಿಕೆಟ್ ಕಳೆದುಕೊಂಡು 247 ರನ್ ಕಲೆಹಾಕಿದೆ. ಮೊದಲ ದಿನದಾಟದಂತ್ಯಕ್ಕೆ 5 ವಿಕೆಟ್‌ಗಳನ್ನು ಕಳೆದುಕೊಂಡು 288 ರನ್ ಕಲೆಹಾಕಿದ್ದ ಶ್ರೀಲಂಕಾ-ಎ ತಂಡ ಎರಡನೇ ದಿನ 76 ರನ್ ಕಲೆಹಾಕುವುದರೊಳಗೆ ಉಳಿದ 5 ವಿಕೆಟ್‌ಗಳನ್ನು ಕಳೆದುಕೊಂಡಿತು. ಹೀಗಾಗಿ ಲಂಕಾ ಪಡೆ 366 ರನ್‌ಗಳಿಗೆ ತನ್ನ ಮೊದಲ ಇನಿಂಗ್ಸ್ ಮುಗಿಸಿತು. ಭಾರತ-ಎ ತಂಡವು ಪ್ರಸ್ತುತ ಶ್ರೀಲಂಕಾ-ಎ ತಂಡದ ಸ್ಕೋರ್‌ಗಿಂತ 119 ರನ್‌ಗಳ ಹಿಂದಿದ್ದು, ಒಂಬತ್ತು ವಿಕೆಟ್‌ಗಳು ಇನ್ನೂ ಬಾಕಿ ಉಳಿದಿವೆ.

ಸ್ವಿಸ್ ಆಟಗಾರರಿಗೆ ನಾಕೌಟ್‌ನಲ್ಲಿ 2-0 ಜಯ | ಅಲ್ಜೀರಿಯಾಕ್ಕೆ ಸೋಲು

ಗೆದ್ದು ಬೀಗಿದ ಸ್ವಿಟ್ಜರ್ಲೆಂಡ್

ವ್ಯಾಂಕ್ಯೂವರ್: ಬ್ರಿಲ್ ಎಂಬೊಲೊ ಮತ್ತು ಡ್ಯಾನ್ ನ್ಡೋಯ್ ಅವರ ಅದ್ಭುತ ಗೋಲುಗಳ ನೆರವಿನಿಂದ ಶುಕ್ರವಾರ ನಡೆದ ವಿಶ್ವಕಪ್‌ಪಂದ್ಯಾವಳಿಯಲ್ಲಿ ಸ್ವಿಟ್ಜರ್ಲೆಂಡ್ ತಂಡವು ಅಲ್ಜೀರಿಯಾವನ್ನು 2-0 ಅಂತರದಿಂದ ಸೋಲಿಸಿತು. ಈ ಗೆಲುವಿನೊಂದಿಗೆ ಸ್ವಿಟ್ಜರ್ಲೆಂಡ್ ತಂಡವು 16ನೇ ಘಟ್ಟದಲ್ಲಿ ಸ್ಥಾನ ಪಡೆದುಕೊಂಡಿತು. ಸ್ವಿಟ್ಜರ್ಲೆಂಡ್ ತಂಡವು ತನ್ನ ಮುಂದಿನ ಪಂದ್ಯದಲ್ಲಿ ಇಂದು ನಡೆಯಲಿರುವ ಕೊಲಂಬಿಯಾ-ಘಾನಾ ನಡುವಿನ ಪಂದ್ಯದ ವಿಜೇತರನ್ನು ಎದುರಿಸಲಿದೆ.

3ನೇ ಬಾರಿಗೆ 16ರ ಘಟ್ಟಕ್ಕೆ ಪ್ರವೇಶ: ಕಳೆದ ಮೂರು ವಿಶ್ವಕಪ್‌ಗಳಲ್ಲಿ ಸ್ವಿಟ್ಜರ್ಲೆಂಡ್ ತಂಡ 16ರ ಸುತ್ತು ತಲುಪಿತ್ತು, ಆದರೆ ಅಲ್ಲಿಂದ ಮುಂದೆ ಸಾಗಲು ಸಾಧ್ಯವಾಗಿರಲಿಲ್ಲ. 2014ರ ನಂತರ ಅಲ್ಜೀರಿಯಾ ಮೊದಲ ಬಾರಿಗೆ ವಿಶ್ವಕಪ್‌ನಲ್ಲಿ ಭಾಗವಹಿಸಿದ್ದು, ಈ ಹಿಂದೆ 2014ರಲ್ಲಿ ನಾಕೌಟ್ ಹಂತ ತಲುಪಿ ಅಲ್ಲಿ ಜರ್ಮನಿಯ ವಿರುದ್ಧ ಸೋಲನ್ನು ಕಂಡಿತ್ತು. ಸ್ವಿಟ್ಜರ್ಲೆಂಡ್ ಒಂದೇ ವಿಶ್ವಕಪ್ ಆವೃತ್ತಿಯಲ್ಲಿ ಮೂರು ಅಥವಾ ಹೆಚ್ಚಿನ ಪಂದ್ಯಗಳನ್ನು ಗೆದ್ದಿರುವುದು ಇದೇ ಮೊದಲು. 1966ರ ನಂತರ ವಿಶ್ವಕಪ್‌ನಲ್ಲಿ ಐದು ಗೋಲುಗಳನ್ನು ಗಳಿಸಿದ ಅತ್ಯಂತ ಕಿರಿಯ ಆಟಗಾರ ಎಂಬ ಹೆಗ್ಗಳಿಕೆಗೆ ಸ್ವಿಜ್ ಜೋಹಾನ್ ಮಂಜಂಬಿ ಪಾತ್ರರಾದರು.

ಪಂದ್ಯದ 10ನೇ ನಿಮಿಷದಲ್ಲಿ ಬ್ರೀಲ್ ಗೋಲು ಗಳಿಸುವುದರೊಂದಿಗೆ ಸ್ವಿಟ್ಜರ್ಲೆಂಡ್ ತಂಡವು ಮುನ್ನಡೆ ಸಾಧಿಸಿತು. ಜೋಹಾನ್ ಮಂಜಂಬಿ ಚೆಂಡನ್ನು ಪಡೆದು ಅಲ್ಜೀರಿಯಾದ ಆಟಗಾರರನ್ನು ತಪ್ಪಿಸಿ, ಅದನ್ನು ಎಂಬೊಲೊಗೆ ಪಾಸ್ ಮಾಡಿದರು. ಎಂಬೊಲೊ ಚೆಂಡನ್ನು ನೆಟ್‌ಗೆ ಕಳುಹಿಸುವಲ್ಲಿ ಯಶಸ್ವಿ ಆದರು. ವಿಶ್ವಕಪ್‌ನಲ್ಲಿ ತಮ್ಮ ಮೊದಲ ನಾಕೌಟ್ ಗೆಲುವು ಸಾಧಿಸಲು ಹವಣಿಸುತ್ತಿದ್ದ ಅಲ್ಜೀರಿಯಾ ತಂಡವು ಆ ಗೋಲಿನ ನಂತರ ಒತ್ತಡಕ್ಕೆ ಸಿಲುಕಿತು. ಗೋಲು ಬಾರಿಸಲು ಬಹಳಷ್ಟು ಪ್ರಯತ್ನಿಸಿದರೂ, ಸ್ವಿಟ್ಜರ್ಲೆಂಡ್‌ನ ರಕ್ಷಣಾ ಪಡೆಯನ್ನು ಮೀರಲು ಸಾಧ್ಯವಾಗಲಿಲ್ಲ. ಒಂದು ಗೋಲಿನ ಮುನ್ನಡೆಯೊಂದಿಗೆ ದ್ವಿತೀಯಾರ್ಧವನ್ನು ಪ್ರವೇಶಿಸಿದ ಸ್ವಿಟ್ಜರ್ಲೆಂಡ್, ಕೆಲವೇ ನಿಮಿಷಗಳಲ್ಲಿ ತನ್ನ ಮುನ್ನಡೆಯನ್ನು ದ್ವಿಗುಣಗೊಳಿಸಿತು. ಈ ಬಾರಿ ಡಾನ್ ನ್ಡೋಯೆ 46ನೇ ನಿಮಿಷದಲ್ಲಿ ಗೋಲು ಗಳಿಸಿದರು. ಎರಡು ಗೋಲುಗಳಿಂದ ಹಿಂದುಳಿದಿದ್ದ ಅಲ್ಜೀರಿಯಾ, ಮೊದಲಾರ್ಧಕ್ಕಿಂತ ದ್ವಿತೀಯಾರ್ಧದಲ್ಲಿ ಹೆಚ್ಚಿನ ಅವಕಾಶಗಳನ್ನು ಸೃಷ್ಟಿಸಿತು, ಎದುರಾಳಿ ಗೋಲ್ ಕೀಪರ್ ಗ್ರೆಗರ್ ಕೋಬೆಲ್ ಅವರು ಅಲ್ಜೀರಿಯಾದ ಎಲ್ಲಾ ಅವಕಾಶಗಳನ್ನು ವಿಫಲಗೊಳಿಸುವಲ್ಲಿ ಯಶಸ್ವಿಯಾದರು.

ರೊನಾಲ್ಡೊ ಗೋಲು | ಆಸ್ಟ್ರಿಯಾಗೆ ಸೋಲು

ಸ್ಪೇನ್‌ಗೆ ಭರ್ಜರಿ ಗೆಲುವು

ಲಾಸ್ ಏಂಜಲೀಸ್: ಇಲ್ಲಿ ಶುಕ್ರವಾರ ನಡೆದ ಪಂದ್ಯದಲ್ಲಿ ಸ್ಪೇನ್ ತಂಡವು ಅತ್ಯುತ್ತಮ ಪ್ರದರ್ಶನ ನೀಡಿ ಆಸ್ಟ್ರಿಯಾವನ್ನು 3-0 ಗೋಲುಗಳಿಂದ ಸೋಲಿಸಿತು. ತಂಡದ ಪರ ಮೈಕೆಲ್ ಒಯರ್ಜಾಬಲ್ ಎರಡು ಗೋಲು ಗಳಿಸಿದರೆ, ಪೆಡ್ರೊ ಪೊರೊ ತಮ್ಮ ಮೊದಲ ಅಂತಾರಾಷ್ಟ್ರೀಯ ಗೋಲಿನೊಂದಿಗೆ ತಂಡದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು. ಜುಲೈ 6ರಂದು ಡಲ್ಲಾಸ್‌ನಲ್ಲಿ ನಡೆಯಲಿರುವ ಪೋರ್ಚುಗಲ್ ಮತ್ತು ಕ್ರೊಯೇಶಿಯಾ ನಡುವಿನ ಪಂದ್ಯದ ವಿಜೇತರನ್ನು ಸ್ಪೇನ್ ಎದುರಿಸಲಿದೆ.

ಮೊದಲಾರ್ಧದಲ್ಲಿ ಎರಡೂ ತಂಡಗಳೂ ಗೋಲು ಗಳಿಸಲು ಸಫಲವಾಗಲಿಲ್ಲ, ಆದರೆ ಕ್ರೊಯೇಶಿಯಾ ಅದ್ಭುತವಾಗಿ ಆಡಿತು. ದ್ವಿತೀಯಾರ್ಧದ ಆರಂಭಿಕ ನಿಮಿಷಗಳಲ್ಲಿ ಕ್ರೊಯೇಶಿಯಾ ಮುನ್ನಡೆ ಸಾಧಿಸಿತು, ಇವಾನ್ ಪೆರಿಸಿಕ್ ಮೂಲಕ ಮೊದಲ ಗೋಲು ಗಳಿಸಿತು. ಆದರೆ ಕ್ರಿಸ್ಟಿಯಾನೊ ರೊನಾಲ್ಡೊ 68ನೇ ನಿಮಿಷದಲ್ಲಿ ಪೆನಾಲ್ಟಿ ಮೂಲಕ ಗೋಲು ಗಳಿಸಿ ಸ್ಕೋರ್ ಅನ್ನು ಸಮಗೊಳಿಸಿದರು. 94ನೇ ಹೆಚ್ಚುವರಿ ನಿಮಿಷದಲ್ಲಿ ಗೊನ್ಸಾಲೊ ರಾಮೋಸ್ ಗೋಲು ಗಳಿಸಿ ತಂಡಕ್ಕೆ ಮುನ್ನಡೆ ತಂದುಕೊಟ್ಟರು.

ನಾಕೌಟ್‌ನಲ್ಲಿ ಮೊದಲ ಗೋಲು: ರೊನಾಲ್ಡೊಗೆ ಈ ಪಂದ್ಯದ ಗೋಲು ತುಂಬಾ ವಿಶೇಷವಾಗಿತ್ತು, ಏಕೆಂದರೆ ಇದು ಫಿಫಾ ವಿಶ್ವಕಪ್ ನಾಕೌಟ್ ಪಂದ್ಯದಲ್ಲಿ ಅವರ ಮೊತ್ತಮೊದಲ ಗೋಲಾಗಿತ್ತು. ಇದಕ್ಕೂ ಮೊದಲು ವಿಶ್ವಕಪ್ ಗುಂಪು ಹಂತಗಳಲ್ಲಿ ಮಾತ್ರ ಅವರು ಗೋಲುಗಳನ್ನು ಕಲೆಹಾಕಿದ್ದರು. ಪ್ರಸ್ತುತ ಪಂದ್ಯಾವಳಿಯಲ್ಲಿ ಇದು ಅವರ ಮೂರನೇ ಗೋಲಾಗಿದೆ. ಈ ವಿಶ್ವಕಪ್‌ನ ಗುಂಪು ಹಂತದಲ್ಲಿ ಉಜ್ಬೇಕಿಸ್ತಾನ್ ವಿರುದ್ಧ ಅವರು ಎರಡು ಗೋಲುಗಳನ್ನು ಗಳಿಸಿದ್ದರು.

2ನೇ ಟಿ20 ಪಂದ್ಯ | ಪದಾರ್ಪಣೆಯ ನಿರೀಕ್ಷೆಯಲ್ಲಿ ಸೂರ್ಯವಂಶಿ

ಇಂದು ಭಾರತ-ಇಂಗ್ಲೆಂಡ್ ಹಣಾಹಣಿ

ಮ್ಯಾಂಚೆಸ್ಟರ್: ಮೊದಲನೇ ಪಂದ್ಯ ಮಳೆಗೆ ಬಲಿಯಾದ ಬಳಿಕ ಭಾರತ ಹಾಗೂ ಇಂಗ್ಲೆಂಡ್ ತಂಡಗಳು ಇಂದು ಎರಡನೇ ಪಂದ್ಯದಲ್ಲಿ ಕಾದಾಟ ನಡೆಸಲಿವೆ.

ಮೊದಲ ಪಂದ್ಯ ರದ್ದಾಗಿರುವುದರಿಂದ ಈ ಪಂದ್ಯದ ಮೇಲೆ ಎಲ್ಲರ ಚಿತ್ತವಿದೆ. ಉಭಯ ತಂಡಗಳು ಪಂದ್ಯ ಗೆದ್ದು, ಸರಣಿಯಲ್ಲಿ ಮುನ್ನಡೆ ಕಾಯ್ದುಕೊಳ್ಳಲು ತುದಿಗಾಲಿನಲ್ಲಿ ನಿಂತಿವೆ.

ಮೊದಲ ಪಂದ್ಯದಲ್ಲಿ ಅಭಿಷೇಕ್ ಶರ್ಮಾ ಹಾಗೂ ನಾಯಕ ಶ್ರೇಯಸ್ ಅಯ್ಯರ್ ಅವರ ಅರ್ಧಶತಕಗಳ ಬಲದಿಂದ ಪ್ರವಾಸಿ ಭಾರತ ತಂಡವು 7 ವಿಕೆಟ್‌ಗೆ 189 ರನ್‌ಗಳ ಸವಾಲಿನ ಮೊತ್ತ ಗಳಿಸಿತು, ಆದರೆ ಇಂಗ್ಲೆಂಡ್ ಬ್ಯಾಟಿಂಗ್ ಆರಂಭಕ್ಕೂ ಮುನ್ನ ಭಾರೀ ಮಳೆ ಸುರಿದ ಕಾರಣ ಪಂದ್ಯವನ್ನು ರದ್ದುಗೊಳಿಸಲಾಯಿತು.

ಆ ಪಂದ್ಯದಲ್ಲಿ ಸಂಜು ಸ್ಯಾಮ್ಸನ್ ಮತ್ತೆ ವಿಫಲರಾಗಿದ್ದರು. ಇಶಾನ್ ಕಿಶನ್ ಯಾವುದೇ ರನ್ ಗಳಿಸಿರಲಿಲ್ಲ. ಆದರೆ ಅಭಿಷೇಕ್ ಶರ್ಮಾ 24 ಎಸೆತಗಳಲ್ಲಿ 6 ಬೌಂಡರಿ, 4 ಸಿಕ್ಸರ್ ಸಹಿತ 59 ರನ್ ಗಳಿಸಿ ಮಿಂಚಿದ್ದರು.

ಶ್ರೇಯಸ್ ಅಯ್ಯರ್ 47 ಬಾಲ್‌ಗಳಲ್ಲಿ 68, ಶಿವಂ ದುಬೆ 21 ಎಸೆತಗಳಲ್ಲಿ 42 ರನ್ ಗಳಸುವ ಮೂಲಕ ತಂಡದ ಸ್ಕೋರ್ ಅನ್ನು 180ರ ಗಡಿ ದಾಟಿಸಿದ್ದರು. ಆದರೆ ಆ ಪಂದ್ಯ ರದ್ದಾದ ಕಾರಣ ಅವರೆಲ್ಲರ ಬ್ಯಾಟಿಂಗ್ ವ್ಯರ್ಥವಾಯಿತು.

ಪಿಚ್ ರಿಪೋರ್ಟ್: ಪಂದ್ಯದ ಪವರ್‌ಪ್ಲೇನಲ್ಲಿ ವೇಗದ ಬೌಲರ್‌ಗಳಿಗೆ ಪಿಚ್ ಸೀಮ್ ಹಾಗೂ ಸ್ವಿಂಗ್‌ಗೆ ಹೆಚ್ಚು ನೆರವು ನೀಡಲಿದೆ. ಒಮ್ಮೆ ಪಂದ್ಯ ಸಾಗುತ್ತಿದ್ದಂತೆ ಪಿಚ್ ಸ್ಪಿನ್ನರ್‌ಗಳಿಗೆ ನೆರವು ನೀಡಲಿದೆ. ಬ್ಯಾಟ್ಸ್‌ಮನ್‌ಗಳು ಪಿಚ್‌ನಲ್ಲಿ ಸ್ವಲ್ಪ ಹೊತ್ತು ಸಮಯ ಕಳೆದ ಬಳಿಕ ಪಂದ್ಯದಲ್ಲಿ ಹೆಚ್ಚಿನ ರನ್‌ಗಳನ್ನು ಸ್ಕೋರ್ ಮಾಡಬಹುದು.

ಭಾರತ ಸಂಭಾವ್ಯ ತಂಡ: ಶ್ರೇಯಸ್ ಅಯ್ಯರ್ (ನಾಯಕ), ಅಭಿಷೇಕ್ ಶರ್ಮಾ, ಸಂಜು ಸ್ಯಾಮ್ಸನ್, ಇಶಾನ್ ಕಿಶನ್ (ಕೀಪರ್), ತಿಲಕ್ ವರ್ಮಾ, ಶಿವಂ ದುಬೇ, ಅಕ್ಷರ್ ಪಟೇಲ್, ಹರ್ಷಿತ್ ರಾಣಾ, ರವಿ ಬಿಷ್ಣೋಯ್, ಅರ್ಷ್‌ದೀಪ್ ಸಿಂಗ್, ಪ್ರಿನ್ಸ್ ಯಾದವ್.

ಇಂಗ್ಲೆಂಡ್ ಸಂಭಾವ್ಯ ತಂಡ: ಹ್ಯಾರಿ ಬ್ರೂಕ್ (ನಾಯಕ), ಫಿಲ್ ಸಾಲ್ಟ್, ಜೋಸ್ ಬಟ್ಲರ್, ಜೇಕಬ್ ಬೆಥೆಲ್, ಟಾಮ್ ಬ್ಯಾಂಟನ್, ಸ್ಯಾಮ್ ಕರನ್, ವಿಲ್ ಜ್ಯಾಕ್ಸ್, ಲಿಯಾಮ್ ಡಾಸನ್, ಸಾಕಿಬ್ ಮಹ್ಮೂದ್, ಆದಿಲ್ ರಶೀದ್, ಲ್ಯೂಕ್ ವುಡ್.

ಏಕದಿನ ಸರಣಿ: ತಂಡಕ್ಕೆ ಆರ್ಚರ್

ದೆಹಲಿ: ಭಾರತ ವಿರುದ್ಧದ ಮೂರು ಪಂದ್ಯಗಳ ಏಕದಿನ ಸರಣಿಗೆ 16 ಸದಸ್ಯರ ಇಂಗ್ಲೆಂಡ್ ತಂಡವನ್ನು ಪ್ರಕಟಿಸಲಾಗಿದ್ದು, ಹಿರಿಯ ವೇಗಿ ಜೋಫ್ರಾ ಆರ್ಚರ್ ಅವರು ದೀರ್ಘಾವಧಿ ಬಳಿಕ ತಂಡಕ್ಕೆ ಮರಳಿದ್ದಾರೆ. ಇನ್ನು ಸಸೆಕ್ಸ್ ಆಲ್ ರೌಂಡರ್ ಜೇಮ್ಸ್ ಕೋಲ್ಸ್ ಅವರು ಇದೇ ಮೊದಲ ಬಾರಿ ರಾಷ್ಟ್ರೀಯ ತಂಡಕ್ಕೆ ಆಯ್ಕೆಯಾಗಿದ್ದಾರೆ. ಆರ್ಚರ್ ಜತೆಗೆ ವೇಗದ ಬೌಲಿಂಗ್ ವಿಭಾಗಕ್ಕೆ ಇದೇ ಮೊದಲ ಬಾರಿ ಏಕದಿನ ತಂಡಕ್ಕೆ ಜಾಶ್ ಟಾಂಗ್ ಆಯ್ಕೆಯಾಗಿದ್ದಾರೆ. ಭಾರತ ಹಾಗೂ ಇಂಗ್ಲೆಂಡ್ ತಂಡಗಳ ನಡುವೆ ಸದ್ಯ ಟಿ20 ಸರಣಿ ಸದ್ಯ ನಡೆಯುತ್ತಿದ್ದು, ಅದರ ಬಳಿಕ ಏಕದಿನ ಸರಣಿ ಜುಲೈ 14ರಂದು ಆರಂಭವಾಗಲಿದೆ. ಈ ವರ್ಷದ ಆರಂಭದಲ್ಲಿ ಶ್ರೀಲಂಕಾ ವಿರುದ್ಧದ ಏಕದಿನ ಸರಣಿಯಿಂದ ಹೊರಗುಳಿದಿದ್ದ ವೇಗದ ಬೌಲರ್‌ಗಳಾದ ಗಸ್ ಅಟ್ಕಿನ್ಸನ್ ಹಾಗೂ ಸಾಕಿಬ್ ಮೊಹ್ಮೂದ್ ಅವರು ಕೂಡ ರಾಷ್ಟ್ರೀಯ ತಂಡಕ್ಕೆ ಮರಳಿದ್ದಾರೆ. ಇಂಗ್ಲೆಂಡ್ ಏಕದಿನ ತಂಡವನ್ನು ಹ್ಯಾರಿ ಬ್ರೂಕ್ ಮುನ್ನಡೆಸಲಿದ್ದಾರೆ.

ನಾಳೆ ಟಿ20 ಮಹಿಳಾ ವಿಶ್ವಕಪ್ ಫೈನಲ್ | ದ. ಆಫ್ರಿಕಾಕ್ಕೆ ಸೋಲು

ಆಸ್ಟ್ರೇಲಿಯಾಕ್ಕೆ ಇಂಗ್ಲೆಂಡ್ ಎದುರಾಳಿ

ಓವಲ್: ಮಹಿಳಾ ಟಿ20 ವಿಶ್ವಕಪ್‌ನಲ್ಲಿ ಗುರುವಾರ ರಾತ್ರಿ ನಡೆದ ರೋಚಕ ಸೆಮಿಫೈನಲ್ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾವನ್ನು 40 ರನ್‌ಗಳಿಂದ ಸೋಲಿಸುವ ಮೂಲಕ ಇಂಗ್ಲೆಂಡ್ ತಂಡ ಫೈನಲ್ ಪ್ರವೇಶಿಸಿದೆ. 2018ರ ನಂತರ ಇಂಗ್ಲೆಂಡ್ ಮಹಿಳಾ ವಿಶ್ವಕಪ್‌ನಲ್ಲಿ ಫೈನಲ್ ತಲುಪಿದ್ದು ಇದೇ ಮೊದಲು. ಭಾನುವಾರ ಲಾರ್ಡ್ಸ್‌ನ ಐತಿಹಾಸಿಕ ಮೈದಾನದಲ್ಲಿ ಸಾಂಪ್ರದಾಯಿಕ ಎದುರಾಳಿ ಆಸ್ಟ್ರೇಲಿಯಾ ವಿರುದ್ಧ ಪ್ರಶಸ್ತಿಗಾಗಿ ಸೆಣಸಲಿದೆ.

ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡ ಇಂಗ್ಲೆಂಡ್ ತಂಡ ಕಳಪೆ ಆರಂಭವ ಪಡೆದುಕೊಂಡಿತ್ತು, ಕೇವಲ 23 ರನ್‌ಗಳಿಗೆ ಅಗ್ರ ಕ್ರಮಾಂಕದ ಮೂವರು ಬ್ಯಾಟರ್‌ಗಳನ್ನು ಕಳೆದುಕೊಂಡಿತು. ಈ ಒತ್ತಡದ ನಡುವೆಯೂ, ನಾಯಕಿ ನ್ಯಾಟ್ ಸಿವರ್-ಬ್ರಂಟ್ ಮತ್ತು ಹೀದರ್ ನೈಟ್ 90 ಎಸೆತಗಳಲ್ಲಿ 133 ರನ್‌ಗಳ ದಾಖಲೆಯ ಜತೆಯಾಟ ಆಟವಾಡುವ ಮೂಲಕ ಪಂದ್ಯಕ್ಕೆ ತಿರುವು ನೀಡಿದರು. ಇಂಗ್ಲೆಂಡ್ 5 ವಿಕೆಟ್‌ಗೆ 169 ರನ್ ಗಳಿಸಿತು. ಗುರಿಯನ್ನು ಬೆನ್ನಟ್ಟಿದ ಹರಿಣ ಪಡೆ, ನಾಯಕಿ ಲಾರಾ ವೋಲ್ವಾರ್ಡ್ ಅವರಿಂದ ದೊಡ್ಡ ಇನ್ನಿಂಗ್ಸ್ ನಿರೀಕ್ಷಿಸಿತ್ತು. ಆದರೆ ಆರನೇ ಓವರ್‌ನಲ್ಲಿ ಸೋಫಿ ಎಕ್ಲೆಸ್ಟೋನ್ ಮಿಡ್-ಆನ್‌ನಲ್ಲಿ ಅದ್ಭುತ ಕ್ಯಾಚ್ ಪಡೆಯುವ ಮೂಲಕ ದಕ್ಷಿಣ ಆಫ್ರಿಕಾಕ್ಕೆ ದೊಡ್ಡ ಹೊಡೆತ ನೀಡಿದರು. ನಂತರ ಎಕ್ಲೆಸ್ಟೋನ್ ಶಾರ್ಟ್ ಫೈನ್ ಲೆಗ್‌ನಲ್ಲಿ ಸುನೆ ಲೂಸ್ ಅವರ ಮತ್ತೊಂದು ಕ್ಯಾಚ್ ಪಡೆದರು. ಇದು ಆಫ್ರಿಕಾವನ್ನು ಸಂಕಷ್ಟಕ್ಕೆ ಸಿಲುಕಿಸಿತು. ಟ್ಯಾಜ್ಮಿನ್ ಬ್ರಿಟ್ಸ್ 44 ಎಸೆತಗಳಲ್ಲಿ ಅರ್ಧಶತಕ ಗಳಿಸುವ ಮೂಲಕ ದಕ್ಷಿಣ ಆಫ್ರಿಕಾದ ಗೆಲುವಿನ ಭರವಸೆಯನ್ನು ಜೀವಂತವಾಗಿಡಲು ಪ್ರಯತ್ನಿಸಿದರು, ಆದರೆ ಚಾರ್ಲಿ ಡೀನ್ ಅವರ ಸ್ಪಿನ್ ದಾಳಿಗೆ ಮಧ್ಯಮ ಕ್ರಮಾಂಕವು ಕುಸಿಯಿತು. ಅಂತಿಮವಾಗಿ ದ. ಆಫ್ರಿಕಾ ತಂಡವು 8 ವಿಕೆಟ್‌ಗೆ 129 ರನ್ ಗಳಿಸಿ ಪಂದ್ಯದಲ್ಲಿ ಸೋಲೊಪ್ಪಿಕೊಂಡಿತು.

ಈ ಗೆಲುವಿನೊಂದಿಗೆ 2023ರ ಸೆಮಿಫೈನಲ್‌ನಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧ ಸೋಲಿಗೆ ಇಂಗ್ಲೆಂಡ್ ಪ್ರತೀಕಾರ ತೀರಿಸಿಕೊಂಡಿದೆ. ಗುಂಪು ಹಂತದಲ್ಲಿ ಅಜೇಯವಾಗಿ ಮುನ್ನಡೆದ ಇಂಗ್ಲೆಂಡ್ ತಂಡವು ತವರು ನೆಲದಲ್ಲಿ ನಡೆಯುತ್ತಿರುವ ಈ ಟೂರ್ನಿಯಲ್ಲಿ ಟ್ರೋಫಿ ಗೆಲ್ಲುವ ಫೇವರಿಟ್ ತಂಡವೆನಿಸಿದೆ.

ಆಪರೇಷನ್ ಡ್ರೀಮ್ ಥಿಯೇಟರ್ ಟೀಸರ್ ರಿಲೀಸ್

ಶೀರ್ಷಿಕೆಯಲ್ಲಿಯೇ ಸದ್ದು ಮಾಡುತ್ತಿರುವ 666 ಆಪರೇಷನ್ ಡ್ರೀಮ್ ಥಿಯೇಟರ್ ಚಿತ್ರದ ಟೀಸರ್ ರಿಲೀಸ್ ಆಗಿದೆ. ವಿಭಿನ್ನವಾದ ಟೀಸರ್ ಸಿನಿಪ್ರಿಯರಲ್ಲಿ ಕುತೂಹಲ ಮೂಡಿಸಿದೆ. ಈ ಚಿತ್ರದಲ್ಲಿ ಶಿವಣ್ಣ ಏಜೆಂಟ್ ಪ್ರಕಾಶ್ ಎಂಬ ಪಾತ್ರದಲ್ಲಿ ನಟಿಸುತ್ತಿದ್ದು, ಏಜೆಂಟ್ ಶಂಕರ್ ಪಾತ್ರದಲ್ಲಿ ಧನಂಜಯ್ ಬಣ್ಣಹಚ್ಚಿದ್ದಾರೆ. ಪ್ರಿಯಾಂಕಾ ಮೋಹನ್, ಅದಿತಿ ಬಾಲನ್, ಸುಖ್ವಿಂದರ್ ಸಿಂಗ್ ಸೇರಿ ದೊಡ್ಡ ತಾರಾಬಳಗವೇ ಚಿತ್ರದಲ್ಲಿದೆ.

ಹೇಮಂತ್ ಒಳ್ಳೆಯ ನಿರ್ದೇಶಕರು ಅವರ ಜತೆಗೆ ಸಿನಿಮಾ ಮಾಡಿದ್ದು ಖುಷಿಕೊಟ್ಟಿದೆ. ವೈಶಾಖ್ ನನ್ನ ಅಭಿಮಾನಿ. ಈಗ ಅವರು ನನ್ನ ಚಿತ್ರ ನಿರ್ಮಾಣ ಮಾಡುತ್ತಿದ್ದಾರೆ. ಧನಂಜಯ್ ಜತೆಗೆ ಅಭಿನಯಿಸಿರುವ ಮೂರನೇ ಸಿನಿಮಾವಿದು. ಪ್ರಿಯಾಂಕಾ ಅವರ ಜತೆ ಎರಡನೇ ಚಿತ್ರ. ನನಗೆ ಸಿನಿಮಾ ಎಂದರೆ ಪ್ರೀತಿ, ಯಾವ ಸಿನಿಮಾವನ್ನು ಬಿಡುವುದಿಲ್ಲ. ಆಪರೇಷನ್ ಡ್ರೀಮ್ ಥಿಯೇಟರ್ ಸಿನಿಮಾ ಒಂದೊಳ್ಳೆ ಅನುಭವ ಕೊಟ್ಟಿದೆ. ಬಾಂಡ್ ಸಿನಿಮಾಗಳಲ್ಲಿ ಈಜುಕೊಳ ಇರುತ್ತದೆ, ಅದರಲ್ಲಿ ಐದಾರು ಹುಡುಗಿಯರು ಇರುತ್ತಾರೆ. ನಡುವೆ ಬಾಂಡ್ ಇರುತ್ತಾರೆ. ಆದರೆ ಈ ಚಿತ್ರದಲ್ಲಿ ನಾನು ಆ ರೀತಿಯ ಬಾಂಡ್ ಅಲ್ಲ. ನಾನು ಡಿಸೆಂಟ್ ಬಾಂಡ್ ಆಗಿದ್ದೇನೆ. ಎಲ್ಲರನ್ನೂ ಬಾಂಡಿಂಗ್ ಮಾಡುವ ಬಾಂಡ್ ಆಗಿದ್ದೇನೆ ಎಂದು ಶಿವರಾಜ್ ಕುಮಾರ್ ತಿಳಿಸಿದರು.

ವೈಶಾಖ್ ಸ್ಯಾಂಡಲ್‌ವುಡ್‌ನಲ್ಲಿ ಒಳ್ಳೆಯ ನಿರ್ಮಾಪಕರಾಗಲಿದ್ದಾರೆ. ನಿರ್ದೇಶಕ ಹೇಮಂತ್ ಸಿನಿಪ್ರೇಮಿ, ಸಿನಿಮಾದ ಸನ್ನಿವೇಶ ಅಂದುಕೊಂಡಂತೆ ಮೂಡಿಬರುವವರೆಗೂ ಬಿಡುವುದಿಲ್ಲ, ಅಷ್ಟರ ಮಟ್ಟಿಗೆ ಅವರು ಸಿನಿಮಾದಲ್ಲಿ ಮುಳುಗಿರುತ್ತಾರೆ. ಶಿವಣ್ಣ ನನಗೆ ದೊಡ್ಡ ಶಕ್ತಿ, ಇದು ಟೀಸರ್ ಅಷ್ಟೇ. ಚಿತ್ರದಲ್ಲಿ ಬಹಳ ಸರ್‌ಪ್ರೈಸ್ ಇದೆ. ಸಿನಿಮಾ ಅದ್ಭುತವಾಗಿ ಮೂಡಿಬಂದಿದೆ ಎಂದು ಡಾಲಿ ಧನಂಜಯ ತಿಳಿಸಿದರು.

ಬಾಲ್ಯದಿಂದಲೂ ನನಗೆ ಸಿನಿಮಾದ ಬಗ್ಗೆ ಆಸಕ್ತಿ, ಒಂದು ಒಳ್ಳೆಯ ಪ್ರೊಡಕ್ಷನ್ ಹೌಸ್ ತೆರೆಯಬೇಕು ಎನ್ನುವುದು ನನ್ನ ಕನಸಾಗಿತ್ತು.

ಅಂದುಕೊಂಡಂತೆ ಒಳ್ಳೆಯ ಸಿನಿಮಾ ಮಾಡಿದ ಖುಷಿಯಿದೆ. ಶಿವಣ್ಣ ಅವರಿಗಾಗಿ ಸಿನಿಮಾ ಮಾಡಿದ ಖುಷಿಯಿದೆ. ನಾನು ಚಿಕ್ಕ ವಯಸ್ಸಿನಿಂದ ಅವರ ದೊಡ್ಡ ಅಭಿಮಾನಿ. ವೇದ ಸಿನಿಮಾ ಶೂಟಿಂಗ್ ಸಮಯದಲ್ಲಿ ನನ್ನ ಮೊದಲ ಚಿತ್ರವನ್ನು ನಿಮ್ಮ ಜತೆಗೆ ಮಾಡಬೇಕು ಎಂದು ಕೇಳಿದೆ.

ಬಜೆಟ್, ಕಥೆ, ನಿರ್ದೇಶಕರು ಯಾವುದನ್ನೂ ಕೇಳಲಿಲ್ಲ. ಒಳ್ಳೆಯ ಕಥೆ ಮಾಡಿಕೊಂಡು ಬಾ ಬೇಗ ಶುರು ಮಾಡೋಣ ಎಂದಿದ್ದರು. ಇವತ್ತಿನ ಕಾಲದಲ್ಲಿ ಏನೂ ಯೋಚನೆ ಮಾಡದೆ ಕಥೆ ಕೇಳಿ ಸಿನಿಮಾ ಮಾಡುವ ಸೂಪರ್ ಸ್ಟಾರ್ ಶಿವಣ್ಣ. ಧನಂಜಯ್ ಅವರು ಈ ಚಿತ್ರಕ್ಕೆ ಸಾಕಷ್ಟು ಶ್ರಮ ಹಾಕಿದ್ದಾರೆ. ಅವರ ವೃತ್ತಿ ಜೀವನದ ಅತ್ಯುತ್ತಮ ನಟನೆ ಈ ಚಿತ್ರದಲ್ಲಿ ಇದೆ ಎಂದು ನಿರ್ಮಾಪಕ ವೈಶಾಖ್ ಸಂತಸದಿಂದ ನುಡಿದರು.

ಶಿವಣ್ಣ ಅವರು ನಮ್ಮ ಚಿತ್ರದ ಶಕ್ತಿಯಾಗಿದ್ದಾರೆ, ಅವರೇ ನಮಗೆ ಸ್ಫೂರ್ತಿ ತುಂಬಿದವರು. ಧನಂಜಯ ಅವರ ಜತೆಗೆ ಕೆಲಸ ಮಾಡಬೇಕು ಎಂದುಕೊಂಡಿದ್ದೆ. ಅದು ಈ ಚಿತ್ರದ ಮೂಲಕ ಈಡೇರಿದೆ ಎಂದು ನಿರ್ದೇಶಕ ಹೇಮಂತ್ ರಾವ್ ಸಂತಸ ವ್ಯಕ್ತಪಡಿಸಿದರು. ವೈಶಾಕ್. ಜೆ.ಫಿಲಂಸ್ ಬ್ಯಾನರ್‌ನಲ್ಲಿ ವೈಶಾಕ್ ಚಿತ್ರ ನಿರ್ಮಾಣ ಮಾಡುತ್ತಿದ್ದಾರೆ. ವಿಶ್ವಾಸ್ ಕಶ್ಯಪ್ ಕಲಾ ನಿರ್ದೇಶನ, ಅದ್ವೈತ್ ಗುರುಮೂರ್ತಿ ಛಾಯಾಗ್ರಹಣ, ಚರಣ್ ರಾಜ್ ಸಂಗೀತ ನಿರ್ದೇಶನ ಈ ಚಿತ್ರಕ್ಕಿದೆ.

ಸಂದೇಶ ಹೊತ್ತು ಬಂದ ನರೇಶ್

ನಿರ್ದೇಶಕ ನಹೇಶ್ ಪೊಳ್ ಸಾಮಾಜಿಕ ಸಂದೇಶ ಸಾರುವ ಕಥೆಯ ಟ್ರಯಿಂಗ್ ಟು ಸೇವ್ ದಿ ವರ್ಲ್ಡ್ ಸಿನಿಮಾವನ್ನು ನಿರ್ದೇಶಿಸಿ ತೆರೆಗೆ ತರಲು ಸಿದ್ಧತೆ ನಡೆಸಿದ್ದಾರೆ. ರ್‍ಯಾಡಿಕಲ್ ಕಾನ್ಸೆಪ್ಟ್ ಸ್ಟುಡಿಯೊ ಬ್ಯಾನರ್‌ನಲ್ಲಿ ಚಿತ್ರ ನಿರ್ಮಾಣಕ್ಕೂ ಬಂಡವಾಳ ಹೂಡಿದ್ದಾರೆ. ವೃತ್ತಿಯಲ್ಲಿ ನಾನು ಇಂಜಿನಿಯರ್ ಹಾಗಾಗಿ ನಾನು ಕಂಡ ಘಟನೆಗಳನ್ನು ಆಧರಿಸಿ ಕಥೆ ಹೆಣೆದು ಸಿನಿಮಾ ನಿರ್ದೇಶನ ಮಾಡಿದ್ದೇನೆ.

ಇಂದು ಮೂಲಭೂತ ಸೌಕ್ರರ್ಯಗಳು ಇಲ್ಲದಿದ್ದರೂ ಪೆಟ್ರೋಲ್, ಡೀಸೆಲ್ ತೆರಿಗೆ, ಟೋಲ್ ಶುಲ್ಕ ಅಂತ ಜನರಿಂದ ಹಣ ವಸೂಲು ಮಾಡುತ್ತಿದ್ದಾರೆ. ಜನತೆ ಇದರ ಬಗ್ಗೆ ಅರಿವು ಮೂಡಿ ಸಿಕೊಳ್ಳಬೇಕು ಎಂಬುದನ್ನು ಚಿತ್ರದ ಮೂಲಕ ಹೇಳಲಾಗುತ್ತಿದೆ. ಭಾರತದಲ್ಲಿ ಅತಿ ಹೆಚ್ಚು ರಸ್ತೆ ತೆರಿಗೆ ಶುಲ್ಕ ವಿದಿಸಿರುವುದು ಕರ್ನಾಟಕ ಎಂದು ಹೇಳಲು ಬೇಸರವಾಗುತ್ತದೆ. ಇದನ್ನು ಅರಿತು ಸಮಾಜಕ್ಕೆ ಒಳ್ಳೆಯ ರಸ್ತೆ ಕೊಡುವ ಪ್ರಯತ್ನ ಏಕೆ ಮಾಡಬಾರದು. ಹಾಗೂ ಇದ ರಿಂದ ಜನರಿಗೆ ಯಾವ ರೀತಿ ಹಣ ವಾಪಸ್ಸು ಬರುತ್ತದೆ ಎಂಬ ಉದ್ದೇಶವನ್ನು ಚಿತ್ರದ ಮೂಲಕ ತೋರಿಸಿದರೆ ಎಲ್ಲರಿಗೂ ಬೇಗ ಅರ್ಥ ವಾಗುತ್ತದೆ.

ನಾವು ಕಲಿಯುಗದಲ್ಲಿ ಇದ್ದೇವೆ. ಇಲ್ಲಿ ಯಾರಿಗೆ ಎಷ್ಟೇ ಬುದ್ದಿವಾದ ಹೇಳಿ ದರೂ ಅರ್ಥ ವಾಗುವುದಿಲ್ಲ. ನಾವೇ ರಸ್ತೆ ಸಿದ್ಧಪಡಿಸಿ ಅದನ್ನು ಸಮಾಜಕ್ಕೆ ನೀಡುವುದು ಇಂದು ಅತ್ಯಗತ್ಯವಾಗಿದೆ. ಅದು ಹೇಗೆ ಎಂಬುದನ್ನು ಇಲ್ಲಿ ಹೇಳುವ ಪ್ರಯತ್ನ ಮಾಡಲಾಗಿದೆ ಎಂದು ನಿರ್ದೇಶಕ ನರೇಶ್ ಪೊಳ್ ತಿಳಿಸಿ ದರು. ನರೇಶ್ ಈ ಚಿತ್ರದಲ್ಲಿ ಇಂಜಿನಿಯರ್ ಪಾತ್ರದಲ್ಲಿ ಅಭಿನಯಿಸಿದ್ದಾರೆ. ಉಳಿದಂತೆ ಹೊಸ ಕಲಾವಿದರು ಚಿತ್ರದ ತಾರಾಗಣದಲ್ಲಿದ್ದಾರೆ.

ಹಳ್ಳಿಯ ಹಿತವಾದ ಜೀವನ

ಸಿನಿಪ್ರಿಯರು ಬಹು ನಿರೀಕ್ಷೆಯಿಂದ ಕಾಯುತ್ತಿದ್ದ ಗ್ರಾಮಾಯಣ ತೆರೆಗೆ ಬಂದಿದೆ. ಪ್ರೇಕ್ಷಕರನ್ನು ಸೆಳೆದಿದೆ. ಶೀರ್ಷಿಕೆಗೆ ತಕ್ಕಂತೆ ಚಿತ್ರದಲ್ಲಿ ಅಪ್ಪಟ ಗ್ರಾಮೀಣ ಭಾಗದ ಕಥೆಯಿದೆ. ಆತ ಸೀನ ಗೆಳೆಯರ ನೆಚ್ಚಿನ ಸಿಕ್ಸ್ ಸೆನ್ಸ್ ಸೀನ. ಆತನಿಗೆ ತನ್ನೂರು, ಊರಿನ ಜನರೆಂದರೇ ಪಂಚ ಪ್ರಾಣ, ಹಾಗಾಗಿ ಎಲ್ಲರೂ ಸಂಪಾದನೆಗಾಗಿ ಹಳ್ಳಿಯಿಂದ, ನಗರ ಪ್ರದೇಶಗಳಿಗೆ ಸೇರಿದರೆ, ಸೀನ ಮಾತ್ರ ತಾನು ಹುಟ್ಟಿದ ಊರಿನಲ್ಲಿಯೇ ಇರಬೇಕು. ಇಲ್ಲಿಯೇ ಅಂದುಕೊಂಡಿದನ್ನು ಸಾಧಿಸಬೇಕು, ಉತ್ತಮ ಬದುಕು ಕಟ್ಟಿಕೊಳ್ಳಬೇಕು ಎಂದುಕೊಂಡು ಸಂತಸದಿಂದ ಬದುಕು ಸಾಗಿಸುತ್ತಿರುತ್ತಾನೆ. ತಾನು ಮೆಚ್ಚಿದ ಹುಡುಗಿಯೊಂದಿಗೆ ಖುಷಿಯಿಂದ ಇರುತ್ತಾನೆ. ಈ ನಡುವೆಯೇ ಹಳ್ಳಿಯಲ್ಲಿ ನುಸುಳುವ ರಾಜಕೀಯ ಸೀನನ ಬದುಕಿನ ದಿಕ್ಕನ್ನೇ ಬದಲಾಯಿಸುತ್ತದೆ. ಅದು ಹೇಗೆ, ಏನು ಎಂಬುದನ್ನು ಸಿನಿಮಾ ನೋಡಿಯೆ ತಿಳಿಯಬೇಕು.

ಗ್ರಾಮೀಣ ಕಥೆಯ ಗ್ರಾಮಾಯಣ ಇಂದಿನ ಯುವಜನಾಂಗಕ್ಕೆ ಮನಮುಟ್ಟುವಂತಿದೆ. ನಿರ್ದೇಶಕ ದೇವನೂರು ಚಂದ್ರು ಅವರು ಒಳ್ಳೆಯ ಕಥೆಯನ್ನು ಹೆಣೆದು ಅದನ್ನು ಎಲ್ಲರ ಮನಕ್ಕೆ ಮುಟ್ಟುವಂತೆ ತೆರೆಯಲ್ಲಿ ಸೊಗಸಾಗಿ ಕಟ್ಟಿಕೊಡುವಲ್ಲಿ ಯಶಸ್ವಿಯಾಗಿದ್ದಾರೆ. ಹಳ್ಳಿಯಲ್ಲಿ ಏನಿದೆ ಏನಿಲ್ಲ ಎಂಬುದು ಗ್ರಾಮಾಯಣ ನೋಡಿದಮೇಲೆ ಮನದಟ್ಟಾಗುತ್ತದೆ. ಈ ಸಿನಿಮಾ ನೋಡಿದ ಮೇಲೆ ಯಾರೆಲ್ಲಾ ಹಳ್ಳಿ ಬಿಟ್ಟು ನಗರ ಸರಿದ್ದಾರೋ ಅವರೆಲ್ಲರೂ ಮರಳಿ ತಮ್ಮೂರಿಗೆ ಬರಲಿದ್ದಾರೆ. ಹಣ ಸಂಪಾದನೆಗಾಗಿ ಹುಟ್ಟಿದ ಊರನ್ನು ಬಿಟ್ಟ ಮರುಕ ಕಾಡುತ್ತದೆ. ಸಂಬಂಧಗಳ ಮೌಲ್ಯ ಅರ್ಥವಾಗುತ್ತದೆ. ಚಿತ್ರದ ಸಂಗೀತ ಅದ್ಭುತವಾಗಿದ್ದು, ಛಾಯಾಗ್ರಹಣಕ್ಕೂ ಫುಲ್ ಮಾರ್ಕ್ಸ್ ನೀಡಬಹುದು.

ವಿನಯ್ ರಾಜ್‌ಕುಮಾರ್ ಈ ಹಿಂದೆ ಎಂದು ಕಂಡಿರದ ಪಾತ್ರದಲ್ಲಿ ಕಂಗೊಳಿಸಿದ್ದಾರೆ. ಅಪ್ಪಟ ಹಳ್ಳಿ ಹೈದನಾಗಿ ಗಮನಸೆಳೆಯುತ್ತಾರೆ. ವಿನಯ್ ಫೈಟ್, ಡ್ಯಾನ್ಸ್‌ನಲ್ಲಿ ಅಬ್ಬರಿಸಿದ್ದು ಎಮೋಷನ್ ಸನ್ನಿವೇಶಗಳಲ್ಲಿ ಮನಗೆಲ್ಲುತ್ತಾರೆ. ಈ ಚಿತ್ರ ವಿನಯ್‌ಗೆ ಬಿಗ್‌ಬ್ರೇಕ್ ನೀಡುವುದು ಖಚಿತವಾಗಿದೆ. ಮೇಘಾ ಶೆಟ್ಟಿ ತಮಗೆ ನೀಡಿದ ಪಾತ್ರಕ್ಕೆ ಜೀವತುಂಬಿ ಅಭಿನಯಿ ಸಿದ್ದಾರೆ. ಲೂಸ್ ಮಾದ ಯೋಗಿ ಕರಿ ಬೆಕ್ಕು ಪಾತ್ರದಲ್ಲಿ ಖದರ್ ಖಳನಾಗಿ ಅಬ್ಬರಿಸಿದ್ದಾರೆ. ಅಪರ್ಣಾ ಅವರು ಎಮೋಷನ್ ಪಾತ್ರದಲ್ಲಿ ಮನಗೆಲ್ಲುತ್ತಾರೆ. ಅಚ್ಯುತ್ ಕುಮಾರ್, ಗೋಪಾಕೃಷ್ಣ ದೇಶಪಾಂಡೆ ಹೀಗೆ ಎಲ್ಲರೂ ತಮ್ಮ ಪಾತ್ರಗಳಿಗೆ ಜೀವತುಂಬಿ ಅಭಿನಯಿ ಸಿದ್ದಾರೆ. ಒಟ್ಟಾರೆ ಗ್ರಾಮಾ ಯಣ ಚಂದನವನದ ಚೆಂದದ ಚಿತ್ರಗಳಲ್ಲಿ ಒಂದಾಗಿದೆ.

- ಚಿತ್ರ : ಗ್ರಾಮಾಯಣ
- ನಿರ್ದೇಶನ : ದೇವನೂರು ಚಂದ್ರು
- ನಿರ್ಮಾಣ : ಲಹರಿ ಫಿಲಂಸ್
- ತಾರಾಗಣ : ವಿನಯ್ ರಾಜ್‌ಕುಮಾರ್, ಮೇಘಾ ಶೆಟ್ಟಿ, ಅಪರ್ಣಾ, ಅಚ್ಯುತ್ ಕುಮಾರ್ ಮುಂತಾದವರು.
- ರೇಟಿಂಗ್ : 3.5

ಥ್ರಿಲ್ಲರ್ ಕಥೆಯ ಬಾಂದ್ರ ಬಾಯ್



ಹಲವು ವರ್ಷಗಳಿಂದ ಪತ್ರಕರ್ತೆಯಾಗಿ ಗುರುತಿಸಿಕೊಂಡಿದ್ದ ನೀರೂ ಶರ್ಮಾ ಈಗ ಸಿನಿಮಾ ನಿರ್ದೇಶನಕ್ಕೂ ಎಂಟ್ರಿಕೊಟ್ಟಿದ್ದಾರೆ. ನಿರೂ, ಬಾಂದ್ರ ಬಾಯ್ ಎಂಬ ಚಿತ್ರಕ್ಕೆ ಕಥೆ ಬರೆದು ನಿರ್ದೇಶನ ಮಾಡಿದ್ದಾರೆ. ಪರಾಶರ್ ಕ್ರಿಯೇಶನ್ಸ್ ರಾಜೀವ್ ಚಿತ್ರ ನಿರ್ಮಾಣಕ್ಕೆ ಬಂಡವಾಳ ಹೂಡಿದ್ದಾರೆ. ಬಾಂದ್ರ ಬಾಯ್ ಥ್ರಿಲ್ಲರ್ ಸ್ಟೋರಿಯ ಸಿನಿಮಾವಾಗಿದ್ದು, ಕ್ರೂರ, ಕಹಿ, ಪಕ್ಷಪಾತ ಎಂಬ ಅಡಿಬರಹವಿದೆ. ಇಂದಿನ ಡಿಜಿಟಲ್ ಯುಗದಲ್ಲಿ ಬಲವಾಗಿ ಪ್ರತಿಧ್ವನಿಸುವ ವಿಷಯಗಳು ಚಿತ್ರದಲ್ಲಿವೆ. ಮಾಧ್ಯಮ, ಅಧಿಕಾರ ಮತ್ತು ಸಾಮಾಜಿಕ ತೀರ್ಪಿನ ನಡುವಿನ ಸಂಕೀರ್ಣ ಸಂಬಂಧಗಳನ್ನು ಅನ್ವೇಷಿಸು ಕಥನಾ ತೆರೆಯಲ್ಲಿ ಸಾಗುತ್ತದೆ. ಮ್ಯೂಸಿಕ್ ಆಲ್ಬಂಗಳಲ್ಲಿ ಕಾಣಿಸಿಕೊಂಡು ಪ್ರಸಿದ್ಧಿ ಪಡೆದಿರುವ ಆಹ್ವಾನ್ ಕುಮಾರ್ ಹಾಗೂ ಗುಜರಾತಿ ಮತ್ತು ಮರಾಠಿ ಭಾಷೆಯ ಚಿತ್ರಗಳಲ್ಲಿ ನಟಿಸಿ ಖ್ಯಾತಿ ಗಳಿಸಿರುವ ನಟ ಧರ್ಮೇಂದ್ರ ಗೋಹಿಲ್ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಉಳಿದಂತೆ ಲೋಚನ್ ಬರ್ಸಗಡೆ, ಯಶ್ ಪಡ್ನೇಕರ್, ಶಾಮ್ ಥೋಬರೆ, ಪವನ್ ತಿವಾರಿ, ಐಶ್ವರ್ಯಾ ಮನೋಹರ್, ಹಿಮಾಂಶಿ ಮಂಡಾಲಿಯ, ನಂದಿನಿ ಶರ್ಮಾ ಮುಂತಾದವರು ತಾರಾಗಣದಲ್ಲಿದ್ದಾರೆ. ಸಂಗೀತ ಮಹಾವೀರ್ ಕೌಶಲ್, ಛಾಯಾಗ್ರಹಣ ಆಯುಷ್ ಷಾ, ಸಂಕಲನ ಸಂದೀಪ್ ಅವರದ್ದಾಗಿದೆ.